ವಿಶ್ವವಾಣಿ
ವಿಶ್ವಾಸವೇ ವಿಶ್ವ

ಐಸಿಸಿ ಟೆಸ್ಟ್ ರ್ಯಾಂಕಿಂಗ್ ಬುಮ್ರಾ ಮತ್ತೆ ಟಾಪರ್

ತನ್ನದೇ ಜನರ ಮೇಲೆ ಬಾಂಬ್ ಎಸೆದ ಮ್ಯಾನ್ಮಾರ್ ಸೇನೆ ಮಹಿಳೆಯರು, ಮಕ್ಕಳು ಸೇರಿ 40ಕ್ಕೂ ಹೆಚ್ಚು ಜನ ಸಾವು

ಅಟ್ಟಹಾಸ ಮೆರೆದ ಜುಂಟಾ ಸೇನೆ

ಬೀದಿಗಳಲ್ಲಿ ಛಿದ್ರಗೊಂಡಿರುವ ಮೃತದೇಹಗಳು ಬಿದ್ದಿರುವುದು.

ಬಾಂಬ್ ದಾಳಿಯಿಂದಾಗಿ ಚಾಂಗ್ ಯು ನಗರದ ಕಟ್ಟಡಗಳಿಗೆ ಹಾನಿಯಾಗಿರುವುದು.

ದೆಹಲಿ: ಮ್ಯಾನ್ಮಾರ್‌ನ ಚಾಂಗ್ ಯು ಪಟ್ಟಣದಲ್ಲಿ ನಡೆಯುತ್ತಿದ್ದ ಥಡಿಂಗ್ಯುಟ್ ಹುಣ್ಣಿಮೆ ಉತ್ಸವದ ಮೇಲೆ ಜುಂಟಾ ಸೇನೆಯು ಬಾಂಬ್ ದಾಳಿ ನಡೆಸುವ ಮೂಲಕ ಅಟ್ಟಹಾಸ ಮೆರೆದಿದೆ. ಈ ಭೀಕರ ದಾಳಿಯಲ್ಲಿ 40ಕ್ಕೂ ಹೆಚ್ಚು ಜನರು ದಾರುಣವಾಗಿ ಸಾವನ್ನಪ್ಪಿದ್ದು, 80ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಸಾವನ್ನಪ್ಪಿದವರಲ್ಲಿ ಮಕ್ಕಳು ಮತ್ತು ಮಹಿಳೆಯರೂ ಸೇರಿದ್ದಾರೆ.

ಮ್ಯಾನ್ಮಾರ್‌ನಲ್ಲಿ ರಾಷ್ಟ್ರೀಯ ರಜಾದಿನವಾದ ಮತ್ತು ಬೌದ್ಧಧರ್ಮದಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿರುವ ಥಡಿಂಗ್ಯುಟ್ ಹಬ್ಬವನ್ನು ಆಚರಿಸಲು ಸುಮಾರು 100 ಜನರು ಸೇರಿದ್ದರು. ಸೇನೆಯ ನೀತಿಗಳ ವಿರುದ್ಧ ಪ್ರತಿಭಟನೆಯಾಗಿ ಉತ್ಸವದ ಸಮಯದಲ್ಲಿ ಮೌನ ಬೆಳಕಿನ ಪ್ರದರ್ಶನವನ್ನು ಸಹ ನಡೆಸಲಾಯಿತು. ರಾಷ್ಟ್ರೀಯ ಏಕತಾ ಸರಕಾರದ ಪರವಾಗಿ ನಾಯಕರು ಮಾತನಾಡುತ್ತಿದ್ದರು. ಈ ವೇಳೆ ಪ್ಯಾರಾಗ್ಲೈಡರ್‌ಗಳು ಏಕಾಏಕಿ ದಾಳಿ ಮಾಡಿ ಗುಂಪಿನ ಮೇಲೆ ಬಾಂಬ್‌ಗಳನ್ನು ಎಸೆದಿದ್ದಾರೆ. ಬಾಂಬ್ ಸ್ಫೋಟಗೊಂಡ ಪ್ರದೇಶದಿಂದ ದೂರವಿದ್ದ ಜನರು ಸ್ಥಳದಿಂದ ಓಡಿಹೋದ ಪರಿಣಾಮ ಬದುಕುಳಿದಿದ್ದು, ಹತ್ತಿರದಲ್ಲೇ ನಿಂತಿದ್ದ ಜನರು ಕ್ಷಣಾರ್ಧದಲ್ಲಿ ಸಾವನ್ನಪ್ಪಿದ್ದಾರೆ. ಚಾಂಗ್ ಯು ನಗರದ ಬೀದಿಗಳಲ್ಲಿ ಛಿದ್ರಗೊಂಡಿರುವ ಮೃತದೇಹಗಳು ಬಿದ್ದಿದ್ದು, ಪರಿಸ್ಥಿತಿಯ ಭೀಕರತೆಯನ್ನು ಸಾರಿ ಹೇಳುತ್ತಿದೆ. ಸೇನೆಯ ನೀತಿಗಳ ವಿರುದ್ಧ ಪ್ರತಿಭಟನೆ ಮಾಡಿದ್ದಕ್ಕಾಗಿಯೇ ಸೇನೆಯಿಂದ ಬಾಂಬ್ ದಾಳಿ ನಡೆದಿದೆ ಎಂದು ಮೂಲಗಳು ಖಚಿತಪಡಿಸಿವೆ.

- ಸೇನೆಯ ನೀತಿಗಳ ವಿರುದ್ಧ ಪ್ರತಿಭಟಿಸಿ ದಕ್ಕೆ ಜುಂಟಾ ಸೇನೆಯಿಂದ ಭೀಕರ ಹಿಂಸಾಚಾರ
- ಹುಣ್ಣಿಮೆ ಉತ್ಸವದಲ್ಲಿ ತೊಡಗಿದ್ದ ಜನರ ಮೇಲೆ ಬಾಂಬ್ ದಾಳಿ ನಡೆಸಿದ ಮೋಟಾರ್ ಚಾಲಿತ ಪ್ಯಾರಾಗ್ಲೈಡರ್ಸ್
- ಶಾಂತಿಯ ಪ್ರತೀಕವಾದ ಬೌದ್ಧ ಉತ್ಸವದ ಸಡಗರದ ಸಂದರ್ಭದಲ್ಲೇ ಮೃಗೀಯವಾಗಿ ಎಗರಿದ ಜುಂಟಾ ಸೇನೆ

5 ಸಾವಿರಕ್ಕೂ ಹೆಚ್ಚು ನಾಗರಿಕರು ಸಾವು: 2021ರಲ್ಲಿ ಮಿಲಿಟರಿ ದಂಗೆಯ ನಂತರ ಮ್ಯಾನ್ಮಾರ್‌ನಲ್ಲಿ ಅಂತರ್ಯುದ್ಧವೇ ನಡೆಯುತ್ತಿದೆ. ಜುಂಟಾ ವಿರೋಧಿ ಪ್ರತಿಭಟನೆಗಳನ್ನು ಹತ್ತಿಕ್ಕಲು ಎಂತಹ ಅಮಾನವೀಯ ಕೃತ್ಯವನ್ನೂ ಮಾಡಲು ಸಿದ್ಧವಾಗಿದೆ. ದೇಶದ ಸೇನೆಯೊಂದು ತನ್ನದೇ ಜನರ ಮೇಲೆ ಮೃಗದಂತೆ ಎಗರುವುದು ನಿತ್ಯದ ಸಾಮಾನ್ಯ ಸಂಗತಿಯಾಗಿದೆ. ವಿಶ್ವಸಂಸ್ಥೆ ಅಂದಾಜಿನ ಪ್ರಕಾರ, ಈ ಅಂತರ್ಯುದ್ಧದಲ್ಲಿ 5,000ಕ್ಕೂ ಹೆಚ್ಚು ನಾಗರಿಕರು ಸಾವನ್ನಪ್ಪಿದ್ದಾರೆ.

ಹೋರಾಟ ತೀವ್ರಗೊಳಿಸುವ ಪ್ರತಿಜ್ಞೆ

ಘಟನೆಯನ್ನು ತೀವ್ರವಾಗಿ ವಿರೋಧಿಸಿರುವ ರಾಷ್ಟ್ರೀಯ ಏಕತಾ ಸರಕಾರದ ಪ್ರತಿನಿಧಿಗಳು, ನಿರಾಯುಧ ಜನರನ್ನು ಹೀಗೆ ಅಮಾನವೀಯವಾಗಿ ಕೊಂದಿರುವ ಜುಂಟಾ ಸರಕಾರ ಹಿಂಸೆಯ ಎಲ್ಲೆಯನ್ನು ಮೀರಿದೆ ಎಂದು ಕಿಡಿಕಾರಿದ್ದಾರೆ. ಮಹಿಳೆಯರು ಮತ್ತು ಮಕ್ಕಳನ್ನು ನಿರ್ದಯವಾಗಿ ಕೊಂದ ಜುಂಟಾ ಸರಕಾರದ ವಿರುದ್ಧ ಹೋರಾಟವನ್ನು ತೀವ್ರಗೊಳಿಸುವುದಾಗಿ ಪ್ರತಿಜ್ಞೆ ಮಾಡಿದ್ದಾರೆ. ಮ್ಯಾನ್ಮಾರ್ ನಾಗರಿಕರಿಗೆ ತುರ್ತು ರಕ್ಷಣೆಗಯ ಅಗತ್ಯವಿದೆ ಎಂದು ಹೇಳಿದ್ದಾರೆ.

ಸೊಂಪಾದ ಪುಟಗಳು

ಜತೆಗಿರುವವರ ಸಂಬಂಧ ಉಳಿಸಿ ಕೊಂಡಾಗಲೇ ಜೀವನ ಸಾರ್ಥಕ
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6



ಚಿಂಪಾಂಜಿಗಳ ನಾಡಿನ ಸವಿ ಜೇನು
ಕಾಡುದಾರಿ
ಹರೀಶ್ ಕೇರ 7

ದಾರಿದೀಪೋಕ್ತಿ

ಈ ಜಗತ್ತಿನಲ್ಲಿ ಪರಿಪೂರ್ಣರಾದ ವ್ಯಕ್ತಿಗಳು ಹುಡುಕಿದರೂ ಸಿಗುವುದಿಲ್ಲ. ನಾವು ಪೂಜಿಸುವ ದೇವರಲ್ಲೂ ತಪ್ಪುಗಳನ್ನು, ಓರೆ-ಕೋರೆಗಳನ್ನು ಹುಡುಕಬಹುದು. ಈ ಕಾರಣದಿಂದ ಪರಸ್ಪರರನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯ. ಬೇರೆಯವರ ಜಾಗದಲ್ಲಿ ನಾವು ನಿಂತು ನೋಡಿದಾಗ ಮಾತ್ರ, ಅವರ ಪರಿಸ್ಥಿತಿ ತಿಳಿದೀತು. ಅದೇ ವ್ಯಕ್ತಿಯನ್ನು ತಿಳಿಯುವ ಸುಲಭ, ಸರಳ ಮಾರ್ಗ.

ವಕ್ರತುಂಡೋಕ್ತಿ

ಕೆಲವರು ಜೀವನ ನಿರ್ವಹಣೆಗೆ ಫರ್ನಿಚರ್ ಮಾರುತ್ತಾರೆ, ಇನ್ನು ಕೆಲವರು ತಮ್ಮ ಮನೆ ಫರ್ನಿಚರ್ ಮಾರುತ್ತಾರೆ.

ಮುಡಾ: ಬಿ ವರದಿ ಭವಿಷ್ಯ ಇಂದು

ಬೆಂಗಳೂರು: ಸಿಎಂ ಸಿದ್ದರಾಮಯ್ಯ ಮತ್ತು ಅವರ ಕುಟುಂಬದ ವಿರುದ್ಧದ ಮುಡಾ ನಿವೇಶನ ಹಂಚಿಕೆ ಹಗರಣ ಸಂಬಂಧ ಲೋಕಾಯುಕ್ತ 'ಬಿ' ರಿಪೋರ್ಟ್ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಯ ವಿಚಾರಣೆ ಪೂರ್ಣಗೊಂಡಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಗುರುವಾರಕ್ಕೆ ಆದೇಶ ಕಾಯ್ದಿರಿಸಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಬುರುಡೆ ಪ್ರಾಜೆಕ್ಟ್...!!



ಇಂದಿನ ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ನಿರ್ಧಾರ

ಅಕ್ರಮ ಮನೆ ಸಕ್ರಮ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಾಸಯೋಗ್ಯ ಪ್ರಮಾಣಪತ್ರ (ಸಿಸಿ), ಮನೆ ಪೂರ್ಣಗೊಂಡ ಪ್ರಮಾಣ ಪತ್ರ (ಓಸಿ) ಪಡೆಯದೇ ಮನೆಗಳ ಕಟ್ಟಿರುವ ಮಾಲೀಕರಿಗೆ ಗುರುವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಸಿಹಿ ಸುದ್ದಿ ಸಿಗುವ ಸಾಧ್ಯತೆ ಇದೆ.

ರಾಜ್ಯಾದ್ಯಂತ ನೂತನ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ, ನೀರು ಸರಬರಾಜು ವಿಚಾರ ಸಂಬಂಧ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಮಹತ್ವದ ಸಭೆ ನಡೆಸಲಾಗಿದ್ದು, ವಿದ್ಯುತ್ ಸಂಪರ್ಕ ಸಿಗದೆ ತೊಂದರೆ ಅನುಭವಿಸುತ್ತಿರುವ ಕಟ್ಟಡದ ಮಾಲೀಕರ ಸಮಸ್ಯೆ ಅಳಲು ಆಲಿಸಿ, ಸಮಸ್ಯೆಗಳ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸಿ ಬಗೆಹರಿಸಲು ಸಿಎಂ ಮುಂದಾಗಿದ್ದಾರೆ. ಈ ಸಂಬಂಧಿತ ಸಾಧಕ-ಬಾಧಕಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ.

200 ಅಡಿಯಲ್ಲಿ ಕಟ್ಟಿರುವ ಮನೆಗೆ ಮಾತ್ರ ವಿದ್ಯುತ್, ನೀರು ಸರಬರಾಜಿಗೆ ನಿರ್ಧರಿಸಲಾಗಿದ್ದು, 30x40 ಸೈಟ್‌ನಲ್ಲಿ ಕಟ್ಟಿರುವ ಮನೆಗಳಿಗೆ ಅನುಮತಿ ನೀಡುವ ಬಗ್ಗೆ ಸರಕಾರ ಚಿಂತಿಸಿದೆ. 1200 ಅಡಿಗಿಂತ ಮೇಲ್ಪಟ್ಟ ಕಟ್ಟಡಗಳಿಗೆ ಸುಗ್ರೀವಾಜ್ಞೆ ಮೂಲಕ ಅನುಮತಿ ನೀಡುವ ಬಗ್ಗೆಯೂ ತೀರ್ಮಾನಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ. ಈ ಬಗ್ಗೆ ಅಂತಿಮ ನಿರ್ಧಾರ ಸಚಿವ ಸಂಪುಟ ಸಭೆಯಲ್ಲಿ ಆಗಬೇಕಿದೆ.

ಸಭೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್, ಇಂಧನ ಸಚಿವ ಕೆ.ಜೆ.ಜಾರ್ಜ್, ಗ್ರೇಟರ್ ಬೆಂಗಳೂರು ಅಧಿಕಾರಿಗಳು, ಇಂಧನ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದು, ಕಾನೂನು ಅಡೆತಡೆಗಳ ಬಗ್ಗೆಯೂ ಈ ವೇಳೆ ಸಮಾಲೋಚನೆ ನಡೆಸಲಾಗಿದೆ. ಇದೇ ವೇಳೆ ಈ ರೀತಿ ಕಟ್ಟಡ ಮಾಲೀಕರಿಗೆ ಅನುಕೂಲ ಮಾಡಿಕೊಡುವ ಉದ್ದೇಶ ಸಂಬಂಧ ಸುಪ್ರೀಂಕೋರ್ಟ್‌ನ ಕೆಲ ಆದೇಶಗಳನ್ನೂ ಸಭೆಯಲ್ಲಿ ಚರ್ಚಿಸಲಾಗಿದ್ದು, ಕಾನೂನು ತಜ್ಞರು ಹಾಗೂ ಅಡ್ವೋಕೇಟ್ ಜನರಲ್ ಅವರ ಸಲಹೆ ಪಡೆದು ಮುಂದುವರಿಯುವಂತೆಯೂ ಸಭೆಯಲ್ಲಿ ಚರ್ಚೆಗಳಾಗಿದೆ.

ರಾಜ್ಯಾದ್ಯಂತ ನೂತನ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ, ನೀರು ಸರಬರಾಜು ವಿಚಾರ ಸಂಬಂಧ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಬುಧವಾರ ಮಹತ್ವದ ಸಭೆ ನಡೆಯಿತು.

> 30x40 ಅಳತೆಯಲ್ಲಿ ಕಟ್ಟಿರುವ ಮನೆಗಳಿಗೆ ಅನುಮತಿ ಕೊಡಲು ತೀರ್ಮಾನ ಮಾಡಿದ್ದೇವೆ. ಅಂದರೆ 1200 ಚ.ಮೀ.ಗೆ ಅನುಮತಿ ನೀಡಲಾಗುವುದು. ಆದರೆ ಅನುಮತಿ ನೀಡುವ ವಿಷಯದಲ್ಲಿ ಇಂಧನ ಇಲಾಖೆಯ ಕೆಲ ಕಾನೂನುಗಳ ಸಮಸ್ಯೆಯಿದೆ. ಆದ್ದರಿಂದ ಅದನ್ನು ನಿವಾರಿಸಿ ಅನುಮತಿಗೆ ಪ್ರಯತ್ನಿಸಲಾಗುವುದು. ಈ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚಿಸಿ, ಮುಂದೇನು ಮಾಡಬೇಕು? ಈಗಾಗಲೇ ಮನೆಗಳನ್ನು ಕಟ್ಟಿರುವವರ ವಿಷಯದಲ್ಲಿ ಯಾವ ರೀತಿಯ ಕ್ರಮವಹಿಸಬೇಕು ಎನ್ನುವುದನ್ನು ತೀರ್ಮಾನಿಸಲಾಗುವುದು.
>
> -ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಈಗಾಗಲೇ ಮನೆ ಕಟ್ಟಿದವರ ರಕ್ಷಣೆಗೆ ಬದ್ಧ

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಿಸಿಎಂ ಡಿ.ಕೆ.ಶಿವಕುಮಾರ್, ಇನ್ಮುಂದೆ ಕಟ್ಟುವ ಮನೆಗಳ ಬದಲಿಗೆ ಈಗಾಗಲೇ ಕಟ್ಟಿದ ಮನೆಗಳ ರಕ್ಷಣೆಗೆ ತೀರ್ಮಾನಿಸಲಾಗಿದ್ದು, ಎಲ್ಲರ ಅಭಿಪ್ರಾಯ ಸಂಗ್ರಹಿಸಿ ಈ ನಿರ್ಧಾರಕ್ಕೆ ಬರಲಾಗಿದೆ. ಅಲ್ಲದೇ ಕಾನೂನಿನಲ್ಲಿರುವ ಅಡೆತಡೆ ನಿವಾರಿಸಲು ಚರ್ಚೆಯಾಗಿದ್ದು, ಈ ಯೋಜನೆ ಅನುಷ್ಠಾನಕ್ಕೆ ಇಂಧನ ಇಲಾಖೆಗೆ ಅಡೆತಡೆ ಇವೆ. ಅದನ್ನು ನಿವಾರಿಸಿ ಅನುಮತಿ ನೀಡಲು ಪ್ರಯತ್ನ ಮಾಡುತ್ತೇವೆ. ರಾಜ್ಯಾದ್ಯಂತ 1,200 ಚದರ ಅಡಿಯಲ್ಲಿ ಕಟ್ಟಿರುವ ಮನೆಗಳಿಗೆ ವಿದ್ಯುತ್ ಮತ್ತು ನೀರು ನೀಡಲು ನಿರ್ಧಾರ ಮಾಡಲಾಗಿದೆ. 1,200 ಅಡಿಗಿಂತ ಮೇಲ್ಪಟ್ಟ ಕಟ್ಟಡಗಳಿಗೆ ಸುಗ್ರೀವಾಜ್ಞೆ ಮೂಲಕ ಅನುಮತಿ ನೀಡುವ ಬಗ್ಗೆ ಸಭೆಯಲ್ಲಿ ಚರ್ಚೆಯಾಗಿದೆ ಎಂದು ಹೇಳಿದರು.

ಸಚಿವ ಸಂಪುಟ ಒಪ್ಪಿಗೆ ನೀಡಿದರೂ ಅತಂತ್ರ: ಬೆಂಗಳೂರು ಮತ್ತು ರಾಜ್ಯದ ವಿವಿಧ ನಗರಗಳಲ್ಲಿ ಸುಪ್ರೀಂಕೋರ್ಟ್ ತೀರ್ಪಿನ ಕಾರಣದಿಂದಾಗಿ, ಸಿಸಿ ಮತ್ತು ಒಸಿ ಇಲ್ಲದೆ ಇರುವ ಮನೆಗಳಿಗೆ ವಿದ್ಯುತ್ ಸಂಪರ್ಕವೇ ಸಿಗುತ್ತಿಲ್ಲ. ರಾಜ್ಯದಲ್ಲಿ 10 ಲಕ್ಷಕ್ಕೂ ಹೆಚ್ಚು ಮನೆಗಳು ಹೊಸದಾಗಿ ನಿರ್ಮಾಣವಾಗಿದ್ದು, ಇವುಗಳಿಗೆ ವಿದ್ಯುತ್ ಸಂಪರ್ಕವನ್ನು ನೀಡಲು ಸುಪ್ರೀಂಕೋರ್ಟ್ ತೀರ್ಪು ಅಡ್ಡಿಯಾಗಿದೆ. ಆದರೆ 1,200 ಚದರ ಅಡಿಯವರೆಗಿನ ಹೊಸ ಮನೆಗಳಿಗೆ ಸಿಸಿ ಮತ್ತು ಒಸಿ ಅಗತ್ಯವಿಲ್ಲ ಎಂದು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ವಿನಾಯಿತಿ ನೀಡಿ ನಿರ್ಣಯ ಕೈಗೊಂಡಿದೆ. ಸಂಪುಟ ನಿರ್ಣಯ ತೆಗೆದುಕೊಂಡರೂ, ವಿದ್ಯುತ್ ಇಲಾಖೆಯ ವಿವಿಧ ವಿದ್ಯುತ್ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ 1,200 ಚದರ ಅಡಿಯವರೆಗಿನ ಮನೆಗಳಿಗೂ ವಿದ್ಯುತ್ ಸಂಪರ್ಕವನ್ನೇ ನೀಡು ತ್ತಿಲ್ಲ. ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನವಾಗಿದ್ದರೂ ಈ ಬಗ್ಗೆ ಮಂಡಳಿಯಲ್ಲಿ ತೀರ್ಮಾನವಾಗಿಲ್ಲ. ಇದರಿಂದಾಗಿ ರಾಜ್ಯದಲ್ಲಿ 10 ಲಕ್ಷಕ್ಕೂ ಹೆಚ್ಚು ಮನೆಗಳು ವಿದ್ಯುತ್ ಸಂಪರ್ಕವಿಲ್ಲದೆ ಸಮಸ್ಯೆ ಎದುರಿಸುವಂತಾಗಿದೆ.

- 30x40 ಸೈಟ್‌ನಲ್ಲಿ ಕಟ್ಟಿರುವ ಮನೆಗಳಿಗೆ ಅನುಮತಿ ನೀಡುವ ಬಗ್ಗೆ ಚಿಂತನೆ
- 1200 ಅಡಿಗಿಂತ ಮೇಲ್ಪಟ್ಟ ಕಟ್ಟಡಗಳಿಗೆ ಸುಗ್ರೀವಾಜ್ಞೆ ಮೂಲಕ ಅನುಮತಿ ಬಗ್ಗೆ ಚರ್ಚೆ

ಹಾಸನಾಂಬೆ ದರ್ಶನ

ಹಾಸನ: ವರ್ಷಕ್ಕೊಮ್ಮೆಯಷ್ಟೇ ದರ್ಶನ ಭಾಗ್ಯ ಕರುಣಿಸಿರುವ ನಗರದ ಅಧಿದೇವತೆ ಹಾಸನಾಂಬೆಯ ದರ್ಶನೋತ್ಸವ ಇಂದಿನಿಂದ ಚಾಲನೆ ಪಡೆಯಲಿದೆ. ಆಶ್ವೀಜ ಮಾಸದ ಮೊದಲ ಗುರುವಾರ ಮಧ್ಯಾಹ್ನ 12 ಗಂಟೆ ನಂತರ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ದೇವಿಯ ಗರ್ಭಗುಡಿ ಬಾಗಿಲು ತೆರೆಯಲಿದೆ. ಮೊದಲ ಮತ್ತು ಕಡೆಯ ದಿನ ದರ್ಶನ ಇರುವುದಿಲ್ಲ. ಅ.9 ರಿಂದ 23 ರ ವರೆಗೆ ಜಾತ್ರೋತ್ಸವ ಜರುಗಲಿದೆ.

ಪ್ರಶಸ್ತಿಗೆ ಅರ್ಜಿ ಕರೆಯಲ್ಲ

ಬೆಂಗಳೂರು: ರಾಜ್ಯೋತ್ಸವ ಪ್ರಶಸ್ತಿಗಾಗಿ ಆನ್‌ಲೈನ್ ಅರ್ಜಿ ಕರೆಯುವ ಪ್ರಕ್ರಿಯೆಯನ್ನು ಕೈ ಬಿಡಲಾಗಿದೆ ಎಂದು ಸಚಿವ ಶಿವರಾಜ್ ಎಸ್. ತಂಗಡಗಿ ಹೇಳಿದ್ದಾರೆ. ಈ ವರ್ಷ 70 ಗಣ್ಯರಿಗೆ ಪ್ರಶಸ್ತಿ ನೀಡಲಾಗುವುದು. ಈಗಾಗಲೇ ಇಲಾಖೆಗೆ ಸಲ್ಲಿಕೆಯಾಗಿರುವ ಸ್ವಯಂ ಅರ್ಜಿಗಳನ್ನು ಸಹ ಪ್ರಶಸ್ತಿ ಸಲಹಾ ಸಮಿತಿ ಮುಂದೆ ಮಂಡಿಸಲಾಗುವುದು ಎಂದರು.

ಸರ್ಗಿಯೊ ರಾಯಭಾರಿ

ನ್ಯೂಯಾರ್ಕ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಪ್ತ ಸರ್ಗಿಯೊ ಗೋರ್ ಅವರು ಭಾರತಕ್ಕೆ ಅಮೆರಿಕದ ಮುಂದಿನ ರಾಯಭಾರಿಯಾಗಿ ಆಯ್ಕೆಯಾಗಿದ್ದಾರೆ. ಮಂಗಳವಾರ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಗೋರ್ ಪರ 51 ಸೆನೆಟರ್‌ಗಳು ಮತ್ತು ವಿರುದ್ಧವಾಗಿ 47 ಸೆನೆಟರ್‌ಗಳು ಮತಚಲಾಯಿಸಿದ್ದಾರೆ. ಅಮೆರಿಕ ಮತ್ತು ಭಾರತದ ಸಂಬಂಧ ಹದಗೆಟ್ಟಿರುವ ಸಂದರ್ಭದಲ್ಲಿ ಗೋರ್ ರಾಯಭಾರಿಯಾಗಿ ಆಯ್ಕೆಯಾಗಿರುವುದು ಗಮನಾರ್ಹ ಸಂಗತಿ.

ಪ್ರೊ.ಕೃ.ನರಹರಿ ನಿಧನ

ಬೆಂಗಳೂರು: ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಆರ್‌ಎಸ್‌ಎಸ್ ಕ್ಷೇತ್ರೀಯ ಕಾರ್ಯವಾಹರಾಗಿದ್ದ ಹಾಗೂ ಮೇಲ್ಮನೆ ಮಾಜಿ ಸದಸ್ಯ ಕೃ.ನರಹರಿ (93) ಬೆಂಗಳೂರಿನಲ್ಲಿ ಬುಧವಾರ ಬೆಳಗ್ಗೆ 4.30ಕ್ಕೆ ನಿಧನರಾದರು. ಅವರ ನಿಧನಕ್ಕೆ ಆರ್‌ಎಸ್‌ಎಸ್ ಮತ್ತು ಬಿಜೆಪಿ ನಾಯಕರು ತೀವ್ರ ಸಂತಾಪ ಸೂಚಿಸಿದ್ದಾರೆ.



ಬಿಜೆಪಿ ಮುಖಂಡ ಹತ್ಯೆ

ಕೊಪ್ಪಳ: ಗಂಗಾವತಿಯ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ವೆಂಕಟೇಶ್ (31) ಅವರನ್ನು ಮಂಗಳವಾರ ಮಧ್ಯರಾತ್ರಿ ಮಾರಕಾಸ್ತ್ರಗಳಿಂದ ದುಷ್ಕರ್ಮಿಗಳು ಕೊಚ್ಚಿ ಕೊಲೆ ಮಾಡಿದ್ದಾರೆ. 'ಸ್ನೇಹಿತರೆಲ್ಲರೂ ಸೇರಿ ಕೊಂಡು ರಾತ್ರಿ ಊಟಕ್ಕೆ ಹೋಗಿದ್ದೆವು. ವಾಪಸ್ ಬರುವಾಗ ಏಳೆಂಟು ಜನ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಬಂದು ಹಲ್ಲೆ ಮಾಡಿದರು. ನಮ್ಮನ್ನು ಬೆದರಿಸಿ ಓಡಿಸಿದರು' ಎಂದು ಜತೆಯಲ್ಲಿದ್ದ ವೆಂಕಟೇಶ ಸ್ನೇಹಿತ ರಾಮು ತಿಳಿಸಿದ್ದಾರೆ.

ಪಾಕಿಸ್ತಾನದಲ್ಲಿ ರಕ್ತದೋಕುಳಿ

ಪೇಶಾವರ: ವಾಯುವ್ಯ ಪಾಕಿಸ್ತಾನದ ಖೈಬರ್ ಪಖ್ತುಂಖ್ವಾದಲ್ಲಿ ಪಾಕಿಸ್ತಾನದ ಸೇನಾ ಸಿಬ್ಬಂದಿ ಬಲೂಚಿಸ್ತಾನ ಹೋರಾಟ ಗಾರರ ನಡುವೆ ಗುಂಡಿನ ಚಕಮಕಿ ನಡೆದಿದ್ದು, ಘಟನೆಯಲ್ಲಿ 19 ಮಂದಿ ಬಲೂಚಿಗಳನ್ನು ಹತ್ಯೆಗೈಯ್ಯಲಾಗಿದೆ. ಪಾಕಿಸ್ತಾನದ 11 ಮಂದಿ ಸೈನಿಕರೂ ಮೃತಪಟ್ಟಿದ್ದಾರೆ.

ತೆಹ್ರೀಕ್-ಇ-ತಾಲಿಬಾನ್ ಪಾಕಿಸ್ತಾನ್ ಸಂಘಟನೆಯ ಸದಸ್ಯರು ಅಫ್ಗನ್ ಗಡಿ ಸಮೀಪದ ಒರಾಕ್ಜೈ ಜಿಲ್ಲೆಯಲ್ಲಿ ಅಡಗಿರುವ ಬಗ್ಗೆ ಗುಪ್ತಚರ ಮಾಹಿತಿ ಲಭ್ಯವಾದ ಕಾರಣ ಸೇನಾಪಡೆ ಕಾರ್ಯಾಚರಣೆ ಆರಂಭಿಸಿತ್ತು. ಅಕ್ಟೋಬರ್ 7ರ ತಡರಾತ್ರಿ ಶುರುವಾಗಿ ಅ.8ರ ಬೆಳಗ್ಗಿನ ಜಾವದವರೆಗೆ ನಡೆದ ಕಾರ್ಯಾಚರಣೆಯಲ್ಲಿ ತೀವ್ರ ಗುಂಡಿನ ಚಕಮಕಿ ನಡೆದಿದೆ. ಮೃತಪಟ್ಟ ಸೈನಿಕರ ಪೈಕಿ ಲೆಫ್ಟಿನೆಂಟ್ ಕರ್ನಲ್ ಹಾಗೂ ಮೇಜರ್ ಕೂಡ ಸೇರಿದ್ದಾರೆ ಎಂದು ಪಾಕ್ ಸೇನೆಯ ಮಾಧ್ಯಮ ವಿಭಾಗ ತಿಳಿಸಿದೆ.

ರೆಡ್ಡಿ ವಿರುದ್ಧದ ಪ್ರಕರಣ ವಾಪಸ್‌ಗೆ ಸುಪ್ರೀಂ ನಕಾರ

ಬೆಂಗಳೂರು: ಶಾಸಕ ಜನಾರ್ದನ ರೆಡ್ಡಿ ಆರೋಪಿಯಾಗಿರುವ ಗಣಿಗಾರಿಕೆ ಹಗರಣಕ್ಕೆ ಸಂಬಂಧಿಸಿದ ಹಣ ವರ್ಗಾವಣೆ ಪ್ರಕರಣ ರದ್ದತಿ ಕೋರಿ ಜೆಎಸ್ ಡಬ್ಲ್ಯು ಸ್ಟೀಲ್ ಲಿಮಿಟೆಡ್ ಮತ್ತು ಅದರ ಉಪ ಪ್ರಧಾನ ವ್ಯವಸ್ಥಾಪಕ (ಅನುಸರಣೆ) ಪ್ರವೀಣ್ ಜಾನ್ ಸಿಕ್ವೇರಾ ಸಲ್ಲಿಸಿದ್ದ ಮೇಲ್ಮನವಿ ಗಳನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾಗೊಳಿಸಿದೆ.

ರೆಡ್ಡಿ ಅವರ ಓಬಳಾಪುರಂ ಗಣಿಗಾರಿಕೆ ಕಂಪನಿ ಭಾಗಿಯಾಗಿರುವ ಅಕ್ರಮ ಗಣಿಗಾರಿಕೆ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ತನಿಖೆ ಆರಂಭಿಸಿತ್ತು. ಇ.ಡಿ ದೂರು ಮತ್ತು ಅಕ್ರಮ ಹಣ ವರ್ಗಾವಣೆ ತಡೆ ಕಾಯಿದೆಯಡಿ (ಪಿಎಂಎಲ್‌ಎ) ರೂಪುಗೊಂಡಿರುವ ವಿಶೇಷ ನ್ಯಾಯಾಲಯ ಪ್ರಕಟಿಸಿದ್ದ ತೀರ್ಪಿನಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿ ಕರ್ನಾಟಕ ಹೈಕೋರ್ಟ್ ಜೂನ್ 13, 2022ರಲ್ಲಿ ಹೊರಡಿಸಿದ್ದ ಆದೇಶವನ್ನು ಈ ಮೂಲಕ ನ್ಯಾಯಮೂರ್ತಿಗಳಾದ ದೀಪಂಕರ್ ದತ್ತ ಮತ್ತು ಆಗಸ್ಟೀನ್ ಜಾರ್ಜ್ ಮಸಿಹ್ ಅವರಿದ್ದ ಪೀಠ ಎತ್ತಿಹಿಡಿದಿದೆ. ಆಸ್ತಿ ಮುಟ್ಟುಗೋಲು ಮತ್ತು ಅಪರಾಧದ ಗಳಿಕೆಗೆ ಸಂಬಂಧಿಸಿದ ವಿಚಾರವನ್ನು ಮೊದಲು ನಿರ್ಣಯಿಸಬೇಕು ಎಂದು ಪೀಠ ಹೇಳಿದೆ.

ಭೀಕರ ಸ್ಫೋಟ 7 ಮಂದಿ ಸಾವು

ಅಮರಾವತಿ: ಆಂಧ್ರ ಪ್ರದೇಶದ ಪಟಾಕಿ ಕಾರ್ಖಾನೆಯಲ್ಲಿ ಭೀಕರ ಸ್ಫೋಟ ಸಂಭವಿಸಿದ್ದು, ಈ ದುರ್ಘಟನೆಯಲ್ಲಿ ಕನಿಷ್ಠ 7 ಮಂದಿ ಸಾವನ್ನಪ್ಪಿ ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಆಂಧ್ರ ಪ್ರದೇಶದ ಕೋನಸೀಮ ಜಿಲ್ಲೆಯ ರಾಯವರಂನಲ್ಲಿರುವ ಶ್ರೀ ಗಣಪತಿ ಗ್ರ್ಯಾಂಡ್ ಪಟಾಕಿ ತಯಾರಿಕಾ ಘಟಕದಲ್ಲಿ ಈ ಸ್ಫೋಟ ಸಂಭವಿಸಿದ್ದು, ಪ್ರಬಲ ಸ್ಫೋಟದಲ್ಲಿ ಆರು ಜನರು ಸಾವನ್ನಪ್ಪಿದ್ದು, ಮತ್ತೊರ್ವ ಆಸ್ಪತ್ರೆಗೆ ಸಾಗಿಸುವಾಗ ಮಾರ್ಗ ಮಧ್ಯೆ ಅಸುನೀಗಿದ್ದಾರೆ. ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಾಗಬಹುದು ಎಂದು ಅಧಿಕಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ರಕ್ಷಣಾ ಕಾರ್ಯಾಚರಣೆಗಳು ನಡೆಯುತ್ತಿದ್ದು, ಬೆಂಕಿಯನ್ನು ನಿಯಂತ್ರಣಕ್ಕೆ ತರಲು ಅಗ್ನಿಶಾಮಕ ಸಿಬ್ಬಂದಿ ಶ್ರಮಿಸುತ್ತಿದ್ದಾರೆ.

ಮೂವರು ವಿಜ್ಞಾನಿಗಳಿಗೆ ರಸಾಯನಶಾಸ್ತ್ರ ನೊಬೆಲ್

ಸ್ಟಾಕ್‌ಹೋಮ್: 'ಮೆಟಲ್ ಆರ್ಗನಿಕ್ ಫ್ರೇಮ್‌ವರ್ಕ್' ಸಂಶೋಧನೆಗಾಗಿ ಸುಸುಮು ಕಿಟಗಾವ, ರಿಚರ್ಡ್ ರಾಬ್ಸನ್ ಮತ್ತು ಒಮರ್ ಎಂ. ಯಾಘಿ ಎಂಬ ಮೂವರು ವಿಜ್ಞಾನಿಗಳಿಗೆ ರಸಾಯನಶಾಸ್ತ್ರ ವಿಭಾಗದ ನೊಬೆಲ್ ಪ್ರಶಸ್ತಿ ಘೋಷಣೆಯಾಗಿದೆ ಎಂದು ರಾಯಲ್ ಸ್ವೀಡಿಷ್ ಅಕಾಡೆಮಿ ತಿಳಿಸಿದೆ. ಪ್ರತಿಯೊಬ್ಬ ನೊಬೆಲ್ ಪ್ರಶಸ್ತಿ ವಿಜೇತರಿಗೆ 11 ಮಿಲಿಯನ್ ಸ್ವೀಡಿಷ್ ಕ್ರೋನರ್ (ಸುಮಾರು 1 ಮಿಲಿಯನ್) ನಗದು ಬಹುಮಾನ ನೀಡಲಾಗುತ್ತದೆ. ಡಿ.10ರಂದು ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ.

ಬಿಗ್ ಬಾಸ್‌ಗೆ ಬೀಗ, ಡಿಕೆಶಿಗೆ ತಿವಿದ ಜೆಡಿಎಸ್ | ಎಚ್‌ಡಿಕೆ ಟ್ವೀಟ್‌ಗೆ ಡಿಸಿಎಂ ಲೇವಡಿ

ನಟ್ಟು ಬೋಲ್ಟ್ ಟೈಟ್ ಜಟಾಪಟಿ

ಬೆಂಗಳೂರು: ಬಿಗ್ ಬಾಸ್ ಕನ್ನಡ ಸೀಸನ್ 12ರ ರಿಯಾಲಿಟಿ ಶೋ ನಡೆಯುತ್ತಿದ್ದ ಜಾಲಿವುಡ್ ಸ್ಟುಡಿಯೋಗೆ ಬೀಗ ಬಿದ್ದಿರುವ ಬೆನ್ನಲ್ಲೇ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಹಳೇ ಹೇಳಿಕೆ ಬಗ್ಗೆ ಚರ್ಚೆ ಶುರುವಾಗಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಜೆಡಿಎಸ್, 'ಕಲಾವಿದರ ಮೇಲೆ ಸೇಡು ತೀರಿಸಿಕೊಂಡ ನಟ್ಟು ಬೋಲ್ಟ್ ಮಿನಿಸ್ಟರ್ ಡಿ.ಕೆ.ಶಿವಕುಮಾರ್' ಎಂದು ಸಿಟ್ಟು ಹೊರಹಾಕಿದೆ.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಟ್ವಿಟರ್‌ನಲ್ಲಿ ನಟ್ಟು ಬೋಲ್ಟ್ ಟೈಟ್ ಎಂದು ವ್ಯಂಗ್ಯವಾಡಿರುವ ಬಗ್ಗೆ ಡಿಸಿಎಂ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದ್ದಾರೆ. ಅವರು ಏನು ಬೇಕಾದರೂ ಮಾಡಿಕೊಳ್ಳಲಿ. ಕುಮಾರಸ್ವಾಮಿಯವರಾದರೂ ಆಗಲಿ, ಯಾರನ್ನಾದರೂ ಕರೆದುಕೊಂಡಾದರೂ ಆಗಲಿ, ಮಾಡಿಕೊಳ್ಳಲಿ ಎಂದು ಪ್ರತಿಕ್ರಿಯಿಸಿದ್ದಾರೆ. ಜೆಡಿಎಸ್ ಈ ವಿಷಯದಲ್ಲಿ ರಾಜಕೀಯ ಮಾಡುತ್ತಿದೆ. ನನ್ನ ಹೆಸರನ್ನು ಪ್ರತಿದಿನ ನೆನಪಿಸಿಕೊಳ್ಳದಿದ್ದರೆ ಕುಮಾರಸ್ವಾಮಿಗೆ ನಿದ್ದೆ, ನೆಮ್ಮದಿ, ಶಕ್ತಿ ಏನೂ ಬರುವುದಿಲ್ಲ ಎಂದು ಲೇವಡಿ ಮಾಡಿದ್ದಾರೆ.

ಬೆಸ್ಕಾಂ ನೋಟಿಸ್ ಜಾರಿ: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯಿಂದಲೂ ವಿದ್ಯುತ್ ಸ್ಥಾವರ ಸ್ಥಾಪನೆ ಬಗ್ಗೆ ಕಾರಣ ಕೇಳಿ ಜಾಲಿವುಡ್ ಸ್ಟುಡಿಯೋಗೆ ನೋಟಿಸ್ ಜಾರಿ ಮಾಡಿದೆ. ಸ್ಥಳೀಯ ಪ್ರಾಧಿಕಾರದಿಂದ ನಕ್ಷೆ ಅನುಮೋದನೆ ಪಡೆದಿಲ್ಲ, ಅನುಮೋದನೆ ಪಡೆಯದೇ ವಿದ್ಯುತ್ ಸ್ಥಾವರ ಸ್ಥಾಪಿಸಿರುವುದು ಹೇಗೆ? ಎಂದು ಬೆಸ್ಕಾಂ ಅಧಿಕಾರಿಗಳು ಪ್ರಶ್ನಿಸಿದ್ದಾರೆ.

→ 4

> ಬಿಗ್ ಬಾಸ್ ಆಗಲಿ, ಯಾವುದೇ ಕಾರ್ಯಕ್ರಮ ವಾಗಲಿ, ಮನರಂಜನೆ ಜನರಿಗೆ ಬೇಕು. ಖಾಸಗಿಯವರು ಹೂಡಿಕೆ ಮಾಡಿ ತಪ್ಪು ಮಾಡಿರಬಹುದು, ಆದರೆ ಅದನ್ನು ಸರಿಪಡಿಸಿಕೊಳ್ಳಲು ಅವಕಾಶ ಕೊಡಬೇಕು. ಉದ್ಯೋಗ ಸೃಷ್ಟಿಯೂ ಮುಖ್ಯ. ಆದ್ದರಿಂದ, ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಅವಕಾಶ ಕೊಡಿ ಎಂದು ಸೂಚಿಸಿದ್ದೇನೆ.
>
> -ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ಬಿಗ್ ಬಾಸ್ ಭವಿಷ್ಯ ಇಂದು ನಿರ್ಧಾರ

ರಾಮನಗರ ಜಿಲ್ಲೆಯ ಜಾಲಿವುಡ್ ಸ್ಟುಡಿಯೋಸ್‌ಗೆ ಬೀಗ ಹಾಕಿದ ಜಿಲ್ಲಾಡಳಿತದ ಕ್ರಮ ಮತ್ತು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ನೀಡಿದ ನೋಟಿಸ್ ಅನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ಎರಡು ಅರ್ಜಿಗಳ ವಿಚಾರಣೆ ಗುರುವಾರ ನಡೆಯಲಿದೆ. ಈ ತೀರ್ಪು ಜನಪ್ರಿಯ ರಿಯಾಲಿಟಿ ಶೋ ಬಿಗ್ ಬಾಸ್ ಕನ್ನಡ ಸೀಸನ್ 12ರ ಭವಿಷ್ಯ ನಿರ್ಧರಿಸಲಿದೆ. ಈ ಪ್ರಕರಣದಲ್ಲಿ ಎರಡು ಪ್ರತ್ಯೇಕ ಅರ್ಜಿಗಳು ಹೈಕೋರ್ಟ್‌ನ ಮುಂದಿವೆ. ಮೊದಲನೆಯದು, ಜಿಲ್ಲಾಡಳಿತವು ಸ್ಟುಡಿಯೋಗೆ ಬೀಗ ಹಾಕಿದ ಕ್ರಮ ಪ್ರಶ್ನಿಸಿದರೆ, ಎರಡನೇ ಅರ್ಜಿಯು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಹಿಂದೆ ಜಾಲಿವುಡ್ ಸ್ಟುಡಿಯೋಸ್‌ಗೆ ನೀಡಿದ್ದ ನೋಟೀಸ್ ವಿರುದ್ಧವಾಗಿದೆ. ಸ್ಟುಡಿಯೋ ಮಾಲೀಕರು ಈ ಎರಡೂ ಆದೇಶ ರದ್ದುಗೊಳಿಸಿ, ತುರ್ತು ವಿಚಾರಣೆ ನಡೆಸುವಂತೆ ಕೋರ್ಟ್‌ಗೆ ಮನವಿ ಮಾಡಿದ್ದಾರೆ.

ವಿಶೇಷ ಸಂಚಿಕೆಯಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಭಾಗಿ

5 ಸಾವಿರ ಹೊಸ್ತಿಲಲ್ಲಿ ಥಟ್ ಅಂತ ಹೇಳಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕನ್ನಡ ಕಿರುತೆರೆಯಲ್ಲಿ ತಮ್ಮದೇಯಾದ ಛಾಪು ಮೂಡಿಸಿರುವ 'ಥಟ್ ಅಂತ ಹೇಳಿ' ಕ್ವಿಜ್ ಕಾರ್ಯಕ್ರಮ ಐದು ಸಾವಿರ ಸಂಚಿಕೆಯ ಸನಿಹದಲ್ಲಿದೆ.

ಈಗಾಗಲೇ ಹಲವು ದಾಖಲೆಗಳನ್ನು ಬರೆದಿರುವ ಥಟ್ ಅಂತ ಹೇಳಿ ಕ್ವಿಜ್ ಕಾರ್ಯಕ್ರಮ ಐದು ಸಾವಿರ ಸಂಚಿಕೆಗಳನ್ನು ಪೂರೈಸುತ್ತಿರುವ ದೇಶದ ವಾಹಿನಿಗಳ ಇತಿಹಾಸದಲ್ಲಿಯೇ ಮೊದಲ ಕಾರ್ಯಕ್ರಮ ಎನ್ನುವ 'ದಾಖಲೆ' ನಿರ್ಮಿಸಿದೆ. ಈಗಾಗಲೇ ಲಿಮ್ಕಾ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿರುವ ಈ ಕಾರ್ಯಕ್ರಮ ಇದೀಗ ಗಿನ್ನಿಸ್ ವಿಶ್ವದಾಖಲೆಯತ್ತ ದಾಪುಗಾಲಿಟ್ಟಿದೆ.

2002ರ ಜನವರಿ 4ರಂದು ಪ್ರಾರಂಭವಾದ ಥಟ್ ಅಂತಾ ಹೇಳಿ ಕಾರ್ಯಕ್ರಮ ಅ.13ರಂದು ಐದು ಸಾವಿರದ ಸಂಚಿಕೆಯ ಪ್ರಸಾರಕ್ಕೆ ಸಜ್ಜಾಗಿದೆ. ಹೊಸ ಮೈಲಿಗಲ್ಲಿನ ಸಂಚಿಕೆಯನ್ನು 11ರಂದು ಜಿಕೆವಿಕೆ ಆವರಣದಲ್ಲಿರುವ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಕನ್ವೆನ್ಷನ್ ಕೇಂದ್ರದಲ್ಲಿ ಚಿತ್ರೀಕರಣವಾಗಲಿದೆ. ಈ ಮಹತ್ವದ ಕಾರ್ಯಕ್ರಮದಲ್ಲಿ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಥ್, ಅರಣ್ಯ ಸಚಿವ ಈಶ್ವರ ಖಂಡ್ರೆ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ ಎನ್ನಲಾಗಿದೆ.

ಡಾ.ನಾ.ಸೋಮೇಶ್ವರ ಅವರು ನಡೆಸಿಕೊಡುವ ಈ ಕಾರ್ಯಕ್ರಮದ ಉಸ್ತುವಾರಿ ಹಾಗೂ ನಿರ್ವಹಣೆಯ ಜವಾಬ್ದಾರಿಯನ್ನು ನಿಭಾಯಿಸುತ್ತಿರುವ ಎಚ್.ಎನ್.ಆರತಿ, ಕಾರ್ಯಕ್ರಮ ನಿರ್ಮಾಪಕರಾದ ಎಂ.ಎನ್.ಚಂದ್ರಕಲಾ ಇದೀಗ 500ನೇ ಸಂಚಿಕೆಯ ಸಿದ್ಧತೆಯನ್ನು ತೊಡಗಿದ್ದಾರೆ. 23 ವರ್ಷಗಳ ಹಿಂದೆ ಉಷಾಕಿಣಿ ಅವರು ಈ ಕಾರ್ಯಕ್ರಮ ಆರಂಭಿಸಿದ್ದರು. 100ನೇ ಸಂಚಿಕೆಯಲ್ಲಿ ರಾಜ್ಯಸಭಾ ಸದಸ್ಯರಾದ ಸುಧಾಮೂರ್ತಿ ಅವರು ಪಾಲ್ಗೊಂಡಿದ್ದರು.

ಕೋವಿಡ್‌ನಲ್ಲಿ ಮಾತ್ರ ಸ್ಥಗಿತ: ಚಂದನ ವಾಹಿನಿಯಲ್ಲಿ ಕಳೆದ 13 ವರ್ಷಗಳಿಂದ ನಿರಂತರವಾಗಿ ಪ್ರಸಾರವಾಗುತ್ತಿ ರುವ ಥಟ್ ಅಂತ ಹೇಳಿ ಕಾರ್ಯಕ್ರಮ ಕೋವಿಡ್ ಸಮಯದಲ್ಲಿ ಕೆಲ ಕಾಲ ಸ್ಥಗಿತಗೊಂಡಿತ್ತು. ಇದನ್ನು ಹೊರತುಪಡಿಸಿ, ಇನ್ನಾವ ಸಮಯದಲ್ಲಿಯೂ ಸ್ಥಗಿತವಾಗಿರಲಿಲ್ಲ. ನಿತ್ಯ 30 ನಿಮಿಷಗಳ ಕಾಲ ನಡೆಯುವ ಈ ಕಾರ್ಯಕ್ರಮ ಈವರೆಗೆ 2500 ಗಂಟೆಗಳ ಕಾಲ ಪ್ರಸಾರವಾಗಿದ್ದು, ಈ ಅವಧಿ ಯಲ್ಲಿ 75 ಸಾವಿರ ಪ್ರಶ್ನೆಗಳನ್ನು ಕೇಳಿದ್ದು, 15 ಸಾವಿರ ಸ್ಪರ್ಧಿಗಳು ಭಾಗವಹಿಸಿ 70 ಸಾವಿರ ಕನ್ನಡದ ವಿವಿಧ ಪ್ರಕಾರಗಳ ಪುಸ್ತಕಗಳನ್ನು ಬಹುಮಾನವಾಗಿ ಪಡೆದಿದ್ದಾರೆ. ವಿಶೇಷ ಸನ್ನಿವೇಶಗಳಲ್ಲಿ ವಿಭಿನ್ನ ರೀತಿಯಲ್ಲಿ ಈ ಕಾರ್ಯಕ್ರಮ ಮೂಡಿಬಂದಿದೆ.

13 ವರ್ಷಗಳಿಂದ ಪ್ರಸಾರ	2500 ಗಂಟೆಗಳ ಕಾಲ ಪ್ರಸಾರ
15 ಸಾವಿರ ಸ್ಪರ್ಧಿಗಳು ಭಾಗಿ	70 ಸಾವಿರ ಪುಸ್ತಕ ಬಹುಮಾನ ವಿತರಣೆ

> ಕಾರಾಗೃಹ ವಾಸಿಗಳಿಗೆ ವಿಶೇಷ ಸ್ಪರ್ಧೆ, ಅಂಧರು, ಎಚ್‌ಐವಿ ಸೋಂಕಿತರು, ಐಟಿ ತಜ್ಞರು, ಅನಿವಾಸಿ ಭಾರತೀಯರು ಹೀಗೆ ಹತ್ತು ಹಲವು ವಿಭಾಗಗಳಲ್ಲಿ ವೈಶಿಷ್ಟ್ಯಪೂರ್ಣ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಗಿದೆ. ಇದೀಗ ಈ ಕಾರ್ಯಕ್ರಮ ಮತ್ತೊಂದು ಹೆಗ್ಗುರುತು ಮೂಡಿಸಲು ಸರ್ವ ಸನ್ನದ್ಧವಾಗಿದೆ.
>
> -ಭಾಗ್ಯವಾನ್ ದೂರದರ್ಶನ ಕೇಂದ್ರ ದಕ್ಷಿಣ ವಲಯದ ಉಪ ಮಹಾನಿರ್ದೇಶಕ

- ಲಿಮ್ಕಾ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ದಾಖಲು
- ಇದೀಗ ಗಿನ್ನಿಸ್ ವಿಶ್ವದಾಖಲೆಯತ್ತ ದಾಪುಗಾಲಿಡುತ್ತಿರುವ ಕಾರ್ಯಕ್ರಮ
- 23 ವರ್ಷಗಳ ಹಿಂದೆ ಆರಂಭವಾದ ಕನ್ನಡದ ಕಾರ್ಯಕ್ರಮ

ಸಮಾಚಾರ ಸಣ್ಣದಲ್ಲ

ಮುಡಾ ಕೇಸ್ ಖುಲಾಸೆ ಇಂದು ಕೋರ್ಟ್ ತೀರ್ಪು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಕುಟುಂಬದ ವಿರುದ್ಧದ ಮುಡಾ ನಿವೇಶನ ಹಂಚಿಕೆ ಹಗರಣ ಸಂಬಂಧ ಲೋಕಾಯುಕ್ತ 'ಬಿ' ರಿಪೋರ್ಟ್ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಯ ವಿಚಾರಣೆ ಪೂರ್ಣಗೊಂಡಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಗುರುವಾರಕ್ಕೆ ಆದೇಶ ಕಾಯ್ದಿರಿಸಿದೆ. ಲೋಕಾಯುಕ್ತ 'ಬಿ' ರಿಪೋರ್ಟ್ ಪ್ರಶ್ನಿಸಿ ದೂರುದಾರ ಸ್ನೇಹಮಯಿ ಕೃಷ್ಣ ಪ್ರೊಟೆಸ್ಟ್ ಅರ್ಜಿ ಹಾಕಿದ್ದರು. ಈ ಹಿಂದೆ ತನಿಖೆ ಪೂರ್ಣವಾದ ಬಳಿಕ 'ಬಿ' ರಿಪೋರ್ಟ್ ಬಗ್ಗೆ ತೀರ್ಮಾನ ಮಾಡುವುದಾಗಿ ಕೋರ್ಟ್ ಹೇಳಿತ್ತು. ಕಳೆದ 6 ತಿಂಗಳಿಂದ ತನಿಖೆಯಲ್ಲಿ ಪ್ರಗತಿ ಆಗದ ಹಿನ್ನೆಲೆ ಮತ್ತೊಮ್ಮೆ ಅರ್ಜಿ ಸಲ್ಲಿಸಿ 'ಬಿ' ರಿಪೋರ್ಟ್ ಬಗ್ಗೆ ಆದೇಶ ಮಾಡಲು ಸ್ನೇಹಮಯಿ ಕೃಷ್ಣ ಮನವಿ ಮಾಡಿದ್ದರು. ಬುಧವಾರ ಕೋರ್ಟ್ ಕಲಾಪದ ಅವಧಿ ಮುಕ್ತಾಯ ಹಿನ್ನೆಲೆಯಲ್ಲಿ ಇಂದು ಆದೇಶ ಹೊರ ಬೀಳಲಿದೆ. 'ಬಿ' ರಿಪೋರ್ಟ್ ಪ್ರಶ್ನಿಸಿ ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿ ಸಲ್ಲಿಸಿದ್ದರು. ಬಿ ರಿಪೋರ್ಟ್ ಒಪ್ಪಬೇಕಾ? ಅಥವಾ ಮರುತನಿಖೆಗೆ ಆದೇಶಿಸಬೇಕಾ? ಎಂಬುದರ ಬಗ್ಗೆ ಗೊತ್ತಾಗಲಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯು 2025-2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ -1ಕ್ಕೆ ರಾಜ್ಯದ ಸರಕಾರಿ ಮತ್ತು ಸರಕಾರದಿಂದ ಮಾನ್ಯತೆ ಪಡೆದ ಅನುದಾನಿತ, ಅನುದಾನ ರಹಿತ ಪ್ರೌಢಶಾಲಾ / ಕಾಲೇಜುಗಳಿಂದ ಹಾಜರಾಗುವ ಅರ್ಹ ಶಾಲಾ ವಿದ್ಯಾರ್ಥಿಗಳನ್ನು ನೋಂದಾಯಿಸಲು ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಶಾಲೆಗಳ ಮುಖ್ಯ ಶಿಕ್ಷಕರು/ ಪ್ರಾಂಶುಪಾಲರು ತಮ್ಮ ಶಾಲೆ- ಕಾಲೇಜುಗಳಿಂದ 2026ರ ಪರೀಕ್ಷೆ -1 ಕ್ಕೆ ಹಾಜರಾಗುವ ಅರ್ಹ ಶಾಲಾ ವಿದ್ಯಾರ್ಥಿಗಳ ವಿವರಗಳನ್ನು ಮಂಡಳಿಯ https://kseab.karnataka.gov.in ಜಾಲತಾಣದ ಶಾಲಾ ಲಾಗಿನ್ / ಕಾಲೇಜು ಲಾಗಿನ್ ಮೂಲಕ ಅ.8ರಿಂದ ಅಪ್ ಲೋಡ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ಮಂಡಳಿ ಜಾಲತಾಣದ ಶಾಲಾ ಲಾಗಿನ್ / ಕಾಲೇಜು ಲಾಗಿನ್ ಮೂಲಕ https://kseab.karnataka.gov.in ವಿದ್ಯಾರ್ಥಿಗಳ ಮಾಹಿತಿಯನ್ನು ಅಪ್ ಲೋಡ್ ಮಾಡಲು ಅ.31 ಕೊನೆಯ ದಿನ. ಮಂಡಳಿ ಜಾಲತಾಣದ ಶಾಲಾ ಲಾಗಿನ್ / ಕಾಲೇಜು ಲಾಗಿನ್ ಮೂಲಕ https://kseab.karnataka.gov.in ವಿದ್ಯಾರ್ಥಿಗಳ ಪರೀಕ್ಷ ಶುಲ್ಕದ ಚಲನ್ ಮುದ್ರಿಸಿ ಕೊಳ್ಳಲು ನ.3 ರಿಂದ 7 ರವರೆಗೆ ನಿಗಧಿಪಡಿಸ ಲಾಗಿದೆ. ಚಲನ್ ಮುದ್ರಿಸಿಕೊಂಡು ಬ್ಯಾಂಕ್‌ಗೆ ಜಮೆಮಾಡಲು ನ.3 ರಿಂದ 11 ರವರೆಗೆ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಸಾಲಿನಿಂದ ಖಾಸಗಿ ಮತ್ತು ಪುನರಾವರ್ತಿತ ಅಭ್ಯರ್ಥಿಗಳ ನೋಂದಣಿಯನ್ನು ನೇರವಾಗಿ ಅಭ್ಯರ್ಥಿಗಳೇ ಮಂಡಲಿ ಜಾಲತಾಣದಲ್ಲಿ ಅವಕಾಶ ಕಲ್ಪಿಸಲಾಗುತ್ತದೆ.

10-15 ವರ್ಷಗಳ ನಂತರ ನನ್ನ ಸಾಧನೆ ಜನ ಸ್ಮರಿಸುತ್ತಾರೆ | ಜಿಬಿಎ, ಬಿ.ಪ್ಯಾಕ್ ಸಹಯೋಗದಲ್ಲಿ ನಡೆದ ಸಂವಾದದಲ್ಲಿ ಡಿಸಿಎಂ ಮಾತು

ಜಿಬಿಎಯಲ್ಲಿ ಅರ್ಧಪಾಲು ಮಹಿಳೆಯರಿಗೆ ಮೀಸಲು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಐದು ಪಾಲಿಕೆಗಳ ಚುನಾವಣೆಯಲ್ಲಿ ಶೇ.50ರಷ್ಟು ಟಿಕೆಟ್ ಅನ್ನು ಮಹಿಳೆಯರಿಗೆ ನೀಡಲಾಗುವುದು. ಆ ಮೂಲಕ ಮುಂದಿನ ದಿನಗಳಲ್ಲಿ ಬೆಂಗಳೂರಿನ ಪಾಲಿಕೆಗಳಲ್ಲಿ ಅರ್ಧದಷ್ಟು ಮಹಿಳಾ ಕಾರ್ಪೊರೇಟರ್‌ಗಳು ಇರುತ್ತಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ಬಿ.ಪ್ಯಾಕ್ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯಾವುದೇ ನಗರದ ಜನಸಂಖ್ಯೆ ಹೆಚ್ಚಿದಾಗ ಸಮಸ್ಯೆಗಳು ಹೆಚ್ಚಾಗುತ್ತವೆ. ಶಿಕ್ಷಣದ ವಿಚಾರದಲ್ಲಿ ಬೆಂಗಳೂರು ದೇಶದ ಇತರೇ ನಗರಗಳಿಗಿಂತ ಉತ್ತಮವಾಗಿದೆ. ಬೆಂಗಳೂರಿನಲ್ಲಿ 25 ಲಕ್ಷ ಐಟಿ ಉದ್ಯೋಗಿಗಳು ಇದ್ದಾರೆ. 2 ಲಕ್ಷ ವಿದೇಶಿ ಪಾಸ್ ಪೋರ್ಟ್ ಹೊಂದಿರುವವರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಎಸ್.ಎಂ ಕೃಷ್ಣ ಅವರ ಕಾಲದಲ್ಲಿ ನಾನು ನಗರಾಭಿವೃದ್ಧಿ ಸಚಿವನಾಗಿದ್ದಾಗ ಬೆಂಗಳೂರಿನ ಜನಸಂಖ್ಯೆ 70 ಲಕ್ಷ ಇತ್ತು. ಈಗ ಅದು 1.40 ಕೋಟಿಗೆ ಏರಿದೆ ಎಂದರು.

ಕೆಂಪೇಗೌಡರು ಎಲ್ಲಾ ಸಮುದಾಯಗಳಿಗೂ ವ್ಯಾಪಾರಕ್ಕೆ ಅವಕಾಶ ಮಾಡಿಕೊಟ್ಟು ಬೆಂಗಳೂರನ್ನು ನಿರ್ಮಿಸಿದರಾದರೂ ಬೆಂಗಳೂರು ಯೋಜಿತ ನಗರವಲ್ಲ. ಅನೇಕ ವಿಚಾರಗಳಿಂದಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರು ಆಕರ್ಷಣೆಯಾಗಿದೆ. ಬೆಂಗಳೂರಿನಲ್ಲಿ ಅತ್ಯುತ್ತಮ ಮಾನವ ಸಂಪನ್ಮೂಲವಿದೆ. ನಮ್ಮ ರಾಜ್ಯದಲ್ಲಿ 270ಕ್ಕೂ ಹೆಚ್ಚು ಎಂಜಿನಿಯರಿಂಗ್ ಕಾಲೇಜು, 70 ಮೆಡಿಕಲ್ ಕಾಲೇಜು, 1,400 ನರ್ಸಿಂಗ್ ಕಾಲೇಜುಗಳಿವೆ. ಆದರೂ ಸಂಚಾರ, ಕಸ ವಿಲೇವಾರಿ, ಕುಡಿಯುವ ನೀರಿನಂತಹ ಪ್ರಮುಖ ಸಮಸ್ಯೆಗಳನ್ನು ಎದುರಿಸುತ್ತಿದೆ. ಇದಕ್ಕೆ ಪರಿಣಾಮಕಾರಿ ಆಡಳಿತ, ಪರಿಣಾಮಕಾರಿ ಸೇವೆ, ಸಮನ್ವಯತೆ ಸಾಧಿಸುವ ಉದ್ದೇಶದಿಂದ ಜಿಬಿಎ ಅಸ್ತಿತ್ವಕ್ಕೆ ತರಲಾಗಿದೆ. ನಾಗರಿಕರು ಹಾಗೂ ಅಧಿಕಾರಿಗಳು ಪರಸ್ಪರ ಸಹಕಾರದಲ್ಲಿ ಕೆಲಸ ಮಾಡುವವರೆಗೂ ಬೆಂಗಳೂರಿನ ಪ್ರಗತಿ ಅಸಾಧ್ಯ ಎಂದು ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ಬಿ.ಪ್ಯಾಕ್ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗವಹಿಸಿದ್ದರು.

ಕಸ ನಿರ್ವಹಣೆಯಲ್ಲಿ ನಾಗರಿಕ ಪ್ರಜ್ಞೆ ಇರಬೇಕು: ಬೆಂಗಳೂರು ನಗರದಲ್ಲಿ ವಿವಿಧ ಇಲಾಖೆಗಳ ನಡುವೆ ಸಮನ್ವಯತೆ ಇಲ್ಲ, ಹೀಗಾಗಿ ಜಿಬಿಎ ಮೂಲಕ ಹೇಗೆ ಸಮನ್ವಯತೆ ಸಾಧಿಸಲಾಗುವುದು. ನಮಗೆ ಹಸಿರು ಹಾಗೂ ಸ್ವಚ್ಛ ಬೆಂಗಳೂರು ಬೇಕು. ಆದರೆ ಪ್ರತಿ ಮನೆಯಲ್ಲಿ ಎರಡು ಮೂರು ವಾಹನಗಳಿವೆ. ಮನೆಯೊಳಗೆ ನಿಲ್ಲಿಸಲು ಜಾಗವಿಲ್ಲ ಎಂದು ರಸ್ತೆಯಲ್ಲಿ ನಿಲ್ಲಿಸಿದ್ದಾರೆ. ಬೆಂಗಳೂರಿನ ಜನರಲ್ಲಿ ಒಂದು ವರ್ಗ ಬೆಂಗಳೂರನ್ನು ಜಾಗತಿಕ ನಗರವನ್ನಾಗಿ ನೋಡಿದರೆ, ಮತ್ತೆ ಕೆಲವು ವರ್ಗಗಳಿಗೆ ಜ್ಞಾನ ಇಲ್ಲ. ಕೆಲವರು ವಾಹನದಲ್ಲಿ ಕಸ ತಂದು ರಸ್ತೆಯಲ್ಲಿ ಹಾಕಿ ಹೋಗುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಸರಕಾರ ಏನು ಮಾಡಲು ಸಾಧ್ಯ. ಹೀಗಾಗಿ ಜನರಲ್ಲಿ ನಾಗರಿಕ ಪ್ರಜ್ಞೆ ಬಹಳ ಮುಖ್ಯ. ಬೆಂಗಳೂರಿನ ಹೊರ ವಲಯದಲ್ಲಿ ದೊಡ್ಡ ಪ್ರಮಾಣದಲ್ಲಿ ಕಟ್ಟಡ ತ್ಯಾಜ್ಯ ಸುರಿಯುತ್ತಿದ್ದಾರೆ. ಹೀಗಾಗಿ ಈ ರೀತಿ ಕಸ ಎಸೆಯುವ ಎಲ್ಲಾ ವಾಹನ ಮಾಲೀಕರಿಗೆ ನೋಟಿಸ್ ನೀಡುವಂತೆ ನಾನು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಕಳೆದ ಎರಡೂವರೆ ವರ್ಷಗಳಿಂದ ನಾನು ಕಸ ವಿಲೇವಾರಿ ವಿಚಾರದಲ್ಲಿ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇನೆ. ಆದರೆ ಕಸದ ಮಾಫಿಯಾ ನನ್ನ ಪ್ರಯತ್ನ ತಡೆಯುತ್ತಿವೆ. ನ್ಯಾಯಾಲದಲ್ಲಿ ಪಿಐಎಲ್ ಹಾಕಿ ನಮ್ಮನ್ನು ತಡೆಯುತ್ತಿದ್ದಾರೆ ಎಂದು ತಿಳಿಸಿದರು.

ಸದ್ಯಕ್ಕೆ 368 ವಾರ್ಡ್ ರಚಿಸಲಾಗಿದ್ದು, ಪ್ರತಿ ವಾರ್ಡ್ ನಲ್ಲಿ ವಾರ್ಡ್ ಸಮಿತಿ ರಚಿಸಲಾಗುವುದು. ಇದರಲ್ಲಿ ಎಲ್ಲಾ ವರ್ಗದ ಜನರಿಗೆ ಅವಕಾಶ ಮಾಡಿಕೊಡಲಾಗುವುದು. ಅವರು ಚರ್ಚೆ ಮಾಡಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಬಹುದು. ಜನರು ವಾರ್ಡ್ ಮಟ್ಟದ ಅಧಿಕಾರಿಗಳ ಜತೆ ಸಂಪರ್ಕ ಹೊಂದಿರ ಬೇಕು. ಅವರನ್ನು ಪ್ರಶ್ನೆ ಮಾಡುವಂತಿರಬೇಕು. ಜನರು ಸಂತೋಷವಾಗಿದ್ದರೆ ನಾವು ಸಂತೋಷವಾಗಿರುತ್ತೇವೆ. ಅವರು ತೆರಿಗೆ ಪಾವತಿದಾರರು ಅವರ ಕೊಡುಗೆ ಬಹಳ ಮುಖ್ಯವಾಗಿದೆ.
ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಪಾರದರ್ಶಕತೆಗೆ ಆದ್ಯತೆ

ಭ್ರಷ್ಟಾಚಾರ ನಿಯಂತ್ರಿಸಿ ಪಾರದರ್ಶಕ ವ್ಯವಸ್ಥೆ ಜಾರಿಗೆ ತರಲು ಅನೇಕ ಕ್ರಮ ಕೈಗೊಳ್ಳಲಾಗಿದೆ. ಬೆಂಗಳೂರಿನಲ್ಲಿ ಮನೆ ಕಟ್ಟಬೇಕಾದರೆ ಕಟ್ಟಡ ನಕ್ಷೆ ಅನುಮೋದನೆ ಪಡೆಯಲು ಕಚೇರಿ ಹಾಗೂ ಅಧಿಕಾರಿಗಳ ಸುತ್ತ ಅಲೆಯಬೇಕಾಗುತ್ತಿತ್ತು. ಹೀಗಾಗಿ ನಂಬಿಕೆ ನಕ್ಷೆ ಯೋಜನೆ ಜಾರಿಗೆ ತಂದಿದ್ದು 50★80 ನಿವೇಶನದಲ್ಲಿ ಮನೆ ಕಟ್ಟುವವರು ನಿಯೋಜಿತ ಎಂಜಿನಿಯರ್‌ಗಳ ಬಳಿ ಕಟ್ಟಡ ನಕ್ಷೆಗೆ ಅನುಮೋದನೆ ಪಡೆಯಬಹುದು. ಈ ಹಿಂದೆ ತೆರಿಗೆ ಪಾವತಿಗೆ ಸ್ವಯಂ ಘೋಷಣೆ ಯೋಜನೆ ಅವಕಾಶ ನೀಡಿದೆವು. ಕೇವಲ ಶೇ.10ರಷ್ಟು ಜನ ಮಾತ್ರ ತಮ್ಮ ಆಸ್ತಿ ಮೌಲ್ಯವನ್ನು ಸರಿಯಾಗಿ ಪ್ರಕಟಿಸಿದರು. ಉಳಿದವರು ಸ್ಥಳೀಯ ಅಧಿಕಾರಿಗಳ ಜತೆಗೂಡಿ ತಮ್ಮ ಆಸ್ತಿ ಮೌಲ್ಯಕ್ಕಿಂತ ಕಡಿಮೆ ತೋರಿಸಿ ತೆರಿಗೆ ತಪ್ಪಿಸಿಕೊಳ್ಳಲು ಮುಂದಾಗಿದ್ದಾರೆ. ಹೀಗಾಗಿ ನಾವು ಬೆಂಗಳೂರಿನ ಆಸ್ತಿಗಳ ಸಮೀಕ್ಷೆ ಮಾಡುತ್ತಿದ್ದು, ಯಾರು ಎಷ್ಟು ಆಸ್ತಿ ಹೊಂದಿದ್ದಾರೆ ಎಂದು ಪತ್ತೆ ಮಾಡುತ್ತಿದ್ದೇವೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಟೀಕೆಗಳನ್ನು ಸ್ವಾಗತಿಸುತ್ತೇನೆ

ರಸ್ತೆಗುಂಡಿ ಎಲ್ಲಾ ನಗರಗಳಲ್ಲೂ ಇವೆ. ಆದರೂ ಬೆಂಗಳೂರಿನ ಬಗ್ಗೆ ಹೆಚ್ಚು ಟೀಕೆಗಳಾಗುತ್ತಿವೆ ಎಂದು ಕೇಳಿದಾಗ, ನಾನು ಟೀಕೆಗಳನ್ನು ಸ್ವಾಗತಿಸುತ್ತೇನೆ. ರಾಜಕಾರಣಿಗಳು ಟೀಕೆಗಳಿಗೆ ಹೆದರಬಾರದು. ಜನರ ಧ್ವನಿಯನ್ನು ಆಲಿಸಬೇಕು. ಜನ ಟೀಕೆ ಮಾಡಿದಾಗ ಮಾತ್ರ ನಾವು ನಮ್ಮ ತಪ್ಪು ತಿದ್ದಿಕೊಳ್ಳಲು ಸಾಧ್ಯ. ಇಡೀ ದೇಶದಲ್ಲಿ ಯಾವುದೇ ನಗರದ ಸಚಿವರು ತಮ್ಮ ಸಾರ್ವಜನಿಕರಿಗೆ ಕರೆ ನೀಡಿ ರಸ್ತೆ ಗುಂಡಿ, ಕಸ ಬಗ್ಗೆ ಮಾಹಿತಿ ನೀಡಿ ಎಂದು ಅವಕಾಶ ಕಲ್ಪಿಸಿಕೊಟ್ಟಿದ್ದಾರಾ? ಆ ಕೆಲಸವನ್ನು ನಾವು ಮಾಡಿದ್ದೇನೆ. ಪರಿಣಾಮ ನಮ್ಮ ಅಧಿಕಾರಿಗಳಿಗೆ 13 ಸಾವಿರ ರಸ್ತೆಗುಂಡಿಗಳ ಬಗ್ಗೆ ಮಾಹಿತಿ ಸಿಕ್ಕಿದ್ದು, ಅವುಗಳನ್ನು ಮುಚ್ಚುತ್ತಿದ್ದೇವೆ. ಇದು ತಕ್ಷಣವೇ ಬಗೆಹರಿಯುವುದಿಲ್ಲ. ನಾನು ಈ ಇಲಾಖೆ ಜವಾಬ್ದಾರಿಯನ್ನು ಬಹಳ ಆಸಕ್ತಿಯಿಂದ ವಹಿಸಿಕೊಂಡಿದ್ದೇನೆ. ಬೆಂಗಳೂರಿನಲ್ಲಿ ಓದಿ, ವಾಸ ಮಾಡಿ, ಕೆಲಸ ಮಾಡಿದ್ದೇನೆ. ನನ್ನ ಅಧಿಕಾರ ಅವಧಿಯಲ್ಲಿ ಬೆಂಗಳೂರಿಗೆ ಏನಾದರೂ ಕೊಡುಗೆ ನೀಡಬೇಕು ಎಂದು ಪಣತೊಟ್ಟಿದ್ದೇನೆ. ನನ್ನ ಕೆಲಸಗಳು ಇಂದು ಜನರ ಕಣ್ಣಿಗೆ ಕಾಣದೇ ಇರಬಹುದು. ಆದರೆ ಆದರೆ ಮುಂದಿನ 10 ವರ್ಷಗಳ ನಂತರ ಬೆಂಗಳೂರಿಗೆ ನನ್ನ ಕೊಡುಗೆ ಏನು ಎಂದು ಅರ್ಥವಾಗುತ್ತದೆ. ಜನ ನನ್ನನ್ನು ಸ್ಮರಿಸುತ್ತಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕ್ರೆಡಾಯ್ ಕರ್ನಾಟಕ ರಿಯಾಲ್ಟಿ ಎಕ್ಸ್‌ಪೋ

ಬೆಂಗಳೂರು: ಭಾರತೀಯ ರಿಯಲ್ ಎಸ್ಟೇಟ್ ಡೆವಲಪರ್ ಸಂಘಗಳ ಒಕ್ಕೂಟವು ಕರ್ನಾಟಕ ಮುಂಬರುವ ರಿಯಾಲ್ಟಿ ಎಕ್ಸ್‌ಪೋ 2025 ಅನ್ನು ಘೋಷಿಸಿದೆ.

ಇದು ರಾಜ್ಯದ ಅತಿದೊಡ್ಡ ಮತ್ತು ಅತ್ಯಂತ ಸಮಗ್ರ ಆಸ್ತಿ ಪ್ರದರ್ಶನಗಳಲ್ಲಿ ಒಂದಾಗಲಿದೆ. ಈ ಕಾರ್ಯಕ್ರಮದಿಂದ ಪ್ರಮುಖ ಡೆವಲಪರ್‌ಗಳು, ಬ್ಯಾಂಕುಗಳು ಮತ್ತು ವಸತಿ ಹಣಕಾಸು ಕಂಪನಿಗಳನ್ನು ಒಗ್ಗೂಡಿಸಿ ಕರ್ನಾಟಕದ ವಸತಿ, ವಾಣಿಜ್ಯ ಮತ್ತು ಮೂಲಸೌಕರ್ಯ ವಿಭಾಗಗಳಲ್ಲಿ ವಿಕಸನಗೊಳ್ಳುತ್ತಿರುವ ರಿಯಲ್ ಎಸ್ಟೇಟ್ ಭೂದೃಶ್ಯವನ್ನು ಪ್ರದರ್ಶಿಸುತ್ತದೆ. ಬೆಂಗಳೂರಿನಲ್ಲಿ ನಿರಂತರ ಬೆಳವಣಿಗೆ ಮತ್ತು ಮೈಸೂರು ಮತ್ತು ಮಂಗಳೂರಿನಂತಹ ಟೈಯರ್-2 ನಗರಗಳಲ್ಲಿ ಹೆಚ್ಚುತ್ತಿರುವ ವೇಗದೊಂದಿಗೆ ವಲಯದ ಬಲವಾದ ಕಾರ್ಯಕ್ಷಮತೆಯನ್ನು ಈ ಘೋಷಣೆಯು ಎತ್ತಿ ಹಿಡಿಯಲಿದೆ.

ಕ್ರೆಡಾಯ್ ಕರ್ನಾಟಕದ ಅಧ್ಯಕ್ಷರಾದ ಟಿ.ಭಾಸ್ಕರ್, ನಾಗೇಂದ್ರಪ್ಪ, ಜಂಟಿ ಕಾರ್ಯದರ್ಶಿ ಮಮತಾ ಭಾರಕ್ತಿಯ, ಕಾರ್ಯದರ್ಶಿ ಮಹಾವೀರ್ ಎಸ್. ಮೆಹ್ತಾ ಮತ್ತು ಕ್ರೆಡೈ ಕರ್ನಾಟಕದ ಸಿಇಒ ಅನಿಲ್ ನಾಯಕ್ ಅವರ ಸಮ್ಮುಖದಲ್ಲಿ ಈ ಘೋಷಣೆ ಮಾಡಲಾಯಿತು. ಮೂಲಸೌಕರ್ಯ ವಿಸ್ತರಣೆ, ಐಟಿ ನೇತೃತ್ವದ ಆರ್ಥಿಕ ಚಟುವಟಿಕೆ ಮತ್ತು ಹೆಚ್ಚುತ್ತಿರುವ ಹೂಡಿಕೆದಾರರ ವಿಶ್ವಾಸದಿಂದಾಗಿ ಕರ್ನಾಟಕದ ರಿಯಲ್ ಎಸ್ಟೇಟ್ ಕ್ಷೇತ್ರವು ಸ್ಥಿತಿಸ್ಥಾಪಕತ್ವ ಮತ್ತು ಚೈತನ್ಯವನ್ನು ಪ್ರದರ್ಶಿಸುತ್ತಲೇ ಇದೆ ಎಂದು ನಾಯಕತ್ವವು ಒತ್ತಿ ಹೇಳಿದೆ. ಕರ್ನಾಟಕದಲ್ಲಿ ರಿಯಲ್ ಎಸ್ಟೇಟ್ ಮಾರುಕಟ್ಟೆ ಬಲವಾದ ಮತ್ತು ಸುಸ್ಥಿರ ಬೆಳವಣಿಗೆಯ ಹಾದಿಯಲ್ಲಿದೆ. ಬೆಂಗಳೂರು ಭಾರತದ ಐಟಿ ಪರಿಸರ ವ್ಯವಸ್ಥೆಯ ನರ ಕೇಂದ್ರ ಮತ್ತು ಪ್ರಮುಖ ಆರ್ಥಿಕ ಮಂಚೂಣಿಯಲ್ಲಿ ಉಳಿದಿದೆ. ಕಳೆದ ಎರಡು ದಶಕಗಳಲ್ಲಿ, ನಗರವು ಮೂಲಸೌಕರ್ಯ ಮತ್ತು ನಗರ ವಿಸ್ತರಣೆಯ ವಿಷಯದಲ್ಲಿ ಗಮನಾರ್ಹವಾಗಿ ರೂಪಾಂತರಗೊಂಡಿದೆ. ಮಾರುಕಟ್ಟೆಯ ಮೂಲಭೂತ ಅಂಶಗಳು ಸದೃಢವಾಗಿವೆ ಮತ್ತು 2025 ಮತ್ತು ಅದಕ್ಕೂ ಮೀರಿದ ಬೆಳವಣಿಗೆಯ ಬಗ್ಗೆ ನಾವು ಆಶಾವಾದಿಗಳಾಗಿದ್ದೇವೆ ಎಂದು ಕ್ರೆಡಾಯ್ ಕರ್ನಾಟಕದ ಅಧ್ಯಕ್ಷ ಭಾಸ್ಕರ್ ಟಿ. ನಾಗೇಂದ್ರಪ್ಪ ಹೇಳಿದರು.

ರಾಜ್ಯದ 525 ಗ್ರಾಮ ಪಂಚಾಯತಿಗಳಲ್ಲಿ ಮೊದಲ ಹಂತದ ಅನುಷ್ಠಾನ

ನೀರಿದ್ದರೆ ನಾಳೆ ಯೋಜನೆಗೆ ಇಂದು ಚಾಲನೆ

ಬೆಂಗಳೂರು: ರಾಜ್ಯದ 15 ಜಿಲ್ಲೆಗಳ, 27 ತಾಲೂಕುಗಳಲ್ಲಿನ ಅಂತರ್ಜಲ ಅತಿಬಳಕೆಯ ಪಟ್ಟಿಯಲ್ಲಿರುವ 525 ಗ್ರಾಮ ಪಂಚಾಯತಿಗಳಲ್ಲಿ ನೀರಿದ್ದರೆ ನಾಳೆ ಯೋಜನೆಯನ್ನು ಮೊದಲ ಹಂತದಲ್ಲಿ ಅನುಷ್ಠಾನಗೊಳಿಸಲಾಗುವುದು' ಎಂದು ಸಣ್ಣ ನೀರಾವರಿ ಸಚಿವ ಎನ್. ಎಸ್. ಬೋಸರಾಜು ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಯೋಜನೆಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗುರುವಾರ ಚಾಲನೆ ನೀಡಲಿದ್ದಾರೆ' ಎಂದರು. ಜಲಮೂಲಗಳನ್ನು ಸಂರಕ್ಷಿಸುವ ಮೂಲಕ ಅಂತರ್ಜಲ ಮಟ್ಟ ವೃದ್ಧಿಸಿ ಸಮೃದ್ಧ ಕರ್ನಾಟಕ ನಿರ್ಮಾಣಕ್ಕೆ ಭದ್ರ ಅಡಿಪಾಯ ಹಾಕುವ ಉದ್ದೇಶದಿಂದ ಈ ವಿನೂತನ ಕಾರ್ಯಕ್ರಮ ರೂಪಿಸಲಾಗಿದೆ. ನೀರಿದ್ದರೆ ನಾಳೆ ಎನ್ನುವ ಪರಿಕಲ್ಪನೆಯ ಕಾರ್ಯಕ್ರಮದ ಮೂಲಕ ನೀರಿನ ಮಹತ್ವ ತಿಳಿಸುವುದು, ಜಲ ಮೂಲಗಳ ಸಂರಕ್ಷಣೆಗೆ ಯೋಜನೆ ರೂಪಿಸುವುದು, ನಾಗರಿಕರನ್ನು ನೀರಿನ ಸಂರಕ್ಷಣೆಯ ಅಭಿಯಾನದಲ್ಲಿ ಪಾಲುದಾರರನ್ನಾಗಿ ಮಾಡುವುದು ಮುಖ್ಯ ಉದ್ದೇಶ' ಎಂದರು. ಸಣ್ಣ ನೀರಾವರಿ, ಅಂತರ್ಜಲ ಅಭಿವೃದ್ಧಿ ಇಲಾಖೆ ಕಾರ್ಯದರ್ಶಿ ಬಿ.ಕೆ. ಪವಿತ್ರ ಅವರು ಇದ್ದರು.

ನಟ ವಶಿಷ್ಠ ಸಿಂಹ ರಾಯಭಾರಿ

ಮೊದಲ ಹಂತದಲ್ಲಿ ಅಂತರ್ಜಲ ಅತಿಬಳಕೆ ಗ್ರಾಮ ಪಂಚಾಯತಿಗಳಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಪೈಕಿ, ಕಲ್ಯಾಣ ಕರ್ನಾಟಕ ಭಾಗದ 100ಕ್ಕೂ ಹೆಚ್ಚು ಅಂತರ್ಜಲ ಅತಿಬಳಕೆ ಗ್ರಾಮ ಪಂಚಾಯತಿಗಳಿವೆ. ನಟ ವಶಿಷ್ಠ ಸಿಂಹ ಅವರನ್ನು ಯೋಜನೆಯ ರಾಯಭಾರಿಯಾಗಿ ನೇಮಿಸಲಾಗಿದೆ. ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಅಂತರ್ಜಲ ಸಾಕ್ಷರತೆಗೆ ಒತ್ತು ನೀಡುವ ಗುರಿ ಹೊಂದಲಾಗಿದೆ ಎಂದು ಸಣ್ಣ ನೀರಾವರಿ ಸಚಿವ ಎನ್. ಎಸ್. ಬೋಸರಾಜು ಹೇಳಿದರು.

PUBLIC NOTICE

Our client has lost the following registered deeds in respect of residential building site bearing Number 895, BBMP PID No.72-1-895, 4th Cross, 7th Main, HAL II Stage, Indiranagar, Bengaluru, measuring East to West 61 feet and North to South 40 feet, totally measuring 2440 square feet and in this regard he has filed a complaint through online on 17-09-2025 vide lost Report No. 1807602/2025. If any person/s found the following documents, they are requested to submit the same to the under signed immediately and the same will be suitably rewarded.

A. Sale deed Doc:1301/1986-87, registered in the office of Book-I, Volume-2513, Page 246-249, registered on 22-08-1986, in the office of the Sub-Registrar, Shivajinagar

B. Partition Deed Doc: INR-1-07348/2016-17, stored in CD.No.INRD181, registered in the Office of Sub-Registrar, Indiranagar

Sd/-
Shanmukha. M.S,
Advocate & Legal consultants,
No. 201, 2nd Floor, Brigade Links,
1st Floor, Sheshadripum, Bengaluru-560020
Mob:9448615561

ಲೈಂಗಿಕ ಕಿರುಕುಳ: ಪ್ರಾಧ್ಯಾಪಕ ಸೆರೆ

ಬೆಂಗಳೂರು: ಮನೆಗೆ ಊಟಕ್ಕೆ ಕರೆಸಿ ಬಿಸಿಎ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪದ ಮೇಲೆ ಖಾಸಗಿ ಕಾಲೇಜಿನ ಪ್ರಾಧ್ಯಾಪಕನೊಬ್ಬನನ್ನು ತಿಲಕ್ ನಗರ ಪೊಲೀಸರು ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳ ಮೂಲದ ಸಂಜೀವ್ ಕುಮಾರ್ ಮಂಡಲ್ ಬಂಧಿತ ಪ್ರಾಧ್ಯಾಪಕ. ನಗರದ ಪ್ರತಿಷ್ಠಿತ ಕಾಲೇಜಿನಲ್ಲಿ ಎಚ್‌ಒಡಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ದೌರ್ಜನ್ಯಕ್ಕೆ ಒಳಗಾದ ವಿದ್ಯಾರ್ಥಿನಿಯು ಅದೇ ಕಾಲೇಜಿನಲ್ಲಿ ಬಿಸಿಎ ಎರಡನೇ ವರ್ಷದ ವಿದ್ಯಾರ್ಥಿನಿಯಾಗಿದ್ದಳು. ಆಕೆಯು ಪಶ್ಚಿಮ ಬಂಗಾಳ ಮೂಲದವಳಾಗಿದ್ದಳು. ಕಾಲೇಜಿನಲ್ಲಿ ಆಕೆಗೆ ಉಪನ್ಯಾಸಕನಾಗಿದ್ದರಿಂದ ಅ.2 ರಂದು ವಿದ್ಯಾರ್ಥಿನಿಯನ್ನು ಪ್ರಾಧ್ಯಾಪಕ ಮನೆಗೆ ಊಟಕ್ಕೆ ಕರೆದಿದ್ದ. ಹೀಗಾಗಿ ವಿದ್ಯಾರ್ಥಿನಿ ಪ್ರಾಧ್ಯಾಪಕನ ಮನೆಗೆ ಊಟಕ್ಕೆ ಹೋಗಿದ್ದಳು. ಮನೆಯಲ್ಲಿ ಪ್ರಾಧ್ಯಾಪಕ ಒಬ್ಬನೇ ಇದ್ದುದ್ದರಿಂದ ವಿದ್ಯಾರ್ಥಿನಿಯು ಗಾಬರಿಗೊಂಡಿದ್ದಳು. ಈ ವೇಳೆ ಆಕೆಗೆ ಕುಡಿಯಲು ನೀರು ಕೊಟ್ಟು, ಆಕೆಯ ಪಕ್ಕದಲ್ಲೇ ಪ್ರಾಧ್ಯಾಪಕ ಕುಳಿತುಕೊಂಡಿದ್ದ ಬಳಿಕ ನಿನಗೆ ಹಾಜರಾತಿ ಕಡಿಮೆ ಇದೆ, ಹಾಜರಾತಿ ಹಾಕಿ ಕೊಡುತ್ತೇನೆ. ಪರೀಕ್ಷೆಯಲ್ಲಿ ಮಾರ್ಕ್ಸ್ ಕೊಡುವುದಾಗಿ ಹೇಳಿ ವಿದ್ಯಾರ್ಥಿನಿ ಮೈ, ಕೈ ಮುಟ್ಟಿ ಲೈಂಗಿಕ ಕಿರುಕುಳ ನೀಡಿದ್ದ. ಗಾಬರಿಗೊಂಡ ವಿದ್ಯಾರ್ಥಿನಿ ಅಲ್ಲಿಂದ ಎದ್ದು ಬಂದಿದ್ದಳು. ಬಳಿಕ ವಿದ್ಯಾರ್ಥಿನಿಯು ಮನೆಯವರ ಸಲಹೆ ಮೇರೆಗೆ ಸಂಜೀವ್ ಕುಮಾರ್ ಮಂಡಲ್ ವಿರುದ್ಧ ತಿಲಕ್ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಳು. ಪ್ರಕರಣವನ್ನ ಗಂಭೀರವಾಗಿ ಪರಿಗಣಿಸಿದ ಪೊಲೀಸರು ಪ್ರಾಧ್ಯಾಪಕನನ್ನು ಬಂಧಿಸಿದ್ದಾರೆ.

ಕೆಲಸದ ಆಮಿಷ: ₹67 ಲಕ್ಷ ವಂಚನೆ

ಬೆಂಗಳೂರು: ಖಾಸಗಿ ಕಂಪನಿಯ ಉದ್ಯೋಗಿಯೊಬ್ಬರು ಟೆಲಿಗ್ರಾಮ್‌ನಲ್ಲಿನ ಬಂದ ಪಾರ್ಟ್‌ಟೈಮ್ ಕೆಲಸದ ಸಂದೇಶ ನಂಬಿ 67 ಲಕ್ಷ ರು. ಕಳೆದುಕೊಂಡಿದ್ದಾರೆ. ದೂರು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಕೆ.ಸತೀಶ್(ಹೆಸರು ಬದಲಿಸಿದೆ) ಎಂಬ ಬೆಂಗಳೂರಿನ ನಿವಾಸಿ ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದು, ಆನ್‌ಲೈನ್ ಮೋಸದ ಜಾಲಕ್ಕೆ ಸಿಲುಕಿ ಲಕ್ಷಗಟ್ಟಲೆ ಹಣ ಕಳೆದುಕೊಂಡಿದ್ದಾರೆ. ಜನವರಿ 11, 2025 ರಂದು 47 ವರ್ಷದ ಸತೀಶ್, ತಮ್ಮ ಟೆಲಿಗ್ರಾಂ ಸಂದೇಶವೊಂದರಲ್ಲಿ ಬಂದ ಲಿಂಕನ್ನು ಒತ್ತಿದಾಗ ಅಮೆಜಾನ್ ಇಂಡಿಯಾ ಪಾರ್ಟ್‌ಟೈಮ್ ಬೆನಿಫಿಟ್ ಜಾಬ್ ಎಂಬ ಗ್ರೂಪ್‌ಗೆ ಸೇರ್ಪಡೆಯಾಗಿದ್ದಾರೆ. ಗ್ರೂಪಿಗೆ ಸೇರಿದ ನಂತರ ಅದರ ನಿರ್ವಾಹಕರಿಂದ ಇವರಿಗೆ ಸಾಲು ಸಾಲು ಸಂದೇಶಗಳು ಬಂದಿತ್ತು. ಆ ಸಂದೇಶಗಳಲ್ಲಿ ಅ್ಯಮಜಾನ್ ಉತ್ಪನ್ನಗಳ ವಿಮರ್ಶೆಯ ಮೂಲಕ ಹಣಗಳಿಸುವುದರ ಕುರಿತು ಮಾಹಿತಿಗಳಿತ್ತು. ಆದರೆ ಈ ಕೆಲಸ ಮಾಡಲು ಸತೀಶ್‌ಗೆ ಹಣ ಪಾವತಿಸಿ ಕಮೀಷನ್ ಪಡೆಯುವಂತೆ ಹೇಳಿದ್ದಾರೆ.

ಮೊದಲಿಗೆ 1000 ರು. ಹೂಡಿಕೆ ಮಾಡಿದ ಸತೀಶ್‌ಗೆ 1,650 ರು.ಮರುಪಾವತಿಸಲಾಗಿತ್ತು. ಈ ಆದಾಯವನ್ನು ನಂಬಿದ ಅವರು, ಇನ್ನೂ ಹಲವು ಬಾರಿ ಹೂಡಿಕೆ ಮಾಡಿದ್ದರು. ಕಾಲಕ್ರಮೇಣ ದೊಡ್ಡ ಮೊತ್ತದ ಹಣ ಪಾವತಿಸಿ ಹೆಚ್ಚು ಆದಾಯ ಪಡೆಯಬಹುದು ಎಂದು ಆಮಿಷವೊಡ್ಡಿ ಅವರನ್ನು ಇನ್ನಷ್ಟು ಹೂಡಿಕೆ ಮಾಡುವಂತೆ ಮಾಡಿದ್ದಾರೆ. ಮೋಸದ ಜಾಲಕ್ಕೆ ಸಿಲುಕಿದ್ದ ಸತೀಶ್, ಕೇವಲ 7 ತಿಂಗಳ ಅಂತರದಲ್ಲಿ ಬರೋಬ್ಬರಿ 67,63,950 ರು.ಗಳನ್ನು ಕಳೆದುಕೊಂಡಿದ್ದಾರೆ. ಎರಡು ಎಸ್‌ಬಿಐ ಖಾತೆಗಳು ಮತ್ತು ಒಂದು ಎಚ್‌ಡಿಎಫ್‌ಸಿ ಖಾತೆಗೆ ಹಣ ಕಳುಹಿಸಿದ ನಂತರ ಯಾವುದೇ ಆದಾಯ ಬರದೇ ಇದ್ದಾಗ ಸೈಬರ್ ಪೊಲೀಸರ ಮೊರೆ ಹೊಗಿದ್ದಾರೆ.

ಗಣಕ ಶಿಕ್ಷಣ ಸಂಸ್ಥೆಗೆ ಅರ್ಜಿ

ಬೆಂಗಳೂರು: 2025-26 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಸ್ತುತ ಅಕ್ಟೋಬರ್-2025ರಲ್ಲಿ ಕರ್ನಾಟಕ ರಾಜ್ಯಾದ್ಯಂತ ಹೊಸದಾಗಿ ವಾಣಿಜ್ಯ ಬೆರಳಚ್ಚು ಹಾಗೂ ಶೀಘ್ರ ಲಿಪಿ ಮತ್ತು ಹೊಸದಾಗಿ ಗಣಕಯಂತ್ರ ಶಿಕ್ಷಣ ಸಂಸ್ಥೆಗಳು ಯಾವುದೇ ವ್ಯಕ್ತಿ ವೈಯಕ್ತಿಕವಾಗಿ ಪ್ರಾರಂಭಿಸಲು ಹಾಗೂ ಅಸ್ತಿತ್ವದಲ್ಲಿರುವ ಮಾನ್ಯತೆ ಪಡೆದ ವಾಣಿಜ್ಯ ಶಿಕ್ಷಣ ಸಂಸ್ಥೆಗಳಲ್ಲಿ ಬೆರಳಚ್ಚು ಮತ್ತು ಶೀಘ್ರಲಿಪಿ ಗಣಕಯಂತ್ರ ಶಿಕ್ಷಣ ಸಂಸ್ಥೆ ಪ್ರಾರಂಭಿಸಲು ಶಾಲಾ ಶಿಕ್ಷಣ ಇಲಾಖೆಯಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು 2025 ರ ಅಕ್ಟೋಬರ್‌ನಿಂದ 31 ರ ವರೆಗೆ ಬೆಂಗಳೂರು ವಿಭಾಗಕ್ಕೆ ಸಂಬಂಧಪಟ್ಟಂತೆ ಸಹನಿರ್ದೇಶಕರು-1, ಬೆಂಗಳೂರು ವಿಭಾಗ, ಆಯುಕ್ತರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಆರ್.ವೃತ್ತ ಗೆ ಅರ್ಜಿ ಸಲ್ಲಿಸಿ. ಹೆಚ್ಚಿನ ಮಾಹಿತಿಗೆ ಇಲಾಖೆಯ ಅಧಿಕೃತ ವೆಬ್‌ಸೈಟ್ https://schooleducation.karnataka.gov.in & secondary education & commerce education ನಲ್ಲಿ ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಿಎಫ್‌ಎಂ ಅಸೆಟ್ ರಿಕನ್ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್
ನೋಂದಾಯಿತ ಕಚೇರಿ: "ಬ್ಲಾಕ್ ಸಂಖ್ಯೆ. ಎ/1003, ಪಶ್ಚಿಮ ಗೇಟ್ ವೈಎಂಸಿಎ ಕ್ಲಬ್ ಹತ್ತಿರ, ಸರ್ವೆ ನಂ. 835/1+3, ಎಸ್ ಜಿ ಹೆದ್ದಾರಿ, ಮಕರ್ಬಾ, ಅಹಮದಾಬಾದ್- 380051 ಗುಜರಾತ್. " ಕಾರ್ಪೊರೇಟ್ ಕಚೇರಿ: 1ನೇ ಮಹಡಿ, ವೇಕ್‌ಫೀಲ್ಡ್ ಮನೆ, ಸ್ಪ್ರಾಟ್ ರಸ್ತೆ, ಬಲ್ಲಾರ್ಡ್ ಎಸ್ಟೇಟ್, ಮುಂಬೈ-400038 ಇಮೇಲ್: info@cfmarc.in, sweta.rana@cfmarc.in, Anmol.mishra@cfmarc.in ಸಂಪರ್ಕ: 022-40055282

CFM ARC thoughtful regeneration
CIN: U67100GJ2015PTC083994

ಅನುಬಂಧ- IV-A
[ನಿಯಮ 8 (6) ರ ನಿಬಂಧನೆಯನ್ನು ನೋಡಿ]
ಸ್ಥಿರ ಆಸ್ತಿಯ ಮಾರಾಟದ ಸೂಚನೆ
ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್, 2002ನ್ನು ಓದಿಕೊಂಡಂತೆ ಪ್ರೊವಿಸೊ ನಿಯಮ 8(6) ಮತ್ತು ನಿಯಮ 9(1) ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002 ರ ಅಡಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ ಪ್ರಕಟಣೆ

ಸಮಸ್ತ ಸಾರ್ವಜನಿಕರಿಗೆ ,ಮತ್ತು ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ, ಈ ಕೆಳಗೆ ವಿವರಿಸಿರುವ ಸ್ಥಿರ ಆಸ್ತಿಗಳನ್ನು (ಭದ್ರತಾ ಆಸ್ತಿ) ಪೂರಕ ಭದ್ರತಾದಾರರಿಗೆ ಅಡಮಾನ / ಚಾರ್ಜ್ ಮಾಡಲಾಗಿದ್ದು, ಅದನ್ನು ಅಧಿಕೃತ ಅಧಿಕಾರಿ, ಸಿಎಫ್‌ಎಮ್ ಅಸೆಟ್ ರಿಕನ್‌ಸ್ಟ್ರಕ್ಷನ್ ಪ್ರೈ ಲಿ., (ಸಿಎಫ್‌ಎಂಎಆರ್‌ಸಿ ಟ್ರಸ್ಟ್ -1 ಐಹೆಚ್‌ಎಫ್‌ಎಲ್ ನ ಟ್ರಸ್ಟಿ ಆಗಿ ಕಾರ್ಯನಿರ್ವಹಿಸುತ್ತಿದೆ , "ಪೂರಕ ಭದ್ರತಾದಾರರು") ಅದನ್ನು "ಎಲ್ಲಿ ಹೇಗಿದೆಯೋ ಹಾಗೆ", , "ಏನಿದೆಯೋ ಹಾಗೆ", "ಯಾವುದು ಇದೆಯೋ ಹಾಗೆ" ಮತ್ತು "ಯಾವುದೇ ಅವಲಂಬನೆ ಇಲ್ಲದೆ" 28.10.2025ರಂದು ಸಂಜೆ 05:00 ರಿಂದ ಸಂಜೆ 06:00 ಗಂಟೆಯವರೆಗೆ ಬರಬೇಕಾದ ಬಾಕಿ ಮೊತ್ತ ರೂ.3,14,63,983/- (ಮೂರು ಕೋಟಿ ಹದಿನಾಲ್ಕು ಲಕ್ಷ ಅರುವತ್ಮೂರು ಸಾವಿರದ ಒಂಭೈನೂರ ಎಂಭತ್ಮೂರು ರೂಪಾಯಿ ಮಾತ್ರ) ನಿಮ್ಮ ಖಾತೆ ಸಂ. HHLMAL00342698 ರಲ್ಲಿ ಬಾಕಿ ಮೂಲ, ಉಳಿಕೆಗಳು (ಉಂಟಾದ ವಿಳಂಬ ದರಗಳು ಸೇರಿದಂತೆ) ಬಾಕಿ ಇದ್ದು ಮತ್ತು 26.09.2025 ರವರೆಗೆ ಬಡ್ಡಿ ಸೇರಿದಂತೆ ಜೊತೆಗೆ 27.09.2025 ರಿಂದ ಅನ್ವಯಿಸುವ ಮುಂದುವರಿದ ಬಡ್ಡಿ ಸಾಲದ ಒಪ್ಪಂದದಂತೆ ಮತ್ತು ಇತರೆ ಸಾಲದ ದಾಖಲೆಗಳಂತೆ ಪೂರಕ ಭದ್ರತಾದಾರರಿಗೆ ಜಸ್ಮಿತ್ ಸಿಂಗ್ ಸೇಥಿ ಮತ್ತು ಜಸ್‌ಪ್ರೀತ್ ಸೇಥಿ ಇವರಿಂದ ಬಾಕಿ ಇದ್ದು ಅದರ ವಸೂಲಾತಿಗಾಗಿ ಮಾರಾಟ ಮಾಡಲಿರುವರು.
ಆಸ್ತಿಗಳ ಮೀಸಲು ಬೆಲೆ ಮತ್ತು ಅರ್ನೆಸ್ಟ್ ಠೇವಣಿ ಹಣವನ್ನು ಈ ಕೆಳಗೆ ನೀಡಲಾಗಿದೆ.

ಭದ್ರತಾ ಆಸ್ತಿಯ ವಿವರ	ವಾಸಯೋಗ್ಯ ಅಪಾರ್ಟ್‌ಮೆಂಟ್ ನಂ. 507, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ನೀಡಲಾದ ಮುನ್ಸಿಪಲ್ ನಂ. 15-289, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಿಂದ ನೀಡಲಾದ ಪಿಐಡಿ ನಂ. 62-157-15-289, ಹೊಸ ಪಿಐಡಿ ನಂ. 144-ಡಬ್ಲ್ಯು0061-17-288, 5ನೇ ಮಹಡಿ, "ಸಫೈರ್" ಬ್ಲಾಕ್ ಇರುವ ಕಟ್ಟಡವನ್ನು "ವಿಲ್ಸನ್ ಮ್ಯಾನೋರ್" ಎಂದು ಕರೆಯಲಾಗುತ್ತಿದ್ದು, ಆಸ್ತಿಯ ನಂ. 15, ಅರೆಕೆಂಪನಹಳ್ಳಿ ವಿಭಾಗ ನಂ. 54, ಬೆಂಗಳೂರು-560027, ಕರ್ನಾಟಕ ಇಲ್ಲಿ ನಿರ್ಮಾಣ ಮಾಡಲಾಗಿದ್ದು, ಜೊತೆಗೆ 572.06 ಚದರ ಅಡಿಗಳ ಭಾಗ ಮಾಡಲಾಗದಹಕ್ಕು, ಟೈಟಲ್ ಮತ್ತು ಹಿತಾಸಕ್ತಿಗಳು ಹೇಳಲಾದ ಭೂಮಿಯಲ್ಲಿದ್ದು, ಒಟ್ಟಾಗಿ ಒಂದು ಆವೃತ್ತವಾದ ಪ್ರದೇಶ ತಳಮಹಡಿಲ್ಲಿ ಎಫ್-11 ಎಂದು ಗುರುತು ಹಾಕಲಾಗಿದ್ದು, ಒಟ್ಟಾಗಿ ಸಮನಾಂತರ ಪಾಲು ಇರುವ ಸಾಮಾನ್ಯ ಪ್ರದೇಶಗಳ ಉಪಯೋಗಿಸುವ ಹಕ್ಕು ಇದೆ.
ಭದ್ರತಾ ಸಾಲ	ರೂ.3,14,63,983/- (ಮೂರು ಕೋಟಿ ಹದಿನಾಲ್ಕು ಲಕ್ಷ ಅರುವತ್ಮೂರು ಸಾವಿರದ ಒಂಭೈನೂರ ಎಂಭತ್ಮೂರು ರೂಪಾಯಿ ಮಾತ್ರ) ಸಾಲದ ಖಾತಾ ಸಂ. HHLMAL00342698 ರಲ್ಲಿ 26.09.2025ರಂತೆ ಮತ್ತು ಒಟ್ಟಾಗಿ ಮುಂದುವರಿದ ಬಡ್ಡಿ, ಇತರೆ ವೆಚ್ಚಗಳು ಮತ್ತು ಖರ್ಚುಗಳು ಹಣ ಸಂಪೂರ್ಣವಾಗಿ ಅಂತಿಮ ಪಾವತಿವರೆಗೆ.
ಮೀಸಲು ಬೆಲೆ (ಆರ್‌ಪಿ)	ರೂ.1,69,00,000/- (ಒಂದು ಕೋಟಿ ಅರುವತ್ತೊಂಭತ್ತು ಲಕ್ಷ ರೂಪಾಯಿಗಳು ಮಾತ್ರ)
ಪರಿವೀಕ್ಷಣೆ	ವಿನಂತಿ ಮೇರೆಗೆ ಭೇಟಿ
ಇ-ಹರಾಜಿನ ದಿನಾಂಕ & ಸ್ಥಳ	ಇ-ಹರಾಜು/ಬಿಡ್ಡಿಂಗ್ ವೆಬ್‌ಸೈಟ್ (www.auctionfocus.in) ಮೂಲಕ ದಿನಾಂಕ :28.10.2025 ಸಮಯ: ಸಂಜೆ 05.00 ರಿಂದ ಸಂಜೆ 06.00
ಬಿಡ್ ಸಲ್ಲಿಕೆಗೆ ಕೊನೆ ದಿನಾಂಕ ಮತ್ತು ಸಮಯ:	28.10.2025 ಮಧ್ಯಾಹ್ನ 3:00 ಗಂಟೆಯ ಮೊದಲು
ಇಎಂಡಿ :	ರೂ.16,90,000/- (ಹದಿನಾರು ಲಕ್ಷ ತೊಂಭತ್ತು ಸಾವಿರ ರೂಪಾಯಿಗಳು ಮಾತ್ರ)
ಸಂಪರ್ಕ :	0124-6910910, +91 7065451024

ಪರಭಾರೆ ಯಾವುದಾದರೂ : ಪೂರಕ ಭದ್ರತಾದಾರರಿಗೆ ತಿಳಿದಂತೆ ಯಾವುದೂ ಇಲ್ಲ.
ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗಾಗಿ ಪೂರಕ ಭದ್ರತಾದಾರರ ವೆಬ್‌ಸೈಟ್ ಅಂದರೆ https://www.cfmarc.in ಗೆ ಭೇಟಿ ನೀಡಿ ಮತ್ತು ಆಯಾ ಆಸ್ತಿಗಳ ಇ-ಹರಾಜು/ ಮಾರಾಟದ ಬಗ್ಗೆ ಮೊದಲೇ ತಿಳಿದುಕೊಂಡು ನಂತರ ತಮ್ಮ ಬಿಡ್ ಸಲ್ಲಿಸಿ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.
ಬಿಡ್ಡುದಾರರು ನಮ್ಮ ವೆಬ್‌ಸೈಟ್ www.auctionfocus.in ಗೆ ಭೇಟಿ ನೀಡಬಹುದಾಗಿದೆ. ಅಥವಾ ಸಂಪರ್ಕ ಸಂ. 0124 - 6910910, +91 7065451024, ಇ-ಮೇಲ್ ಐಡಿ : auctionhelpline@sammaancapital.com.

ಸ್ಥಳ: ಬೆಂಗಳೂರು
ದಿನಾಂಕ : 30.09.2025
ಸಹಿ/- ಅಧಿಕೃತ ಅಧಿಕಾರಿ
ಸಿಎಫ್‌ಎಮ್ ಅಸೆಟ್ ರಿಕನ್‌ಸ್ಟ್ರಕ್ಷನ್ ಪ್ರೈ. ಲಿ.
ಸಿಎಫ್‌ಎಂಎಆರ್‌ಸಿ ಟ್ರಸ್ಟ್ -1 ಐಹೆಚ್‌ಎಫ್‌ಎಲ್ ನ ಟ್ರಸ್ಟಿ ಆಗಿ ಕಾರ್ಯನಿರ್ವಹಿಸುತ್ತಿದೆ

23.84 ಕೋಟಿ ರು. ಮೌಲ್ಯದ ಡ್ರಗ್ಸ್ ಜಪ್ತಿ | ಇಬ್ಬರು ವಿದೇಶಿಗರು ಸೇರಿ 6 ಮಂದಿ ಬಂಧನ

ಮಾದಕ ಜಾಲದ ವಿರುದ್ಧ ನಗರ ಪೊಲೀಸರ ಸಮರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಡ್ರಗ್ಸ್ ವಿರುದ್ಧ ಸಮರ ಸಾರಿರುವ ನಗರ ಪೊಲೀಸರು ನಗರದ ವಿವಿಧ ಪ್ರದೇಶಗಳಲ್ಲಿ ನಡೆಸಿ ಇಬ್ಬರು 2 ವಿದೇಶಿ ಪ್ರಜೆಗಳು ಸೇರಿ 6 ಮಂದಿ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿ 23.84 ಕೋಟಿ ರು. ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಸಿಸಿಬಿ, ದಕ್ಷಿಣ ವಿಭಾಗ, ಉತ್ತರ-ಪೂರ್ವ ವಿಭಾಗ ಹಾಗೂ ಶ್ವಾನ ದಳ ಮತ್ತು ಎಸ್‌ಒಸಿಒ ತಂಡಗಳ ಸಂಯುಕ್ತ ಕಾರ್ಯಾಚರಣೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಸಿಸಿಬಿ ಮಾದಕ ದ್ರವ್ಯ ನಿಗ್ರಹ ವಿಭಾಗದದಿಂದ ಕೈಗೊಂಡ ಕಾರ್ಯಾಚರಣೆಯಲ್ಲಿ 7.176 ಕೆ.ಜಿ ಹೈಡ್ರೋ ಗಾಂಜಾ 1.399 ಕೆ.ಜಿ ಎಂಡಿಎಂಎ ಕ್ರಿಸ್ಟಲ್, 2.30 ಕೆ.ಜಿ ಅಫೀಮ್ ಸೇರಿ 11.81 ಕೋಟಿ ಮೌಲ್ಯದ ಡ್ರಗ್ ವಶಪಡಿಸಿಕೊಳ್ಳಲಾಗಿದೆ. ದೊಡ್ಡಬಳ್ಳಾಪುರದ ನಾಗದೇನಹಳ್ಳಿಯ ಸುರೇಶ್, ಮನೋಜ್, ಅತ್ತಿಬೆಲೆಯ ಅಖಿಲ್ ಸಂತೋಷ್, ಕನಕಪುರದ ಸೋಮಶೇಖರ್, ಕಲ್ಯಾಣನಗರದ ದಿಲೀಪ್ ಕುಮಾರ್ ಸಾಹು ಹಾಗೂ ಸೂಡಾನ್ ನ ಲಾಡೂರಾಮ್ ಬಂಧಿತ ಆರೋಪಿಗಳಾಗಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ತಿಳಿಸಿದ್ದಾರೆ.

2 ಕೆ.ಜಿ ಅಫೀಮ್ ವಶ: ಆರೋಪಿಯ ವಶದಿಂದ 4 ಕೋಟಿ ಮೌಲ್ಯದ 1 ಕೆ.ಜಿ 399 ಗ್ರಾಂ ಎಂಡಿಎಂಎ ಕ್ರಿಸ್ಟಲ್, 2 ಕೆ.ಜಿ 30 ಗ್ರಾಂ ಅಫೀಮ್ ಇತರೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ, ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿ ಹೆಚ್ಚಿನ ತನಿಖೆ ಕೈಗೊಳ್ಳಲಾಗಿದೆ. ಕೊತ್ತನೂರು ಪೊಲೀಸರು ಎನ್.ಜಿ.ಗೊಲ್ಲಹಳ್ಳಿ ಗ್ರಾಮದ ಬಳಿಯ ಅಪಾರ್ಟ್‌ಮೆಂಟ್‌ನಲ್ಲಿ ವಿದೇಶಿ ಮೂಲದ ಮಹಿಳೆಯರಿಬ್ಬರು ಡ್ರಗ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದ ಮಾಹಿತಿ ಆಧರಿಸಿ ದಾಳಿ ಮಾಡಿ ಬಂಧಿಸಿದ್ದಾರೆ. ಬಂಧಿತರಿಂದ 12.03 ಕೋಟಿ ಮೌಲ್ಯದ 4 ಕೆ.ಜಿ 815 ಗ್ರಾಂ ಎಂಡಿಎಂಎ ಕ್ರಿಸ್ಟಲ್ ಅನ್ನು ವಶಪಡಿಸಿಕೊಂಡು ಎನ್‌ಡಿಪಿಎಸ್ ಮತ್ತು ವಿದೇಶಿ ನಾಗರಿಕರ ಕಾಯ್ದೆಯಡಿ ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಳ್ಳಲಾಗಿದೆ.

711 ಪ್ರಕರಣ: 81.21 ಕೋಟಿ ರು. ಮೌಲ್ಯದ ಮಾದಕ ವಸ್ತು ಜಪ್ತಿ

ಮಾದಕ ದಂಧೆಕೋರರ ವಿರುದ್ಧದ ಸಮರವನ್ನು ಮತ್ತಷ್ಟು ಚುರುಗೊಳಿಸಿರುವ ಬೆಂಗಳೂರು ನಗರ ಪೊಲೀಸರು ಪ್ರಸಕ್ತ ವರ್ಷ 81.21 ಕೋಟಿ ರು. ಮೌಲ್ಯದ ವಿವಿಧ ಮಾದಕ ಪದಾರ್ಥ ವಶಪಡಿಸಿಕೊಂಡಿದ್ದಾರೆ. 2025ರ ಅ. 8ರ ವರೆಗಿನ ಅಂಕಿ ಅಂಶಗಳ ಪ್ರಕಾರ ಬೆಂಗಳೂರಿನಲ್ಲಿ ಮಾದಕ ವಸ್ತುಗಳ ಮಾರಾಟದಲ್ಲಿ ತೊಡಗಿದ್ದವರ ವಿರುದ್ಧ 711 ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, 1,013 ಭಾರತೀಯ ಹಾಗೂ 35 ವಿದೇಶಿ ಮೂಲದ ಆರೋಪಿಗಳ ಸಹಿತ 1,048 ಜನರನ್ನು ಬಂಧಿಸಲಾಗಿದೆ. ಬಂಧಿತರಿಂದ ಒಟ್ಟೂ 1483.30 ಕೆ.ಜಿ ತೂಕದ ಮಾದಕ ಪದಾರ್ಥಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

3 ಕೆ.ಜಿ ಹೈಡ್ರೋ ಗಾಂಜಾ ಜಪ್ತಿ: ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಸಿಬ್ಬಂದಿಯು ವಿದೇಶಗಳಿಂದ ಮಾದಕ ವಸ್ತುಗಳನ್ನು ಒಳಗೊಂಡ ಶಂಕಾಸ್ಪದ ಪಾರ್ಸೆಲ್‌ಗಳು ಕೆ.ಜಿ.ನಗರ ಪೊಲೀಸ್ ಠಾಣಾ ವ್ಯಾಪ್ತಿಯ ವಿದೇಶಿ ಅಂಚೆ ಕಚೇರಿಗೆ ಬರುವ ಖಚಿತ ಮಾಹಿತಿ ಆಧರಿಸಿ ದಾಳಿ ಕೈಗೊಂಡಿದ್ದಾರೆ. ಸ್ನಿಫರ್ ಶ್ವಾನಗಳ ಸಹಾಯದಿಂದ ಸರಕುಗಳಿಂದ ಬಂದ ಶಂಕಾಸ್ಪದ ಪಾರ್ಸೆಲ್‌ಗಳನ್ನು ಗುರುತಿಸಿ, ನಡೆಸಿದ ಕಾರ್ಯಾಚರಣೆಯಲ್ಲಿ 3.81 ಕೋಟಿ ಮೌಲ್ಯದ 3 ಕೆ.ಜಿ ಹೈಡ್ರೋ ಗಾಂಜಾ ಹಾಗೂ ಇತರೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಪ್ರಾಥಮಿಕ ತನಿಖೆಯಲ್ಲಿ,ಕೆಲವು ಅಪರಿಚಿತ ಆರೋಪಿಗಳು ಥೈಲ್ಯಾಂಡ್ ಮತ್ತು ಜರ್ಮನಿ ದೇಶಗಳಿಂದ ನಕಲಿ ಹೆಸರಿನಲ್ಲಿ ಕ್ರಿಪ್ಟೋ ಕರೆನ್ಸಿ ಮೂಲಕ ಹೈಡ್ರೋ ಗಾಂಜಾವನ್ನು ಖರೀದಿಸಿ ನಗರಕ್ಕೆ ಪೆಡ್ಲಿಂಗ್ ಮಾಡುತ್ತಿರುವುದು ಪತ್ತೆಯಾಗಿದೆ. ಈ ಸಂಬಂಧ ಕೆ.ಜಿ.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮಾದಕ ವಸ್ತುಗಳನ್ನು ಆರ್ಡರ್ ಮಾಡಿದ ಇಬ್ಬರು ಆರೋಪಿಗಳನ್ನು ಬಂಧಿಸಿ ಮುಂದಿನ ತನಿಖೆಗಾಗಿ ಪ್ರಕರಣವನ್ನು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳಕ್ಕೆ ವರ್ಗಾಯಿಸಲಾಗಿದೆ.

4 ಕೋಟಿ ಮೌಲ್ಯದ ಡ್ರಗ್ಸ್ ವಶಕ್ಕೆ: ಕೆ.ಜಿ.ನಗರದ ವಿದೇಶಿ ಅಂಚೆ ಕಚೇರಿಯಲ್ಲಿ ಮಾದಕ ವಸ್ತುಗಳಿರುವ ಖಚಿತ ಮಾಹಿತಿಯ ಆಧಾರದ ಮೇರೆಗೆ, ಸ್ನಿಫರ್ ಶ್ವಾನಗಳ ಸಹಾಯದಿಂದ ಸಾಗಾಟು ಸರಕುಗಳಿಂದ ಬಂದ ಶಂಕಾಸ್ಪದ ಪಾರ್ಸೆಲ್‌ಗಳನ್ನು ಗುರುತಿಸಿ,4 ಕೋಟಿ ಮೌಲ್ಯದ 4 ಕೆ.ಜಿ. ಹೈಡ್ರೋ ಗಾಂಜಾ ಹಾಗೂ ಪಾರ್ಸೆಲ್ ಪ್ಯಾಕಿಂಗ್‌ಗೆ ಬಳಸಿದ ವಸ್ತುಗಳು ವಶಪಡಿಸಿಕೊಳ್ಳಲಾಗಿದೆ. ವಿದೇಶಿ ಅಂಚೆ ಕಚೇರಿಗೆ ಡ್ರಗ್ ಬರುವ ಸಂಬಂಧ ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಅವರ ನೇತೃತ್ವದ ತಂಡ ವಿವಿಧ ಅಯಾಮಗಳಲ್ಲಿ ತನಿಖೆಯನ್ನು ಕೈಗೊಳ್ಳಲಾಗಿದೆ ಅಂಚೆ ಕಚೇರಿಯ ಉದ್ಯೋಗಿಗಳು ಸೇರಿ ಕೆಲವರನ್ನು ವಿಚಾರಣೆ ನಡೆಸಲಾಗುತ್ತಿದೆ.

₹12.03 ಕೋಟಿ ಡ್ರಗ್ಸ್ ಜಪ್ತಿ

ಉತ್ತರ-ಪೂರ್ವ ವಿಭಾಗದ ಕೊತ್ತನೂರು ಪೊಲೀಸರು ಖಚಿತ ಮಾಹಿತಿಯನ್ನು ಆಧರಿಸಿ ಕೈಗೊಂಡಿರುವ ಕಾರ್ಯಾಚರಣೆಯಲ್ಲಿ 12.03 ಕೋಟಿ ಮೌಲ್ಯದ 4.815 ಕೆ.ಜಿ ಎಂಡಿಎಂಎ ಕ್ರಿಸ್ಟಲ್ ವಶಪಡಿ ಸಿಕೊಳ್ಳಲಾಗಿದೆ. ಸಿಸಿಬಿ ಯ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳಿಗೆ ಪರಪ್ಪನ ಅಗ್ರಹಾರ ಠಾಣಾ ವ್ಯಾಪ್ತಿಯಲ್ಲಿ ಡ್ರಗ್ ಪೆಡ್ಲಿಂಗ್ ಕುರಿತು ಖಚಿತ ಮಾಹಿತಿಯ ಆಧಾರದ ಮೇರೆಗೆ ದಾಳಿ ನಡೆಸಿ, ರಾಜಸ್ಥಾನ ಮೂಲದ ಒಬ್ಬ ಡ್ರಗ್ ಪೆಡ್ಲರ್‌ನನ್ನು ಬಂಧಿಸಲಾಗಿದೆ. ಬಂಧಿತ ಆರೋಪಿಯು 2024 ರಿಂದ ಕಾರು ಚಾಲಕರಾಗಿ ಕೆಲಸ ಮಾಡುತ್ತಿದ್ದು,ಅದರಿಂದ ಬರುವ ಆದಾಯದಿಂದ ಖರ್ಚು ನಿರ್ವಹಿಸಲು ಸಾಧ್ಯವಾಗದೇ ಸಂಬಂಧಿಕನ ಸಹಾಯದಿಂದ ಕಳೆದ 3 ತಿಂಗಳಿಂದ ಡ್ರಗ್ಸ್ ಮಾರಾಟ ಮಾಡುತ್ತಿರುವುದನ್ನು ಬಾಯ್ಬಿಟ್ಟಿದ್ದಾನೆ.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

9ನೇ ಅಕ್ಟೋಬರ್ 2025 , ಗುರುವಾರ | ಸಂಜೆ 4.00 ಗಂಟೆಗೆ | ಸ್ಥಳ: **ಬ್ಯಾಂಕ್ವೆಟ್ ಹಾಲ್,** ವಿಧಾನಸೌಧ, ಬೆಂಗಳೂರು.

ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಘನ ಉಪಸ್ಥಿತಿ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಉಪಸ್ಥಿತಿ
ಶ್ರೀ ಎನ್.ಎಸ್. ಭೋಸರಾಜು
ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಅಧ್ಯಕ್ಷತೆ
ಶ್ರೀ ರಿಜ್ವಾನ್ ಅರ್ಷದ್
ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ

ಬಯಲು ಸೀಮೆಯಲ್ಲಿ ಅಂತರ್ಜಲ ವೃದ್ಧಿಸಿದ ತ್ರಿವಳಿ ಯೋಜನೆಗಳು

ಕೆಸಿ ವ್ಯಾಲಿ, ಹೆಚ್‌ಎನ್ ವ್ಯಾಲಿ ಮತ್ತು ವೃಷಭಾವತಿ ವ್ಯಾಲಿ : ತ್ಯಾಜ್ಯ ನೀರನ್ನು ದ್ವಿತೀಯ ಹಂತದಲ್ಲಿ ಸಂಸ್ಕರಿಸಿ ಕೆರೆಗಳನ್ನು ತುಂಬಿಸುವ ಮಹತ್ವಕಾಂಕ್ಷಿ ಯೋಜನೆ. ಬಯಲು ಸೀಮೆಯ ಜಿಲ್ಲೆಗಳಾದ ಕೋಲಾರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ ಹಾಗೂ ರಾಮನಗರ ಜಿಲ್ಲೆಯ ಅಂದಾಜು **700 ಕ್ಕೂ** ಹೆಚ್ಚು ಕೆರೆಗಳನ್ನು ಹಂತ-ಹಂತವಾಗಿ ತುಂಬಿಸಲಾಗುತ್ತಿದೆ. ಈ ಯೋಜನೆಗಳ ಸಕಾರಾತ್ಮಕ ಪರಿಣಾಮದಿಂದಾಗಿ ಸ್ಥಳೀಯ ಕೊಳವೆ ಬಾವಿಗಳಲ್ಲಿ ಅಂತರ್ಜಲ ಮಟ್ಟ ಗಣನೀಯವಾಗಿ ಏರಿಕೆ.

ರಾಜ್ಯದ ಈ ಯೋಜನೆಳಿಗೆ ವಿಶ್ವಸಂಸ್ಥೆ, ವಿಶ್ವಬ್ಯಾಂಕ್ ಹಾಗೂ ಜಲಶಕ್ತಿ ಮಂತ್ರಾಲಯದ ಪ್ರಶಂಸೆ. **ಸಂಸ್ಕರಿಸಿದ ನೀರಿನ ಸುಸ್ಥಿರ ನಿರ್ವಹಣೆಯಲ್ಲಿ ಏಷ್ಯಾಖಂಡದಲ್ಲೇ ಮಾದರಿ ಯೋಜನೆಗಳಾಗಿವೆ.**

ಅಂತರ್ಜಲ ವೃದ್ಧಿಗೆ ನೆರವಾದ ಜಲ ಸಂರಕ್ಷಣಾ ರಚನೆಗಳು

ರಾಜ್ಯದ ಅಂತರ್ಜಲ ಮಟ್ಟ ವೃದ್ದಿಸಲು **8 ಸಾವಿರಕ್ಕೂ** ಹೆಚ್ಚು ಚೆಕ್ ಡ್ಯಾಂ, ಬ್ರಿಡ್ಜ್ ಕಂ ಬ್ಯಾರೇಜ್, ಅಣೆಕಟ್ಟು, ಪಿಕ್ಸ್, ಮಳೆ ನೀರು ಇಂಗು ಗುಂಡಿಗಳು ರಚನೆ. ಇಲಾಖೆಯ ವತಿಯಿಂದ **3787 ಕೆರೆಗಳ** ಯಶಸ್ವಿ ನಿರ್ವಹಣೆ ಹಾಗೂ 25 ಲಕ್ಷ ಎಕರೆಗೂ ಹೆಚ್ಚು ಕೃಷಿ ಭೂಮಿಗೆ ನೀರಾವರಿ ಒದಗಿಸಿ ರೈತರಿಗೆ ಅನುಕೂಲ.

ಅಂತರ್ಜಲ ವೃದ್ಧಿ - ಕರ್ನಾಟಕ ಸಮೃದ್ಧಿ

ನೀರಿನ ಸಂರಕ್ಷಣಾ ರಚನೆಗಳು ಹಾಗೂ ಏತ ನೀರಾವರಿ ಯೋಜನೆಗಳ ಅನುಷ್ಠಾನದಿಂದ ಕಳೆದ 2 ವರ್ಷಗಳಲ್ಲಿ ರಾಜ್ಯದ **150 ತಾಲ್ಲೂಕುಗಳಲ್ಲಿ** ಅಂತರ್ಜಲ ಮಟ್ಟ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ.

ಅಂತರ್ಜಲ ಬಳಕೆಯಲ್ಲಿ ಕಳೆದ 2 ವರ್ಷಗಳಲ್ಲಿ, **6 ಅತಿಬಳಕೆ, 4 ಕ್ಲಿಷ್ಟಕರ ಮತ್ತು 10 ಅರೆ ಕ್ಲಿಷ್ಟಕರ** ತಾಲ್ಲೂಕುಗಳನ್ನು ಸುಧಾರಿತ ಮಟ್ಟಕ್ಕೆ ತರುವ ಮೂಲಕ ಅಂತರ್ಜಲ ಮಟ್ಟದಲ್ಲಿನ ಏರಿಕೆಯನ್ನು ಖಾತ್ರಿಗೊಳಿಸಲಾಗಿದೆ.

ಅಂತರ್ಜಲ ಗುಣಮಟ್ಟ ಮಾಪನ

ರಾಜ್ಯದಲ್ಲಿ ಅಂತರ್ಜಲ ಮಟ್ಟವನ್ನು ನಿರಂತರವಾಗಿ ಅಧ್ಯಯನ ಮಾಡಲು **2714 ಕೊಳವೆ ಬಾವಿ ಹಾಗೂ 2214 ಡಿಜಿಟಲ್ ವಾಟರ್ ಲೆವೆಲ್ ಇಂಡಿಕೇಟರ್ ವಿತ್ ಟೆಲಿಮೆಟ್ರಿ ವ್ಯವಸ್ಥೆಯ** ಜಾಲತಾಣಗಳನ್ನು ಸ್ಥಾಪಿಸುವ ಮೂಲಕ ದತ್ತಾಂಶವನ್ನು **ಪ್ರತಿ 6 ಗಂಟೆಗೊಮ್ಮೆ** ಸಂಗ್ರಹಿಸಿ ಕ್ರೋಡೀಕರಿಸಲಾಗುತ್ತಿದೆ.

ಅಂತರ್ಜಲ ನಿರ್ದೇಶನಾಲಯ ಹಾಗೂ ಭೂಗರ್ಭ ಜಲಮಂಡಳಿ ಸಹಯೋಗದೊಂದಿಗೆ ಪ್ರತಿ ವರ್ಷ ಅಂತರ್ಜಲ ಮೌಲ್ಯೀಕರಣ ವರದಿಯನ್ನು ಪ್ರಕಟಿಸಲಾಗುತ್ತದೆ. ಇದು ರಾಜ್ಯದ ಅಂತರ್ಜಲದ ಸಮರ್ಪಕ ಬಳಕೆ, ನಿಯಂತ್ರಣ ಹಾಗೂ ಶಾಶ್ವತ ನಿರ್ವಹಣೆಗೆ ಸಹಕಾರಿಯಾಗಿದೆ.





ಜಲಮೂಲಗಳ ಸಮಗ್ರ ನಿರ್ವಹಣೆಗೆ ತಂತ್ರಜ್ಞಾನ ಆಧಾರಿತ ಡಿಜಿಟಲ್ ವಾಟರ್ ಸ್ಟಾಕ್ ಅಳವಡಿಕೆಗೆ ಕ್ರಮ

ರಾಜ್ಯದ ಎಲ್ಲಾ ಜಲಮೂಲಗಳನ್ನು ಒಂದೇ ಸೂರಿನಡಿ ತರುವ ಮೂಲಕ ಸಂರಕ್ಷಣೆ ಹಾಗೂ ಸಮಗ್ರ ನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಖಾತರಿ ಪಡಿಸುವ ನಿಟ್ಟಿನಲ್ಲಿ **'ಡಿಜಿಟಲ್ ವಾಟರ್ ಸ್ಟಾಕ್' ನೂತನ ತಂತ್ರಜ್ಞಾನ ಆಧಾರಿತ ನೀರಿನ ನಿರ್ವಹಣಾ ವೇದಿಕೆ** ಅನುಷ್ಠಾನಗೊಳಿಸಲು ಚಿಂತನೆ.

ಜಲಮೂಲಗಳ ಮೂಲ ಪ್ರದೇಶ, ಮೂಲ ಆಕಾರ, ನೀರಿನ ಸಂಗ್ರಹಣಾ ಸಾಮರ್ಥ್ಯದ ನೈಜ ಸಮಯದಲ್ಲಿ ಮಾಹಿತಿ ಸಂಗ್ರಹಿಸಿ ಅಂತರ್ಜಲ ಅಭಿವೃದ್ಧಿಗಾಗಿ ನೀತಿ-ನಿರೂಪಣೆಗಳನ್ನು ರಚಿಸುವುದು ಇದರ ಪ್ರಮುಖ ಉದ್ದೇಶ.

ಕೃಷಿ ಭೂಮಿಗೆ ಏತ ನೀರಾವರಿ-ರೈತ ವರ್ಗಕ್ಕೆ ಅನುಕೂಲ

ರಾಜ್ಯಾದ್ಯಂತ ಸುಮಾರು **472 ಏತ ನೀರಾವರಿ** ಯೋಜನೆಗಳ ನಿರ್ವಹಣೆ. **1318 ಕ್ಕೂ** ಹೆಚ್ಚು ಕೆರೆಗಳಿಗೆ ನೀರು ಹರಿಸಿ, 2 ಲಕ್ಷ ಎಕರೆಗೂ ಹೆಚ್ಚು ಕೃಷಿ ಭೂಮಿಗೆ ನೀರಾವರಿ ಒದಗಿಸಿ ರೈತರಿಗೆ ಅನುಕೂಲ.

ಜಲಮೂಲಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ

ರಾಜ್ಯದಲ್ಲಿರುವ **41,849 ಜಲಮೂಲಗಳ ಪೈಕಿ 35,989 ಜಲಮೂಲಗಳ** ಅಳತೆ ಕಾರ್ಯ ಯಶಸ್ವಿ, ಈ ಪೈಕಿ 13,644 ಕೆರೆಗಳಲ್ಲಿ ಒತ್ತುವರಿ ಗುರುತಿಸಲಾಗಿದ್ದು, **7987** ಕೆರೆಗಳಲ್ಲಿ ಒತ್ತುವರಿ ತೆರವು. **(ಶೇ. 70 ರಷ್ಟು).**



ಅಟಲ್ ಭೂಜಲ್ ಯೋಜನೆ

ಅಟಲ್ ಭೂಜಲ್ ಯೋಜನೆ ಮೂಲಕ **ರೂ. 1,034 ಕೋಟಿಗಳಲ್ಲಿ ರಾಜ್ಯದ 14 ಜಿಲ್ಲೆಗಳ 41 ತಾಲೂಕುಗಳ** ವ್ಯಾಪ್ತಿಯಲ್ಲಿ ಅಂತರ್ಜಲ ಅತಿ ಬಳಕೆಯಾಗುತ್ತಿರುವ **1199 ಗ್ರಾಮ ಪಂಚಾಯಿತಿಗಳಲ್ಲಿ** ಅಂತರ್ಜಲ ಮಟ್ಟ ಸುಧಾರಿಸುವ ಉದ್ದೇಶದಿಂದ ಸಣ್ಣ ನೀರಾವರಿ ಇಲಾಖೆ ವತಿಯಿಂದ 736ಕ್ಕೂ ಹೆಚ್ಚು ಹಾಗೂ ಏಳು ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಜಲಸಂರಕ್ಷಣಾ ರಚನೆಗಳನ್ನು ನಿರ್ಮಿಸಲಾಗಿದೆ.

ಕಳೆದ 5 ವರ್ಷಗಳ ಸರಾಸರಿ ಅಂತರ್ಜಲ ಮಟ್ಟವನ್ನು ಪ್ರಸ್ತುತ ವರ್ಷದ ಅಂತರ್ಜಲ ಮಟ್ಟದೊಂದಿಗೆ ಹೋಲಿಸಿ ವ್ಯತ್ಯಾಸವನ್ನು ಅಂದಾಜಿಸಲಾಗಿದೆ. ಈ ಪ್ರಕಾರ ಈ ಯೋಜನೆಯಡಿ 2024ನೇ ಸಾಲಿನಲ್ಲಿ ಪರೀಕ್ಷಿಸಲಾದ 1199 ಗ್ರಾಮ ಪಂಚಾಯಿತಿ ಪೈಕಿ **396 ಗ್ರಾಮ ಪಂಚಾಯಿತಿಗಳಲ್ಲಿ** ಅಂತರ್ಜಲ ಮಟ್ಟದಲ್ಲಿ ಏರಿಕೆ ಕಂಡುಬಂದಿದೆ.

ನೀರಿದ್ದರೆ ನಾಳೆ - ಜಲವೇ ಜಗದ ಜೀವಾಳ

ನೀರಿದ್ದರೆ ನಾಳೆ ಯೋಜನೆಯ ಮೊದಲ ಹಂತ: ಅಂತರ್ಜಲ ಸಂರಕ್ಷಣೆ ಮತ್ತು ಸಂಪನ್ಮೂಲ ಸುಸ್ಥಿರತೆಯಲ್ಲಿ ಪ್ರಸ್ತುತ ಇರುವ ನಿರ್ಣಾಯಕ ಸವಾಲುಗಳನ್ನು ಪರಿಹರಿಸುವ ಉದ್ದೇಶದಿಂದ, ಪ್ರಮುಖವಾಗಿ **15 ಜಿಲ್ಲೆಗಳು 27 ತಾಲ್ಲೂಕುಗಳ 525 ಅಂತರ್ಜಲ ಅತಿಬಳಕೆ ಗ್ರಾಮ ಪಂಚಾಯಿತಿಗಳಲ್ಲಿ** ಸಮುದಾಯ-ಚಾಲಿತ ಅಂತರ್ಜಲ ಮರುಪೂರಣ ಮತ್ತು ಸಂರಕ್ಷಣಾ ಪ್ರಯತ್ನಗಳನ್ನು ಉತ್ತೇಜಿಸಲಾಗುವುದು.

ಅಂತರ್ಜಲ ವೃದ್ಧಿಸುವ ಸಂರಕ್ಷಣಾ ರಚನೆಗಳು, ಜಲ ಮೂಲಗಳ ನಿರ್ವಹಣೆ ಮತ್ತು ಸಂರಕ್ಷಣೆಯಂತಹ ಸುಸ್ಥಿರ ಅಭ್ಯಾಸಗಳ ಯಶಸ್ಸನ್ನು ಆಧರಿಸಿ, ಈ ಯೋಜನೆಯು ಭವಿಷ್ಯದಲ್ಲಿ ನೀರಿನ ಭದ್ರತೆ ಖಾತ್ರಿಪಡಿಸುವ ಸಮಗ್ರ ಚೌಕಟ್ಟನ್ನು ಒದಗಿಸುತ್ತದೆ. 2025-26ನೇ ಆರ್ಥಿಕ ಸಾಲಿನಲ್ಲಿ **200 ಕೋಟಿ ರೂ. ವೆಚ್ಚದಲ್ಲಿ ಮಹಾರಾಷ್ಟ್ರದ ಶಿರಪುರ ಮಾದರಿಯಲ್ಲಿ** ಅಂತರ್ಜಲ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲಾಗಿದೆ.

ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ **ಶ್ರೀ ಎನ್.ಎಸ್. ಭೋಸರಾಜು ರವರು** ಅಧಿಕಾರಿಗಳೊಂದಿಗೆ ಬೆಂಗಳೂರು ಜಲಮಂಡಳಿಯ ತ್ಯಾಜ್ಯ ಶುದ್ಧೀಕರಣ ಘಟಕಕ್ಕೆ ಭೇಟಿ ನೀಡಿದ ಸಂದರ್ಭ.

"ನೀರಿದ್ದರೆ ನಾಳೆ," ಎಂಬ ಪರಿಕಲ್ಪನೆಯು ಮುಂದಿನ ಪೀಳಿಗೆಯ ಭವಿಷ್ಯಕ್ಕಾಗಿ ಎಂಬುದನ್ನು ನಾವು ಅರಿಯೋಣ.

ಸುಂದರ ಹಾಗೂ ಸುಭದ್ರ ನಾಳೆಗಳ ಗ್ಯಾರಂಟಿಗೆ ಈ ಅಭಿಯಾನದಲ್ಲಿ ಎಲ್ಲರೂ ಪಾಲ್ಗೊಳ್ಳೋಣ.

ಈ ಯೋಜನೆಯ ಮೂಲಕ ಸಮೃದ್ಧ, ಸುಭದ್ರ, ಹಾಗೂ ಸುಸ್ಥಿರ ಕರ್ನಾಟಕವನ್ನು ನಿರ್ಮಿಸೋಣ.

ಸರ್ವರಿಗೂ ಸುಸ್ವಾಗತ

ಶ್ರೀ ಬಿ.ಕೆ. ಪವಿತ್ರ
ಸರ್ಕಾರದ ಕಾರ್ಯದರ್ಶಿಗಳು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಶ್ರೀ ಪ್ರಕಾಶ್ ಶ್ರೀಹರಿ. ಬಿ.
ಸಣ್ಣ ನೀರಾವರಿ ಹಾಗೂ ಅಂತರ್ಜಲ ಅಭಿವೃದ್ಧಿ ಇಲಾಖೆ,
ಮುಖ್ಯ ಅಭಿಯಂತರರು, ದಕ್ಷಿಣ ವಲಯ, ಬೆಂಗಳೂರು

ಶ್ರೀ ಎಚ್.ಎಲ್. ವೆಂಕಟೇಶ್
ಸಣ್ಣ ನೀರಾವರಿ ಹಾಗೂ ಅಂತರ್ಜಲ ಅಭಿವೃದ್ಧಿ ಇಲಾಖೆ,
ಮುಖ್ಯ ಅಭಿಯಂತರರು, ಉತ್ತರ ವಲಯ, ವಿಜಯಪುರ

ಶ್ರೀ ಬಿ.ಕೆ. ರಾಜೇಂದ್ರ
ನಿರ್ದೇಶಕರು
ಅಂತರ್ಜಲ ನಿರ್ದೇಶನಾಲಯ

ಸಮಾಚಾರ ಸಣ್ಣದಲ್ಲ

ಉಳ್ಳಾಲ: ಫಿಶ್ ಮಿಲ್ ಗೋದಾಮಿನಲ್ಲಿ ಬೆಂಕಿ

ಉಳ್ಳಾಲ: ಇಲ್ಲಿನ ಕೋಟೆಪುರದಲ್ಲಿರುವ ಮೀನಿನ ಆಹಾರ ತಯಾರಿ ಹಾಗೂ ಸಂಸ್ಕರಣಾ ಘಟಕದ ಗೋದಾಮು ಬೆಂಕಿಗೆ ಆಹುತಿಯಾಗಿದ್ದು, ಲಕ್ಷಾಂತರ ರು.ನಷ್ಟ ಉಂಟಾಗಿದೆ. ಬುಧವಾರ ಸಂಜೆ ವೇಳೆ ಗೋದಾಮಿನ ಒಳಗೆ ಕಾಣಿಸಿಕೊಂಡ ಬೆಂಕಿ ಒಮ್ಮಿಂದೊಮ್ಮೆಲೇ ಸುತ್ತಲೂ ವ್ಯಾಪಿಸಿತು. ಬೆಂಕಿಯ ಕೆನ್ನಾಲೆ ಗೋದಾಮಿನ ಆಚೆಗೂ ಚಾಚಿತ್ತು. ತಕ್ಷಣ ಕಾರ್ಯಪ್ರವೃತ್ತರಾದ ಸ್ಥಳೀಯರು ನೀರು ಎರಚಿ ಬೆಂಕಿ ನಂದಿಸಲು ಯತ್ನಿಸಿದರು. ತುಂಬಾ ಹೊತ್ತಿನ ನಂತರ ಮಂಗಳೂರಿನಿಂದ ಅಗ್ನಿಶಾಮಕ ದಳದ ವಾಹನ ಬಂದು ಬೆಂಕಿ ನಂದಿಸುವ ಕಾರ್ಯಕ್ಕೆ ಮುಂದಾಯಿತು. ಬೆಂಕಿ ಅವಘಡಕ್ಕೆ ಒಳಗಾದ ಎಂಎಪಿ ಫಿಶ್ ಫುಡ್ ಗೋದಾಮು ಖಾದರ್ ಎಂಬುವರಿಗೆ ಸೇರಿದ್ದು ಎಂದು ಮೂಲಗಳು ತಿಳಿಸಿವೆ.

ದರೋಡೆ: ಪ್ರಮುಖ ಆರೋಪಿ ಬಂಧನ

ಕಾಸರಗೋಡು: ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರನ್ನು ತಡೆದು ನಿಲ್ಲಿಸಿ 3.45 ಕೋಟಿ ರು. ದರೋಡೆಗೈದ ಪ್ರಕರಣಕ್ಕೆ ಸಂಬಂಧಿಸಿ ಕಲ್ಲಿಕೋಟೆಯ ಕೆ.ವಿ. ಅಖಿಲ್ (34) ಎಂಬಾತನನ್ನು ವಯನಾಡು ಕ್ರೈಂ ಬ್ರಾಂಚ್ ಡಿವೈಎಸ್ಪಿ ಸುರೇಶ್ ಬಾಬು ನೇತೃತ್ವದ ಪೊಲೀಸರು ಬಂಧಿಸಿದ್ದಾರೆ. 2024ರ ಜುಲೈ 24ರಂದು ತಲಶ್ಶೇರಿಯಲ್ಲಿ ಚಿನ್ನ ವ್ಯಾಪಾರ ನಡೆಸುತ್ತಿದ್ದ ಮೌರೂಪಿ ಪಾಂಡುರಂಗ ಅವರನ್ನು ದರೋಡೆಗೈಯಲಾಗಿತ್ತು. ಹಳೆಯ ಚಿನ್ನ ಖರೀದಿಸಿ ಮಹಾರಾಷ್ಟ್ರದಲ್ಲಿ ಮಾರಾಟ ನಡೆಸಿ ಕಾರಿನಲ್ಲಿ ಪಾಂಡುರಂಗ ಹಾಗೂ ಸಹಾಯಕ ಮರಳುತ್ತಿದ್ದಾಗ ದುಷ್ಕರ್ಮಿಗಳು ಕೃತ್ಯ ಎಸಗಿದ್ದರು.

ಪತಿಯಿಂದಲೇ ಪತ್ನಿ ಭೀಕರ ಹತ್ಯೆ

ಬೆಳಗಾವಿ: ಪತ್ನಿಯನ್ನು ಕೊಲೆ ಮಾಡಿ ಮಂಚದ ಕೆಳಗೆ ಶವ ಅಡಗಿಸಿಟ್ಟು ಪತಿ ಪರಾರಿಯಾದ ಘಟನೆ ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲೂಕಿನ ಕಾಮಲದಿನ್ನಿಯಲ್ಲಿ ತಡವಾಗಿ ಬೆಳಕಿಗೆ ಬಂದಿದೆ. ಸಾಕ್ಷಿ ಆಕಾಶ್ ಕುಂಬಾರ (20) ಕೊಲೆಯಾದ ಮೃತ ದುರ್ದೈವಿ. ಪತ್ನಿಯನ್ನು ಕೊಲೆ ಮಾಡಿರುವ ಆಕಾಶ್ ಕುಂಬಾರ ಪರಾರಿಯಾಗಿರುವ ಆರೋಪಿ. ಕಳೆದ ಮೂರು ದಿನಗಳ ಹಿಂದೆ ಕೊಲೆ ನಡೆದಿರುವ ಶಂಕೆ ವ್ಯಕ್ತವಾಗಿದ್ದು, ಸಂಬಂಧಿಕರ ಮನೆಗೆ ಹೋಗಿದ್ದ ಆಕಾಶ್ ತಾಯಿ ಬುಧವಾರ ಮನೆಗೆ ವಾಪಸ್ ಆದಾಗ ಘಟನೆ ಬೆಳಕಿಗೆ ಬಂದಿದೆ. ವಿಷಯ ತಿಳಿಯುತ್ತಿದ್ದಂತೆ ಘಟನಾ ಸ್ಥಳಕ್ಕೆ ಮೂಡಲಗಿ ಪೊಲೀಸರು ಹಾಗೂ ಗೋಕಾಕ ಡಿವೈಎಸ್ಪಿ ಭೇಟಿ ಪರಿಶೀಲನೆ ನಡೆಸಿದರು. ಸ್ಥಳಕ್ಕೆ ತಹಸೀಲ್ದಾರ್ ಶ್ರೀಶೈಲ್ ಗುಡಮೆ ಭೇಟಿ ನೀಡಿದ್ದಾರೆ. ಮೂಡಲಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಮೊದಲ, ಕಡೆಯ ದಿನ ದರ್ಶನ ಇಲ್ಲ | 25 ಲಕ್ಷ ಭಕ್ತರು ಆಗಮಿಸುವ ನಿರೀಕ್ಷೆ | 2 ಸಾವಿರಕ್ಕೂ ಹೆಚ್ಚು ಪೊಲೀಸರ ನಿಯೋಜನೆ

ಇಂದಿನಿಂದ ಹಾಸನಾಂಬೆ ದರ್ಶನ

ಹಾಸನ: ವರ್ಷಕ್ಕೊಮ್ಮೆಯಷ್ಟೇ ದರ್ಶನ ಭಾಗ್ಯ ಕರುಣಿಸಿರುವ ನಗರದ ಅಧಿದೇವತೆ ಹಾಸನಾಂಬೆಯ ದರ್ಶನೋತ್ಸವ ಇಂದಿನಿಂದ ಚಾಲನೆ ಪಡೆಯಲಿದೆ.

ಆಶ್ವೀಜ ಮಾಸದ ಮೊದಲ ಗುರುವಾರ ಮಧ್ಯಾಹ್ನ 12 ಗಂಟೆ ನಂತರ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ದೇವಿಯ ಗರ್ಭಗುಡಿ ಬಾಗಿಲು ತೆರೆಯಲಿದೆ. ಮೊದಲ ಮತ್ತು ಕಡೆಯ ದಿನ ದರ್ಶನ ಇರುವುದಿಲ್ಲ. ಅ.9 ರಿಂದ 23 ರ ವರೆಗೆ ಈ ಬಾರಿಯ ಹಾಸನಾಂಬೆ ಜಾತ್ರೋತ್ಸವ ಜರುಗಲಿದ್ದು, ಅ.10 ರಿಂದ 22 ರ ವರೆಗೆ ಒಟ್ಟು 13 ದಿನಗಳ ಕಾಲ ಭಕ್ತರು ಕಣ್ತುಂಬಿಕೊಳ್ಳಲು ತಾಯಿ ದರ್ಶನ ನೀಡಲಿದ್ದಾಳೆ. ಈ ಬಾರಿ ಸುಮಾರು 25 ಲಕ್ಷ ಭಕ್ತರು ಆಗಮಿಸುವ ನಿರೀಕ್ಷೆ ಇದೆ.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮಾತನಾಡಿ, ಪ್ರತಿವರ್ಷದಂತೆ ಈ ವರ್ಷವೂ ಸಡಗರ, ಸಂಭ್ರಮ, ಸಂತೋಷದಿಂದ ಉತ್ಸವ ನಡೆಸಲು ಜಿಲ್ಲಾಡಳಿತ ಅನೇಕ ತಯಾರಿ ಮಾಡಿಕೊಂಡಿದೆ ಎಂದು ವಿವರಿಸಿದರು.

1000,300 ಟಿಕೆಟ್ ವ್ಯವಸ್ಥೆ: ಎಂದಿನಂತೆ ಈ ವರ್ಷವೂ 1000,300 ಟಿಕೆಟ್ ವ್ಯವಸ್ಥೆ ಇದೆ. ಈ ಮಾದರಿಯ ಟಿಕೆಟ್ ಪಡೆದವರು ಸುಲಭ ಹಾಗೂ ಶೀಘ್ರ ದರ್ಶನ ಪಡೆಯಬಹುದು. ಇದಕ್ಕೆ ಬೆಳಗ್ಗೆ 10 ರಿಂದ ಮಧ್ಯಾಹ್ನ 12.30 ರ ವರೆಗೆ ಅವಕಾಶ ಕಲ್ಪಿಸಲಾಗಿದೆ. ಹಾಗೆಯೇ ಶಿಷ್ಟಾಚಾರ ದರ್ಶನ ಇರಲಿದೆ ಎಂದರು.

ನಾನಾ ಮೂಲಸೌಲಭ್ಯ: ಧರ್ಮದರ್ಶನದಲ್ಲಿ ದೇವಿಗೆ ನೈವೇದ್ಯ, ಮಹಾ ಮಂಗಳಾರತಿ ಇತ್ಯಾದಿ ಸಮಯ ಹೊರತು ಪಡಿಸಿ ದಿನಕ್ಕೆ 16 ರಿಂದ 20 ಗಂಟೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದ ಅವರು, ಈ ಬಾರಿ 220 ಸಂಚಾರಿ ಶೌಚಾಲಯ ಸ್ಥಾಪಿಸಲಾಗಿದ್ದು, ನಿರ್ವಹಣೆಗಾಗಿ ಸಿಬ್ಬಂದಿ ಹೆಚ್ಚಳ ಮಾಡಲಾಗಿದೆ. ಭಕ್ತರಿಗೆ ಕುಡಿಯುವ ನೀರು, ಮಜ್ಜಿಗೆ ನೀಡಲಾಗುವುದು. ತುರ್ತು ಸ್ಪಂದನೆಗಾಗಿ ಸಹಾಯವಾಣಿ ಇರಲಿದೆ. ಜತೆಗೆ ಆರೋಗ್ಯ, ಅಗ್ನಿಶಾಮಕ ಇರಲಿದೆ. ಪಾದರಕ್ಷೆಯನ್ನು ರೈಲ್ವೆ, ಬಸ್ ನಿಲ್ದಾಣಗಳಲ್ಲೇ ಮಾಡಿದ್ದೇವೆ. ದೇವಾಲಯಕ್ಕೆ ಬರುವವರು ವಸ್ತ್ರಸಂಹಿತೆ ಪಾಲಿಸಬೇಕು ಎಂದು ತಿಳಿಸಲಾಗಿದೆ. ಆದರೆ ಕಡ್ಡಾಯವಲ್ಲ ಎಂದರು.

ಹಾಸನಾಂಬೆ ಜಾತ್ರೆ ವಿಶೇಷತೆ

- ಅ.9 ರ ಸಂಜೆ ಹೇಮಾವತಿ ಪ್ರತಿಮೆ ಬಳಿ ಜಾನಪದ ಜಾತ್ರಾ ಮಹೋತ್ಸವ ಉದ್ಘಾಟನೆ
- ಸುಭಾಷ್ ಚೌಕದ ಬಳಿ ಜಾನಪದ ನೃತ್ಯೋತ್ಸವ
- ಸಿಲ್ವರ್ ಜ್ಯುಬಿಲಿ ಪಾರ್ಕ್‌ನಲ್ಲಿ ಫಲ ಪುಷ್ಪ ಪ್ರದರ್ಶನ
- ಸ.ವಿ.ಕಾಲೇಜು ಮೈದಾನದಲ್ಲಿ ವಸ್ತು ಪ್ರದರ್ಶನ
- ಪ್ರವಾಸೋದ್ಯಮ ಇಲಾಖೆಯಿಂದ ಟೂರ್ ಪ್ಯಾಕೇಜ್
- ಆಗಸದಿಂದ ಹಾಸನ ಹೆಲಿರೈಡ್ ವ್ಯವಸ್ಥೆ
- ಆನ್‌ಲೈನ್ ಟಿಕೆಟ್ ಖರೀದಿಗೂ ಈ ಸಲ ಅವಕಾಶ

80 ವರ್ಷ ಮೇಲ್ಪಟ್ಟವರಿಗೆ ಉಚಿತ ದರ್ಶನ

- 80 ವರ್ಷ ಮೇಲ್ಪಟ್ಟವರಿಗೆ ಉಚಿತ ದರ್ಶನ
- ವಿಶೇಷ ಚೇತನರಿಗೂ ಉಚಿತ ವ್ಯವಸ್ಥೆ ಅನ್ವಯ
- ವಾಹನ ದಟ್ಟಣೆ ಸುಧಾರಿಸಲು ಟ್ರಾಫಿಕ್ ರೂಟ್ ಮ್ಯಾಪ್
- ಸಿಸಿ ಕ್ಯಾಮೆರಾ ಅಳವಡಿಕೆ-ಕಂಟ್ರೋಲ್ ರೂಂಸ್ಥಾಪನೆ
- ಭದ್ರತೆಗೆ 2 ಸಾವಿರಕ್ಕೂ ಹೆಚ್ಚು ಪೊಲೀಸರ ನಿಯೋಜನೆ

ಗಣ್ಯರೊಂದಿಗೆ ನಾಲ್ವರಿಗೆ ಮಾತ್ರ ಅವಕಾಶ:

ಗಣ್ಯರನ್ನು ನಗರದ ಪ್ರವಾಸಿ ಮಂದಿರದಿಂದ ದೇವಾಲಯಕ್ಕೆ ಕರೆದುಕೊಂಡು ಹೋಗಿ ಬರಲು 12 ಶಿಷ್ಟಾಚಾರದ ವಾಹನ ಸಿದ್ಧಗೊಳಿಸಲಾಗಿದೆ. ಗಣ್ಯರು ತಮ್ಮೊಂದಿಗೆ ನಾಲ್ವರನ್ನಷ್ಟೇ ಕರೆ ತರಬೇಕು ಎಂದು ಹೇಳಿದರು. ಗಣ್ಯರು ಬಂದಾಗ ಸಾಮಾನ್ಯ ದರ್ಶನಕ್ಕೆ ಯಾವುದೇ ಅಡೆತಡೆ ಇರುವುದಿಲ್ಲ. ಗರ್ಭಗುಡಿಯಲ್ಲಿ ಗಣ್ಯರು ಪೂಜೆ, ನೈವೇದ್ಯ ಮಾಡಿಸಲು ಅವಕಾಶ ಇಲ್ಲ. ಇದೇ ಮೊದಲ ಬಾರಿಗೆ ಭಕ್ತರ ಜಂಗುಳಿ ನಿಯಂತ್ರಣಕ್ಕೆ ಎಐ ತಂತ್ರಜ್ಞಾನ ಬಳಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದರು.

ಗೋಲ್ಡ್ ಪಾಸ್‌ಗೆ ಸಮಯ

ಸಚಿವರು, ಶಾಸಕರ ಕಡೆಯವರು ಹಾಗೂ ಇತರೆ ಅತಿಮುಖ್ಯರಿಗೆ ಉಚಿತವಾಗಿ ನೀಡಲು ಇದೇ ಮೊದಲ ಬಾರಿಗೆ ಗೋಲ್ಡ್ ಪಾಸ್‌ಗೆ ವ್ಯವಸ್ಥೆ ಮಾಡಲಾಗಿದೆ. ಒಂದು ಗೋಲ್ಡ್ ಕಾರ್ಡ್‌ಗೆ ಒಬ್ಬರಿಗಷ್ಟೇ ಅವಕಾಶ. ಗೋಲ್ಡ್ ಪಾಸ್ ಪಡೆದವರು ಬೆ.7.30 ರಿಂದ 10 ಗಂಟೆಯೊಳಗೆ ಮಾತ್ರ ದರ್ಶನ ಪಡೆಯಬಹುದು. ನಂತರ ಬಂದವರಿಗೆ ದರ್ಶನ ಇರುವುದಿಲ್ಲ ಎಂದು ಡಿಸಿ ಸ್ಪಷ್ಟಪಡಿಸಿದರು.

ಹಾಸನಾಂಬೆ ದರ್ಶನ ಶಿಷ್ಟಾಚಾರ ವ್ಯವಸ್ಥೆಯಲ್ಲಿ ಬದಲಾವಣೆ: ರಾಮಲಿಂಗಾರೆಡ್ಡಿ

ಈ ಬಾರಿ ವಿಐಪಿ, ವಿವಿಐಪಿ ಪಾಸ್‌ಗಳ ರದ್ದು

ಹಾಸನ: ಹಾಸನಾಂಬೆ ದರ್ಶನೋತ್ಸವಕ್ಕೆ ಪ್ರತಿ ವರ್ಷ ಭಕ್ತರ ಸಂಖ್ಯೆ ಏರಿಕೆಯಾಗುತ್ತಿದೆ. ಕಳೆದ ಬಾರಿ 20 ಲಕ್ಷಕ್ಕೂ ಹೆಚ್ಚು ಮಂದಿ ದೇವಿಯ ದರ್ಶನ ಪಡೆದಿದ್ದಾರೆ. ಈ ಬಾರಿ 25 ಲಕ್ಷಕ್ಕೂ ಹೆಚ್ಚು ಮಂದಿ ಬರುವ ನಿರೀಕ್ಷೆ ಇದ್ದು, ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಜಿಲ್ಲಾಡಳಿತದಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಅ. 15ರಂದು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿ ಸಚಿವರು ದೇವಿಯ ದರ್ಶನಕ್ಕೆ ಬರಲಿದ್ದಾರೆ' ಎಂದರು.

ದೇವಿ ದರ್ಶನಕ್ಕೆ 80 ವರ್ಷಕ್ಕಿಂತ ಮೇಲಿನವರು ಹಾಗೂ ಅಂಗವಿಕಲರಿಗೆ ನೇರದರ್ಶನ ವ್ಯವಸ್ಥೆ ಮಾಡಲಾಗಿದೆ. ಗಂಟೆಗೆ 6 ಸಾವಿರ ಮಂದಿಯಂತೆ ಪ್ರತಿದಿನ ಒಂದೂವರೆ ಲಕ್ಷಕ್ಕೂ ಹೆಚ್ಚು ಭಕ್ತರು ದೇವಿಯ ದರ್ಶನ ಪಡೆಯಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಲಾಗಿದೆ. ಈ ಬಾರಿ ವಿಐಪಿ, ವಿವಿಐಪಿ ಪಾಸ್ ರದ್ದುಪಡಿಸಿದ್ದು, ಶಿಷ್ಟಾಚಾರ ದರ್ಶನ ವ್ಯವಸ್ಥೆಯಲ್ಲಿಯೂ ಬದಲಾವಣೆ ಮಾಡಲಾಗಿದೆ' ಎಂದರು.

ಸಾರಿಗೆ ಇಲಾಖೆಯಿಂದ ವಿವಿಧ ಜಿಲ್ಲೆ ಹಾಗೂ ರಾಜಧಾನಿಯಿಂದ ಸಾರಿಗೆ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಸುಮಾರು ದರ್ಶನೋತ್ಸವಕ್ಕೆ ಪ್ರತ್ಯೇಕವಾಗಿ 2,300ಕ್ಕೂ ಹೆಚ್ಚು ಬಸ್‌ಗಳನ್ನು ನಿಯೋಜಿಸಲಾಗಿದೆ ಎಂದರು.

ಹಾಸನದ ಹಾಸನಾಂಬೆ ದೇಗುಲಕ್ಕೆ ಭೇಟಿ ನೀಡಿದ ಸಚಿವ ರಾಮಲಿಂಗಾರೆಡ್ಡಿ ಅವರು ಸಿದ್ಧತೆಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ನಾನಾ ಪ್ರದರ್ಶನಗಳ ಆಯೋಜನೆ

ಹಾಸನಾಂಬ ಹಾಗೂ ಸಿದ್ದೇಶ್ವರ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಇದೇ ಮೊದಲ ಬಾರಿಗೆ ಜಾನಪದ ಜಾತ್ರಾ ಮಹೋತ್ಸವ, ವಸ್ತು ಪ್ರದರ್ಶನ, ಶ್ವಾನ ಪ್ರದರ್ಶನ, ಆಹಾರ ಮೇಳ ಏರ್ಪಡಿಸಲಾಗಿದೆ. ಇದರೊಂದಿಗೆ ಫಲಪುಷ್ಪ ಪ್ರದರ್ಶನ, ಪ್ರವಾಸೋದ್ಯಮ ಇಲಾಖೆಯಿಂದ ಟೂರ್ ಪ್ಯಾಕೇಜ್, ಹೆಲಿ ಟೂರಿಸಂ ಕೂಡ ಆಯೋಜನೆ ಮಾಡಲಾಗಿದೆ ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಮಾಹಿತಿ ನೀಡಿದರು.

ಮಳೆಯಿಂದ ಹಾನಿಗೊಳಗಾದ ಪ್ರದೇಶಕ್ಕೆ ಜೆಡಿಎಸ್ ರಾಜ್ಯ ನಿಯೋಗ ಭೇಟಿ

ಕಲಬುರಗಿ ಹಸಿರು ಬರಗಾಲ ಜಿಲ್ಲೆ ಘೋಷಣೆಗೆ ಆಗ್ರಹ

ಕಲಬುರಗಿ: ಕಲ್ಯಾಣ ಕರ್ನಾಟಕದ ಕಲಬುರಗಿ ಜಿಲ್ಲೆ ಕಳೆದ ಕೆಲವು ವಾರಗಳಿಂದ ಅತಿವೃಷ್ಟಿ ಮತ್ತು ನೆರೆ ಹಾವಳಿಯಿಂದ ಭಾರೀ ಹಾನಿಗೆ ಒಳಗಾಗಿರುವ ಹಿನ್ನೆಲೆ ಜನತಾದಳ (ಜಾತ್ಯತೀತ) ಪಕ್ಷದ ಹಿರಿಯ ನಾಯಕರ ನಿಯೋಗವು ಬುಧವಾರ ಜಿಲ್ಲೆಯ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿತು.

ಜಿಲ್ಲೆಯಾದ್ಯಂತ ಬೆಳೆ ಹಾನಿ, ರೈತರ ಆತ್ಮಹತ್ಯೆ, ನೆರೆ ಹಾವಳಿ ಮತ್ತು ಸರಕಾರದ ನಿರ್ಲಕ್ಷ್ಯ ವಿರುದ್ಧ ಜೆಡಿಎಸ್ ನಿಯೋಗವು ತೀವ್ರ ಅಸಮಾಧಾನ ವ್ಯಕ್ತಪಡಿಸಿ, ತುರ್ತು ಪರಿಹಾರ ಘೋಷಣೆಗೆ ಆಗ್ರಹಿಸಿತು. ಜತೆಗೆ ಕಲಬುರಗಿ ಜಿಲ್ಲೆಯನ್ನು ಹಸಿಬರ ಜಿಲ್ಲೆ' ಎಂದು ಘೋಷಿಸುವುದು ಅಗತ್ಯ.

ರೈತರಿಗೆ ನ್ಯಾಯ ದೊರೆಯದಿದ್ದರೆ ರಾಜ್ಯವ್ಯಾಪಿ ಹೋರಾಟ ಆರಂಭಿಸಲಾಗುವುದು ಎಂದು ಎಚ್ಚರಿಸಿದರು.

ನಿಯೋಗವು ಮೊದಲು ಫರಹತಾಬಾದ್ ಸಮೀಪದ ಬಸವಪಟ್ಟಣ ಗ್ರಾಮದಲ್ಲಿ ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಮರೆಪ್ಪ ಬರ್ಮಾ ಅವರ ಕುಟುಂಬಕ್ಕೆ ಭೇಟಿ ನೀಡಿ ಸಾಂತ್ವನ ಹೇಳಿತು.

ಬಳಿಕ ಜೇವರ್ಗಿ ತಾಲೂಕಿನ ಕೂಡಿ ದರ್ಗಾ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವ್ಯಾಪಕ ಬೆಳೆ ಹಾನಿ ಪ್ರದೇಶಗಳ ಪರಿಶೀಲನೆ ನಡೆಸಿತು.

ಜೆಡಿಎಸ್ ನಿಯೋಗದಲ್ಲಿ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಸಿ.ಬಿ., ಮಾಜಿ ಸಚಿವರಾದ ವೆಂಕಟರಾವ್ ನಾಡಗೌಡ, ಬಂಡೆಪ್ಪ ಖಾಶೆಂಪುರ, ಹನುಮಂತಪ್ಪ ಆಲ್ಕೋಡ್, ಶಾಸಕರಾದ ಶರಣಗೌಡ ಕಂದಕೂರು, ಕರೆಮ್ಮ ಜಿ. ನಾಯಕ್, ಎಚ್.ಟಿ. ಮಂಜು, ಗೋವಿಂದರಾಜು, ಮಾಜಿ ಶಾಸಕ ದೊಡ್ಡಪ್ಪಗೌಡ ಎಸ್. ಪಾಟೀಲ್ ನರಿಬೋಳ, ಜಿಲ್ಲಾ ಅಧ್ಯಕ್ಷ ಬಾಲರಾಜ ಅಶೋಕ್ ಗುತ್ತೇದಾರ, ಶಿವಕುಮಾರ್‌ನಾಟಿಕಾರ್, ಮಹೇಶ್ವರಿ ವಾಲಿ ಸೇರಿದಂತೆ ಅನೇಕರು ಭಾಗಿಯಾಗಿದ್ದರು.

ಕಲಬುರಗಿಯಲ್ಲಿ ನೆರೆ ಹಾನಿ ಪರಿಶೀಲಿಸಿದ ರಾಜ್ಯ ಜೆಡಿಎಸ್ ನಿಯೋಗ.

1000 ಕೋಟಿ ಪ್ಯಾಕೇಜ್ ಘೋಷಣೆಗೆ ಒತ್ತಾಯ

ಜುಲೈದಿಂದ ಸೆಪ್ಟೆಂಬರ್ ವರೆಗೆ ಸುರಿದ ಭಾರಿ ಮಳೆಯಿಂದಾಗಿ ಜಿಲ್ಲೆಯ 2.97 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಸಂಭವಿಸಿದ್ದು, ಈಗಾಗಲೇ 11 ರೈತರು ಆತ್ಮಹತ್ಯೆಗೆ ಶರಣಾಗಿರುವ ಗಂಭೀರ ಸ್ಥಿತಿ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಜೆಡಿಎಸ್ ನಿಯೋಗವು ಪ್ರತಿ ಎಕರೆಗೆ 25,000 ಪರಿಹಾರ, ಸಾಲ ಮನ್ನಾ, ಉಚಿತ ಬೀಜ ವಿತರಣೆ, ಆತ್ಮಹತ್ಯೆ ಮಾಡಿದ ರೈತರ ಕುಟುಂಬಗಳಿಗೆ ತಲಾ 25 ಲಕ್ಷ ರು.ಪರಿಹಾರ, ಶಾಶ್ವತ ನೆರೆ ನಿರ್ವಹಣಾ ಯೋಜನೆ ಮತ್ತು 1000 ಕೋಟಿ ಪ್ಯಾಕೇಜ್ ಘೋಷಣೆಗೆ ಸರಕಾರವನ್ನು ಜೆಡಿಎಸ್ ನಿಯೋಗ ಒತ್ತಾಯಿಸಿದೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.
ಸಂ:ಕಾನಿಇಂ:ಲೋಇ:ವಿಕೊ:ಟೆಂ:2025–26: 2410 ದಿನಾಂಕ: 08–10–2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ಲೆಕ್ಕ ಶೀರ್ಷಿಕೆ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಸರ್ಕಾರದ ವಿವೇಚನಾ ನಿಧಿ (ಜಿಡಿಕ್ಯೂ)/2025–26 ಮತ್ತು 5054–ರಾಜ್ಯ ಹೆದ್ದಾರಿ ಸುಧಾರಣೆ / 2024–25 ಅಡಿಗಳಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕೂಮೆಂಟ್ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು. ಒಟ್ಟು 06 ಕಾಮಗಾರಿಗಳಿಗೆ (ವರ್ಕ ಇಂಡೆಂಟ್ ಸಂಖ್ಯೆ: **27834, 27817, 23534, 27821, 23555 & 22468 / Call-3**) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: **15–10–2025** ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **16–10–2025** ಸಮಯ 16.30 ಗಂಟೆ ಆರ್ಥಿಕ ಬಿಡ್ ತೆರೆಯುವ ದಿನಾಂಕ: **23–10–2025** ಸಮಯ 11.00 ಗಂಟೆ, ಕನಿಷ್ಟ ಅಂದಾಜು ಮೊತ್ತ ರೂ. 495.00 ಲಕ್ಷಗಳು ಹಾಗೂ ಗರಿಷ್ಟ ಅಂದಾಜು ಮೊತ್ತ ರೂ. 500.00 ಲಕ್ಷಗಳು ಇರುತ್ತದೆ. ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು/ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು ಮೀಸಲಾತಿಗಳಿಗಾಗಿ ಹಾಗೂ ಇತ್ಯಾದಿಗಳಿಗಾಗಿ ಯಾವುದೇ ರೀತಿಯ ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು,
ಲೋ.ಇ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/385/ಕೆಎಸ್‌ಎಂಸಿಎ/2025–26

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ
ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್,
ದೊಡ್ಡಬಳ್ಳಾಪುರ–561203. ದೂರವಾಣಿ: 080–29562046
ಸಂಖ್ಯೆ: DPA/TP/CLU/40/2025-26 ದಿನಾಂಕ: 08.10.2025
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **'ವ್ಯವಸಾಯ'** ವಲಯದಿಂದ **'ವಾಣಿಜ್ಯ'** ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **15 ದಿನಗಳ ಅವಧಿಯೊಳಗೆ** ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ (ಎ–ಗು)	ಬಿಐಎಪಿಎ ಯೋಜನಾ ಪ್ರಾಧಿಕಾರದ ಮಹಾಯೋಜನೆಯಲ್ಲಿನ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಎನ್.ಆರ್. ಸೊಣ್ಣೇಗೌಡ ಬಿನ್ ಲೇಟ್॥ ಹೆಚ್. ರಾಮಣ್ಣ	ಯಲಹಂಕ	ಹೆಸರುಘಟ್ಟ 2	ಹನಿಯೂರು	98/1	00–38	ವ್ಯವಸಾಯ	ವಾಣಿಜ್ಯ
2		ಯಲಹಂಕ	ಹೆಸರುಘಟ್ಟ 2	ಹನಿಯೂರು	98/2	00–38	ವ್ಯವಸಾಯ	ವಾಣಿಜ್ಯ
3		ಯಲಹಂಕ	ಹೆಸರುಘಟ್ಟ 2	ಹನಿಯೂರು	98/3	00–37	ವ್ಯವಸಾಯ	ವಾಣಿಜ್ಯ
4		ಯಲಹಂಕ	ಹೆಸರುಘಟ್ಟ 2	ಹನಿಯೂರು	98/4	00–39	ವ್ಯವಸಾಯ	ವಾಣಿಜ್ಯ

ಷರಾ:– ಪ್ರಶ್ನಿತ ಜಮೀನಿನಲ್ಲಿ ವಾಣಿಜ್ಯ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಹಾಗೂ ಸಾರ್ವಜನಿಕರು ವಾಣಿಜ್ಯ ಚಟುವಟಿಕೆಗಳನ್ನು ನಡೆಸಲು ಸಹಕಾರಿಯಾಗಲಿದೆ ಎಂಬುದಾಗಿ ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ'** ವಲಯದಿಂದ **'ವಾಣಿಜ್ಯ'** ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.
ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಧರ್ಮಸ್ಥಳ: ಅಂತಿಮ ವರದಿಗೆ ಸಿದ್ಧತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಶವ ಹೂತಿಟ್ಟ ಪ್ರಕರಣದ ತನಿಖೆ ಕ್ಲೈಮ್ಯಾಕ್ಸ್ ಹಂತಕ್ಕೆ ತಲುಪಿದ್ದು, ಅಂತಿಮ ವರದಿ ಸಲ್ಲಿಸಲು ಬೇಕಾದ ತಯಾರಿಯನ್ನು ಎಸ್‌ಐಟಿ ಅಧಿಕಾರಿಗಳು ಮಾಡುತ್ತಿದ್ದಾರೆ.

ಬೆಳ್ತಂಗಡಿ ಎಸ್‌ಐಟಿ ಕಚೇರಿಗೆ ಎಸ್ ಐಟಿ ಮುಖ್ಯಸ್ಥ ಪ್ರಣವ್ ಮೊಹಾಂತಿ ಬುಧವಾರ ದಿಢೀರ್ ಭೇಟಿ ನೀಡಿದ್ದಾರೆ. ಎಸ್‌ಐಟಿ ಪೊಲೀಸ್ ಠಾಣೆಗೆ ಆಗಮಿಸಿದ ಮೊಹಾಂತಿ, ತನಿಖಾಧಿಕಾರಿ ಎಸ್ಪಿ ಜಿತೇಂದ್ರ ದಯಾಮಾ ಸೇರಿದಂತೆ ಇತರೆ ಅಧಿಕಾರಿಗಳ ಜತೆ ಮಹತ್ವದ ಸಭೆ ನಡೆಸಿದ್ದಾರೆ. ಈ ಸಭೆಯಲ್ಲಿ ಪ್ರಕರಣದ ಇಂದಿನವರೆಗಿನ ಪ್ರಗತಿ ವರದಿ ಬಗ್ಗೆ ಪರಿಶೀಲನೆ ನಡೆದಿದೆ. ಮುಂದಿನ ಕಾರ್ಯಾಚರಣೆಗಳ ಬಗ್ಗೆ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ.

ಅಧಿಕಾರಿಗಳು ಈಗಾಗಲೇ ಒಂದು ಪ್ರಾಥಮಿಕ ವರದಿ ಯನ್ನು ಸಿದ್ಧಪಡಿ ಸಿದ್ದಾರೆ. ಈ ವರದಿಯನ್ನು ಮೊಹಾಂತಿ ಪರಿಶೀಲನೆ ಮಾಡಿದ್ದಾರೆ. ಎಸ್ ಐಟಿ ಮುಖ್ಯಸ್ಥ ಮೊಹಾಂತಿ ಎರಡು ದಿನಗಳ ಕಾಲ ಮಂಗಳೂರಿನಲ್ಲೇ ಇರುವ ಸಾಧ್ಯತೆ ಯಿದ್ದು, ತನಿಖೆಯನ್ನು ಸ್ವತಃ ಮೇಲ್ವಿ ಚಾರಣೆ ಮಾಡಲಿದ್ದಾರೆ. ಸದ್ಯ ಎಲ್ಲರ ಕಣ್ಣು ಎಸ್‌ಐಟಿ ಅಧಿಕಾರಿಗಳು ಸಿದ್ಧಪಡಿ ಸುತ್ತಿರುವ ವರದಿಯ ಮೇಲಿದೆ.

ಧರ್ಮಸ್ಥಳ ಪ್ರಕರಣದಲ್ಲಿ ಶೀಘ್ರವೇ ತನಿಖೆ ಪೂರ್ಣಗೊಳಿಸಲು ಎಸ್‌ಐಟಿಗೆ ಗೃಹ ಸಚಿವ ಜಿ.ಪರಮೇಶ್ವರ್ ಸೂಚನೆ ನೀಡಿದ್ದರು. ಬಂದವರೆಲ್ಲ ದೂರು ಕೊಡೋದು, ಅರ್ಜಿ ಕೊಡೋದು ಆಗ್ತಿದೆ. ಅಲ್ಲದೇ, ಹೇಳಿಕೆಗಳನ್ನು ಕೊಡಲಾ ಗುತ್ತಿದೆ. ಇದಕ್ಕೆಲ್ಲ ಅಂತ್ಯ ಹಾಡಲು ಹೇಳಿದ್ದೇವೆ ಎಂದು ತಿಳಿಸಿದ್ದರು.

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ, ಶಿರಾಳಕೊಪ್ಪ–577428
ಹಿರೇಕೆರೂರು ರಸ್ತೆ, ಸರ್ಕಾರಿ ಪಬ್ಲಿಕ್ ಸ್ಕೂಲ್ ಎದುರು ಭಾಗ, ಶಿರಾಳಕೊಪ್ಪ
ಶಿಕಾರಿಪುರ (ತಾ) ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ
web: www.shiralakoppa.mrc.gov.in
e-mail:ka.shirlakoppa.tmc@gmail.com
ಸಂಖ್ಯೆ:ಶಿಪು/ಪ.ಅ/ಸಿ.ಆರ್/10/2025–26 Date: 08.10.2025
"ಟೆಂಡರ್ ಪ್ರಕಟಣೆ"
(ಕರ್ನಾಟಕ ಸರ್ಕಾರದ ಸಾರ್ವಜನಿಕ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಶಿರಾಳಕೊಪ್ಪ ಪುರಸಭೆಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆಗೆ ಅವಶ್ಯಕವಿರುವ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 200ರ ನಿಯಮದಂತೆ ಕರ್ನಾಟಕ ಸರ್ಕಾರದ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರರು/ಏಜನ್ಸಿಯವರು ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದು ಭಾಗವಹಿಸಬಹುದಾಗಿದೆ.
Sl.No. 1. Work Name: Supply of manpower for Solid Waste waste Management service to Town municipal council shiralakoppa on out source basis **Indent number:** DMA/2025-26/EL/SE6306 **Amount (in Lakh)** : 56.50
*) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ: 23.10.2025 ಸಮಯ: ಸಂಜೆ:5.00 ಗಂಟೆ ವರೆಗೆ. *) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 23.10.2025 ಸಮಯ: ಸಂಜೆ:5.00 ಗಂಟೆವರೆಗೆ. *)ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 24.10.2025 ಸಮಯ: ಸಂಜೆ:5.05 ಗಂಟೆವರೆಗೆ.*) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 27.10.2025 ಸಮಯ: ಸಂಜೆ:5.00 ಗಂಟೆಗೆ.
ಸಹಿ/– ಮುಖ್ಯಾಧಿಕಾರಿ ಪುರಸಭೆ, ಶಿರಾಳಕೊಪ್ಪ
ವಾ.ಸಾ.ಸಂ.ಇ/ಕೆಸ್ ಎಂಸಿಎ/ಶಿ/25–26/31/10/1040

ಬಸ್ ಪಲ್ಟಿ: 30ಕ್ಕೂ ಹೆಚ್ಚು ಮಂದಿಗೆ ಗಾಯ

ಕೋಲಾರ: ಮದುವೆ ಆರತಕ್ಷತೆ ಮುಗಿಸಿಕೊಂಡು ವಾಪಸ್ಸಾಗುತ್ತಿದ್ದ ಬಸ್ ನಿಯಂತ್ರಣ ತಪ್ಪಿ ಕಾಲುವೆಗೆ ಬಿದ್ದ ಪರಿಣಾಮ ಸುಮಾರು 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ಕೋಲಾರ ತಾಲೂಕು ಸುಗಟೂರು ಗ್ರಾಮದ ಬಳಿ ನಡೆದಿದೆ.

ಕೋಲಾರದ ವಧು ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲೂಕಿನ ವರನ ಮದುವೆ ಆರತಕ್ಷತೆ ಕೋಲಾರ ಹೊರವಲಯದ ರತ್ನ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿತ್ತು. ಆರತಕ್ಷತೆಗೆ ಮೂರು ಖಾಸಗಿ ಬಸ್‌ಗಳಲ್ಲಿ ಬಂದಿದ್ದ ಜನರು ಆರತಕ್ಷತೆ ಮುಗಿಸಿಕೊಂಡು ಸಂಭ್ರಮದಿಂದ ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ತಾಲೂಕು ದಿಬ್ಬೂರಹಳ್ಳಿ ಗ್ರಾಮಕ್ಕೆ ವಾಪಸ್ಸಾಗುತ್ತಿದ್ದರು. ಈ ವೇಳೆ ಅವಘಡ ಸಂಭವಿಸಿದೆ. ಬಸ್‌ನಲ್ಲಿ ಸುಮಾರು 55 ಜನರಿದ್ದು, ಆ ಪೈಕಿ 30 ಜನರಿಗೆ ಗಾಯಗಳಾಗಿವೆ. ಕೂಡಲೇ ಗಾಯಳುಗಳನ್ನು ಕೋಲಾರದ ಜಿಲ್ಲಾಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಕೊಡಿಸಿದ್ದಾರೆ. ಸ್ಥಳಕ್ಕೆ ಕೋಲಾರ ಗ್ರಾಮಾಂತರ ಠಾಣಾ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಲೋಕಾಯುಕ್ತ ಬಲೆಗೆ ಬಿದ್ದ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು

ಸೇಡಂ: ಸಹಕಾರಿ ಸಂಘಗಳ ನೋಂದಣಿಗಾಗಿ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಸೇಡಂನ ಸಹಕಾರಿ ಸಂಘಗಳ ಸಹಾಯಕ ನಿಬಂಧಕರ ಕಚೇರಿಯ ಇಬ್ಬರು ಸರಕಾರಿ ಅಧಿಕಾರಿಗಳು ಬುಧವಾರ ಲೋಕಾಯುಕ್ತ ಪೊಲೀಸರ ಬಲೆಗೆ ರೆಡ್ ಹ್ಯಾಂಡ್ ಆಗಿ ಸಿಕ್ಕಿ ಬಿದ್ದಿದ್ದಾರೆ.

ಕಲಬುರಗಿ ಲೋಕಾಯುಕ್ತ ಎಸ್.ಪಿ. ಸಿದ್ದರಾಜು ಎಸ್.ಪಿ. ಅವರ ಖಚಿತ ಮಾರ್ಗದರ್ಶನದಲ್ಲಿ ಈ ದಿಢೀರ್ ದಾಳಿ ನಡೆದಿದ್ದು, ಶ್ರೀ ಬೀರಲಿಂಗೇಶ್ವರ ಹೊಸ ಕೋಳಿ ಸಾಕಾಣಿಕೆದಾರ ಹಾಗೂ ಮಾರಾಟಗಾರರ ಸಹಕಾರಿ ಸಂಘವನ್ನು ನೋಂದಾಯಿಸಲು ಮುಂದಾಗಿದ್ದ ದೂರುದಾರ ಬೀರಪ್ಪ ಅವರಿಂದ ಆರೋಪಿಗಳು ಒಟ್ಟು 10,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಹಣ ನೀಡುವಂತೆ ಅಧಿಕಾರಿಗಳು ಸತತವಾಗಿ ಒತ್ತಾಯಿಸುತ್ತಿದ್ದ ಹಿನ್ನೆಲೆಯಲ್ಲಿ ಬೀರಪ್ಪ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ದೂರಿನನ್ವಯ ಬುಧವಾರ ಕಚೇರಿಯಲ್ಲೇ 5 ಸಾವಿರ ಲಂಚದ ಹಣ ಪಡೆಯುವಾಗ ಸಹಾಯಕ ನಿಬಂಧಕ ಮಲ್ಲಿಕಾರ್ಜುನ ಮತ್ತು ಕಂಪ್ಯೂಟರ್ ಆಪರೇಟರ್ ಸಂಗೀತಾ ಅವರನ್ನು ಲೋಕಾಯುಕ್ತ ಅಧಿಕಾರಿಗಳಿಗೆ ಸಿಕ್ಕಿ ಬಿದ್ದಿದ್ದಾರೆ. ಇಬ್ಬರನ್ನು ವಶಕ್ಕೆ ಪಡೆಲಾಗಿದ್ದು, ತನಿಖೆ ನಡೆಯುತ್ತಿದೆ. ಡಿವೈಎಸ್‌ಪಿ ಗೀತಾ ಬೆನಾಳ್ ಮತ್ತು ತನಿಖಾಧಿಕಾರಿ, ಪೊಲೀಸ್ ಇನ್‌ಸ್ಪೆಕ್ಟರ್ ಅರುಣ್ ಕುಮಾರ್, ಸಿಬ್ಬಂದಿ ಮಲ್ಲಿನಾಥ್ ನೇತೃತ್ವದ ತಂಡ ನಿರ್ವಹಿಸಿದೆ. ಬಂಧಿತರ ವಿರುದ್ಧ ಲಂಚ ಪ್ರತಿಬಂಧಕ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ನಟ್ಟು ಬೋಲ್ಟ್ ಟೈಟ್ ಜಟಾಪಟಿ

← ಮೊದಲಪುಟದಿಂದ

ಜಾಲಿವುಡ್ ವಿರುದ್ಧ ಬಿಗ್‌ಬಾಸ್ ತಂಡ ಗರಂ:

ಮಾಲಿನ್ಯ ನಿಯಂತ್ರಣ ಮಂಡಳಿ ನೋಟಿಸ್ ಹಾಗೂ ಇತರ ವಿಚಾರಗಳನ್ನು ಗೌಪ್ಯವಾಗಿಟ್ಟಿರುವ ಜಾಲಿವುಡ್ ಆಡಳಿತ ಮಂಡಳಿ, ಎಲ್ಲ ಅನುಮತಿ ಇದೆ ಅಂತ ಸುಳ್ಳು ಹೇಳಿತ್ತು. ಇದರಿಂದ ಜಾಲಿವುಡ್ ತಂಡದ ವಿರುದ್ಧ ಬಿಗ್ ಬಾಸ್ ಆಡಳಿತ ಮಂಡಳಿ ಹರಿಹಾಯ್ದಿದೆ. ಮಂಗಳವಾರ ಜಾಲಿವುಡ್‌ಗೆ ಪೊಲೀಸರು ಬರುವವರೆಗೂ ಗೌಪ್ಯತೆ ಕಾಪಾಡಿದ್ದ ಜಾಲಿವುಡ್ ಮ್ಯಾನೇಜ್‌ಮೆಂಟ್ ಎಡವಟ್ಟಿನಿಂದ 2 ದಿನ ಬಿಗ್ ಬಾಸ್ ಚಿತ್ರೀಕರಣ ಸ್ಥಗಿತವಾಗಿದೆ.

ನಮಗೆ ಯಾವುದೇ ಅರ್ಜಿ ಬಂದಿಲ್ಲ:

ನಾವು ಬಿಗ್ ಬಾಸ್ ವಿರೋಧಿ ಅಲ್ಲ. ಅಲ್ಲಿ ಜಾಲಿವುಡ್ ವೇಲ್ಸ್ ಹೆಸರಲ್ಲಿ ಸ್ಟುಡಿಯೋ ನಡೀತಿದೆ. ಅಲ್ಲಿ ಬಿಗ್ ಬಾಸ್ ನಡೆಯುವ ವಿಚಾರವೇ ನಮಗೆ ಗೊತ್ತಿರಲಿಲ್ಲ. ಸೆಪ್ಟೆಂಬರ್ 16ಕ್ಕೆ ನಿರ್ಣಯ ಮಾಡಿ ಬಿಗ್ ಬಾಸ್ ಮುಚ್ಚಲು ಆದೇಶ ಕೊಡಲಾಗಿದೆ. ಅಕ್ಟೋಬರ್ 6 ರಂದು ಜಾಲಿವುಡ್ ಅವರಿಗೆ ಆದೇಶ ನೀಡಲಾಗಿದೆ. ಜಾಲಿವುಡ್‌ಗೆ ನಾವು ಪದೇ ಪದೆ ನೋಟಿಸ್ ಕೊಟ್ಟಿದ್ದೇವೆ. ನೋಟಿಸ್ ಕೊಟ್ಟಾಗ ಅವರು ಸ್ಪಂದಿಸಿಲ್ಲ. 10 ದಿನ ಕಾಲಾವಕಾಶ ವಿಚಾರ ಬಗ್ಗೆ ನಾವು ತೀರ್ಮಾನ ಮಾಡಿಲ್ಲ. ನಮ್ಮ ಹತ್ತಿರ ಯಾವುದೇ ಅರ್ಜಿ ಬಂದಿಲ್ಲ. ಜಿಲ್ಲಾಧಿಕಾರಿಗಳಿಗೆ ಈ ವಿಚಾರದಲ್ಲಿ ನಿರ್ಣಯ ಕೈಗೊಳ್ಳಲು ಅವಕಾಶ ಇಲ್ಲ ಎಂದು ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ನರೇಂದ್ರ ಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಬಾಯ್ಲರ್ ಸ್ಫೋಟ: ಬಾಲಕಿ ಸಾವು

ದಾವಣಗೆರೆ: ಮನೆಯಲ್ಲಿ ಬಾಯ್ಲರ್ ಸ್ಫೋಟಗೊಂಡು 11 ವರ್ಷದ ಬಾಲಕಿ ಸಾವನ್ನಪ್ಪಿದ್ದು, ಮೂವರು ಗಂಭೀರ ಗಾಯಗೊಂಡಿರುವ ಘಟನೆ

ಹೊನ್ನಾಳಿ ಪಟ್ಟಣದ ದುರ್ಗಿಗುಡಿ ಉತ್ತರ ಭಾಗದಲ್ಲಿ ನಡೆದಿದೆ. ಸ್ವೀಕೃತಿ (11) ಮೃತ ಬಾಲಕಿ, ತೀರ್ಥಿಬಾಯಿ, ಹೂವಾ ನಾಯ್ಕ್, ಸುನೀತಾ ಬಾಯಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಮನೆಯಲ್ಲಿ ಬೆಳಗ್ಗೆ ಬಾಯ್ಲರ್ ಆನ್ ಮಾಡಿದಾಗ ಸ್ಫೋಟಗೊಂಡಿದೆ. ಬಾಯ್ಲರ್ ಪಕ್ಕದಲ್ಲೇ ಇದ್ದ ಬಾಲಕಿ ಸ್ವೀಕೃತಿ ಸ್ಥಳದಲ್ಲೇ ಸಾವನ್ನಪ್ಪಿದ್ದಾಳೆ. ಗಂಭೀರವಾಗಿ ಸುಟ್ಟಗಾಯಗಳಾಗಿರುವ ಮೂವರನ್ನು ಹೆಚ್ಚಿನ ಚಿಕಿತ್ಸೆಗೆ ಮಣಿಪಾಲ ಆಸ್ಪತ್ರೆಗೆ ರವಾನಿಸಲಾಗಿದೆ. ಇದೀಗ ಮೂವರು ಗಾಯಾಳುಗಳು ಆಸ್ಪತ್ರೆಯಲ್ಲಿ ಸಾವು ಬದುಕಿನ ಮಧ್ಯೆ ಹೋರಾಟ ನಡೆಸುತ್ತಿದ್ದಾರೆ. ಘಟನಾ ಸ್ಥಳಕ್ಕೆ ಅಗ್ನಿಶಾಮಕ ಸಿಬ್ಬಂದಿ ಭೇಟಿ ನೀಡಿದ್ದಾರೆ. ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಗ್ರಹದ ಮೇಲೆ ಕಾಲಿಟ್ಟ ಯುವತಿಯರು

ಚಿಕ್ಕಬಳ್ಳಾಪುರ: ತಾಲೂಕಿನ ಶ್ರೀನಿವಾಸಸಾಗರ ಜಲಾಶಯದ ಬಳಿಯ ಗಂಗಮ್ಮನ ವಿಗ್ರಹದ ಮೇಲೆ ಯುವತಿಯರು ಕಾಲಿಟ್ಟಿರುವ ವಿಡಿಯೊ

ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ಶ್ರೀನಿವಾಸ ಸಾಗರ ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣ. ಜಲಾಶಯ ತುಂಬಿ ಹರಿಯುತ್ತಿದೆ. ನಿತ್ಯ ದೊಡ್ಡ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಜಲಾಶಯದ ತಡೆಗೋಡೆ ದಾಟಿ ನೀರು ಧುಮ್ಮಿಕ್ಕುತ್ತದೆ. ಈ ಪ್ರದೇಶದಲ್ಲಿ ಪ್ರವಾಸಿಗರು ನೀರಿನಲ್ಲಿ ಮೀಯ್ಯುವರು. ಜಲಾಶಯದ ಬಳಿ ಈ ಸ್ಥಳ ಪ್ರವಾಸಿಗರ ನೆಚ್ಚಿನ ತಾಣ. ತಡೆಗೋಟೆ ದಾಟಿ ನೀರು ಬೀಳುವ ಸ್ಥಳದ ನಡುವೆ ಗಂಗಮ್ಮನ ವಿಗ್ರಹ ಸಹ ಇರಿಸಲಾಗಿದೆ.

ಮಾನಸಿಕ ಕಿರುಕುಳ: ಯುವಕ ನಾಪತ್ತೆ

ಭಟ್ಕಳ: ಕುಮಟಾ ಪುರಸಭೆ ಅಧಿಕಾರಿಯಿಂದ ಮಾನಸಿಕ ಕಿರುಕುಳಕ್ಕೊಳಗಾದ ಯುವಕನೋರ್ವ ಕಾಣೆಯಾಗಿರುವ ಕುರಿತು ಭಟ್ಕಳ ನಗರ ಠಾಣೆ

ಯಲ್ಲಿ ದೂರು ದಾಖಲಾಗಿದೆ. ಕೆಲಸದ ವೇಳೆ ಮಾನಸಿಕ ಕಿರುಕುಳ ಅನುಭವಿಸಿದ ನಗರದ ಕೋಟೇಶ್ವರ ಹರಿಜನ ಕೇರಿಯ ವೆಂಕಟೇಶ್ ರಮೇಶ್ ಹರಿಜನ (25) ಕಾಣೆಯಾದವರೆನ್ನಲಾಗಿದೆ. ಈತ ಕುಮಟಾ ಪುರಸಭೆಯಲ್ಲಿ ಕೆಲಸ ಮಾಡುತ್ತಿದ್ದು ಅಲ್ಲಿ ಅಧಿಕಾರಿಗಳಿಂದ ಮಾನಸಿಕ ಕಿರುಕುಳ ಅನುಭವಿಸಲು ಸಾಧ್ಯವಿಲ್ಲದೇ ನಾನು ಮನೆಯಿಂದ ಹೋಗುತ್ತಿದ್ದೇನೆ ಎಂದು ಬರೆದಿಟ್ಟು ನಾಪತ್ತೆಯಾಗಿದ್ದಾನೆ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಯುವಕನ ಶೋಧ ಕಾರ್ಯ ಮುಂದುವರಿದಿದೆ.

ಬೆಲೆ ಕುಸಿತ: ರೈತನಿಂದ ಈರುಳ್ಳಿ ಫಸಲು ನಾಶ

ಬಾಗಲಕೋಟೆ: ಮಾರುಕಟ್ಟೆಯಲ್ಲಿ ಬೆಲೆ ಕುಸಿತಗೊಂಡಿದ್ದಕ್ಕೆ ರೈತರೊಬ್ಬರು ಕೈಗೆ ಬಂದಿದ್ದ ಈರುಳ್ಳಿ ಫಸಲನ್ನ ಮಣ್ಣಲ್ಲೇ ಮುಚ್ಚಿದ್ದಾರೆ. ಬೀಳಗಿ ತಾಲೂಕಿನ ಮನ್ನಿಕೇರಿ ಗ್ರಾಮದ ಗುರುಲಿಂಗಪ್ಪ ಗಡ್ಡಿ ನಾಲ್ಕು ಎಕರೆಯಲ್ಲಿ ಈರುಳ್ಳಿ ಬೆಳೆದಿದ್ದರು. ಈರುಳಿ ಉತ್ತಮ ಫಸಲು ಬಂದಿದ್ದರೂ ಮಾರುಕಟ್ಟೆಯಲ್ಲಿ ಬೆಲೆ ಇಲ್ಲ ಎಂದು ಬೇಸರಗೊಂಡಿದ್ದರು. ಸಾಲ ಮಾಡಿ ಈರುಳ್ಳಿ ಬೆಳೆದಿದ್ದೇನೆ. ಉತ್ತಮ ಫಸಲು ಬಂದರೂ ಮಾರುಕಟ್ಟೆಯಲ್ಲಿ ಬೆಲೆ ಇಲ್ಲ. ಒಂದು ಕ್ವಿಂಟಾಲ್ ಈರುಳ್ಳಿಗೆ 200 ರು. ಅಥವಾ 300 ರು. ಹೇಳುತ್ತಾರೆ. ಬೆಲೆ ಇಲ್ಲದ್ದಕ್ಕೆ ಈರುಳ್ಳಿಯನ್ನು ಮಣ್ಣಲ್ಲೇ ಮುಚ್ಚುತ್ತಿದ್ದೇನೆ ಎಂದು ಹೇಳಿದರು. ಮೊದಲೇ ಅತಿವೃಷ್ಟಿಯಿಂದ ಬೆಳೆ ಹಾಳಾಗಿತ್ತು. ಈಗ ಅಳಿದುಳಿದ ಫಸಲು ಬಂದಿದೆ. ಆದರೆ ಉತ್ತಮ ದರ ಸಿಗುತ್ತಿಲ್ಲ. ಹೀಗಾದರೆ ರೈತ ಹೇಗೆ ಬದುಕಬೇಕು? ಈರುಳ್ಳಿ ಬೆಳೆದ ರೈತರಿಗೆ ಸರಕಾರ ಪರಿಹಾರ ಘೋಷಣೆ ಮಾಡಲಿ ಎಂದು ಆಗ್ರಹಿಸಿದರು.

ಸಾಕು ಹಸು ಕೊಂದಿದೆ ಎನ್ನುವ ಕಾರಣಕ್ಕೆ ಹುಲಿಗೆ ವಿಷ ಹಾಕುವುದು ಸಹಿಸಲ್ಲ | ಅರಣ್ಯ ಉಳಿದರೆ ಮಾತ್ರ ಭೂಮಿ ಉಳಿಯುತ್ತದೆ

ವನ್ಯಜೀವಿ ಹಂತಕರ ವಿರುದ್ಧ ಕಠಿಣ ಕ್ರಮ:ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಾಕಿದ ಹಸುವನ್ನು ಹುಲಿ ತಿಂದಿದೆ ಎನ್ನುವ ಕಾರಣಕ್ಕೆ, ಆ ಹುಲಿಗೆ ವಿಷ ಹಾಕಿದರೆ ಅದನ್ನು ಸಹಿಸಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ನಡೆದ 71ನೇ ವನ್ಯಜೀವಿ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಾಣಿ ಸಂಪತ್ತು ಇಲ್ಲದೆ ಅರಣ್ಯ ಸಂಪತ್ತಿಗೆ ಮೌಲ್ಯವೇ ಇಲ್ಲ. ಹೀಗಾಗಿ ಪ್ರಾಣಿ ಸಂಪತ್ತನ್ನು ಕೊಲ್ಲುವವರ ವಿರುದ್ಧ ಕಠಿಣ ಕ್ರಮ ಶತಸಿದ್ಧ. ಸಾಕು ಹಸುವನ್ನು ತಿಂದಿದೆ ಎನ್ನುವ ಕಾರಣಕ್ಕೆ ಹುಲಿಗಳಿಗೆ ವಿಷ ಹಾಕುವುದನ್ನು ಸಹಿಸಲು ಸಾಧ್ಯವಿಲ್ಲ. ಯಾರೇ ಅರಣ್ಯ ಮತ್ತು ಪ್ರಾಣಿ ಸಂಪತ್ತನ್ನು ಕೊಲ್ಲಲು ಮುಂದಾದರೆ ಅಂಥವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು. ಅವರು ಎಷ್ಟೇ ದೊಡ್ಡವರಾಗಿದ್ದರೂ ಮುಲಾಜು ನೋಡದೆ ಕಾನೂನು ಕ್ರಮ ಕೈಗೊಳ್ಳಲಾಗಿವುದು ಎಂದರು.

ಮಾನವ-ವನ್ಯಜೀವಿ ಸಹಬಾಳ್ವೆಯ ಪರಿಸರ ಪೂರಕವಾದ ಆಶಯ ಮತ್ತು ಉದ್ದೇಶಕ್ಕಾಗಿ ವನ್ಯಜೀವಿ ಸಪ್ತಾಹವನ್ನು ಆಚರಿಸಲಾಗುತ್ತಿದೆ. ಅರಣ್ಯ ಪರಿಸರ ಆರೋಗ್ಯಕರವಾಗಿ ವಿಸ್ತರಣೆ ಆದಷ್ಟೂ ಮನುಷ್ಯ ಪರಿಸರ ಹೆಚ್ಚು ಆರೋಗ್ಯಕರವಾಗಿರುತ್ತದೆ. ಅರಣ್ಯದ ಉಳಿವು ಭೂಮಿಯ ಉಳಿವು ಎನ್ನುವುದನ್ನು ಮರೆಯಬಾರದು. ಆನೆ ಮತ್ತು ಹುಲಿ ಸಂಪತ್ತಿನಲ್ಲಿ ನಮ್ಮ ರಾಜ್ಯ ಮೊದಲ ಮತ್ತು ಎರಡನೇ ಸ್ಥಾನದಲ್ಲಿದೆ. ಇದರೊಂದಿಗೆ ಪ್ರಾಣಿ ಮತ್ತು ಮನುಷ್ಯರ ಸಂಘರ್ಷ ತಪ್ಪಿ ಸಹಬಾಳ್ವೆ ಏರ್ಪಡಬೇಕು. ಇದಕ್ಕಾಗಿ ಪ್ರಾಣಿಗಳು ಕಾಡು ಬಿಟ್ಟು ಹೊರಗೆ ಏಕೆ ಬರುತ್ತಿವೆ ಎನ್ನುವ ಬಗ್ಗೆ ಅಧ್ಯಯನಗಳು ನಡೆದು ವೈಜ್ಞಾನಿಕ ಪರಿಹಾರಗಳನ್ನು ಕಂಡುಕೊಳ್ಳಬೇಕಿದೆ ಎಂದರು. ಕಾರ್ಯಕ್ರಮದಲ್ಲಿ ಅರಣ್ಯ, ವನ್ಯಜೀವಿ ರಾಯಭಾರಿಯಾಗಿ ನೇಮಕವಾಗಿರುವ ಮಾಜಿ ಕ್ರಿಕೆಟಿಗ ಅನಿಲ್ ಕುಂಬ್ಳೆ ಮತ್ತು ಅರಣ್ಯಪಡೆ ಮುಖ್ಯಸ್ಥರು ಒಡಂಬಡಿಕೆಗೆ ಸಹಿ ಹಾಕಲಾಯಿತು. ವನ್ಯಜೀವಿ ಸಪ್ತಾಹದ ಅಂಗವಾಗಿ ಆಯೋಜಿಸಲಾಗಿದ್ದ ವಿವಿಧ ಸ್ಪರ್ಧೆಗಳ ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಸಚಿವ ಈಶ್ವರ್ ಖಂಡ್ರೆ, ಸಿಎಂ ಕಾನೂನು ಸಲಹೆಗಾರರಾದ ಪೊನ್ನಣ್ಣ, ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.



ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ನಡೆದ 71ನೇ ವನ್ಯಜೀವಿ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪರಿಸರ ಮತ್ತು ಅರಣ್ಯ ಸಂರಕ್ಷಣಾ ಕಾರ್ಯಕರ್ತರಿಗೆ ಪದಕಗಳನ್ನು ಪ್ರದಾನ ಮಾಡಿದರು. ಅರಣ್ಯ ಸಚಿವ ಈಶ್ವರ್ ಖಂಡ್ರೆ, ಮಾಜಿ ಕ್ರಿಕೆಟಿಗ ಅನಿಲ್ ಕುಂಬ್ಳೆ ಮತ್ತು ಇತರರು ಉಪಸ್ಥಿತರಿದ್ದರು.

ಕಾಡುಪ್ರಾಣಿಗಳ ಹತ್ಯೆ ತಡೆಗೆ ಕ್ರಮವಹಿಸಿ

ಹುಲಿ, ಆನೆಗಳ ಹತ್ಯೆ ಪ್ರಕರಣಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ ಮುಖ್ಯಮಂತ್ರಿಗಳು ಅರಣ್ಯಾಧಿಕಾರಿಗಳು ಹೆಚ್ಚು ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಬೇಕು. ಹುಲಿ ಹತ್ಯೆ ಮಾಡಿದವರು ಮತ್ತು ಪ್ರಾಣಿ ಸಂಪತ್ತನ್ನು ಕೊಲ್ಲುವವರ ವಿರುದ್ಧ ಕಠಿಣ ಕ್ರಮ ಶತಸಿದ್ಧ. ದಿನೇ ದಿನೇ ಅರಣ್ಯ ಪ್ರದೇಶ ಕಡಿಮೆ ಆಗುತ್ತಿದ್ದರೆ ಮನುಷ್ಯ ಕುಲ ಉಳಿಯಲು ಸಾಧ್ಯವಿಲ್ಲ. ಆದ್ದರಿಂದ ಅರಣ್ಯದ ಉಳಿವು ಮನುಷ್ಯನ ಉಳಿವು ಎನ್ನುವುದನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು ಎಂದರು.

ಮುಂದಿನ ಪೀಳಿಗೆಗೆ ಹಸಿರು ಹೊದಿಕೆ ಉಳಿಸುವ ಸಲುವಾಗಿ ಮತ್ತು ಶ್ವಾಸತಾಣಗಳನ್ನು ಸಂರಕ್ಷಿಸುವ ಸಲುವಾಗಿ ಬೆಂಗಳೂರು ಹೆಸರುಘಟ್ಟ ಕೆರೆ ಬಳಿಯ 5678 ಎಕರೆ ಪ್ರದೇಶವನ್ನು ಗ್ರೇಟರ್ ಹೆಸರುಘಟ್ಟ ಸಂರಕ್ಷಿತ ಹುಲ್ಲುಗಾವಲು ಎಂದು ಘೋಷಿಸಲಾಗಿದೆ. ಜತೆಗೆ ಮಾತಪ್ಪನ ಹಳ್ಳಿಯಲ್ಲಿ 153 ಎಕರೆ ಪ್ರದೇಶದಲ್ಲಿ ಬೃಹತ್ ಜೈವಿಕ ಉದ್ಯಾನ ನಿರ್ಮಿಸಲಾಗುತ್ತಿದೆ. ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ 1 ಮೆಗಾವ್ಯಾಟ್ ಕ್ಯಾಪ್ಟಿವ್ ಸೌರ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲಾಗುತ್ತಿದ್ದು, ಉದ್ಯಾನದ ಇಂದಿನ ಮತ್ತು ಭವಿಷ್ಯದ ಇಂಧನ ಅಗತ್ಯವನ್ನು ಸೌರ ವಿದ್ಯುತ್ ನಿಂದಲೇ ಪೂರೈಸಲು ತೀರ್ಮಾನಿಸಲಾಗಿದೆ.

- ಈಶ್ವರ್ ಖಂಡ್ರೆ, ಅರಣ್ಯ ಸಚಿವ

ಪರಿಸರ, ಅರಣ್ಯವನ್ನು ಉಳಿಸುವುದಕ್ಕೆ ಜೀವವನ್ನು ಪಣಕ್ಕಿಟ್ಟು ಹೋರಾಡುವ ಅರಣ್ಯ ಅಧಿಕಾರಿ ಮತ್ತು ಸಿಬ್ಬಂದಿಗೂ ರಾಷ್ಟ್ರಪತಿ ಸೇವಾ ಪದಕ ನೀಡುವಂತೆ ಕೇಂದ್ರ ಸರಕಾರಕ್ಕೆ ರಾಜ್ಯ ಸರಕಾರದ ವತಿಯಿಂದ ಶಿಫಾರಸು ಮಾಡಬೇಕು.

- ಅನಿಲ್ ಕುಂಬ್ಳೆ, ಮಾಜಿ ಕ್ರಿಕೆಟಿಗ

ಅರಣ್ಯ ಒತ್ತುವರಿ ತಡೆಯಬೇಕು: ಖಂಡ್ರೆ

ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವ ಈಶ್ವರ್ ಖಂಡ್ರೆ, ಪ್ರಸಕ್ತ ಸನ್ನಿವೇಶದಲ್ಲಿ ಅರಣ್ಯ ಪ್ರದೇಶ ಹೆಚ್ಚಳ ಕಷ್ಟಸಾಧ್ಯವಾಗಿದ್ದು, ಇರುವ ಅರಣ್ಯ ಒತ್ತುವರಿಯಾಗದಂತೆ ಕಾಪಾಡುವುದು ಎಲ್ಲ ಹೊಣೆಯಾಗಿದೆ. ಈ ಕರ್ತವ್ಯವನ್ನು ಅರಣ್ಯ ಸಿಬ್ಬಂದಿ ಪ್ರಾಮಾಣಿಕವಾಗಿ ಮಾಡಬೇಕು. ಸಸ್ಯ ಸಂಕುಲ, ಪ್ರಾಣಿ ಸಂಕುಲ, ಕೀಟ ಸಂಕುಲಗಳಿಂದ ಕೂಡಿದ ಪಶ್ಚಿಮಘಟ್ಟ ರಾಜ್ಯದ 10 ಜಿಲ್ಲೆಗಳಲ್ಲಿ ವ್ಯಾಪಕವಾಗಿ ಹಬ್ಬಿದ್ದು, ಜೀವವೈವಿಧ್ಯತೆಯ ಅದ್ಭುತ ತಾಣವಾಗಿದೆ. ಇಷ್ಟು ಸಮೃದ್ಧ ಕಾನನ ಹೊಂದಿರುವ ನಾವು ಅದೃಷ್ಟವಂತರು ಎಂದರು. ಎಷ್ಟೇ ಕಟ್ಟುನಿಟ್ಟಿನ ಕ್ರಮ ಕೈಗೊಂಡರೂ ಮಲೆ ಮಹದೇಶ್ವರ ಬೆಟ್ಟ ವನ್ಯಜೀವಿ ಧಾಮದಲ್ಲಿ ಕಳೆದ ಜೂನ್ ತಿಂಗಳಲ್ಲಿ 5 ಹುಲಿಗಳ ಹತ್ಯೆ ಆಗಿತ್ತು. ಇತ್ತೀಚೆಗೆ ಮತ್ತೊಂದು ಹುಲಿ ಸಾವಿಗೀಡಾಗಿದೆ. ಇದು ಹಸುವನ್ನು ಕೊಂದ ವನ್ಯಜೀವಿ ವಿರುದ್ಧದ ಪ್ರತೀಕಾರದ ಕ್ರಮವಾಗಿದ್ದು, ಇದು ಅತ್ಯಂತ ನೋವಿನ ಸಂಗತಿ. ಈ ನಿಟ್ಟಿನಲ್ಲಿ ಅರಣ್ಯದೊಳಗಿನ ಹಾಗೂ ಅರಣ್ಯದಂಚಿನ ಜನರಿಗೆ ಜಾಗೃತಿ ಮೂಡಿಸಲು ಜನಸಂಪರ್ಕ ಸಭೆ ನಡೆಸಲು ಸೂಚಿಸಿರುವುದಾಗಿ ತಿಳಿಸಿದರು.

ಸಮೀಕ್ಷೆ ಯಶಸ್ವಿಗೆ ಕಾಂಗ್ರೆಸ್ ನಾಯಕರು ಸಹಕರಿಸಿ

ಸಂವಿಧಾನ ಆಶಯದಂತೆ ನಮ್ಮ ಆಡಳಿತ

ಮಂಗಳೂರು: ಸಂವಿಧಾನದ ಮೇಲೆ ಶಪಥ ಮಾಡಿದ ನಾವು ಸಂವಿಧಾನದ ಆಶಯದಂತೆ ಅಧಿಕಾರ ಮಾಡುತ್ತಿದ್ದೇವೆ. ಸಂವಿಧಾನದಲ್ಲಿ ಕೊಟ್ಟಿರುವ ಅಧಿಕಾರ ಬಳಸಿ ರಾಜ್ಯದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸುತ್ತಿದ್ದೇವೆ. ಆದರೆ ಬಿಜೆಪಿಯ ನಾಯಕರುಗಳು ಸಮೀಕ್ಷೆಗೆ ಅವಕಾಶ ಇಲ್ಲ ಎಂದು ಸುಳ್ಳು ಹೇಳುತ್ತಿದ್ದಾರೆ. ಆದರೆ ಯಾವುದಕ್ಕೂ ಜಗ್ಗದ ನಮ್ಮ ಶಿಕ್ಷಕರು ರಾಜ್ಯದಲ್ಲಿ ಸಮೀಕ್ಷೆಯನ್ನು ಯಶಸ್ವಿಯಾಗಿ ಮಾಡುತ್ತಿದ್ದಾರೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧುಬಂಗಾರಪ್ಪ ಹೇಳಿದರು.

- ರಾಜ್ಯದಲ್ಲಿ ಈಗಾಗಲೇ ಶೇ.82 ರಷ್ಟು ಸಮೀಕ್ಷೆ ಮುಗಿದಿದೆ.
- ಪ್ರತಿಪಕ್ಷದವರ ಸುಳ್ಳು ಆರೋಪಗಳಿಗೆ ತಕ್ಕ ಉತ್ತರ ನೀಡಬೇಕಿದೆ

ಮಂಗಳೂರಿನ ಓಷನ್ ಹೋಟೆಲ್‌ನಲ್ಲಿ ಬುಧವಾರ ನಡೆದ ಕಾಂಗ್ರೆಸ್‌ನ ಹಿಂದುಳಿದ ವರ್ಗಗಳ ವಿಭಾಗದ ವಿಭಾಗೀಯ ಮಟ್ಟದ ಸಭೆಯಲ್ಲಿ ಮಾತನಾಡಿ, ಸಮೀಕ್ಷೆ ಯಲ್ಲಿ ಜನರು ತಮ್ಮ ಜಾತಿಯನ್ನು ಹೇಳಿಕೊಳ್ಳಲು ಅವಕಾಶವಿದೆ. ಯಾರಿಗೂ ಒತ್ತಡ ಹಾಕುತ್ತಿಲ್ಲ. ಸ್ವಯಂ ಪ್ರೇರಿತವಾಗಿಯೇ ಮಾಹಿತಿಯನ್ನು ನೀಡುತ್ತಿದ್ದಾರೆ. ಬಿಜೆಪಿಯ ಆರ್.ಅಶೋಕ್, ಪ್ರಲ್ಹಾದ್ ಜೋಷಿ ಪ್ರತಾಪ ಸಿಂಹ, ಅಶ್ವತ್ಥನಾರಾಯಣ, ವಿಜಯೇಂದ್ರರಂತಹ ನಾಯಕರು ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಮಾಜಿ ಪಿಎಂ ದೇವೇಗೌಡರು, ಮಾಜಿ ಸಿಎಂ ಯಡಿಯೂರಪ್ಪರು ಸಮೀಕ್ಷೆಗೆ ಹೋಗಬೇಡಿ ಎಂದು ಹೇಳಿಲ್ಲ. ಆದರೆ ರಾಜಕೀಯ ಕಾರಣಕ್ಕಾಗಿ ಈ ವಿರೋಧ ಮಾಡುತಿದ್ದಾರೆ ಇದಕ್ಕೆ ಯಾವ ಮೌಲ್ಯವೂ ಇಲ್ಲ.ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮಾಡುತ್ತಿರುವುದು ಜನರಿಗೆ ಸಾಮಾಜಿಕ ನ್ಯಾಯ ನೀಡುವ ಕಾರಣಕ್ಕೆ. ಸಮಾಜದ ಕಟ್ಟಕಡೆಯ ಪ್ರಜೆಗೂ ಸರಕಾರದ ಸೌಲಭ್ಯ ನೀಡಲು ಸಿದ್ದರಾಮಯ್ಯ ನೇತೃತ್ವದ ಸರಕಾರ ಈ ಮಹಾನ್ ಕಾರ್ಯ ಮಾಡುತ್ತಿದೆ ಎಂದು ಹೇಳಿದರು.

ತುಳಿತಕ್ಕೊಳಗಾದ ಸಮಾಜಗಳಿಗೆ ನ್ಯಾಯ ತಲುಪಿಸುವಲ್ಲಿ ಈ ಸರ್ವೇ ಸಹಕಾರವಾಗುತ್ತದೆ. ರಾಜ್ಯದಲ್ಲಿ ಈಗಾಗಲೇ ಶೇ.82 ರಷ್ಟು ಸಮೀಕ್ಷೆ ಮುಗಿದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಸಮಸ್ಯೆಗಳ ಕುರಿತು ಜಿಲ್ಲಾಧಿಕಾರಿಯೊಂದಿಗೆ ಮಾತನಾ ಡಲಾಗಿದೆ. ಪಕ್ಷದ ಹಿಂದುಳಿದ ವರ್ಗದ ವಿಭಾಗದ ಎಲ್ಲಾ ಮುಖಂಡರು ಸಮೀಕ್ಷೆ ಯಶಸ್ವಿಗಾಗಿ ಕೆಲಸ ಮಾಡಬೇಕಿದೆ. ಪ್ರತಿಪಕ್ಷದವರ ಸುಳ್ಳು ಆರೋಪಗಳಿಗೆ ತಕ್ಕ ಉತ್ತರ ನೀಡಬೇಕಿದೆ.

-ಮಧುಬಂಗಾರಪ್ಪ, ಸಚಿವ

ಸಿನಿಮೀಯ ರೀತಿ ಗ್ಯಾಂಗ್ ವಾರ್ | ಮಚ್ಚಿನಿಂದ ಮನಸೋ ಇಚ್ಛೆ ಹಲ್ಲೆ

ಬಿಜೆಪಿ ಮುಖಂಡನ ಬರ್ಬರ ಹತ್ಯೆ

ಗಂಗಾವತಿ: ಭತ್ತದ ನಾಡು ಗಂಗಾವತಿಯಲ್ಲಿ ಬುಧವಾರ ಬೆಳಗಿನ ಜಾವ ಸಿನಿಮೀಯ ಮಾದರಿಯಲ್ಲಿ ಗ್ಯಾಂಗ್ ವಾರ್ ನಡೆದಿದೆ. ಕಾರಿನಿಂದ ಬೈಕ್‌ಗೆ ಡಿಕ್ಕಿ ಹೊಡೆಸಿರುವ

ಆರೋಪಿಗಳು, ಕೆಳಗೆ ಬಿದ್ದ ವ್ಯಕ್ತಿ ಮೇಲೆ ಮಚ್ಚಿನಿಂದ ಮನಸೋ ಇಚ್ಛೆ ಹಲ್ಲೆ ಮಾಡಿ ಹತ್ಯೆ ಮಾಡಿದ್ದಾರೆ. ಗಂಗಾವತಿಯ ಮುರಾರಿ ನಗರದ ನಿವಾಸಿ, ಬಿಜೆಪಿ ನಗರ ಮಂಡಲ ಯುವ ಘಟಕದ ಅಧ್ಯಕ್ಷ ವೆಂಕಟೇಶ ಕುರುಬರ ಅಲಿಯಾಸ್ ವೆಂಕಟೇಶ ಜೆಎನ್‌ಎನ್(34) ಎಂಬುವರನ್ನು ಬರ್ಬರವಾಗಿ ಕೊಲೆ ಮಾಡಿದ್ದಾರೆ. ಘಟನೆಯಿಂದ ಗಂಗಾವತಿ ಬೆಚ್ಚಿ ಬಿದ್ದಿದೆ.

ಬುಧವಾರ ರಾತ್ರಿ ಸುಮಾರು 2.40ಕ್ಕೆ ಮೃತ ವೆಂಕಟೇಶ ತನ್ನ ಒಟ್ಟು ಐವರು ಸಹಚರರೊಂದಿಗೆ ಬೈಕ್ ಮೇಲೆ ಹೊರಟಿದ್ದಾಗ ಗಂಗಾವತಿಯ ಲೀಲಾವತಿ ಆಸ್ಪತ್ರೆ ಮುಂದೆ ದಾಳಿ ನಡೆದಿದೆ. ಮೃತ ವೆಂಕಟೇಶ, ಪ್ರಜ್ವಲ್ ಎಂಬಾತ ನಡೆಸುತ್ತಿದ್ದ ಸ್ಕೂಟಿ ಮೇಲೆ ಕುಳಿತು ಹೋಗುತ್ತಿದ್ದಾಗ ಟಾಟಾ ಇಂಡಿಕಾ ಕಾರಿನಲ್ಲಿ ಬಂದಿದ್ದ ದುಷ್ಕರ್ಮಿಗಳು ಸ್ಕೂಟಿಗೆ ಹಿಂಬದಿಯಿಂದ ರಭಸದಿಂದ ಡಿಕ್ಕಿ ಹೊಡೆದಿದ್ದು, ಬೈಕ್ ನಲ್ಲಿದ್ದ ಇಬ್ಬರೂ ಕೆಳಗೆ ಬಿದ್ದಿದ್ದಾರೆ. ಇವರ ಸ್ಕೂಟಿ ಹಿಂದೆಯೇ ಇದ್ದ ವೆಂಕಟೇಶನ ಇತರೇ ನಾಲ್ವರು ಸಹಚರರು ಇವರ ರಕ್ಷಣೆಗೆ ಮುಂದಾಗಿದ್ದು, ಅಷ್ಟರಲ್ಲೇ ಮುಂದೆ ಕಾರು ನಿಲ್ಲಿಸಿದ ಸುಮಾರು 5 ರಿಂದ 6 ದುಷ್ಕರ್ಮಿಗಳ ತಂಡ ಲಾಂಗ್- ಮಚ್ಚು ಹಿಡಿದು ಬಿದ್ದಿದ್ದ ವೆಂಕಟೇಶ ಕಡೆ ಬಂದಿದ್ದಾರೆ. ಆಗಂತುಕರ ಕೈಯಲ್ಲಿ ಮಾರಕಾಸ್ತ್ರ ಕಂಡು ರಕ್ಷಣೆಗೆ ಬಂದವರು ಹಿಂದೆ ಸರಿದಿದ್ದಾರೆ. ಈ ವೇಳೆ ದುಷ್ಕರ್ಮಿಗಳು ಮನಸೋ ಇಚ್ಛೆ ಹಲ್ಲೆ ಮಾಡಿ, ಪರಾರಿ ಆಗಿದ್ದಾರೆ. ಈ ಎಲ್ಲ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ನಂತರ ವೆಂಕಟೇಶ ಸಹಚರರು ಆತನನ್ನು ಗಂಗಾವತಿ ಸರಕಾರಿ ಆಸ್ಪತ್ರೆಗೆ ದಾಲಿಸಿದ್ದು, ವೈದ್ಯರು ಮೃತಪಟ್ಟಿದ್ದನ್ನು ಖಚಿತಪಡಿಸಿದ್ದಾರೆ.

ಶಾಸಕ ಜನಾರ್ದನ ರೆಡ್ಡಿ, ಮಾಜಿ ಶಾಸಕ ಪರಣ್ಣ ಮುನವಳ್ಳಿ ವೆಂಕಟೇಶ್ ಮನೆಗೆ ಭೇಟಿ ನೀಡಿ ಅಂತಿಮ ದರ್ಶನ ಪಡೆದು, ಕುಟುಂಬಕ್ಕೆ ಸಾಂತ್ವನ ಹೇಳಿದರು. ಮೃತನ ತಂದೆ ಹಂಪಣ್ಣ, ಹತ್ಯೆ ಆರೋಪಿಗಳನ್ನು ನಮ್ಮ ಕೈಗೆ ಕೊಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗುರು-ಶಿಷ್ಯರು

ಘಟನೆ ಹಿನ್ನೆಲೆ ಮೃತ ವೆಂಕಟೇಶ ತಂದೆ ಹಂಪಣ್ಣ ಜಂತಕಲ್ ಗಂಗಾವತಿ ನಗರ ಪೊಲೀಸ್ ಠಾಣೆಯಲ್ಲಿ ರವಿ ಮತ್ತು ಇತರೇ 5 ರಿಂದ 6 ಜನರ ವಿರುದ್ಧ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ವಾಸ್ತವದಲ್ಲಿ ಕೊಲೆಗೆ ಮಾಡಿಸಿರುವ ರವಿ ಮತ್ತು ಮೃತ ವೆಂಕಟೇಶ ಒಂದೇ ಬಿಜೆಪಿಯಲ್ಲೇ ಗುರುತಿಸಿಕೊಂಡಿದ್ದ ಗುರು- ಶಿಷ್ಯ ಎನ್ನುವಂತಿದ್ದರು. ಅಂದರ್-ಬಾಹರ್ ಇಸ್ಪೀಟ್ ಜೂರು ಅಡ್ಡೆ ನಿರ್ವಹಣೆಯ ವ್ಯವಹಾರದಲ್ಲಿ ಮನಃಸ್ತಾಪ ಉಂಟಾಗಿ, ಸ್ನೇಹಿತರು ಬದ್ಧ ವೈರಿಗಳಾಗಿದ್ದಾರೆ. ಇಬ್ಬರ ನಡುವಿನ ಹಗೆತನ ಇದೀಗ ಕೊಲೆಯ ಹಂತ ತಲುಪಿದೆ.

ದೇಶಕ್ಕಾಗಿಯೇ ಬಾಳಿದ ಸಂಘ ದಕ್ಷ ಪ್ರೊಫೆಸರ್

ರವೀ ಸಜಂಗದ್ದೆ

ದೇಶಪ್ರೇಮ ಮತ್ತು ರಾಷ್ಟ್ರೀಯತೆಯ ಬೀಜ-ಸಂದೇಶಗಳನ್ನು ಸಮಾಜದ ನಡುವೆ ಬಿತ್ತಿ, ಆರೆಸ್ಸೆಸ್ಸಿನ ಚಟುವಟಿಕೆ ಮತ್ತು ರಾಷ್ಟ್ರ ಸೇವೆಯಲ್ಲಿ ಅಸಂಖ್ಯಾತ ಯುವಕರು-ಕಾರ್ಯಕರ್ತರು ತೊಡಗಿಸುವಂತಾಗಲು ಪ್ರೇರೇಪಿಸಿದ 'ಸಂಘ ದಕ್ಷ' ಪ್ರೊಫೆಸರ್ ಕೃಷ್ಣಪ್ಪ ನರಹರಿ (93) ನಮ್ಮನ್ನಗಲಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಕ್ಷೇತ್ರೀಯ ಕಾರ್ಯನಿರ್ವಾಹಕರಾಗಿ, ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಅಖಿಲ ಭಾರತೀಯ ಅಧ್ಯಕ್ಷರಾಗಿ, ಮೂರು ಬಾರಿ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ ಸದಸ್ಯರಾಗಿ, ದಿ ಮಿಥಿಕ್ ಸೊಸೈಟಿಯ ಅಧ್ಯಕ್ಷರಾಗಿ, ಪ್ರೊಫೆಸರ್ ಆಗಿ ಹಲವಾರು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

25 ಮೇ 1932ರಂದು ಬೆಂಗಳೂರಿನ ಶ್ರೀರಾಂಪುರದ ಕೃಷ್ಣಪ್ಪ ಹಾಗೂ ಸುಂದರಮ್ಮ ದಂಪತಿಯ ಮಗನಾಗಿ ನರಹರಿಯವರು ಜನಿಸಿದರು. ಬಿಇ ಪದವಿಯನ್ನು ಪೂರ್ಣಗೊಳಿಸಿ 1960ರಿಂದ 1984ರವರೆಗೆ ಬಿಎಂಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದರು. ಈಗಿನ ಶ್ರೀರಾಂಪುರದ ಸಾಂದೀಪಿನಿ ವಿದ್ಯಾ ಸಂಸ್ಥೆಯು ಇವರ ಮನೆ ಮತ್ತು ಸುತ್ತಲಿನ ಪರಿಸರವಾಗಿತ್ತು. ಅದನ್ನು ಉದಾರವಾಗಿ-ಉಚಿತವಾಗಿ ಶಿಕ್ಷಣ ಸಂಸ್ಥೆ ನಡೆಸಲು ಸಂತಸಾಭಿಮಾನದಿಂದ ನೀಡಿದ್ದು ಶ್ರೀಯುತರ ಶ್ರೇಷ್ಠ 'ದಾನ ಗುಣ'ಕ್ಕೆ ಸಾಕ್ಷಿ! ತನ್ನ ಹರೆಯದರಲ್ಲೇ ಆರೆಸ್ಸೆಸ್ಸಿನ ವಿಚಾರಧಾರೆಗಳು ಮತ್ತು 'ದೇಶ ಮೊದಲು' ಆಲೋಚನೆಗಳಿಂದ ಪ್ರಭಾವಿತರಾಗಿ ತಮ್ಮ ಹೆಚ್ಚಿನ ಸಮಯ ಮತ್ತು ಶ್ರಮವನ್ನು ಈ ದೆಸೆಯಲ್ಲಿ ವ್ಯಯಿಸಿದ ಕೀರ್ತಿಯೂ ನರಹರಿಯವರಿಗೆ ಸಲ್ಲುತ್ತದೆ.

ನಮ್ಮ ಮಕ್ಕಳಿಗೆ ಕೀಳರಿಮೆ ಬರುವ, ಪರಕೀಯರನ್ನು ಹೊಗಳುವ ಶಿಕ್ಷಣವನ್ನು ಪಠ್ಯದಲ್ಲಿ ಅಳವಡಿಸಿರುವುದರ ವಿರುದ್ಧ ದನಿಯೆತ್ತಿ, ಭಾರತೀಯ ಶಿಕ್ಷಣ ಪದ್ಧತಿಯನ್ನು ಶಿಕ್ಷಣದಲ್ಲಿ ಅಳವಡಿಸಲು ಹೋರಾಡಿದರು. ಸದ್ಯದ ಶಿಕ್ಷಣ ವ್ಯವಸ್ಥೆಯ ಬಗ್ಗೆ ತನ್ನ ಅಸಮಾಧಾನವನ್ನು ನೇರ ಮಾತುಗಳ ಮೂಲಕ ಎಲ್ಲಾ ವೇದಿಕೆಗಳಲ್ಲಿ ಪ್ರಸ್ತುತ ಪಡಿಸುತ್ತಿದ್ದರು. 'ಈಗಿನ ಶಿಕ್ಷಣ ವ್ಯವಸ್ಥೆ ಮನುಷ್ಯನಲ್ಲಿ ಮನುಷ್ಯತ್ವ ನಿರ್ಮಾಣ ಮಾಡುತ್ತಿಲ್ಲ. ಅದು ಕೇವಲ ಸ್ವಾರ್ಥ ಮತ್ತು ವೃತ್ತಿ ಸಂಬಂಧಿತ ಜ್ಞಾನವನ್ನು ಮಾತ್ರ ಬೆಳೆಸುತ್ತದೆ. ರಾಷ್ಟ್ರೀಯ ಮೌಲ್ಯಗಳೂ ಜನರಲ್ಲಿ ಕುಂಠಿತವಾಗಿವೆ. ಪರಸ್ಪರತೆ (mutuallity) ನಶಿಸಿ, ವೈಯಕ್ತಿಕತೆ (individuality) ಮುನ್ನೆಲೆಗೆ ಬಂದು ಪ್ರಾಮುಖ್ಯತೆ ಪಡೆದುಕೊಂಡಿದೆ. ಸ್ನೇಹ, ಪರಸ್ಪರ ಸಹಕಾರ, ಔದಾರ್ಯ, ಒಳ್ಳೆಯ ಮೌಲ್ಯಗಳು ಇದ್ದಾಗ ಮಾತ್ರ ಸಮಾಜದ ಏಳಿಗೆ ಸಾಧ್ಯ. ಸಮಾಜ ಉದ್ಧಾರವಾದಾಗ ದೇಶವೂ ಶ್ರೇಷ್ಠವಾಗಲಿದೆ' ಎಂದು ತಮ್ಮ ಭಾಷಣಗಳಲ್ಲಿ ಪದೇ ಪದೇ ಹೇಳುತ್ತಿದ್ದರು. ಅವರ ದೇಶಪ್ರೇಮದ ಪರಿಭಾಷೆಯ ಸೊಬಗು ಮತ್ತು ಸೊಗಡು ಸರ್ವಶ್ರೇಷ್ಠ. ತಮ್ಮ ಜೀವನದುದ್ದಕ್ಕೂ ಸಾಮಾಜಿಕ ಸೇವೆ, ಶಿಕ್ಷಣ, ಸಂಸ್ಕಾರ, ಸಾಂಸ್ಕೃತಿಕ ಚಟುವಟಿಕೆ ಮತ್ತು ದೇಶಪ್ರೇಮದ ವಿವಿಧ ಕಾರ್ಯಯೋಜನೆಗಳನ್ನು ನಡೆಸಿ ಸಮಾಜ ಮತ್ತು ದೇಶಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ.

ಬಾಲ್ಯದಿಂದಲೂ ನರಹರಿಯವರನ್ನು ಮಾದರಿಯಾಗಿ ನೋಡುತ್ತಾ, ಅವರ ಜೀವನ ಶೈಲಿ ಮತ್ತು ಮಾತುಗಳಿಂದ ಪ್ರಭಾವಿತರಾಗಿ ಬೆಳೆದು, ಈಗ ಭಾಜಪ, ಆರೆಸ್ಸೆಸ್ಸಿನಲ್ಲಿ ಹಲವಾರು ಉನ್ನತ ಹುದ್ದೆ ಮತ್ತು ಅಧಿಕಾರವನ್ನು ಅನುಭವಿಸುತ್ತಿರುವವರ ಪಟ್ಟಿ ದೊಡ್ಡದಿದೆ. ಅವರ ಮನೆಯ ಹಿತ್ತಿಲಿನಲ್ಲಿಯೇ ದಶಕಗಳ ಕಾಲ ನಿರಂತರವಾಗಿ ಆರೆಸ್ಸೆಸ್ ಶಾಖೆ ನಡೆಯುತ್ತಿತ್ತು. ಶ್ರೀರಾಂಪುರದ ಅವರ ಮನೆ ಮತ್ತು ಇಡೀ ಪರಿಸರ ಸಂಘದ ಮನೆಯಾಗಿತ್ತು ಮತ್ತು ಹಲವರಿಗೆ ಆಶ್ರಯ ತಾಣವಾಗಿತ್ತು. ' ಕೃ. ನರಹರಿಯವರ ನಿವಾಸದ ಬಳಿಯಲ್ಲೇ ಮನೆ ಇದ್ದುದರಿಂದ ಅವರೊಂದಿಗೆ ನನ್ನ ಒಡನಾಟವೂ ತುಸು ಜಾಸ್ತಿಯೇ ಇತ್ತು' ಎನ್ನುವುದನ್ನು ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್. ಸುರೇಶ್ ಕುಮಾರ್ ಸ್ಮರಿಸಿಕೊಳ್ಳುತ್ತಾರೆ.

1975ರ ಜೂನ್ 26ರ ಬೆಳಗ್ಗೆ, ದೇಶಾದ್ಯಂತ ತುರ್ತು ಪರಿಸ್ಥಿತಿ ಘೋಷಣೆಯ ಮೊದಲ ಮಾಹಿತಿ ಸಿಕ್ಕ ಕೊಡಲೇ, ತನ್ನ ವೆಸ್ಪಾ ಸ್ಕೂಟರಿನಲ್ಲಿ ಬೆಂಗಳೂರಿನಾದ್ಯಂತ ಓಡಾಡಿ, ಬೆಂಗಳೂರು ಪರಿಸರದ ಹಲವರನ್ನು ಹೋರಾಟ ಮತ್ತು ಪ್ರತಿಭಟನೆಗೆ ಒಟ್ಟುಗೂಡಿಸಿದ ಶ್ರೇಯಸ್ಸು ನರಹರಿಯವರಿಗೆ ಸಲ್ಲುತ್ತದೆ. ನರಹರಿಯವರ ಸೂಚನೆ ತಲುಪಿದ ಕೂಡಲೇ ಸುರೇಶ್ ಕುಮಾರ್, ಪಿ. ಜಿ. ಆರ್. ಸಿಂಧ್ಯಾ, ಪ್ರೊಫೆಸರ್ ಲಕ್ಷ್ಮಿ ಸಾಗರ್, ಪ್ರಮೀಳಾ ನೇಸರ್ಗಿ, ಕೃಷ್ಣ ಅಯ್ಯರ್, ಎಂ. ಚಂದ್ರಶೇಖರ್, ಎಂಎಸ್ ನಾರಾಯಣ್ ರಾವ್ ಮುಂತಾದ ಆಗಿನ ಬಿಸಿರಕ್ತದ ಕಲಿಗಳು ಮೈಸೂರು ಬ್ಯಾಂಕ್ ವೃತ್ತಕ್ಕೆ ಧಾವಿಸಿ ಬಂದರು. ಅಲ್ಲಿ ತುರ್ತು ಪರಿಸ್ಥಿತಿ ವಿರೋಧಿಸಿ ಪ್ರತಿಭಟನಾ ಮೆರವಣಿಗೆ ಮಾಡುವ ಯೋಜನೆ ರೂಪಿಸಲಾಯಿತು. ನೆರೆದಿದ್ದ ಸುಮಾರು 80 ಜನರು ತುರ್ತು ಪರಿಸ್ಥಿತಿಯ ವಿರುದ್ಧ ಕರ್ನಾಟಕದಲ್ಲಿ ಮೊದಲ ಪ್ರತಿಭಟನೆಯ ಕಹಳೆಯನ್ನು ಕೂಗಿದರು. ಅವೆನ್ಯೂ ರಸ್ತೆ, ಚಿಕ್ಕಪೇಟೆ, ಬಳೆಪೇಟೆ, ಕೆಂಪೇಗೌಡ ವೃತ್ತದ ಹಾದಿಯನ್ನು ದಾಟಿಕೊಂಡು ಪ್ರತಿಭಟನಾ ಮೆರವಣಿಗೆ ಮೈಸೂರು ಬ್ಯಾಂಕ್ ಬಳಿ ಕೊನೆಗೊಂಡಿತು ಮತ್ತು ಈ ಪ್ರತಿಭಟನೆ ರಾಜ್ಯದ ಅನೇಕ ಕಡೆಗಳಲ್ಲಿ ಮುಂದಿನ ದಿನಗಳಲ್ಲಿ ತುರ್ತು ಪರಿಸ್ಥಿತಿಯ ವಿರುದ್ಧ ಜನರು ಒಗ್ಗೂಡಿ ಹೋರಾಡಲು ನಾಂದಿಯಾಯಿತು ಎಂದೇ ಹೇಳಬಹುದು. ಈ ಪ್ರತಿಭಟನೆಯಲ್ಲಿ ಭಾಗವಹಿಸಿದ ಅನೇಕರು ಮುಂದೆ ರಾಜ್ಯಮಟ್ಟದ ಮುಖಂಡರು ಮತ್ತು ರಾಜಕೀಯ ನಾಯಕರಾಗಿ ಗುರುತಿಸಿಕೊಂಡರು. ಇದು ನರಹರಿಯವರ ಸಂಘಟನಾ ಚಾತುರ್ಯ ಮತ್ತು ನಾಯಕರನ್ನು ಬೆಳೆಸುವ ಗುಣಕ್ಕೆ ಒಂದ ಚಿಕ್ಕ ಉದಾಹರಣೆ.

1970ರಿಂದ 1990ರವರೆಗಿನ ಅವಧಿಯ ಕರ್ನಾಟಕದ ಬಹುತೇಕ ಚುನಾವಣೆಗಳ ಸಂದರ್ಭಗಳಲ್ಲಿ ಭಾಜಪ ಮತ್ತು ಆರೆಸ್ಸೆಸ್ಸಿನ ಸಭೆಗಳು, ಚರ್ಚೆಗಳು, ತಂತ್ರಗಾರಿಕೆ, ಪ್ರಣಾಳಿಕೆ ಕುರಿತು ಸಭೆಗಳು, ಅಭ್ಯರ್ಥಿ ಪಟ್ಟಿ ಅಂತಿಮಗೊಳಿಸುವ ಪ್ರಕ್ರಿಯೆ ಹೀಗೆ ಎಲ್ಲವೂ ಇವರ ಶ್ರೀರಾಂಪುರ ನಿವಾಸದಲ್ಲಿ ನಡೆಯುತ್ತಿದ್ದುದು ಅವರ ಪ್ರಭಾವ, ಸಹಕಾರಿ ಗುಣಕ್ಕೆ ಹಿಡಿದ ಕೈಗನ್ನಡಿ. ನರಹರಿಯವರು ಆರೆಸ್ಸೆಸ್ಸಿನ ಕ್ಷೇತ್ರೀಯ ಕಾರ್ಯವಾಹರಾಗಿ ಸೇವೆ ನಿರ್ವಹಿಸುತ್ತಾ ವಿವಿಧ ಸಮಾಜಮುಖಿ ಹೋರಾಟಗಳಲ್ಲಿ ತೊಡಗಿಸಿದ್ದನ್ನು ಗಮನಿಸಿದ ಸಂಘ ಪರಿವಾರ, 1984ರಲ್ಲಿ ಅವರನ್ನು ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ ಚುನಾವಣೆಗೆ ಭಾಜಪ ಅಭ್ಯರ್ಥಿಯನ್ನಾಗಿ ಘೋಷಿಸಿತು. ಸತತವಾಗಿ ಮೂರು ಬಾರಿ (1984ರಿಂದ 2002ರವರೆಗೆ) ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗುವ ಮೂಲಕ ಮೇಲ್ಮನೆಯಲ್ಲಿ ಶಿಕ್ಷಣ ಮತ್ತು ಶಿಕ್ಷಕರ ಧ್ವನಿಯಾಗಿ, ಅವರ ಹಕ್ಕುಗಳಿಗಾಗಿ, ಶಿಕ್ಷಕರ ವೇತನ, ಸೇವಾ ಸಮಸ್ಯೆಗಳು ಹಾಗೂ ಶಿಕ್ಷಣದ ಗುಣಮಟ್ಟದ ಕುರಿತಂತೆ ನಿರಂತರವಾಗಿ ಕಾಳಜಿ ವಹಿಸಿ, ಸದನದಲ್ಲಿ ಶಿಕ್ಷಣ-ಶಿಕ್ಷಕರ ಪರವಾಗಿ ಹೋರಾಡುವ ಪ್ರಮುಖ ನಾಯಕರಾಗಿ, ದನಿಯಾಗಿ ಗುರುತಿಸಿಕೊಂಡರು. ವೃತ್ತಿ ಜೀವನದುದ್ದಕ್ಕೂ ಶಿಕ್ಷಣ, ಸಾಮಾಜಿಕ ಸೇವೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕ್ಷೇತ್ರಗಳಿಗೆ ಗಮನಾರ್ಹ ಕೊಡುಗೆಗಳನ್ನು ನೀಡಿದ್ದಲ್ಲದೆ, ತುರ್ತು ಪರಿಸ್ಥಿತಿಯ ಸಮಯದಲ್ಲಿ ಹೋರಾಡಿ ಜೈಲುವಾಸವನ್ನೂ ಅನುಭವಿಸಿದರು. ಉತ್ತಮ ವಾಗ್ಮಿ ಮತ್ತು ಲೇಖಕರೂ ಆಗಿದ್ದ ನರಹರಿಯವರು 'ಎ ವಿಷನ್ ಅಂಡ್ ಡೈರೆಕ್ಷನ್ ಟು ಎಜುಕೇಶನ್' ಎಂಬ ಪುಸ್ತಕವನ್ನು ಬರೆದಿದ್ದಾರೆ. ಒಂದು ದೊಗಳೆ ಪ್ಯಾಂಟ್, ಅರ್ಧ ತೋಳಿನ ಅಂಗಿ ಇವರ ಉಡುಪು. ಕಾಲೇಜಿನಲ್ಲಿ ತಿಂಗಳ ವೇತನ ಬಂದ ದಿನದಂದು ತಪ್ಪದೇ ಆರೆಸ್ಸೆಸ್ ಕಛೇರಿ ಕೇಶವ ಕೃಪಾಕ್ಕೆ ತೆರಳಿ, ಒಂದು ಪಾಲನ್ನು ಸಮಾಜೋದ್ಧಾರಕ್ಕೆ ದೇಣಿಗೆ ನೀಡಿ ಅನಂತರವೇ ಮನೆಗೆ ತೆರಳುತ್ತಿದ್ದರು ಎಂದು ಅವರನ್ನು ಹತ್ತಿರದಿಂದ ಬಲ್ಲವರು ಹೇಳುತ್ತಾರೆ!

ಕರ್ನಾಟಕದ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಸಂಘದ ಎಲ್ಲಾ ಸ್ತರದವರೊಂದಿಗೆ ಪ್ರೀತ್ಯಾದರದ ಮತ್ತು ಅವಿನಾಭಾವ ಸಂಬಂಧವನ್ನು ಸದಾಕಾಲ ಹೊಂದಿದ್ದ, ಶಿಕ್ಷಣ ಕ್ಷೇತ್ರದ ಉತ್ತೇಜನ ಮತ್ತು ಅಭಿವೃದ್ಧಿಗೆ ದಶಕಗಳ ಕಾಲ ದುಡಿದ-ಹೋರಾಡಿದ, ಶಿಕ್ಷಕರ ಹಕ್ಕುಗಳಿಗಾಗಿ ಧೈರ್ಯ, ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿದ ನರಹರಿಯವರು ಇಹದ ಯಾತ್ರೆ ಮುಗಿಸಿ ಹರಿಪಾದ ಸೇರಿದ್ದಾರೆ. ಎಂಟು ದಶಕಗಳ ಅವರ ಸಮರ್ಪಣಾ ಮನೋಭಾವ, ಹೋರಾಟ ಮತ್ತು ಸಾಧನೆಗಳು ಮುಂದಿನ ಹಲವಾರು ಪೀಳಿಗೆಗಳಿಗೆ ಪ್ರೇರಣೆ-ಮಾದರಿಯಾಗಿ ಉಳಿಯಲಿವೆ. 'ಯೋಗೇನಾಂತೇ ತನುತ್ಯಜಾಮ್' ಎನ್ನುವ ಉಕ್ತಿಯಂತೆ, ಭಗವಂತ, ಸಮಾಜ ಮತ್ತು 'ಸಂಘ' ತನಗೊಪ್ಪಿಸಿದ ಎಲ್ಲಾ ಕೆಲಸ, ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಅಚ್ಚುಕಟ್ಟಾಗಿ, ಉತ್ತಮವಾಗಿ ನಿಭಾಯಿಸಿ, ಕೊನೆಯಲ್ಲಿ ಯೋಗಿಗಳಂತೆ ಇಹಲೋಕದ ಪಯಣ ಮುಗಿಸಿ ಪ್ರೊ. ಕೃ. ನರಹರಿ ಪರಮಾತ್ಮನಲ್ಲಿ ಲೀನವಾಗಿದ್ದಾರೆ. ಅವರಿಂದ ಕಲಿಯಬೇಕಾದ್ದು ಸಾಕಷ್ಟಿದೆ. ನರಹರಿ ಅಜ್ಜಾ, ಹೋಗಿ ಬನ್ನಿ.



ಪ್ರೊ. ಕೃ. ನರಹರಿ
1932-2025

ಸಮೀಕ್ಷೆಗೆ ಹೋಗಿದ್ದ ಶಿಕ್ಷಕನ ಮೇಲೆ ಕಾಡಾನೆ ದಾಳಿ

ಮಡಿಕೇರಿ: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಬೈಕ್ ನಲ್ಲಿ ತೆರಳುತ್ತಿದ್ದ ಕೊಡಗಿನ ಶಿಕ್ಷಕರೊಬ್ಬರ ಮೇಲೆ ಕಾಡಾನೆ ದಾಳಿಗೆ ಯತ್ನಿಸಿದ ನಡೆಸಿದ ಘಟನೆ ಬುಧವಾರ ನಡೆದಿದೆ.

ಕೊಡಗಿನ ಮಾಲ್ದಾರೆ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಗೋಣಿಕೊಪ್ಪಲು ಪ್ರೌಢಶಾಲೆಯ ಶಿಕ್ಷಕ ಶಿವರಾಮ್ ಅವರ ಮೇಲೆ ಕಾಡಾನೆ ದಾಳಿಗೆ ಯತ್ನಿಸಿದ್ದು, ಅದೃಷ್ಟವಶಾತ್ ಅಪಾಯದಿಂದ ಪಾರಾಗಿದ್ದಾರೆ. ಶಿವರಾಮ್ ಅವರು ಜಾತಿ ಗಣತಿ ಸಮೀಕ್ಷೆ ನಡೆಸಲು ಅವರೆಗುಂಡ ಅರಣ್ಯ ಪ್ರದೇಶದ ಮೂಲಕ ಮಾಲ್ದಾರೆ ಗ್ರಾಮಕ್ಕೆ ಬೈಕ್‌ನಲ್ಲಿ ಪ್ರಯಾಣಿಸುತ್ತಿದ್ದರು. ಗ್ರಾಮದ ದುಬಾರೆ ಬುಡಕಟ್ಟು ಭಾಗದಲ್ಲಿ ಸಮೀಕ್ಷೆ ಕಾರ್ಯಕ್ಕೆ ನಿಯೋಜಿಸಲಾಗಿತ್ತು. ಶಿವರಾಮ್ ಅವರು ಬೈಕ್ ನಲ್ಲಿ ತೆರಳುತ್ತಿದ್ದಾಗ ರಸ್ತೆಯಲ್ಲಿ ಒಂಟಿ ಆನೆಯೊಂದು ಅವರ ಮೇಲೆ ದಾಳಿಗೆ ಯತ್ನಿಸಿದೆ. ದಾಳಿಯಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಅವರ ಬೈಕ್ ನಿಯಂತ್ರಣ ಕಳೆದುಕೊಂಡು ಕೆಳಗೆ ಬಿದ್ದಿದೆ. ಅವರ ಕಾಲಿಗೆ ಗಾಯಗಳಾಗಿದ್ದು, ಬೈಕ್ ಅನ್ನು ಅಲ್ಲಿಯೇ ಬಿಟ್ಟು ಓಡಿದ ಶಿವರಾಮ್ ಅವರು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಘಟನೆಯ ಬಗ್ಗೆ ಸ್ಥಳೀಯರಿಗೆ ಮಾಹಿತಿ ನೀಡಲಾಗಿದ್ದು, ಶಿವರಾಮ್ ಅವರನ್ನು ತಕ್ಷಣವೇ ಗ್ರಾಮದ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು.

ವಾಲ್ಮೀಕಿ ಗುರುಪೀಠದ ಶ್ರೀಗಳಿಗೆ ಅನಾರೋಗ್ಯ

ಚಿತ್ರದುರ್ಗ: ದಾವಣಗೆರೆ ಜಿಲ್ಲೆಯ ರಾಜನಹಳ್ಳಿಯಲ್ಲಿರುವ ಪ್ರಸಿದ್ಧ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ ಅವರಿಗೆ ತೀವ್ರ ಅನಾರೋಗ್ಯ ಕಾಣಿಸಿಕೊಂಡಿದ್ದು, ಕೂಡಲೇ ಅವರನ್ನು ಚಿತ್ರದುರ್ಗದ

ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಸ್ವಾಮೀಜಿಗಳ ಆರೋಗ್ಯದಲ್ಲಿ ಏರುಪೇರಾದ ಕಾರಣ ಭಕ್ತರು ಮತ್ತು ಮಠದ ಆಡಳಿತ ಮಂಡಳಿಯಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿದೆ.

ಸ್ವಾಮೀಜಿಗಳು ಚಿತ್ರದುರ್ಗಕ್ಕೆ ಆಗಮಿಸಿದ್ದ ಸಂದರ್ಭದಲ್ಲೇ ಅಸ್ವಸ್ಥರಾಗಿದ್ದಾರೆ. ಪ್ರಾಥಮಿಕ ವರದಿಗಳ ಪ್ರಕಾರ, ಅವರ ದೇಹದಲ್ಲಿ ಸಕ್ಕರೆ ಪ್ರಮಾಣ ತೀವ್ರವಾಗಿ ಏರುಪೇರಾದ ಕಾರಣ ಈ ಅನಾರೋಗ್ಯ ಉಂಟಾಗಿದೆ. ಹೀಗಾಗಿ, ಪ್ರಸನ್ನಾನಂದಪುರಿ ಸ್ವಾಮೀಜಿ ಅವರು ಅಸ್ವಸ್ಥರಾಗಿದ್ದ ಕಾರಣ ಮಂಗಳವಾರ ನಡೆದ ವಾಲ್ಮೀಕಿ ಜಯಂತಿ ಸಮಾರಂಭದಲ್ಲಿಯೂ ಭಾಗವಹಿಸಲು ಸಾಧ್ಯವಾಗಿರಲಿಲ್ಲ. ಸ್ವಾಮೀಜಿಗಳನ್ನು ಚಿತ್ರದುರ್ಗದಲ್ಲಿರುವ ಬಸವೇಶ್ವರ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ದಾಖಲಿಸಿ ತಜ್ಞ ವೈದ್ಯರಿಂದ ಚಿಕಿತ್ಸೆ ನೀಡಲಾಗುತ್ತಿದೆ. ಅವರ ಆರೋಗ್ಯ ಸ್ಥಿತಿಯನ್ನು ವೈದ್ಯರು ಮತ್ತು ಆಪ್ತರು ನಿರಂತರವಾಗಿ ಪರಿಶೀಲಿಸುತ್ತಿದ್ದಾರೆ. ಅವರ ಆರೋಗ್ಯ ಸ್ಥಿತಿಯನ್ನು ವೈದ್ಯರು ಮತ್ತು ಆಪ್ತರು ನಿರಂತರವಾಗಿ ಪರಿಶೀಲಿಸುತ್ತಿದ್ದಾರೆ. ಶ್ರೀಗಳ ಅನಾರೋಗ್ಯದ ಸುದ್ದಿ ತಿಳಿಯುತ್ತಿದ್ದಂತೆ, ರಾಜ್ಯದ ವಿವಿಧ ಭಾಗಗಳಿಂದ ಮಠದ ಭಕ್ತರು, ಸಮುದಾಯದ ಮುಖಂಡರು ಮತ್ತು ರಾಜಕೀಯ ಗಣ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಸ್ಪತ್ರೆಯತ್ತ ದೌಡಾಯಿಸುತ್ತಿದ್ದಾರೆ. ಯಾವುದೇ ಗೊಂದಲ ಉಂಟಾಗದಂತೆ ಆಸ್ಪತ್ರೆಯ ಆವರಣದಲ್ಲಿ ಮತ್ತು ಸುತ್ತಮುತ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

ವಿಶ್ವವಾಣಿ

ಸಂಪಾದಕೀಯ

ಔಷಧವೇ ವಿಷವಾಗದಿರಲಿ

ತಮಿಳುನಾಡಿನ ಸ್ರೇಸನ್ ಫಾರ್ಮಾ ಎಂಬ ಕಂಪನಿ ತಯಾರಿಸಿದ್ದ ಕೋಲ್ಡ್ರಿಫ್ ಎಂಬ ಕೆಮ್ಮಿನ ಸಿರಪ್ ಸೇವನೆಯಿಂದಾಗಿ ಮಧ್ಯಪ್ರದೇಶದಲ್ಲಿ 20ಕ್ಕೂ ಹೆಚ್ಚು ಮಕ್ಕಳು ಮೃತಪಟ್ಟಿರುವ ಘಟನೆ ದೇಶವನ್ನೇ ಬೆಚ್ಚಿಬೀಳಿಸುವಂತೆ ಮಾಡಿದೆ. ಸಂಜೀವಿನಿ ಆಗಬೇಕಿದ್ದ ಔಷಧವೇ ಜೀವ ತೆಗೆದಿರುವುದು ಹಣ ಮಾಡುವ ಹಪಹಪಿಯ ಖಾಸಗಿ ಕಂಪನಿಗಳು ಹಾಗೂ ಭ್ರಷ್ಟ ಸರಕಾರಿ ವ್ಯವಸ್ಥೆಗೆ ಹಿಡಿದ ಕೈಗನ್ನಡಿ. ದೇಶದಲ್ಲಿ ಔಷಧಗಳ ಗುಣಮಟ್ಟದ ಮೇಲೆ ನಮ್ಮ ಸರಕಾರಿ ವ್ಯವಸ್ಥೆ ಹೇಗೆ ನಿಗಾ ವಹಿಸುತ್ತಿದೆ ಎಂಬುದರ ದ್ಯೋತಕ ಇದು. ಈ ಘಟನೆ ಸಂಭವಿಸುತ್ತಿದ್ದಂತೆ ಕೋಲ್ಡ್ರಿಫ್ ಸಿರಪ್ ಕುರಿತು ನಿಗಾ ವಹಿಸುವಂತೆ ರಾಜ್ಯದಲ್ಲಿ ಔಷಧ ನಿಯಂತ್ರಣ ಅಧಿಕಾರಿಗಳಿಗೆ ಸರಕಾರವು ಸಕಾಲದಲ್ಲಿ ಸೂಚಿಸಿರುವುದು ಸ್ವಾಗತಾರ್ಹ. ರಾಜ್ಯದ ಸರಕಾರಿ ಆಸ್ಪತ್ರೆಗಳಲ್ಲಿ ಈ ಸಿರಪ್ ಬಳಕೆ ಆಗುತ್ತಿಲ್ಲ ಎಂದೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಸ್ಪಷ್ಟಪಡಿಸಿದ್ದಾರೆ. ಆದರೆ ಖಾಸಗಿಯಾಗಿ ಬಳಕೆಯಾಗುತ್ತಿದೆ ಎಂಬ ಮಾತುಗಳೂ ಕೇಳಿಬರುತ್ತಿವೆ. ಆ ಕುರಿತು ಸಮಗ್ರ ತನಿಖೆ ಮಾಡಬೇಕಾದ ಅಗತ್ಯವಿದೆ. ಔಷಧಗಳ ಗುಣಮಟ್ಟದ ವಿಷಯದಲ್ಲಿ ಬೇರೆಲ್ಲಾ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಔಷಧಗಳ ಪರೀಕ್ಷೆ ಹೆಚ್ಚಾಗಿ ನಡೆಯುತ್ತಿದ್ದು, ಕರ್ನಾಟಕದ ಮಾದರಿಯನ್ನು ಅನುಸರಿಸಲು ಕೇಂದ್ರವು ಇತರ ರಾಜ್ಯಗಳಿಗೆ ಸಲಹೆ ನೀಡಿದೆ. ಆದರೆ ಇದೆಲ್ಲವೂ ಮಕ್ಕಳ ಪ್ರಾಣ ಪಕ್ಷಿ ಹಾರಿಹೋದ ನಂತರವೇ ಮಾಡಬೇಕೆ? ಅನಾರೋಗ್ಯಪೀಡಿತ ವ್ಯಕ್ತಿಯೊಬ್ಬ ತನ್ನ ಪ್ರಾಣ ಉಳಿಸುವ ಸಂಜೀವಿನಿ ಎಂದುಕೊಂಡೇ ಸೇವಿಸುವ ಔಷಧಗಳ ಗುಣಮಟ್ಟ ಪರೀಕ್ಷಿಸುವಲ್ಲಿಯೂ ಈ ರೀತಿಯ ಅಸಡ್ಡೆ ತೋರಿರುವುದು ಕ್ಷಮೆಗೆ ಅರ್ಹವೇ? ಯಾವುದೇ ರಾಜ್ಯದಲ್ಲಿ ಯಾವುದೇ ಔಷಧಿ ಬಳಕೆಯಾಗುವ ಮುನ್ನ ಸೂಕ್ತ ಪರೀಕ್ಷೆಗೆ ಒಳಗಾಗುವ ವ್ಯವಸ್ಥೆ ಕಟ್ಟುನಿಟ್ಟಾಗಿ ಜಾರಿಗೆ ಬರಬೇಕು. ರಾಜ್ಯಗಳಲ್ಲಿ ನಡೆಯುವ ಗುಣಮಟ್ಟ ಪರೀಕ್ಷೆಯಲ್ಲಿ ವಿಫಲವಾಗುವ ಔಷಧಗಳ ಕುರಿತು ಆಯಾ ಕ್ಷಣವೇ ಇತರ ರಾಜ್ಯಗಳ ಗಮನಕ್ಕೆ ತರಬೇಕು. ಕಳಪೆ ಔಷಧ ತಯಾರಿಸುವ ಕಂಪನಿಗಳ ಮೇಲೆ ನಿಷೇಧ ಹೇರಿ, ಅವುಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಔಷಧ ಕಂಪನಿಗಳು ಹಾಗೂ ಔಷಧ ನಿಯಂತ್ರಕರ ನಡುವೆ ಇರುವ ಅಕ್ರಮ ವ್ಯವಹಾರಗಳಿಗೆ ಕಡಿವಾಣ ಹಾಕಬೇಕು. ಇಲ್ಲವಾದಲ್ಲಿ ಅಮಾಯಕ ಜೀವಗಳು ಬಲಿಯಾಗಬೇಕಾಗುತ್ತದೆ.

ಸೊಂಪಾದಕೀಯ

ಏನೆಂದು ಹೆಸರಿಡಲಿ?

ಏನೆಂದು ಹೆಸರಿಡಲಿ ಈ ಚಂದ ಅನುಭವಕೆ ಅಂತ ಇಲ್ಲೊಬ್ಬಳು ಮಹಿಳೆ ಹಾಡುತ್ತಿದ್ದಾಳೆ. ಯಾಕಂದ್ರೆ, ಹೆಸರಿಡುವ ಕೆಲಸದಿಂದ ಆಕೆ ಗಳಿಸುತ್ತಿರುವ ದುಡ್ಡಿನ ಮೊತ್ತ ಹಾಗಿದೆ. ನ್ಯೂಯಾರ್ಕ್‌ನ ಟೈಲರ್ ಹಂಫ್ರೀ ಅನ್ನೋ ಈ ಮಹಿಳೆಗೆ ಕಂಡವರ ಮಕ್ಕಳಿಗೆ ಹೆಸರಿಡುವುದೇ ಕೆಲಸ. ನಮ್ಮ ಹಿರಿಯರು ಬದುಕಿದರೆ ಇನ್ನೊಬ್ಬರು ಹೆಸರಿಡದಂತೆ ಬದುಕಬೇಕು ಅಂತ ಹೇಳುತ್ತಾರೆ. ಆದರೆ ಈಕೆ ಇನ್ನೊಬ್ಬರಿಗೆ ಹೆಸರಿಟ್ಟುಕೊಂಡೇ ಬದುಕುತ್ತಿದ್ದಾಳೆ. ಹೌದು ಹುಟ್ಟೋ ಮಕ್ಕಳಿಗೆ ವಿವಿಧ ರೀತಿಯ ಆಕರ್ಷಕವಾದ ವಿಭಿನ್ನ ವಿಶಿಷ್ಟ ಹೆಸರುಗಳನ್ನು ಹುಡುಕಿ ಕೊಡೋದೇ ಈಕೆಯ ಕಸುಬು. ಅದಕ್ಕೆ ಈಕೆ 17 ಸಾವಿರ ರುಪಾಯಿಯಿಂದ 26 ಲಕ್ಷದವರೆಗೂ ಚಾರ್ಜ್ ಮಾಡುತ್ತಾಳೆ ಅಂದ್ರೆ, ನೀವು ನಂಬಲೇಬೇಕು. ಈ ಮೇಲ್ ನಲ್ಲಿ ಮಕ್ಕಳ ಹೆಸರಿನ ಪಟ್ಟಿ ಕಳಿಸೋಕೆ 17 ಸಾವಿರ ಚಾರ್ಜ್ ಮಾಡೋ ಈಕೆ ಎಕ್ಸ್‌ಕ್ಲೂಸಿವ್ ಪ್ಯಾಕೇಜಿಗೆ 26 ಲಕ್ಷ ವಸೂಲಿ ಮಾಡುತ್ತಾಳಂತೆ. 2021ರಿಂದ ಈಕೆಯ ಹೆಸರಿಡುವ ಕೆಲಸಕ್ಕೆ ಬೇಡಿಕೆ ಹೆಚ್ಚಾಗಿದ್ದುದರಿಂದ ಈಕೆಯ ಕೆಲಸದ ಬೆಲೆಯೂ ಹೆಚ್ಚಾಗಿದೆಯಂತೆ. ಹಾಗಾಗಿ ಎಲ್ಲರೂ ಕೇಳುವಂತೆ ನೀವು ಹೆಸರಿನಲ್ಲೇನಿದೆ ಅಂತ ಕೇಳಿದ್ರೆ, ಈಕೆ ಲಕ್ಷಾಂತರ ರುಪಾಯಿ ಹಣ ಇದೆ ಅಂತಾಳೆ. ನಮ್ಮಲ್ಲೂ ಜನ ಇದ್ದಾರೆ, ತಮಗೆ ಒಂದು ಮಗು ಹುಟ್ಟಿದ್ದೇ ತಡ ಜ್ಯೋತಿಷಿಯ ಬಳಿ ಹೋಗುತ್ತಾರೆ. ಪಂಚಾಂಗ ತೆರೆಯುತ್ತಾರೆ. ಮಗು ಹುಟ್ಟಿದ ನಕ್ಷತ್ರ ಅದೂ ಇದು ನೋಡಿ, ಯಾವ ಅಕ್ಷರದಿಂದ ಹೆಸರು ಇಡಬೇಕು ಅಂತ ತಿಳಿದುಕೊಳ್ಳುತ್ತಾರೆ. ನಂತರ ಅವರು ಮಾಡೋ ಕೆಲಸ ಅಂದ್ರೆ ತಮ್ಮ ಸ್ನೇಹಿತರಿಗೆ, ಬಂಧು ಬಳಗದವರಿಗೆ ಒಂದು ಮೆಸೇಜ್ ಕಳಿಸೋದು. ಗಂಡು ಅಥವಾ ಹೆಣ್ಣು ಮಗುವಿಗೆ ಈ ಅಕ್ಷರದಿಂದ ಶುರುವಾಗುವ ಒಳ್ಳೆಯ ಹೆಸರು ಸೂಚಿಸಿ ಅಂತ ಮೆಸೇಜ್ ಹಾಕೋದು. ಇಂಥ ಮೆಸೇಜ್ ಗಳಿಗೆ ರಿಪ್ಲೈ ಮಾಡುವವರ ಸಂಖ್ಯೆಯೂ ಕಮ್ಮಿ ಇಲ್ಲ. ನಮ್ಮ ಸಜೆಷನ್ ಕೇಳ್ತಾ ಇದ್ದಾರಲ್ಲ ಅನ್ನೋ ಖುಷಿಯಲ್ಲೇ ಅವರು ಹತ್ತಾರು ಹೆಸರುಗಳನ್ನು ಸೂಚಿಸುತ್ತಾರೆ. ಒಟ್ಟಿನಲ್ಲಿ ಹೀಗೆ ನಮ್ಮ ದೇಶದಲ್ಲಿ ಬಿಟ್ಟಿಯಾಗಿ ನಡೆಯುವ ಈ ಕೆಲಸಕ್ಕೆ ಟೇಲರ್ ಹಂಫ್ರಿ ಎಂಬ ಈ ಮಹಿಳೆ ಅಷ್ಟೊಂದು ಹಣ ಚಾರ್ಜ್ ಮಾಡ್ತಾ ಇರೋದು ನಮ್ಮವರಿಗೇನಾದ್ರೂ ಗೊತ್ತಾದ್ರೆ, ಹೆಸರು ಸೂಚಿಸಿ ಅಂದವರಿಗೆ ಎಷ್ಟು ಕೊಡ್ತೀಯಾ ಅಂತ ಕೇಳುವ ದಿನಗಳು ದೂರ ಇಲ್ಲ.

ಸಂಪಾದಕರ ಸದ್ಯಶೋಧನೆ

ಒಂದು ವಿಲಕ್ಷಣ ದುರಂತ

ನವೆಂಬರ್ 22, 1968. ಜಪಾನ್ ಏರ್ ಲೈನ್ಸ್‌ನ ಡೌಗ್ಲಾಸ್ ಡಿಸಿ-8-62 ವಿಮಾನ ಟೋಕಿಯೊದಿಂದ ಸ್ಯಾನ್ ಫ್ರಾನ್ಸಿಸ್ಕೋಗೆ ಹೋಗುತ್ತಿತ್ತು. ಭಾರಿ ಮಂಜು ಮತ್ತು ಇತರ ಸಮಸ್ಯೆಗಳಿಂದಾಗಿ, ಕ್ಯಾಪ್ಟನ್ ಕೋಹೆಯ್ ಅಸೋಹ್ ರನ್‌ವೇಗೆ ಸುಮಾರು ಎರಡೂವರೆ ಮೈಲುಗಳಷ್ಟು ದೂರದಲ್ಲಿರುವಾಗಲೇ ವಿಮಾನವನ್ನು ಸಮುದ್ರದಲ್ಲಿ ಇಳಿಸಿದ. ವಿಮಾನದ ಯಾಂತ್ರಿಕ ಭಾಗಗಳಲ್ಲಿ ಯಾವುದೇ ಸಮಸ್ಯೆ ಇರಲಿಲ್ಲ. ದಟ್ಟವಾದ ಮಂಜು, ಮಸುಕಾದ ದೃಶ್ಯಾವಳಿ ಮತ್ತು ಸರಿಯಾದ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗದೇ ಹೋದಾಗ, ಆತ ತಾನು ಇಳಿಯುವ ಪ್ರದೇಶವನ್ನು ತಪ್ಪಾಗಿ ಗುರುತಿಸಿದ. ಸಮುದ್ರದ ಮೇಲೆ ಹಾರುವಾಗ, ಅದನ್ನೇ ರನ್ ವೇ ಎಂದು ತಪ್ಪಾಗಿ ಭಾವಿಸಿ ನೀರಿನಲ್ಲಿ ಇಳಿಸಿಬಿಟ್ಟ. ಲ್ಯಾಂಡಿಂಗ್ ಮಾಡುವಾಗ, ಕ್ಯಾಪ್ಟನ್ ಯಾವ ಯಾವ ಕ್ರಮಗಳನ್ನು ಕೈಗೊಳ್ಳಬೇಕಿತ್ತೋ ಆ ಯಾವ ಕಾರ್ಯವಿಧಾನಗಳನ್ನೂ ಅನುಸರಿಸಲಿಲ್ಲ. ಇದರಿಂದ ಈ ಘಟನೆ ಸಂಭವಿಸಿತು. ವಿಮಾನದಲ್ಲಿದ್ದ ಎಲ್ಲ 107 ಜನರು ಸುರಕ್ಷಿತವಾಗಿದ್ದರು, ಯಾರಿಗೂ ಗಾಯಗಳಾಗಲಿಲ್ಲ. ಘಟನೆಯ ನಂತರ, ಅಮೆರಿಕದ ನ್ಯಾಷನಲ್ ಟ್ರಾನ್ಸ್‌ಪೋರ್ಟೇಶನ್ ಸೇಫ್ಟಿ ಬೋರ್ಡ್ ತನಿಖೆ ನಡೆಸಿತು. ಕ್ಯಾಪ್ಟನ್ ಅಸೋಹ್ ದೋಷವೇ ಘಟನೆಗೆ ಕಾರಣ ಎಂದು ತನಿಖೆಯಲ್ಲಿ ದೃಢಪಟ್ಟಿತು. ನೀರಿನಲ್ಲಿ ಇಳಿದರೂ, ವಿಮಾನದ ಮುಖ್ಯ ರಚನೆಗೆ ಯಾವುದೇ ಗಂಭೀರ ಹಾನಿಯಾಗಿರಲಿಲ್ಲ. ಕಾರಣ ವಿಮಾನವು ಸುಮಾರು 7 ಅಡಿಗಳಷ್ಟು ಆಳದಲ್ಲಿ ನಿಂತಿತ್ತು. ಇದರಿಂದ ವಿಮಾನದ ಮುಂಭಾಗದ ಬಾಗಿಲುಗಳು ನೀರಿನ ಮೇಲೆಯೇ ಉಳಿದಿದ್ದವು. ಈ ವಿಮಾನವನ್ನು ನೀರಿನಿಂದ ಹೊರತೆಗೆದು, ಯುನೈಟೆಡ್ ಏರ್ ಲೈನ್ಸ್ ಕಂಪನಿಯು 4 ದಶಲಕ್ಷ ಡಾಲರ್ ವೆಚ್ಚದಲ್ಲಿ ದುರಸ್ತಿ ಮಾಡಿತು. ದುರಸ್ತಿ ನಂತರ, ವಿಮಾನಕ್ಕೆ 'ಫಿಶರ್‌ಮನ್ ಒನ್' (Fisherman One) ಎಂಬ ಅಡ್ಡಹೆಸರು ಇಡಲಾಯಿತು. ಸಾಮಾನ್ಯವಾಗಿ, ಇಂಥ ಘಟನೆಗಳ ನಂತರ ವಿಮಾನಗಳನ್ನು ಸಂಪೂರ್ಣವಾಗಿ ದುರಸ್ತಿ ಮಾಡುವುದು ಕಷ್ಟ. ಕಾರಣ ವಿಮಾನಕ್ಕೆ ಭಾಗಶಃ ಧಕ್ಕೆಯಾಗಿರುತ್ತದೆ. ಬಹುತೇಕ ಸಂದರ್ಭಗಳಲ್ಲಿ, ವಿಮಾನವನ್ನು ನಾಶ (scrapped) ಪಡಿಸುವುದು ಅನಿವಾರ್ಯವಾಗುತ್ತದೆ. ವಿಮಾನವನ್ನು ಬಹಳ ಕಷ್ಟಪಟ್ಟು ಯುನೈಟೆಡ್ ಏರ್ ಲೈನ್ಸ್ ದುರಸ್ತಿ ಮಾಡಿತು. ನಂತರ ದುರಸ್ತಿ ಮಾಡಿದ ವಿಮಾನವನ್ನು ಮಾರ್ಚ್ 31, 1969 ರಂದು ಜಪಾನ್ ಏರ್‌ಲೈನ್ಸ್‌ಗೆ ಮರಳಿಸಲಾಯಿತು. ಜಪಾನ್ ಏರ್‌ಲೈನ್ಸ್‌ಗೆ ಮರಳಿದ ವಿಮಾನ ಏಪ್ರಿಲ್ 11, 1969 ರಂದು ತನ್ನ ಮೊದಲ ಯಶಸ್ವಿ ಪರೀಕ್ಷಾ ಹಾರಾಟ ನಡೆಸಿತು. ಗಮನಾರ್ಹ ಸಂಗತಿಯೆಂದರೆ, ಈ ವಿಮಾನವನ್ನು ಜಪಾನ್ ಏರ್ ಲೈನ್ಸ್ 1983 ರವರೆಗೂ ಬಳಸಿತು. ಇದು ವಿಮಾನ ವಿನ್ಯಾಸ ಮತ್ತು ಎಂಜಿನಿಯರಿಂಗ್ ಸಾಮರ್ಥ್ಯಕ್ಕೆ ಒಂದು ಉದಾಹರಣೆಯಾಗಿದೆ. ಜುಲೈ 26, 1989 ರಂದು ಅಟ್ಲಾಂಟಾದಲ್ಲಿ ಸಂಭವಿಸಿದ ಅಪಘಾತದಲ್ಲಿ ಈ ವಿಮಾನಕ್ಕೆ ಸಂಪೂರ್ಣ ಹಾನಿಯಾಯಿತು. ಈ ಘಟನೆಯು ವಿಮಾನಯಾನ ಇತಿಹಾಸದಲ್ಲಿ ಒಂದು ವಿಶಿಷ್ಟವಾದ ಕಥೆಯಾಗಿದೆ. ಏಕೆಂದರೆ ಅಪಘಾತಕ್ಕೀಡಾದ ವಿಮಾನವನ್ನು ಸಂಪೂರ್ಣವಾಗಿ ದುರಸ್ತಿ ಮಾಡಿ ಮತ್ತೆ ಹಾರಾಟಕ್ಕೆ ಬಳಸಿದ್ದು ಅನನ್ಯ ನಿದರ್ಶನವಾಗಿದೆ. ಕ್ಯಾಪ್ಟನ್ ಅಸೋಹ್ ನನ್ನು ತನಿಖಾಧಿಕಾರಿಗಳು ವಿಚಾರಣೆಗೆ ಒಳಪಡಿಸಿದರು. ಆತ ಈ ದುರಂತದ ಸಂಪೂರ್ಣ ಹೊಣೆ ಹೊರುವುದಾಗಿ ಹೇಳಿದ್ದಲ್ಲದೇ, As you Americans say, I fucked up (ಅಮೆರಿಕನ್ನರು ಹೇಳುವಂತೆ, ನಾನು ಎಡವಿದೆ) ಎಂದು ಪ್ರಾಮಾಣಿಕ ಹೇಳಿಕೆ ನೀಡಿದ. ಇದು ಮುಂದೆ, ವ್ಯವಹಾರ ಮತ್ತು ನಿರ್ವಹಣಾ ಸಿದ್ಧಾಂತಗಳಲ್ಲಿ 'ಅಸೋಹ್ ಡಿಫೆನ್ಸ್' ಎಂದೇ ಪ್ರಸಿದ್ಧವಾಯಿತು. ಯಾರಾದರೂ ತಮ್ಮ ತಪ್ಪನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವುದಕ್ಕೆ ಅಸೋಹ್ ನ ಹೆಸರನ್ನು ಪ್ರಸ್ತಾಪಿಸುವುದುಂಟು. ಈ ಘಟನೆಯ ನಂತರ, ಅಸೋಹ್ ನನ್ನು ಫಸ್ಟ್ ಆಫೀಸರ್ ಆಗಿ ಕೆಳಗಿಳಿಸಲಾಯಿತು, ಆದರೆ ನಿವೃತ್ತಿ ಆಗುವವರೆಗೆ ಆತನಿಗೆ ಜಪಾನ್ ಏರ್‌ಲೈನ್ಸ್‌ನಲ್ಲಿ ಹಾರಾಟ ನಡೆಸಲು ಅವಕಾಶ ನೀಡಲಾಯಿತು.

ಜತೆಗಿರುವವರ ಸಂಬಂಧ ಉಳಿದಾಗಲೇ ಜೀವನ ಸಾರ್ಥಕ

ಜೆಸೊನ್‌ನ ಚಾಕಚಕ್ಯತೆ ಮಾಟ್ಲಿನ್‌ಗೆ ಬಹಳ ಇಷ್ಟವಾಯಿತು. ಮೊದಲ ಭೇಟಿಯಲ್ಲಿಯೇ ಜೆಸೊನ್, ಮಾಟ್ಲಿನ್‌ಳಿಗೆ ಮೋಡಿ ಮಾಡಿದ. ಅಂದಿನಿಂದ ಶುರುವಾದ ಈ ಬಂಧ ಇಂದಿನವರೆಗೂ ನಡೆದುಕೊಂಡು ಬಂದಿದೆ. ಅಂದಿನಿಂದ ಜೆಸೊನ್, ಮಾಟ್ಲಿನ್‌ಳ ಸಂಜ್ಞಾ ದುಭಾಷಿ, ಆಕೆಯ ಕಿವಿ, ಆಕೆಯ ಬಾಯಿ, ಆಕೆಯ ಜತೆಗಾರ, ನೆರಳು, ಆಕೆಯ ವಕ್ತಾರ ಹಾಗೂ ಬಿಜಿನೆಸ್ ಪಾರ್ಟನರ್.

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ಅವರು ಒಡಹುಟ್ಟಿದವರಲ್ಲ, ನೆರೆ-ಹೊರೆಯವರೂ ಅಲ್ಲ, ಪ್ರೇಮಿಗಳೂ ಅಲ್ಲ. ಬಾಯ್ ಫ್ರೆಂಡ್ -ಗರ್ಲ್ ಫ್ರೆಂಡ್ ಸಹ ಅಲ್ಲ. ಗಂಡ-ಹೆಂಡತಿಯೂ ಅಲ್ಲ. ಬಾಸ್ -ಸೆಕ್ರೆಟರಿಯೂ ಅಲ್ಲ. ಆದರೆ ಆಕೆ ಹಾಗೂ ಆತ ಮೂವತ್ತು ವರ್ಷಗಳಿಂದ ಒಟ್ಟಿಗೇ ಇದ್ದಾರೆ. ಆಕೆ ಕಿವುಡಿ. ಆತ ಅವಳ ಪಾಲಿಗೆ ಕಿವಿ, ಹೊರ ಜಗತ್ತಿನೊಂದಿಗೆ ಸಂಪರ್ಕ ಬೆಸೆಯುವ ಸೇತು. ಆತನಿಲ್ಲದಿದ್ದರೆ ಅವಳ ಪಾಲಿಗೆ ಜಗತ್ತೇ ಶೂನ್ಯ. ಹೊರ ಜಗತ್ತಿನ ಸಂಪರ್ಕವೇ ಕಟ್.

ಹಾಗಂತ ಆಕೆ ಸಾಮಾನ್ಯಳಲ್ಲ. ಅನಾಮಧೇಯಳೂ ಅಲ್ಲ. ಅವಳದು ಲೋಕಖ್ಯಾತಿ. ಆಕೆ ಹಾಲಿವುಡ್‌ನ ಖ್ಯಾತ ಅಭಿನೇತ್ರಿ. ಆದರೆ ಹುಟ್ಟಾ ಕಿವುಡಿ. ಈತ ಅವಳ ಸಂಜ್ಞಾ ದುಭಾಷಿ. ಅಂದರೆ ಸನ್ನೆ ಅಥವಾ ಸಂಜ್ಞೆ ಮೂಲಕ ಮಾತು, ಶಬ್ದಗಳನ್ನು ಅವಳಿಗೆ ತಿಳಿಸುವವ. ಒಂದರ್ಥದಲ್ಲಿ ಅವಳ ಪಾಲಿಗೆ ಕಿವಿ, ಕಣ್ಣು, ಬಾಯಿ. ಆಕೆಯ ಹೆಸರು ಮಾರ್ಲಿ ಮಾಟ್ಲಿನ್. ಆತನ ಹೆಸರು ಜಾಕ್ ಜೆಸೊನ್. ಮಾರ್ಲಿ ಮಾಟ್ಲಿನ್ ಒಂದೂವರೆ ವರ್ಷದ ಮಗುವಾಗಿದ್ದಾಗ ಒಂದು ಕಿವಿ ಕೇಳಿಸದಂತಾಯಿತು. ಮತ್ತೊಂದು ಕಿವಿ ಶೇಕಡಾ ನಲವತ್ತರಷ್ಟೇ ಕೇಳಿಸುತ್ತಿತ್ತು. ತಂದೆ-ತಾಯಿ ಏನೇ ಹೇಳಿದರೂ ಬೇಗ ಪ್ರತಿಕ್ರಿಯಿಸುತ್ತಿರಲಿಲ್ಲ. ಜೋರಾಗಿ ಕಿರುಚಿಕೊಂಡರೆ ಮಾತ್ರ ತಟ್ಟನೆ ಏನೋ ಕೇಳಿಸಿದಂತಾಗಿ ಅದಕ್ಕೆ react ಮಾಡುತ್ತಿತ್ತು. ಮಗುವಿಗೆ ಶ್ರವಣ ದೋಷವಿದ್ದಿರಬಹುದೆಂಬುದನ್ನು ತಿಳಿಯಲು ಪಾಲಕರಿಗೆ ತಡವಾಗಲಿಲ್ಲ. ವೈದ್ಯರಲ್ಲಿಗೆ ಕರೆದುಕೊಂಡು ಹೋದರು. ಮಗುವಿನ ಕಿವುಡುತನವನ್ನು ಅವರು ಖಾತ್ರಿಪಡಿಸಿದರು.

ಎಷ್ಟೇ ಹಣ ಖರ್ಚಾದರೂ ಪರವಾಗಿಲ್ಲ, ಮಗುವಿನ ಶ್ರವಣದೋಷ ಸರಿಪಡಿಸಿ ಎಂದು ವೈದ್ಯರಿಗೆ ದುಂಬಾಲು ಬಿದ್ದರು. ಅವರು ಸಾಕಷ್ಟು ಪ್ರಯತ್ನಿಸಿದರೂ ಫಲ ನೀಡಲಿಲ್ಲ. ಹತ್ತಾರು ವೈದ್ಯರು, ಚಿಕಿತ್ಸೆ ಮಾಡಿಸಿದ ನಂತರ ಅದು ಸರಿ ಹೋಗುವಂಥದ್ದಲ್ಲ ಎಂಬುದು ಗೊತ್ತಾಯಿತು. ಮುದ್ದಾದ ಮಗು, ಸದಾ ನಗುಮುಖಿ, ಕ್ರಿಯಾಶೀಲ, ಎಂಥವರನ್ನೂ ಆಕರ್ಷಿಸುವ ಚೂಟಿತನ. ಮಾತು ಕೇಳಿಸುವುದಿಲ್ಲ ಎಂಬುದನ್ನು ಬಿಟ್ಟರೆ ಅವಳ ವ್ಯಕ್ತಿತ್ವದಲ್ಲಿ ಯಾವ ದೋಷವನ್ನೂ ಕಂಡು ಹಿಡಿಯಲಾಗದು. ಆ ದೋಷವನ್ನೂ ಮರೆಮಾಚುವ ಚಾಲಾಕಿತನ. ಮನೆಯಲ್ಲಿ ಮತ್ಯಾರಿಗೂ ಕಿವುಡುತನವಿಲ್ಲ. ಆಕೆಯ ಶ್ರವಣ ಸಮಸ್ಯೆ ಕ್ರಮೇಣ ಉಲ್ಬಣಗೊಳ್ಳಬಹುದೇ ಹೊರತು ಗುಣವಾಗುವ ಸಾಧ್ಯತೆ ತೀರಾ ಕಡಿಮೆ ಎಂದು ವೈದ್ಯರು ಎಲ್ಲ ಆಸೆಗಳನ್ನು ಬಿಟ್ಟರು. ಹಾಗೆಂದು ಮಗುವನ್ನು ನಿರ್ಲಕ್ಷಿಸುವಂತಿರಲಿಲ್ಲ.

ತಂದೆ-ತಾಯಿ ಅವಳನ್ನು ಸಂಜ್ಞೆ ಭಾಷೆ ಮೂಲಕ ಕಲಿಸುವ ಶಾಲೆಗೆ ಸೇರಿಸಿದರು. ಹುಟ್ಟಾ ಕಿವುಡರು, ಮೂಕರೂ ಹೌದು. ಆದರೆ ಮಾಟ್ಲಿನ್‌ಗೆ ಸ್ವಲ್ಪ ಸ್ವಲ್ಪ ಕೇಳಿಸುತ್ತಿದ್ದರಿಂದ ಅವಳಿಗೆ ಧ್ವನಿ ಪರಿಚಯಿಸುವ ಪ್ರಯತ್ನವನ್ನು ಶಾಲೆಯಲ್ಲಿ ಮಾಡಿಸಿದರೂ ಅದು ಪ್ರಯೋಜನವಾಗಲಿಲ್ಲ. ಹನ್ನೊಂದು ವರ್ಷವಾಗಿದ್ದಾಗ ಬೇಬಿಸೀಟರ್‌ನಲ್ಲಿದ್ದಾಗ ಮಾಟ್ಲಿನ್ ಮೇಲೆ ಅತ್ಯಾಚಾರ ಪ್ರಯತ್ನ ನಡೆಯಿತು. ಮರು ವರ್ಷ ಸ್ಕೂಲ್ ಟೀಚರ್ ಸಹ ಅವಳನ್ನು ರೇಪ್ ಮಾಡಲು ಪ್ರಯತ್ನಿಸಿದ. ಮಾಟ್ಲಿನ್‌ಗೆ ಏಳು ತುಂಬಿದಾಗ ಚಿಲ್ಡ್ರನ್ ಥಿಯೇಟರ್ ಉತ್ಸವದಲ್ಲಿ ಪಾಲ್ಗೊಂಡಳು. ಅವಳ ಚೊಚ್ಚಲ ಅಭಿನಯ ಎಲ್ಲರ ಪ್ರಶಂಸೆಗೆ ಪಾತ್ರವಾಯಿತು. ಅದರಲ್ಲೂ ಅವಳದು ಮೂಕಿಯ ಪಾತ್ರ. ಆದರೆ ಆಕೆ ಮೂಲತಃ ಮೂಕಿ ಅಥವಾ ಕಿವುಡಿ ಎಂಬುದು ಯಾರಿಗೂ ಗೊತ್ತಿರಲಿಲ್ಲ. ಅಲ್ಲಿಂದ ಮುಂದೆ ನಾಟಕದಲ್ಲಿ ಅಭಿನಯಿಸುವ ಯಾವ ಅವಕಾಶವನ್ನೂ ಅವಳು ತಪ್ಪಿಸಿಕೊಳ್ಳುತ್ತಿರಲಿಲ್ಲ.

ಕಾಲೇಜು ಮುಗಿಸುವ ಹೊತ್ತಿಗೆ ಅವಳು ಮುನ್ನೂರಕ್ಕೂ ಹೆಚ್ಚು ನಾಟಕ ಹಾಗೂ ಬೇರೆ ಬೇರೆ ಪ್ರದರ್ಶನಗಳಲ್ಲಿ ಅಭಿನಯಿಸುತ್ತಿದ್ದಳು. ಅವಳಿಗೆ ಇಪ್ಪತ್ತೊಂದು ತುಂಬಿದ್ದಾಗ 'Children of a Lesser God' ಎಂಬ ಚಿತ್ರದಲ್ಲಿ ಅಭಿನಯಿಸುವ ಮೂಲಕ ಅವಳು ಹಾಲಿವುಡ್‌ಗೆ ಕಾಲಿಟ್ಟಳು. ಈ ಚಿತ್ರದಲ್ಲಿನ ಅಭಿನಯಕ್ಕೆ ಅವಳಿಗೆ ಅತ್ಯುತ್ತಮ ನಟಿಗೆ ನೀಡುವ ಅಕಾಡೆಮಿ ಪ್ರಶಸ್ತಿ ಹಾಗೂ ಗೋಲ್ಡನ್ ಗ್ಲೋಬ್ ಪ್ರಶಸ್ತಿ ಬಂತು. ಸಿನಿಮಾ ಸೆಟ್‌ನಲ್ಲಿ ಮಾಟ್ಲಿನ್‌ಗೆ ಸಂಜ್ಞೆ ಮೂಲಕ ಸಂಭಾಷಣೆಯನ್ನೂ ಹೇಳಬೇಕಾಗುತ್ತಿತ್ತು. ನಿರ್ದೇಶಕರಿಗೆ ಸ್ವಲ್ಪವೂ ಕಷ್ಟವಾಗದಂತೆ ಬಹು ಬೇಗನೆ ಕಲಿತುಕೊಳ್ಳುತ್ತಿದ್ದಳು. ತನ್ನ ಪಾತ್ರಕ್ಕೆ ಬೇಕಾಗುವ ಭಾವಾಭಿನಯವನ್ನೂ ಬಹಳ ಪ್ರಾಕ್ಟೀಸ್ ಮಾಡುತ್ತಿದ್ದಳು. Picket Fences ಎಂಬ ಚಿತ್ರದಲ್ಲಿ ಮನೋಜ್ಞ ಅಭಿನಯಕ್ಕೆ ಎಮ್ಮಿ ಪ್ರಶಸ್ತಿ ಬಂದಾಗ, ಹಾಲಿವುಡ್‌ನಲ್ಲಿ ಬಹುಕಾಲ ನೆಲೆ ನಿಲ್ಲುವ ತಾರೆ ಎಂಬ ಭರವಸೆಯನ್ನು ಮೂಡಿಸಿದಳು. ಅದಾದ ಬಳಿಕ ಮಾಟ್ಲಿನ್ ಹತ್ತಾರು ಸಿನಿಮಾ, ಜನಪ್ರಿಯ ಟಿವಿ ಧಾರಾವಾಹಿಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದಳು. ಇಷ್ಟಾದರೂ ಮಾಟ್ಲಿನ್ ಕಿವುಡಿ ಹಾಗೂ ಮೂಕಿ ಎಂಬುದು ಬಹಳ ಜನರಿಗೆ ಗೊತ್ತಿರಲಿಲ್ಲ.

ಹೀಗಾಗಿ ಅವಳು ಅನುಕಂಪ ಆಧಾರಿತ ನಟಿಯಾಗಿರಲಿಲ್ಲ. ಶ್ರೇಷ್ಠತೆ ಹಾಗೂ ಅರ್ಹತೆಯೇ ಅವಳ ಉನ್ನತಿಗೆ ಮಾನದಂಡವಾಗಿತ್ತು. ಇಲ್ಲದಿದ್ದರೆ ಆಕೆಗೆ West Wing, Blue's Clues, What the Bleep Do you know !, Desperate Housewives, The L Word, The Blind side ಮುಂತಾದ ಸಿನಿಮಾಗಳಲ್ಲಿ ಅವಕಾಶ ಸಿಗುತ್ತಿರಲಿಲ್ಲ. ಕಿವುಡು ಮಕ್ಕಳ ಕಲ್ಯಾಣಕ್ಕಾಗಿ ಟಿವಿ ಕಾರ್ಯಕ್ರಮವೊಂದರಲ್ಲಿ ಎರಡು ಗಂಟೆಗಳ ಕಾಲದ ಮಾಟ್ಲಿನ್ ಅಭಿನಯಕ್ಕೆ ಸುಮಾರು ಹತ್ತು ಲಕ್ಷ ಡಾಲರ್ ಹಣ ಸಂಗ್ರಹವಾಗಿದ್ದು ಅವಳ ಜನಪ್ರಿಯತೆಗೆ ಸಾಕ್ಷಿ. ಹಲವು ವಿಶ್ವವಿದ್ಯಾಲಯಗಳು ಆಕೆಗೆ ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಿವೆ. ಬಿಲ್ ಕ್ಲಿಂಟನ್ ಅಮೆರಿಕದ ಅಧ್ಯಕ್ಷರಾಗಿದ್ದಾಗ, ಕಾರ್ಪೊರೇಶನ್ ಫಾರ್ ನ್ಯಾಷನಲ್ ಸರ್ವೀಸ್‌ಗೆ ಮುಖ್ಯಸ್ಥಳನ್ನಾಗಿ ಆಕೆಯನ್ನು ನೇಮಿಸಿದ್ದರು. ಒಮ್ಮೆ ಆಸ್ಕರ್ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಪ್ರಶಸ್ತಿ ಪುರಸ್ಕೃತರ ಹೆಸರುಗಳನ್ನು ಘೋಷಿಸುವ ಅವಕಾಶವನ್ನು ಮಾಟ್ಲಿನ್‌ಗೆ ನೀಡಲಾಗಿತ್ತು.

ಎಲ್ಲರ ಹೆಸರುಗಳನ್ನು ಸಂಜ್ಞೆ ಮೂಲಕ ಹೇಳಿದ ಆಕೆ, ಅತ್ಯುತ್ತಮ ನಟ, ನಟಿಯರ ಹೆಸರುಗಳನ್ನು ಮಾತ್ರ ಜೋರಾಗಿ ಹೇಳಿ ರೋಮಾಂಚನ ಮೂಡಿಸಿದ್ದಳು. ಮೂಕಿಯಾಗಿ, ಕಿವುಡಿಯಾಗಿ ಮಾಟ್ಲಿನ್ ಏರಿದ ಎತ್ತರ ಅಸಾಧಾರಣವಾದುದು. ಹಾಗೆ ನೋಡಿದರೆ, ಅವಳ ಅಭಿನಯಕ್ಕೆ ಇವು ಅಡ್ಡಿಯಾಗಲೇ ಇಲ್ಲ. ಅವಳ ಅಭಿನಯವನ್ನು ಸೂಕ್ಷ್ಮವಾಗಿ ಗಮನಿಸಿದವರಿಗೆ ಅವಳ ಈ ದೋಷಗಳು ಗಮನಕ್ಕೆ ಬರುವುದಿಲ್ಲ. ಹೇಳಿದರೂ ನಂಬುವುದು ಕಷ್ಟ. ನಿಜಕ್ಕೂ ತನ್ನ ಶಾರೀರಿಕ ದೋಷಗಳನ್ನು ಮೆಟ್ಟಿ ನಿಂತ ಧೀರೆ. ಇಂಥ ಮಾಟ್ಲಿನ್, ಜಾಕ್ ಜೆಸೊನ್ನನ್ನು ಭೇಟಿಯಾಗಿದ್ದು ಆಕಸ್ಮಿಕ. ಸುಮಾರು 40 ವರ್ಷಗಳ ಹಿಂದೆ, ಅಂದರೆ Children of a Lesser God ಸಿನಿಮಾ ಬಿಡುಗಡೆಯಾದ ಸಂದರ್ಭದಲ್ಲಿ ಮಾಟ್ಲಿನ್ ಏಕಾಏಕಿ ಜನಪ್ರಿಯತೆಯ ಉತ್ತುಂಗಕ್ಕೇರಿದ ಸಮಯದಲ್ಲಿ, ವಿಶ್ವದೆಲ್ಲೆಡೆಯಿಂದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಆಮಂತ್ರಣ ಬರಲಾರಂಭಿಸಿತ್ತು. ಆ ಪ್ರಯುಕ್ತ ಆಕೆ ಲಂಡನ್‌ನ ಒಂದು ಕಾರ್ಯಕ್ರಮಕ್ಕೆ ಒಪ್ಪಿಕೊಂಡಾಗ, ಅವಳಿಗೆ ಒಬ್ಬ ಸಮರ್ಥ ಹಾಗೂ ಚಾಲಾಕಿ ಇಂಟಪ್ರೆಟರ್ ಅಗತ್ಯವಿತ್ತು. ಆಗ ಮಾಟ್ಲಿನ್ ಬಾಯ್ ಫ್ರೆಂಡ್ ಆಗಿದ್ದ ನಟ ವಿಲಿಯಂ ಹಟ್ನರ್ ಸಹಾಯಕ ಜೆಸೊನ್ನನ್ನು ಸಂಪರ್ಕಿಸಿದ.

ಜೆಸೊನ್ ಹಟ್ನರ್‌ನನ್ನು ಭೇಟಿಯಾಗಿ ಚರ್ಚಿಸಿದ. ಅದಾದ ಬಳಿಕ ಮಾಟ್ಲಿನ್ ಮತ್ತು ಜೆಸೊನ್ ಭೇಟಿಯಾದರು. ಇಬ್ಬರೂ ಸಂಜ್ಞೆ ಭಾಷೆ ಮೂಲಕ ಸುಮಾರು ಮುಕ್ಕಾಲು ಗಂಟೆ ಮಾತಾಡಿದರು. ಜೆಸೊನ್‌ನ ಚಾಕಚಕ್ಯತೆ ಮಾಟ್ಲಿನ್‌ಗೆ ಬಹಳ ಇಷ್ಟವಾಯಿತು. ಮೊದಲ ಭೇಟಿಯಲ್ಲಿಯೇ ಜೆಸೊನ್, ಮಾಟ್ಲಿನ್‌ಳಿಗೆ ಮೋಡಿ ಮಾಡಿದ. ಅಂದಿನಿಂದ ಶುರುವಾದ ಈ ಬಂಧ ಇಂದಿನವರೆಗೂ ನಡೆದುಕೊಂಡು ಬಂದಿದೆ. ಅಂದಿನಿಂದ ಜೆಸೊನ್, ಮಾಟ್ಲಿನ್‌ಳ ಸಂಜ್ಞಾ ದುಭಾಷಿ, ಆಕೆಯ ಕಿವಿ, ಆಕೆಯ ಬಾಯಿ, ಆಕೆಯ ಜತೆಗಾರ, ನೆರಳು, ಆಕೆಯ ವಕ್ತಾರ ಹಾಗೂ ಬಿಜಿನೆಸ್ ಪಾರ್ಟನರ್. ಜೆಸೊನ್ ಇಲ್ಲದೇ ಮಾಟ್ಲಿನ್ ಇಲ್ಲ. ಅಪೂರ್ಣ.

ಜೆಸೊನ್ ಕೇಳದೇ ಆಕೆ ಮಾತಾಡುವುದಂತೂ ಇಲ್ಲ ಬಿಡಿ. ಆತನನ್ನು ಕೇಳದೆ ಯಾವುದೇ ನಿರ್ಧಾರವನ್ನೂ ತೆಗೆದುಕೊಳ್ಳುವುದಿಲ್ಲ. ಗಂಡ-ಹೆಂಡತಿ ಅಥವಾ ಪ್ರೇಮಿಗಳು ಬೇರೆ ಬೇರೆಯಾಗಿರಬಹುದು, ಆದರೆ ಮಾಟ್ಲಿನ್-ಜೆಸೊನ್ ಮಾತ್ರ ಪರಸ್ಪರರ ಖಾಸಗಿ ಸಮಯ ಬಿಟ್ಟು ಸದಾ ಒಟ್ಟಿಗೇ ಇರುತ್ತಾರೆ. ಮಾಟ್ಲಿನ್, ಕೆವಿನ್ ಗ್ರಂಡಲ್ಸ್ಕಿ ಎಂಬ ಪೊಲೀಸ್ ಆಫೀಸರನನ್ನೂ ಮದುವೆಯಾಗಿದ್ದಾಳೆ. ಅವರಿಗೆ ನಾಲ್ವರು ಮಕ್ಕಳಿದ್ದಾರೆ. ಜೆಸೊನ್ ಅವಳ ಮದುವೆಯಲ್ಲೂ ಪಕ್ಕದಲ್ಲಿದ್ದ. ನಾಲ್ವರು ಮಕ್ಕಳು ಹುಟ್ಟಿದಾಗಲೂ ಜತೆಯಲ್ಲಿದ್ದ. ಬಹಳ ಜನ ಮಾಟ್ಲಿನ್-ಜೆಸೊನ್ ಪತಿ-ಪತ್ನಿ ಎಂದು ಭಾವಿಸಿದ್ದರೂ ಅಚ್ಚರಿಯಿಲ್ಲ. ಕಾರಣ ಸಾರ್ವಜನಿಕ ವೇದಿಕೆಗಳಲ್ಲಿ ಗಂಡನಿಗಿಂತ ಹೆಚ್ಚು ಸಲ ಜೆಸೊನ್ ಅವಳ ಪಕ್ಕ ಕಾಣಿಸಿಕೊಂಡಿದ್ದಾನೆ. ಮಾಟ್ಲಿನ್ ಮನೆಯಿಂದ ಹೊರಬಿದ್ದರೆ ಸಾಕು, ಅವಳ ಜತೆಯಲ್ಲಿ ಜೆಸೊನ್ ಇರಲೇಬೇಕಿತ್ತು. ಕೆಲವು ವೇಳೆ ಆತ ಆಕೆಯ ಕಾರು ಡ್ರೈವರ್ ಆಗಿ, ಆಕೆಯ ಬಾಡಿಗಾರ್ಡ್ ಆಗಿ, ಸಹಾಯಕನಾಗಿ, ಸೇವಕನಾಗಿ ಕೆಲಸ



ಮಾಡಿದ್ದಾನೆ. ಜೆಸೊನ್ ಇಲ್ಲದಿದ್ದರೆ ಅವಳಿಗೆ ಜಗತ್ತೇ ಶೂನ್ಯ. ಮಾಟ್ಲಿನ್‌ಗೆ ಹೇಳಬೇಕಾದುದನ್ನೆಲ್ಲ ಜೆಸೊನ್‌ಗೆ ಹೇಳಬೇಕಾಗುತ್ತಿತ್ತು. ಆತ ಅವಳಿಗೆ ಸಂಜ್ಞೆ ಮೂಲಕ ತಿಳಿಸುತ್ತಿದ್ದ. ಇಬ್ಬರೂ ಸನ್ನೆ ಭಾಷೆ ಮೂಲಕ ಮಾತಾಡಿಕೊಳ್ಳುತ್ತಿದ್ದರು. ಮಾಟ್ಲಿನ್ ಭಾಷಣ ಮಾಡುವಾಗ ಸನ್ನೆಯಲ್ಲಿ ಹೇಳಿದ್ದನ್ನು ಜೆಸೊನ್ ಮಾತಿನಲ್ಲಿ ಪ್ರೇಕ್ಷಕರಿಗೆ ಹೇಳುತ್ತಿದ್ದ. ಆಕೆಗೆ ಸಂಭಾಷಣೆ, ಅಭಿನಯ ವಿವರಗಳನ್ನು ಹೇಳುತ್ತಿದ್ದವನೂ ಅವನೇ.

ಒಮ್ಮೆ ಮಾಟ್ಲಿನ್ ಟಿವಿ ಕಾರ್ಯಕ್ರಮದಲ್ಲಿ ಪ್ರತಿ ಬುಧವಾರ ಬೆಳಗ್ಗೆ 9 ರಿಂದ 11 ಗಂಟೆಗೆ ನನಗೆ ಫೋನ್ ಮಾಡಿ, ನನಗೆ ಆ ಸಮಯದಲ್ಲಿ ಕಿವಿ ಕೇಳಿಸುತ್ತದೆ. ನಾನು ನಿಮ್ಮೊಂದಿಗೆ ಮಾತಾಡುತ್ತೇನೆ ಎಂದು ತಮಾಷೆ ಮಾಡಿದ್ದಳು. ಅದನ್ನೇ ನಿಜವೆಂದು ತಿಳಿದ ಅಸಂಖ್ಯ ಅಭಿಮಾನಿಗಳು ಫೋನ್ ಮಾಡಿದ್ದರು. ಫೋನ್ ಕರೆ ಬಂದಾಗ, ಸ್ಪೀಕರ್ ಫೋನ್ ಆನ್ ಮಾಡುತ್ತಿದ್ದಳು. ಅಭಿಮಾನಿಗಳ ಮಾತುಗಳನ್ನು ಕೇಳಿ ಜೆಸೊನ್ ಸಂಜ್ಞೆ ಭಾಷೆ ಮೂಲಕ ಮಾಟ್ಲಿನ್‌ಗೆ ತಿಳಿಸುತ್ತಿದ್ದ. ಆಕೆ ಅದಕ್ಕೆ ಪ್ರತಿಕ್ರಿಯಿಸುತ್ತಿದ್ದಳು. ಈಗ ಮಾಟ್ಲಿನ್‌ಗೆ ವಾರದಲ್ಲಿ ಎರಡು ಗಂಟೆ ಕಿವಿ ಕೇಳಿಸುತ್ತದೆಂದು ಅವಳ ಅಭಿಮಾನಿಗಳು ನಂಬಿದ್ದರು. ಮಾಟ್ಲಿನ್ ಬದುಕಿನಲ್ಲಿ ಜೆಸೊನ್ ಪಾತ್ರ ದೊಡ್ಡದು. ಆಕೆಗಾಗಿ ಆತ ತನ್ನ ಬದುಕನ್ನು ಧಾರೆಯೆರೆದವನು. ಆರಂಭದಲ್ಲಿ ಆಕೆಯ ಗಂಡ ಜೆಸೊನ್ ನೆರವಿನಿಂದಲೇ ಪತ್ನಿಯೊಂದಿಗೆ ಮಾತಾಡುತ್ತಿದ್ದ. ಕ್ರಮೇಣ ಆತನೂ ಸಂಜ್ಞೆ ಭಾಷೆ ಕಲಿಯಲೇಬೇಕಾಯಿತು. ಮಾಟ್ಲಿನ್ ಸಿನಿಮಾ ನೋಡಬೇಕೆಂದು ಅನಿಸಿದಾಗಲೂ ಜೆಸೊನ್ನನ್ನು ಕರೆಯುತ್ತಿದ್ದಳು. ಆ ದಿನಗಳಲ್ಲಿ ಸಿನಿಮಾಗಳಿಗೆ ಸಬ್ ಟೈಟಲ್ (ಅಡಿ ಟಿಪ್ಪಣಿ)ಗಳು ಇರುತ್ತಿರಲಿಲ್ಲ.

ಸಿನಿಮಾದ ಡೈಲಾಗ್‌ಗಳನ್ನೆಲ್ಲ ಜೆಸೊನ್ ಆಕೆಗೆ ಹೇಳಬೇಕಾಗುತ್ತಿತ್ತು. ಎರಡು, ಎರಡೂವರೆ ಗಂಟೆಯ ಸಿನಿಮಾ ಸಂಭಾಷಣೆಯನ್ನು ನಿರಂತರವಾಗಿ ಜೆಸೊನ್ ಆಂಗಿಕ ಭಾಷೆಯಿಂದ ಹೇಳುತ್ತಿದ್ದ. ಸಿನಿಮಾ ಮುಗಿಯುವ ಹೊತ್ತಿಗೆ ಜೆಸೊನ್ ಸುಸ್ತಾಗಿ ಅಲ್ಲಿಯೇ ನೆಲಕ್ಕೊರಗುತ್ತಿದ್ದರೆ, ಮಾಟ್ಲಿನ್ ಅವನಿಗೆ ಸೇವೆ ಮಾಡುತ್ತಿದ್ದಳು. ಕೆಲವು ಸಂದರ್ಭಗಳಲ್ಲಿ ಆಕೆ ಒಂದೇ ದಿನದಲ್ಲಿ ಎರಡನೆಯ ಸಿನಿಮಾ ನೋಡುವ ಆಸೆ ವ್ಯಕ್ತಪಡಿಸಿದರೆ, ಜೆಸೊನ್ ಇಲ್ಲವೆನ್ನುತ್ತಿರಲಿಲ್ಲ. ಅದೇ ಉತ್ಸಾಹದಿಂದ ಎದ್ದು ನಿಂತು ಶುರು ಹಚ್ಚಿಕೊಳ್ಳುತ್ತಿದ್ದ. ಕಿವುಡು ತಂದೆ-ತಾಯಿಯ ಮಗನಾಗಿ ಹುಟ್ಟಿದ ಜೆಸೊನ್, ಮನೆಯಲ್ಲಿ ಮಾತು, ಹಾಡು, ಶಬ್ದಗಳನ್ನು ಕೇಳದೇ ಬೆಳೆದವ. ಐದು ವರ್ಷವಾಗುವ ತನಕ ಮನೆಯ ಹೊರಗಿನ ಶಬ್ದ ಬಿಟ್ಟರೆ, ಮೌನವೇ ಜಗತ್ತು ಎಂದು ಭಾವಿಸಿದವ. ಹೀಗಾಗಿ ಸಂಜ್ಞಾ ಭಾಷೆಯನ್ನು ಚಿಕ್ಕಮಗುವಾಗಿದ್ದಾಗಲೇ ಕಲಿಯುವುದು ಅನಿವಾರ್ಯವಾಯಿತು. ಸ್ಕೂಲ್ನಲ್ಲಿ ಸಂಜ್ಞಾಭಾಷೆಯನ್ನು ಶಿಷ್ಟವಾಗಿ ಕಲಿತ. ಜತೆಯಲ್ಲಿ ಸ್ಪಾನಿಶ್ ಭಾಷೆಯನ್ನೂ ಕಲಿತ.

ಮಾಟ್ಲಿನ್‌ನ ಇಂಟರ್‌ಪ್ರಿಟೇಟರ್ ಆಗಿ ಸೇರಿದ ನಂತರ, ಅವಳು ಸನ್ನೆ ಭಾಷೆಯಲ್ಲಿ ಹೇಳಿದ್ದನ್ನು ಇತರರಿಗೆ ಇಂಗ್ಲಿಷ್‌ನಲ್ಲಿ ಹೇಳಬೇಕಾಗುತ್ತಿತ್ತು. ಹೀಗಾಗಿ ಆತ ಇಂಗ್ಲಿಷನ್ನೂ ಸುಧಾರಿಸಿಕೊಂಡ. ಆತ ಕೇವಲ ದುಭಾಷಿಯಷ್ಟೇ ಆಗಿರಲಿಲ್ಲ, ಭಾವನೆಗಳ ಭಾಷಿಯೂ ಆಗಿದ್ದ. ಎಷ್ಟೋ ವೇಳೆ ಮಾಟ್ಲಿನ್ ಆಂಗಿಕವಾಗಿ ಹೇಳಿದ್ದನ್ನು ಜೆಸೊನ್ ಮಾತಿನಲ್ಲಿ ಕೇಳಿ ಪ್ರೇಕ್ಷಕರು ಅತ್ತಿದ್ದುಂಟು. ಸಭೆಯಲ್ಲಿ ಶ್ರವಣದೋಷವಿರುವ ಪ್ರೇಕ್ಷಕರಿಗಾಗಿ ಸಂಜ್ಞೆಯ ಮೂಲಕ ಹೇಳಲು ಜೆಸೊನ್ ಎಲ್ಲಿಲ್ಲದ ಬೇಡಿಕೆಯ ದುಭಾಷಿ. ಆತ ಲ್ಯಾರಿ ಕಿಂಗ್, ಎಲೆನ್, ಡೊನಾಲ್ಡ್ ಟ್ರಂಪ್, ಬರಾಕ್ ಒಬಾಮ ಮುಂತಾದವರಿಗೆ ಆಂಗಿಕ ದುಭಾಷಿಯಾಗಿದ್ದುಂಟು. ಆದರೂ ಆತ ಮಾಟ್ಲಿನ್‌ಳನ್ನು ಬಿಟ್ಟಿಲ್ಲ. ಆಕೆ ಬಿಡುವಿದ್ದಾಗ, ವಿಹಾರ ಅಥವಾ ವಿಶ್ರಾಂತಿಗೆ ತೆರಳಿದಾಗ, ಇಂಥ ಕಾರ್ಯಕ್ರಮಗಳನ್ನು ಒಪ್ಪಿಕೊಳ್ಳುತ್ತಾನೆ. ಇಲ್ಲದಿದ್ದರೆ ಅವನ ಸೇವೆಯೇನಿದ್ದರೂ ಮಾಟ್ಲಿನ್‌ಳಿಗೆ ಮೀಸಲು.

ತನ್ನ ಯಶಸ್ಸಿನಲ್ಲಿ ಬಹುಮುಖ್ಯ, ದೊಡ್ಡ ಪಾತ್ರವನ್ನು ವಹಿಸಿದ ಜೆಸೊನ್ನನ್ನು ಆಕೆ ತನ್ನ ವ್ಯವಹಾರದಲ್ಲಿ ಪಾರ್ಟನರ್ ಆಗಿ ಸೇರಿಸಿಕೊಂಡಿರುವುದು ಮಾಟ್ಲಿನ್‌ಳ ದೊಡ್ಡಗುಣ. ಮೂವತ್ತು ವರ್ಷಗಳಾದರೂ ಅವರ ಈ ವಿಚಿತ್ರ, ಅನೂಹ್ಯ ಸಂಬಂಧದಲ್ಲಿ ಬಿರುಕು ಕಾಣಿಸಿಕೊಂಡಿಲ್ಲ. ಎಷ್ಟೋ ವೇಳೆ ಮಾಟ್ಲಿನ್ ಹೇಳದಿರುವುದನ್ನೂ ಜೆಸೊನ್ ಹೇಳುತ್ತಾನೆಂಬ ಆರೋಪಗಳಿವೆ. ಆದರೆ ಅದು ಅವರ ಸಂಬಂಧಕ್ಕೆ ಮಾರಕವಾಗಿಲ್ಲ. ನನ್ನ ವಿರುದ್ಧ ಮಾಟ್ಲಿನ್‌ಗೆ ಚಾಡಿ ಹೇಳುವವರಿಗೆ ಒಂದೋ ಸಂಜ್ಞೆ ಭಾಷೆ ಗೊತ್ತಿರಬೇಕು. ಇಲ್ಲವೇ ಅದನ್ನೂ ನನ್ನ ಮೂಲಕವೇ ಆಕೆಗೆ ತಲುಪಿಸಬೇಕು ಎಂದು ಜೆಸೊನ್ ಅನೇಕ ಸಲ ತಮಾಷೆಗೆ ಹೇಳಿದ್ದುಂಟು.

ಕೆಲ ವರ್ಷದ ಹಿಂದೆ ನಾನು ಮಾರ್ಲಿ ಮಾಟ್ಲಿನ್ ಬರೆದ 'I Will Screem Later' ಎಂಬ ಆತ್ಮಕಥೆಯನ್ನು ಓದುತ್ತಿದ್ದೆ. ಪುಸ್ತಕದ ಮೊದಲರ್ಧದ ಬಳಿಕ ಇದು ಅವಳ ಕತೆಯೋ, ಜೆಸೊನ್ ಕತೆಯೋ ಎಂದು ಗೊಂದಲವಾಗುವಷ್ಟು ಎರಡೂ ಪಾತ್ರಗಳು ಒಬ್ಬರೊಳಗೇ ಬೆಸೆದುಕೊಂಡಿದೆ... ಅಲ್ಲಲ್ಲಿ ಮಾಟ್ಲಿನ್ ಮಾತುಗಳನ್ನು ಕೇಳುತ್ತಿದ್ದರೆ ಆಕೆ ಮರೆಯಾಗಿ ಜೆಸೊನ್ ಆವರಿಸಿಕೊಳ್ಳುತ್ತಿದ್ದ. ನಾವು ಮತ್ತೊಬ್ಬರ ಜೀವನದಲ್ಲಿ ಬದುಕು ಕಟ್ಟಿಕೊಂಡು, ಅವರ ಜೀವನವನ್ನೂ ಬೆಳೆಸುತ್ತಾ, ನಮ್ಮ ಬದುಕಿನ ಸಾರ್ಥಕ್ಯ ಕಾಣುವುದೆಂದರೆ ಇದೇನಾ?

ಪುಟಿನ್ ಬೀಸಿದ ಬಲೆಯಲ್ಲಿ ಟ್ರಂಪ್ ಸಿಕ್ಕಿಬಿದ್ದಿದ್ದಾರಾ?

ಪುಟಿನ್ ಬೀಸಿದ ಬಲೆಯಲ್ಲಿ ಟ್ರಂಪ್ ಸಿಕ್ಕಿಬಿದ್ದಿದ್ದಾರಾ? ಉಕ್ರೇನ್ ವಿಷಯದಲ್ಲಿ ಐತಿಹಾಸಿಕ ಮುಖಭಂಗ ಹಾಗೂ ಸೋಲು ಅನುಭವಿಸಿದ ಬಳಿಕ ಡೊನಾಲ್ಡ್ ಟ್ರಂಪ್ ರಷ್ಯಾವನ್ನು 'ಪೇಪರ್ ಟೈಗರ್ ಎಂದೂ, ಭಾರತವನ್ನು 'ಸತ್ತ ಆರ್ಥಿಕತೆ ಎಂದೂ ಕರೆದರು. ಅವೆರಡೂ ಸುಳ್ಳು ಎಂಬುದು ಜಗತ್ತಿಗೇ ಗೊತ್ತಿದೆ.

ಸಂಗತ

ಡಾ.ವಿಜಯ್ ದರಡಾ
vveditoped@gmail.com

ಕಳೆದ ವರ್ಷ ನಡೆದ ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಪ್ರಚಾರದ ವೇಳೆ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಡೊನಾಲ್ಡ್ ಟ್ರಂಪ್‌ಗೆ ಸಹಾಯ ಮಾಡಿದ್ದಾರೆ ಎಂಬ ಊಹಾಪೋಹಗಳು ಹರಡಿದ್ದವು. ಟ್ರಂಪ್ ಗೆದ್ದ ಮೇಲೆ ರಷ್ಯಾದ ಗುಪ್ತಚರ ಏಜೆನ್ಸಿಗಳು ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಫಲಿತಾಂಶದಲ್ಲಿ ವ್ಯಾಪಕ ಹಸ್ತಕ್ಷೇಪ ಮಾಡಿವೆ ಎಂಬ ಆರೋಪಗಳು ಕೂಡ ಕೇಳಿಬಂದಿದ್ದವು. ಆ ಆರೋಪ ಅಥವಾ ಊಹಾಪೋಹಗಳು ಎಷ್ಟು ನಿಜವೋ ಎಷ್ಟು ಸುಳ್ಳೋ ನನಗೆ ಗೊತ್ತಿಲ್ಲ. ಹಿಂದೆ ಸೋವಿಯತ್ ಒಕ್ಕೂಟ ಪತನಗೊಳ್ಳುವಲ್ಲಿ ಅಮೆರಿಕದ ಗುಪ್ತಚರ ಏಜೆನ್ಸಿ ಸಿಐಎ ಪಾತ್ರವಿತ್ತು ಎಂದೂ ಜನರು ಆರೋಪಿಸುತ್ತಾರೆ. ಅಂತಹ ಆರೋಪಗಳ ಸತ್ಯಾಸತ್ಯತೆ ಸಾಬೀತಾಗುವುದು ಕಷ್ಟ. ಏಕೆಂದರೆ ಇದಕ್ಕೆಲ್ಲ ಸಾಕ್ಷ್ಯ ಇರುವುದಿಲ್ಲ. ಆದರೆ, ಒಂದು ಪ್ರಬಲ ದೇಶದ ಚುನಾವಣೆಯಲ್ಲಿ ಇನ್ನೊಂದು ಪ್ರಬಲ ದೇಶದ ಗುಪ್ತಚರ ಏಜೆನ್ಸಿಗಳು ರಹಸ್ಯವಾಗಿ ರಾಜಕೀಯದ ಆಟ ಆಡುವುದು ಹೊಸತೇನಲ್ಲ. ಪ್ರಸ್ತುತ ಈಗಿನ ಬೆಳವಣಿಗೆಗಳನ್ನು ಗಮನಿಸುವುದಾದರೆ, ಉಕ್ರೇನ್ ವಿಷಯದಲ್ಲಿ ಪುಟಿನ್ ಬೀಸಿದ ಬಲೆಯಲ್ಲಿ ಟ್ರಂಪ್ ಸಿಕ್ಕಿಬಿದ್ದಿದ್ದಾರಾ ಎಂದು ಜಾಗತಿಕ ಮಟ್ಟದಲ್ಲಿ ದೊಡ್ಡ ಚರ್ಚೆ ಆರಂಭವಾಗಿದೆ.

ನಾನು ಗೆದ್ದ ಒಂದೇ ವಾರದಲ್ಲಿ ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ನಿಲ್ಲಿಸಿಬಿಡುತ್ತೇನೆ ಎಂದು ಟ್ರಂಪ್ ಬಡಾಯಿ ಕೊಚ್ಚಿಕೊಂಡಿದ್ದು ನಿಮಗೂ ನೆನಪಿರಬಹುದು! ನಂತರ ಶ್ವೇತಭವನದಲ್ಲಿ ನಡೆದ ಮಾತುಕತೆಯ ವೇಳೆ ಉಕ್ರೇನ್‌ನ ಅಧ್ಯಕ್ಷ ವೊಲೊದಿಮಿರ್ ಜೆಲೆನ್‌ಸ್ಕಿಗೆ ಟ್ರಂಪ್ ಹೇಗೆ ಬಹಿರಂಗವಾಗಿ ಅವಮಾನ ಮಾಡಿದರು ಎಂಬುದೂ ನಿಮಗೆ ನೆನಪಿರಬಹುದು. ಅಮೆರಿಕದ ಸಹಾಯ ಇಲ್ಲದಿದ್ದರೆ ರಷ್ಯಾದ ವಿರುದ್ಧ ಉಕ್ರೇನ್ ಕೆಲವೇ ತಾಸುಗಳ ಕಾಲ ಕೂಡ ಉಳಿಯಲು ಸಾಧ್ಯವಿಲ್ಲ ಎಂದೂ ಟ್ರಂಪ್ ನೇರವಾಗಿ ಹೇಳಿ ಅವಮಾನ ಮಾಡಿದ್ದರು. ಉಕ್ರೇನ್ ಈಗಾಗಲೇ ತಾನು ಕಳೆದುಕೊಂಡಿರುವ ಭೂಭಾಗಗಳನ್ನು ಮರೆತುಬಿಡಬೇಕು ಮತ್ತು ಅಲ್ಲಿ ಅಮೆರಿಕದ ಕಂಪನಿಗಳು ಅಪರೂಪದ ಖನಿಜಗಳನ್ನು ಗಣಿಗಾರಿಕೆ ಮೂಲಕ ತೆಗೆಯಲು ಬಿಡಬೇಕು ಎಂಬುದು ಅವರ ಆಸೆಯಾಗಿತ್ತು. ಅದಕ್ಕಾಗಿ ರಷ್ಯಾ ಜೊತೆಗೆ ಪಾಲುದಾರಿಕೆಯ ವ್ಯವಹಾರಕ್ಕೂ ಅವರು ಕೈಹಾಕಿದ್ದರು. ಉಕ್ರೇನ್ ಅಧ್ಯಕ್ಷ ಜೆಲೆನ್‌ಸ್ಕಿಗೆ ಬೇರೆ ಆಯ್ಕೆಯೇ ಇಲ್ಲ, ಹೀಗಾಗಿ ಕ್ರಮೇಣ ತನಗೆ ತಲೆಬಾಗುತ್ತಾರೆ ಎಂಬ ವಿಶ್ವಾಸ ಟ್ರಂಪ್‌ಗಿತ್ತು. ಹೀಗಾಗಿ ಜೆಲೆನ್‌ಸ್ಕಿ ಮೇಲೆ ಸಾಕಷ್ಟು ಒತ್ತಡ ಹೇರಿದ್ದರು. ಈ ನಡುವೆ, ರಷ್ಯಾ ಕೂಡ ಹಟ ಬಿಟ್ಟು ಸಂಧಾನಕ್ಕೆ ಬರಬಹುದು ಎಂಬ ನಿರೀಕ್ಷೆ ಕೆಲ ಕಾಲ ಹುಟ್ಟಿಕೊಂಡಿತ್ತು. ಆದರೆ ಪುಟಿನ್ ತಲೆಯಲ್ಲಿ ಸಂಪೂರ್ಣ ಬೇರೆಯದೇ ಯೋಚನೆಗಳಿದ್ದವು. ಅವರಿಗೆ ಜಗತ್ತಿನೆದುರು ತಾನೆಷ್ಟು ಶಕ್ತಿಶಾಲಿ ಎಂಬುದನ್ನು ತೋರಿಸಬೇಕಿತ್ತು.

ಆಗಸ್ಟ್ 15ರಂದು ಅಲಾಸ್ಕಾದಲ್ಲಿ ಟ್ರಂಪ್ ಮತ್ತು ಪುಟಿನ್ ಭೇಟಿಯಾದರು. ಆ ಭೇಟಿಯ ಬಳಿಕ ಪುಟಿನ್



ಮೊದಲಿಗಿಂತಲೂ ಹೆಚ್ಚು ಶಕ್ತಿಶಾಲಿಯಾಗಿ ಹೊರಹೊಮ್ಮಿದರು. ತಮ್ಮ ದೇಶದ ಸೈನಿಕರು ನಡು ಬಗ್ಗಿಸಿ ಪುಟಿನ್ ಅವರ ಸ್ವಾಗತಕ್ಕೆ ಕೆಂಪು ಹಾಸನ್ನು ಹಾಸುವುದು ನೋಡಿ ಅಮೆರಿಕನ್ನರಿಗೆ ಬಹಳ ಬೇಸರವಾಗಿತ್ತು. ಎರಡೂ ದೇಶಗಳ ನಾಯಕರು ನಗುನಗುತ್ತಾ ಭೇಟಿಯಾದರು, ಆದರೆ ಅಲ್ಲಿಂದ ತೆರಳುವಾಗ ಇಬ್ಬರ ನಡುವೆ ತಣ್ಣಗಿನ ಮುನಿಸು ಮನೆ ಮಾಡಿತ್ತು. ಸಭೆಯ ಬಳಿಕ ಪತ್ರಕರ್ತರು ಕೇಳುವ ಐದು ಪ್ರಶ್ನೆಗಳಿಗೆ ಅವರು ಉತ್ತರಿಸುವುದು ನಿಗದಿಯಾಗಿತ್ತು. ಆದರೆ ಪತ್ರಿಕಾಗೋಷ್ಠಿಯೇ ನಡೆಯಲಿಲ್ಲ. ಅವರಿಬ್ಬರೂ ಒಟ್ಟಿಗೇ ಊಟ ಕೂಡ ಮಾಡಲಿಲ್ಲ. ತಾನು ಸಭೆಗೆ ತೆಗೆದುಕೊಂಡು ಬಂದಿದ್ದ ಕರಡು ಒಪ್ಪಂದಕ್ಕೆ ಪುಟಿನ್ ಸಹಿ ಹಾಕುತ್ತಾರೆಂಬ ವಿಶ್ವಾಸದಲ್ಲಿ ಟ್ರಂಪ್ ಇದ್ದರು. ಸಹಿ ಹಾಕಿದ್ದರೆ ನೊಬೆಲ್ ಶಾಂತಿ ಪ್ರಶಸ್ತಿ ಪಡೆದುಕೊಳ್ಳುವ ಹಾದಿ ಸುಗಮವಾಗುತ್ತದೆ ಎಂಬುದು ಅವರ ಲೆಕ್ಕಾಚಾರವಾಗಿತ್ತು. ಆದರೆ ಪುಟಿನ್ ಮಹಾನ್ ತಂತ್ರಗಾರ. ಟ್ರಂಪ್ ದೊಡ್ಡ ಉದ್ಯಮಿಯಿರಬಹುದು. ತಾನೊಬ್ಬ ಅದ್ಭುತ ನಾಯಕ ಎಂಬ ಭ್ರಮೆಯೂ ಅವರಿಗೆ ಇರಬಹುದು. ಆದರೆ ಪುಟಿನ್ ಗುಪ್ತಚರ ಜಾಲದ ಬಲದಿಂದ ಆಡಳಿತ ನಡೆಸುವ ಚಾಣಾಕ್ಷ ಹಾಗೂ ನುರಿತ ಆಡಳಿತಗಾರ. ಸದ್ಯಕ್ಕೆ ಜಗತ್ತಿನಲ್ಲಿ ಅವರಿಗಿಂತ ಬುದ್ಧಿವಂತ ತಂತ್ರಗಾರ ಯಾರಾದರೂ ಇದ್ದಾರಾ?

ಅಲಾಸ್ಕಾ ಸಭೆಯ ಬಳಿಕ ನಾನು ಪುಟಿನ್‌ರ ದೂರದೃಷ್ಟಿಯ ಯೋಜನೆಯ ಬಗ್ಗೆ ಬರೆದಿದ್ದೆ. ಸಭೆಗೆ ಬರುವಾಗ ಪುಟಿನ್‌ರ ಜೊತೆಗಿದ್ದ ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್ರೋವ್ 'ಸಿಸಿಸಿಪಿ' ಎಂದು ಬರೆದಿದ್ದ ಟಿ-ಶರ್ಟ್ ಧರಿಸಿದ್ದರು. ಅದು ಹಿಂದಿನ ಸೋವಿಯತ್ ಯೂನಿಯನ್‌ಗೆ (ಯುಎಸ್‌ಎಸ್‌ಆರ್) ರಷ್ಯನ್ ಭಾಷೆಯಲ್ಲಿರುವ ಹೆಸರಿನ ಸಂಕ್ಷಿಪ್ತ ರೂಪ. ಟ್ರಂಪ್‌ಗೆ ಸಂದೇಶ ನೀಡಲೆಂದೇ ಅವರು ಆ ಟಿ-ಶರ್ಟ್ ಧರಿಸಿದ್ದರು. 'ಹಿಂದೊಮ್ಮೆ ಸೋವಿಯತ್ ಯೂನಿಯನ್‌ನಲ್ಲಿದ್ದ ಎಲ್ಲಾ ದೇಶಗಳನ್ನೂ ನಾವು ಮತ್ತೆ ಒಂದುಗೂಡಿಸಲು ಹೊರಟಿದ್ದೇವೆ ಎಂಬುದರ ಸುಳಿವು ಅದರಲ್ಲಿತ್ತು. ಆದ್ದರಿಂದಲೇ ಪುಟಿನ್ ಯಾವುದೇ ರಾಜಿ ಸೂತ್ರಕ್ಕೆ, ಅದರಲ್ಲೂ ಟ್ರಂಪ್ ಭಾಗಿಯಾಗಿರುವ ಯಾವುದೇ ಒಪ್ಪಂದಕ್ಕೆ ಮಣಿಯಲು ತಯಾರಿಲ್ಲ. ಪುಟಿನ್ ತನ್ನ ಸ್ನೇಹಿತ ಎಂದು ಟ್ರಂಪ್ ಭಾವಿಸಿದ್ದಾರೆ. ಆದರೆ ರಾಜಕಾರಣದ ಮೂಲಭೂತ ತತ್ವವನ್ನೇ ಅವರು ಮರೆತಿದ್ದಾರೆ. ರಾಜಕಾರಣದಲ್ಲಿ ಶಾಶ್ವತ ಶತ್ರು ಅಥವಾ ಶಾಶ್ವತ ಮಿತ್ರ ಯಾರೂ ಇರುವುದಿಲ್ಲ. ಅಲ್ಲಿ ಕೇವಲ ಹಿತಾಸಕ್ತಿಗಳಿರುತ್ತವೆ. ಟ್ರಂಪ್ ಯಾವಾಗಲೂ ತಾನು ಭಾರತದ ಪ್ರಧಾನಿ ನರೇಂದ್ರ ಮೋದಿಯ ಖಾಸಾ ಸ್ನೇಹಿತ ಎಂದು ಹೇಳಿಕೊಳ್ಳುತ್ತಿದ್ದರು. ಆದರೆ ಈಗೇಕೆ ವಿರೋಧಿಯಂತೆ ವರ್ತಿಸುತ್ತಿದ್ದಾರೆ? ಏಕೆ ಭಾರತದ ಮೇಲೆ ಒಂದಾದ ಮೇಲೊಂದು ತೆರಿಗೆ ವಿಧಿಸುತ್ತಿದ್ದಾರೆ? ಭಾರತವನ್ನು ಸತ್ತ ಆರ್ಥಿಕತೆ ಎಂದು ಕರೆಯಲು ಅವರು ಸ್ವಲ್ಪವೂ ಹಿಂದೆ ಮುಂದೆ ನೋಡಲಿಲ್ಲ.

ರಷ್ಯಾಕ್ಕೆ ಬೆಣ್ಣೆ ಸವರಿ ಲಾಭ ಮಾಡಿಕೊಳ್ಳಲು ತಾನು ಮಾಡಿದ ತಂತ್ರ ವಿಫಲವಾದಾಗ ಟ್ರಂಪ್ ಮರುಕ್ಷಣವೇ 'ರಷ್ಯಾ ಬರೀ ಪೇಪರ್ ಟೈಗರ್ ಎಂದು ಮೂದಲಿಸಿದರು. ಆದರೆ ರಷ್ಯಾ ಪೇಪರ್ ಟೈಗರ್ ಅಲ್ಲ ಎಂಬುದು ಇಡೀ ಜಗತ್ತಿಗೇ ಗೊತ್ತು! ಟ್ರಂಪ್ ಹೇಳಿದಾಕ್ಷಣ ಯಾರೂ ಅದನ್ನು ಒಪ್ಪುವುದಿಲ್ಲ. ಇತಿಹಾಸದುದ್ದಕ್ಕೂ ರಷ್ಯಾ ಯಾರಿಗೂ ತಲೆಬಾಗಿಲ್ಲ. ಅದೊಂದು ದೈತ್ಯ ಶಕ್ತಿ. ಟ್ರಂಪ್ ಹೇಳಿದಂತೆ ಅದು ಪೇಪರ್ ಟೈಗರ್ ಆಗಿದ್ದರೆ ನ್ಯಾಟೋ ದೇಶಗಳೆಲ್ಲ ಒಂದಾಗಿ ಉಕ್ರೇನ್‌ನ ಬೆನ್ನಿಗೆ ನಿಂತಿದ್ದರೂ ಆ ದೇಶದ ಕಾಲು ಭಾಗದಷ್ಟು ಭೂಮಿಯನ್ನು ಪುಟಿನ್ ವಶಪಡಿಸಿಕೊಂಡಿರುವುದು ಹೇಗೆ? ಇಷ್ಟಕ್ಕೂ ಈ ವರ್ಷ ಫೆಬ್ರವರಿ 12ರಂದು ಬ್ರಸೆಲ್ಸ್‌ನಲ್ಲಿ ನಡೆದ ರಕ್ಷಣಾ ಶೃಂಗದಲ್ಲಿ ಅಮೆರಿಕದ ರಕ್ಷಣಾ ಸಚಿವ ಪೀಟ್ ಹೆಗ್ಸೆತ್ ಏನು ಹೇಳಿದರು ಎಂಬುದನ್ನೊಮ್ಮೆ ನೆನಪಿಸಿಕೊಳ್ಳಬೇಕು. 'ಉಕ್ರೇನ್ ಮತ್ತೆ ಮೊದಲಿನಂತಾಗಬೇಕು. ಅದು ಸಾರ್ವಭೌಮ ಸ್ವತಂತ್ರ ದೇಶವಾಗಿ, ಸಮೃದ್ಧವಾಗಿ ಬೆಳೆಯಬೇಕು ಎಂದು ನಾವೆಲ್ಲರೂ ಬಯಸುತ್ತೇವೆ. ಆದರೆ, ಅದು 2014ಕ್ಕಿಂತ ಮೊದಲು ಹೊಂದಿದ್ದ ಗಡಿಗಳನ್ನು ಮತ್ತೆ ಹೊಂದಬೇಕು ಎಂದು ಬಯಸುವುದು ವಾಸ್ತವವಾದಿ ನಿರೀಕ್ಷೆ ಅಲ್ಲ. ಆ ಗುರಿಯ ಸಾಧನೆಗೆ ಹೊರಟರೆ ಯುದ್ಧ ಇನ್ನಷ್ಟು ದೀರ್ಘವಾಗುತ್ತದೆ. ಅದರಿಂದ ಇನ್ನಷ್ಟು ಹಾನಿಯಾಗುತ್ತದೆ' ಎಂದು ಅವರು ಹೇಳಿದ್ದರು.

ತಮ್ಮ ದೇಶದ ರಕ್ಷಣಾ ಮಂತ್ರಿಯ ಮಾತನ್ನೇ ಟ್ರಂಪ್ ಕೇಳಿಸಿಕೊಂಡಿಲ್ಲವೆ? ಖಂಡಿತ ಕೇಳಿಸಿಕೊಂಡಿರುತ್ತಾರೆ. ಆದರೆ ಟ್ರಂಪ್‌ಗೆ ತನ್ನ ನಿಲುವು ಬದಲಿಸಲು ಎಷ್ಟು ಹೊತ್ತೂ ಬೇಡ. ಕ್ಷಣಕ್ಕೊಂದು ಮುಖವಾಡ ಧರಿಸಿಕೊಂಡು ಬರುವ ಕಲೆ ಅವರಿಗೆ ಸಿದ್ಧಿಸಿದೆ. ಅವರು ಈಗೊಂದು ಹೇಳಿದರೆ, ಇನ್ನೊಂದು ತಾಸಿನಲ್ಲೇ ಅದಕ್ಕೆ ವ್ಯತಿರಿಕ್ತ ಹೇಳಿಕೆ ನೀಡಬಲ್ಲರು. ಅವರು ರಷ್ಯಾವನ್ನು ಪೇಪರ್ ಟೈಗರ್ ಎಂದು ಕರೆದ ಕೂಡಲೇ ಪುಟಿನ್ ಬಹಳ ತೀಕ್ಷ್ಣವಾಗಿ ಪ್ರತಿಕ್ರಿಯಿಸಿ, ಟ್ರಂಪ್‌ಗೊಂದು ಮರುಪ್ರಶ್ನೆ ಎಸೆದಿದ್ದರು: 'ರಷ್ಯಾ ಪೇಪರ್ ಟೈಗರ್ ಆಗಿದ್ದರೆ ನ್ಯಾಟೋ ಏನು?' ಈ ಪ್ರಶ್ನೆಯು ಅಮೆರಿಕ ಮತ್ತು ಯುರೋಪ್‌ನ ಮರ್ಮಕ್ಕೇ ತಾಗುವಂತಿತ್ತು. ಪುಟಿನ್ ಚೆನ್ನಾಗಿ ಕುಟುಕಿದ್ದರು. ನ್ಯಾಟೋ ಮತ್ತು ಅಮೆರಿಕದವರು ಉಕ್ರೇನ್‌ಗೆ ಅಷ್ಟೊಂದು ಸಹಾಯ ಮಾಡುತ್ತಿದ್ದರೂ ಯುದ್ಧದಲ್ಲಿ ಉಕ್ರೇನ್ ಸೋಲುತ್ತಿರುವುದು ಏಕೆ ಎಂಬುದು ಅವರ ಪ್ರಶ್ನೆಯಾಗಿತ್ತು.

ಅದೇ ವೇಳೆ, ಅವರು ಯುರೋಪ್‌ಗೂ ಕಠಿಣ ಎಚ್ಚರಿಕೆ ನೀಡಿದ್ದರು. ಯುದ್ಧದ ಪರಿಸ್ಥಿತಿಗೆ ತುಪ್ಪ ಸುರಿಯಲು ಯುರೋಪ್ ಮುಂದಾದರೆ ರಷ್ಯಾ ಗಂಭೀರವಾದ ಕ್ರಮ ಕೈಗೊಳ್ಳಲು ಹಿಂಜರಿಯುವುದಿಲ್ಲ ಎಂದು ಅವರು ನೇರವಾಗಿಯೇ ಹೇಳಿದ್ದರು.

ನಂತರ ಅವರು ವಾಷಿಂಗ್ಟನ್‌ನ ಆಷಾಢಭೂತಿತನವನ್ನೂ ಬಯಲು ಮಾಡಿದ್ದರು. ಅಮೆರಿಕವೇ ರಷ್ಯಾದಿಂದ ಸಂಸ್ಕರಿತ ಯುರೇನಿಯಂ ಖರೀದಿಸುತ್ತದೆ, ಆದರೆ ಭಾರತ ಮತ್ತು ಇತರ ದೇಶಗಳು ರಷ್ಯಾದಿಂದ ಇಂಧನ ಖರೀದಿ ಮಾಡಬಾರದು ಎಂದು ತಾಕೀತು ಮಾಡುತ್ತದೆ; ಇದು ಯಾವ ನ್ಯಾಯ ಎಂದು ಪುಟಿನ್ ಪ್ರಶ್ನಿಸಿದ್ದರು.

ಇದನ್ನೆಲ್ಲಾ ನೋಡಿದರೆ ಟ್ರಂಪ್ ಮತ್ತು ಪುಟಿನ್ ನಡುವಿನ ವೈಮನಸ್ಯ ಇನ್ನಷ್ಟು ವಿಕೋಪಕ್ಕೆ ಹೋಗುತ್ತದೆ. ರಷ್ಯಾದ ವಶದಲ್ಲಿರುವ ಉಕ್ರೇನ್‌ನ ಪ್ರದೇಶಗಳಲ್ಲಿ ಗಣಿಗಾರಿಕೆ ನಡೆಸಿ ಅಮೂಲ್ಯ ಖನಿಜಗಳನ್ನು ತೆಗೆದು ಹಣ ಗಳಿಸುವ ಟ್ರಂಪ್‌ರ ಕನಸನ್ನು ಪುಟಿನ್ ಛಿದ್ರಗೊಳಿಸಿದ್ದಾರೆ. ಅದಕ್ಕಿಂತಲೂ ನೋವಿನ ಸಂಗತಿಯೇನೆಂದರೆ, ನೊಬೆಲ್ ಶಾಂತಿ ಪ್ರಶಸ್ತಿ ಸ್ವೀಕರಿಸುವ ಟ್ರಂಪ್‌ರ ಮಹದಾಸೆಗೆ ಪುಟಿನ್ ತಣ್ಣೀರು ಎರಚಿದ್ದಾರೆ.

ಟ್ರಂಪ್ ಏನನ್ನು ಬೇಕಾದರೂ ಸಹಿಸಿಕೊಳ್ಳಬಲ್ಲರು, ಆದರೆ ನೊಬೆಲ್ ಶಾಂತಿ ಪ್ರಶಸ್ತಿ ಕೈತಪ್ಪುವುದನ್ನು ಮಾತ್ರ ಸಹಿಸಿಕೊಳ್ಳಲಾರರು! ಅದೇಕೋ ಆ ಪ್ರಶಸ್ತಿಯ ಮೇಲೆ ಅವರಿಗೆ ವಿಪರೀತ ಎನ್ನುವಷ್ಟು ವ್ಯಾಮೋಹ ಬಂದುಬಿಟ್ಟಿದೆ.

ನನ್ನ ಸಲಹೆ ಇಷ್ಟೆ. ಟ್ರಂಪ್‌ಗೆ ನೊಬೆಲ್ ಪ್ರಶಸ್ತಿ ಬೇಕೇ ಬೇಕು ಅಂತಾದರೆ ದಯವಿಟ್ಟು ಕೊಡಿ. ಆಗಲಾದರೂ ಜಗತ್ತಿನಲ್ಲಿ ಒಂದಷ್ಟು ಶಾಂತಿ ಸ್ಥಾಪನೆಯಾಗಬಹುದು!

(ಲೇಖಕರು ಹಿರಿಯ ಪತ್ರಿಕೋದ್ಯಮಿ)

ಭಟ್ಟರ್ ಸ್ಕಾಚ್

- **ಪ್ರಸನ್ನ ಮಾಡಗೇರಿ, ಚಿತ್ರದುರ್ಗ**
ಭಟ್ರೇ, ನಿಮ್ಮನ್ನು ಬೆಂಗಳೂರಿನಲ್ಲಿ ಹಿಡಿಯುವುದೇ ಕಷ್ಟ, ಇನ್ನು ವಿದೇಶದಲ್ಲಿ ಹೇಗೆ ಹಿಡಿಯೋದು?
- ನಾನೇ ಹಿಡಿಯುತ್ತೇನೆ ಬಿಡಿ!

- **ಸಿ.ಕೆ.ವಿನೋದ, ನಂಜನಗೂಡು**
ಭಟ್ರೇ, ಆಕೆಯ ಪ್ರೀತಿಯ ಸುನಾಮಿಗೆ ಕೊಚ್ಚಿಹೋದರೆ ನಾನೇನಾಗಬಹುದು?
- ಸಿಂಗಲ್ ಕಾಲಮ್ಮು ನಿಧನ ಸುದ್ದಿ!

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಸಿದ್ದರಾಮಯ್ಯ ಮತ್ತು ನೀವು ಭೇಟಿಯಾದರೆ ಯಾವ ವಿಷಯ ಮಾತಾಡ್ತೀರಿ?
- ಕ್ಲೈಮೇಟ್ ಚೇಂಜ್, ಗ್ಲೋಬಲ್ ವಾರ್ಮಿಂಗ್!

- **ರುಕ್ಕು, ಚಾಮರಾಜಪೇಟೆ**
ಭಟ್ರೇ, ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದರೆ ಚೆಂದ. ಅದೇ ನಲ್ಲೆ?
- ಬೇಕಂತಲೇ ನಲ್ಲನ ತೋಳತೆಕ್ಕೆಗೆ ಬಿದ್ದರೆ!

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ರಾತ್ರಿಯಾದರೆ ಪ್ರಣಯ ಗೀತೆ ಹಾಡೋಣ ಅಂತಾಳಲ್ಲ?
- ಪ್ರಣಯವೇ ಪಲ್ಲಂಗಕ್ಕೆ ಸೋಪಾನ ಎಂದು ಭಾವಿಸಿರಬೇಕು!

- **ರಾಘವೇಂದ್ರ ಪಾಟೀಲ ಎಂ.ಕೆ., ಹುಬ್ಬಳ್ಳಿ**
ಭಟ್ರೇ, ಪ್ರತಿ ರಾತ್ರಿ ನಿಜಗುಣಾನಂದ ಸ್ವಾಮಿ ಕನಸಿನಲ್ಲಿ ಬರ್ತಾರಲ್ಲ?
- ಅಲ್ಲೂ ಬಂದು ಪ್ರವಚನ ಮಾಡುತ್ತಿಲ್ಲ ತಾನೇ?!

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ರೈಲ್ವೆ ಸಚಿವ ಸೋಮಣ್ಣ ಸುಳ್ಳು ಹೇಳುವುದಿಲ್ಲವಂತೆ?
- ಹಾಗಾದರೆ ಅವರನ್ನು ಸೋಮಣ್ಣ ಅಂತ ಹೇಗೆ ಕರೆಯೋದು!

- **ಪ್ರದೀಪ ಜಟ್ಟೂರು, ಕೆಂಗೇರಿ**
ಭಟ್ರೇ, ನೀವು ಯಾರ ಬಗ್ಗೆಯೂ ಕೆಟ್ಟದ್ದನ್ನು ನುಡಿಯುವುದಿಲ್ಲವಲ್ಲ, ?
- ಕಾರಣ, ಯಾರ ಬಗ್ಗೆಯೂ ಕೆಟ್ಟದ್ದನ್ನು ಯೋಚಿಸುವುದಿಲ್ಲ!

- **ರಾಘವೇಂದ್ರ ಬರಗೂರು, ಬೆಂಗಳೂರು**
ಭಟ್ರೇ, ತುಂಗಭದ್ರಾ ಅಣೆಕಟ್ಟಿನ ತೂತನ್ನಾದರೂ ಮುಚ್ಚಬಹುದು, ಆದರೆ..?
- ಯತ್ನಾಳ್ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ!

- **ರಮೇಶ ಬಂಕಾಪುರ, ಬಂಕಾಪುರ**
ಭಟ್ರೇ, ಕೆಲವರು ಕೊಬ್ಬರಿ ಎಣ್ಣೆ ಒಳ್ಳೆಯದು ಅಂತಾರೆ, ಇನ್ನು ಕೆಲವರು ಸೂರ್ಯಕಾಂತಿ ಒಳ್ಳೆಯದು ಅಂತಾರೆ, ನಿಮ್ಮ ಪ್ರಕಾರ ಯಾವುದು ಒಳ್ಳೆಯದು?
- ಬರೀ 'ಎಣ್ಣೆ'!

- **ಕೃಷ್ಣೇಗೌಡ ಕೆ.ವಿ., ಮಂಡ್ಯ**
ಭಟ್ರೇ, ಮುಸ್ಲಿಮರಿಗೆ ಮತದಾನದ ಹಕ್ಕು ಬೇಡ ಎಂದು ಸ್ವಾಮೀಜಿಯೊಬ್ಬರು ಹೇಳಿದ್ದಾರಲ್ಲ?
- ಆಗ 'ಮುಸ್ಲಿಂ ವೋಟ್ ಬ್ಯಾಂಕ್' ಅನ್ನು ಏನು ಮಾಡೋದು?!

ಚಿಂಪಾಂಜಿಗಳ ನಾಡಿನ ಸವಿ ಜೇನು

ಜೇನ್ ಗುಡಾಲ್ ಚಿಂಪಾಂಜಿಗಳನ್ನು ತನ್ನ ಮನೆಯ ಸದಸ್ಯರಿಗಿಂತ ಹೆಚ್ಚಾಗಿ ಪ್ರೀತಿಸಿದವರಾಗಿದ್ದರು. ಇವುಗಳ ಬಗ್ಗೆ ಅವರ ಅಧ್ಯಯನಗಳು ಚಿಂಪಾಂಜಿಗಳ ಬಗ್ಗೆಯೂ, ಆ ಮೂಲಕ ಮನುಷ್ಯರ ವರ್ತನೆಯ ಬಗ್ಗೆ ಹೊಸ ಒಳನೋಟಗಳನ್ನು ಕೊಟ್ಟವು.



ಕಾಡುದಾರಿ
ಹರೀಶ್ ಕೇರ
vveditoped@gmail.com

ಕಾಡಿನಲ್ಲಿ ಇರುವಾಗ ಬೋರ್ ಎಂಬುದೇ ಇಲ್ಲ. ಏನಾದರೂ ಒಂದು ಸಂಗತಿ ನಡೆಯುತ್ತಿರುತ್ತದೆ. ಒಮ್ಮೆ ಹೀಗೆ ಒಬ್ಬಂಟಿ ನೋಡುತ್ತಿದ್ದೆ. ಅಲ್ಲಿ ಸಗಣಿ ಹುಳಗಳಿದ್ದವು. ಸಗಣಿ ಅಥವಾ ಲದ್ದಿಯನ್ನು ಸಣ್ಣ ಉಂಡೆಗಳಾಗಿ ಮಾಡಿ ಅವುಗಳನ್ನು ಉರುಳಿಸಿಕೊಂಡು ಹೋಗಿ ತಾವೇ ಮಾಡಿದ ಪುಟ್ಟ ಕುಳಿಗಳಿಗೆ ಬೀಳಿಸುತ್ತಿದ್ದವು. ಅದು ಅವು ಮೊಟ್ಟೆಯಿಡಲು ಮಾಡಿಕೊಂಡ ಬಿಲಗಳು. ಎರಡು ಗಂಡು ಸಗಣಿ ಹುಳಗಳು ಹೀಗೆ ತಮ್ಮ ಉಂಡೆಗಳನ್ನು ಉರುಳಿಸುತ್ತ ಹೋಗುತ್ತಿದ್ದಾಗ ಎದುರುಬದುರಾದವು. ಅವುಗಳಿಗೆ ಜಗಳ ಶುರುವಾಯಿತು. ಅವು ಜಗಳ ಮಾಡುತ್ತಿರುವಾಗಲೇ, ತನ್ನ ಉಂಡೆಯನ್ನು ಉರುಳಿಸುತ್ತ ಹೋಗುತ್ತಿದ್ದ ಇನ್ನೊಂದು ಹೆಣ್ಣು ಹುಳ, ಆ ಗಂಡುಗಳಲ್ಲಿ ಒಂದರ ಉಂಡೆಯಿಂದ ಸ್ವಲ್ಪ ಸಗಣಿ ಕಿತ್ತು ತನ್ನದಕ್ಕೆ ಸದ್ದಿಲ್ಲದೆ ಸೇರಿಸಿಕೊಂಡು ಮುಂದುವರಿಯಿತು. ನೋಡ್ತಾ ಇದ್ದರೆ ಸಣ್ಣ ಕ್ರಿಮಿಕೀಟಗಳ ವರ್ತನೆಯಲ್ಲೂ ಇಂಥದನ್ನೆಲ್ಲ ಗಮನಿಸಬಹುದು.

ಡೆನ್ವರ್ ಏರ್‌ಪೋರ್ಟ್‌ನಲ್ಲಿದ್ದೆ. ಒಂದಷ್ಟು ಗುಬ್ಬಚ್ಚಿಗಳಿದ್ದವು ಅಲ್ಲಿ. ಒಂದು ಹೆಣ್ಣು, ಒಂದು ಗಂಡು. ಅದು ಅವುಗಳ ಮಿಲನದ ಸನ್ನಿವೇಶ. ಹೆಣ್ಣು ಗುಬ್ಬಿ ಬಾಯಿ ತೆರೆಯುತ್ತಾ ರೆಕ್ಕೆಗಳನ್ನು ಫಟಫಟಿಸುತ್ತಿತ್ತು. ಯಾರೋ ನೆಲದಲ್ಲಿ ಬ್ರೆಡ್ ಚೂರುಗಳನ್ನು ಬೀಳಿಸಿಕೊಂಡು ಹೋಗಿದ್ದರು. ಗಂಡು ಗುಬ್ಬಿ ಅದನ್ನು ಹೆಕ್ಕಿ ತಂದು ಹೆಣ್ಣಿಗೆ ನೀಡಿ ಅದರ ಒಲವು ಗಳಿಸಲು ಯತ್ನಿಸುತ್ತಿತ್ತು. ಇನ್ನೇನು ಬ್ರೆಡ್ ಬಳಿ ಸಾರಿ ಅದನ್ನು ಹೆಕ್ಕಬೇಕು ಅನ್ನುವಷ್ಟರಲ್ಲಿ ಯಾರೋ ಅಲ್ಲಿ ನಡೆದುಬರುತ್ತಿದ್ದರು, ಮಾತಾಡುತ್ತಿದ್ದರು. ಗಂಡು ಬೆದರಿ ದೂರ ಹೋಗುತ್ತಿತ್ತು. ಮೂರ್ನಾಲ್ಕು ಸಲ ಹೀಗಾಯಿತು. ಈ ಡ್ರಾಮಾ ಎಲ್ಲ ಗಮನಿಸುತ್ತಾ ಹತ್ತು ನಿಮಿಷ ಕೂತಿದ್ದೆ. ನಿಸರ್ಗದ ನಡುವೆ ಬೋರ್ ಆಗುವ ಅಗತ್ಯ ಎಲ್ಲಿದೆ ಹೇಳಿ!

ಮೇಲಿನ ಎರಡೂ ಘಟನೆಗಳನ್ನು ಹೇಳಿದವಳು ಜೇನ್ ಗುಡಾಲ್. ಮೊದಲಿನ ಘಟನೆ ಓದುವಾಗ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕುವೆಂಪು ಬರೆದ ಸಗಣಿ ಹುಳಗಳ ವರ್ಣನೆ ನೆನಪಿಗೆ ಬರುತ್ತದೆ ಅಲ್ಲವೇ? ಅಂದ ಹಾಗೆ ಜೇನ್ ಗುಡಾಲ್ ಇನ್ನಿಲ್ಲ. ಅಕ್ಟೋಬರ್ 1ರಂದು ನಿಧನರಾದಾಗ ಆಕೆಗೆ 91 ವಯಸ್ಸಾಗಿತ್ತು. ಆದರೆ ಮನುಕುಲ ಮರೆಯಲಾಗದ ಕೆಲವು ಕೊಡುಗೆಗಳನ್ನು ಕೊಟ್ಟವರು ಈಕೆ. ಇವರು ಪ್ರಾಣಿಗಳ ವರ್ತನೆಯನ್ನು ಅಧ್ಯಯನ ಮಾಡಿದ ಎಥಾಲಜಿಸ್ಟ್ ಮತ್ತು ಚಿಂಪಾಂಜಿಗಳನ್ನು ಸ್ಟಡಿ ಮಾಡಿದ ಪ್ರೈಮೇಟಾಲಜಿಸ್ಟ್ ಎಂದು ಹೇಳಿದರೆ ಆಕೆಯ ವೃತ್ತಿಪರತೆಯ ಒಂದು ಮುಖವನ್ನು ಹೇಳಿದಂತಾದೀತು. ಅದೆಲ್ಲಕ್ಕಿಂತ ಹೆಚ್ಚಾಗಿ ಆಕೆ ಚಿಂಪಾಂಜಿಗಳನ್ನು ತನ್ನ ಮನೆಯ ಸದಸ್ಯರಿಗಿಂತ ಹೆಚ್ಚಾಗಿ ಪ್ರೀತಿಸಿದವರಾಗಿದ್ದರು. ಇವುಗಳ ಬಗ್ಗೆ ಅವರ ಅಧ್ಯಯನಗಳು ಚಿಂಪಾಂಜಿಗಳ ಬಗ್ಗೆಯೂ, ಆ ಮೂಲಕ ಮನುಷ್ಯರ ವರ್ತನೆಯ ಬಗ್ಗೆ ಹೊಸ ಒಳನೋಟಗಳನ್ನು ಕೊಟ್ಟವು.

ನೆಟ್‌ಫ್ಲಿಕ್ಸ್ ಈಕೆಯ ಬಗ್ಗೆ 'ಫೇಮಸ್ ಲಾಸ್ಟ್ ವರ್ಡ್ಸ್: ಜೇನ್ ಗುಡಾಲ್' ಎಂಬ ವಿಲಕ್ಷಣ ಕಾರ್ಯಕ್ರಮವೊಂದನ್ನು ಸಿದ್ಧಪಡಿಸಿ ಹೊರಬಿಟ್ಟಿದೆ. ಅದೊಂದು ಸಂದರ್ಶನ. ಜೇನ್ ಗುಡಾಲ್ ತೀರಿಕೊಂಡ ನಂತರವೇ ಪ್ರಸಾರ ಮಾಡಲೆಂದು ಮಾಡಿದ ಇಂಟರ್‌ವ್ಯೂ. ಸಂದರ್ಶಕ ಬ್ರಾಡ್ ಫಾಲ್ಚುಕ್ ಕೂಡ ಇದನ್ನು ಸಂದರ್ಶನದ ನಡುವೆ ಮತ್ತೆ ಮತ್ತೆ ಹೇಳುತ್ತಾರೆ. ಜೇನ್ ಕೂಡ ಇವು ತಮ್ಮ ಕೊನೆಯ, ತಮ್ಮ ದೇಹ ಅಳಿದ ನಂತರ ಸಂದೇಶದಂತೆ ಪ್ರಸಾರವಾಗಲಿರುವ ಮಾತುಗಳು ಎಂಬ ಅರಿವಿನಿಂದ ಮಾತಾಡಿರುವುದರಿಂದ ಈ ಸಂದರ್ಶನಕ್ಕೆ ಒಂದು ತೀವ್ರತೆ, ಭಾವುಕತೆ ಪ್ರಾಪ್ತವಾಗಿದೆ. ತಮ್ಮ ಕೆಲಸಗಳಿಂದ ದಂತಕತೆ ಆಗಿಬಿಟ್ಟಿರುವ ಜೇನ್ ಮತ್ತು ಆಕೆಯೊಳಗೆ ಇರುವ ಕುತೂಹಲಿಯಾದ ಪುಟ್ಟ ಹುಡುಗಿ ಜೇನ್ ಇಬ್ಬರೂ ಇಲ್ಲಿ ಮುಖಾಮುಖಿಯಾದಂತಿದೆ.

ಕೋಳಿ ಮೊಟ್ಟೆಗಳು ಹೇಗೆ ಸೃಷ್ಟಿಯಾಗುತ್ತವೆ ಎಂಬುದನ್ನು ನೋಡಲೆಂದೇ ಅರ್ಧ ದಿನ ಕೋಳಿ

ಗೂಡಿನೊಳಗೆ ಸದ್ದಿಲ್ಲದೇ ಬಚ್ಚಿಟ್ಟುಕೊಂಡಿದ್ದ ಪುಟ್ಟ ಹುಡುಗಿ ಜೇನ್. ಬಾಲ್ಯದಲ್ಲೇ ಇದ್ದ ಆ ಅಗಾಧ ತಾಳ್ಮೆ ಮತ್ತು ಕುತೂಹಲವೇ ಆಕೆಯನ್ನು ಮುಂದೆ ಒಯ್ದಿದ್ದು. ಜೇನ್ ಯಾವುದೇ ವಿಶ್ವವಿದ್ಯಾಲಯದ ಪದವಿ ಅಥವಾ ಶಾಸ್ತ್ರೀಯ ವೈಜ್ಞಾನಿಕ ತರಬೇತಿ ಇಲ್ಲದೆ 1960ರಲ್ಲಿ ತಾಂಜಾನಿಯಾದ ಟ್ಯಾಂಗನಿಕಾ ಸರೋವರದ ತೀರಕ್ಕೆ ಬಂದರು. ಆಗ ಆಕೆಗೆ 26 ವರ್ಷ. ಅವಳಲ್ಲಿ ಇದ್ದದ್ದು ಅಗಾಧ ತಾಳ್ಮೆ ಮಾತ್ರ. ಗಂಟೆಗಟ್ಟಲೆ ಅವಳು ಕಾಡಿನಲ್ಲಿ ಸದ್ದಿಲ್ಲದೆ ಕುಳಿತು ನೋಡುತ್ತಿದ್ದಳು. ತಾಂಜಾನಿಯದ ಗೊಂಬೆ ಸಂರಕ್ಷಿತ ಉದ್ಯಾನದ ಚಿಂಪಾಂಜಿಗಳಲ್ಲಿ ಅವಳು ಕಂಡ ಸಂಗತಿಗಳು ಮುಂದೆ ವಿಜ್ಞಾನವನ್ನೇ ಬದಲಾಯಿಸಿತು.

ಆಕೆ ತಾನು ಪ್ರತಿದಿನ ನೋಡುತ್ತಿದ್ದ ಚಿಂಪಾಂಜಿಗಳಿಗೆ ಒಂದೊಂದು ಹೆಸರಿಟ್ಟಿದ್ದಳು. ಒಮ್ಮೆ ಡೇವಿಡ್ ಗ್ರೇಬಿಯರ್ಡ್ ಎಂಬ ಚಿಂಪಾಂಜಿ, ಮರದ ಕೊಂಬೆಯೊಂದನ್ನು ಮುರಿದು ಅದರ ಎಲೆಗಳನ್ನು ಕಿತ್ತು ಆ ಕೋಲನ್ನು ಗೆದ್ದಲಿನ ಹುತ್ತದಲ್ಲಿ ತೂರಿಸಿ ತೆಗೆದು ಅದಕ್ಕೆ ಹತ್ತಿಕೊಂಡಿದ್ದ ಗೆದ್ದಲು ಹುಳಗಳನ್ನು ತಿನ್ನುವುದನ್ನು ಆಕೆ ನೋಡಿ ದಾಖಲೀಕರಿಸಿಕೊಂಡಳು. ಉಪಕರಣಗಳ ಬಳಕೆ ಮನುಷ್ಯರ ಆವಿಷ್ಕಾರ, ಅದು ನರರನ್ನು ವಾನರರಿಂದ ಪ್ರತ್ಯೇಕಿಸುವ ಗುಣ ಎಂದು ಅದುವರೆಗೂ ಭಾವಿಸಲಾಗಿತ್ತು. ಜೇನ್‌ಳ ಈ ದಾಖಲೀಕರಣ ಆ ಚಿಂತನೆಯನ್ನೇ ತಲೆಕೆಳಗು ಮಾಡಿತು. ಇದನ್ನು ನೋಡಿದ ಜೇನ್‌ಳ ಗೈಡ್, ತಜ್ಞ ಲೂಯಿಸ್ ಲೀಕಿ ಹೇಳಿದ ಮಾತು- 'ಈಗ ನಾವು ಟೂಲ್ (ಉಪಕರಣ) ಎಂಬುದನ್ನೇ ಮರು ವ್ಯಾಖ್ಯಾನಿಸಬೇಕು, ಅಥವಾ 'ಮನುಷ್ಯ' ಎಂಬುದನ್ನು ಮರು ವ್ಯಾಖ್ಯಾನಿಸಬೇಕು ಅಥವಾ ಚಿಂಪಾಂಜಿಗಳನ್ನು ಮನುಷ್ಯ ಎಂದು ಸ್ವೀಕರಿಸಬೇಕು!'

ವಿಜ್ಞಾನ ಒಂದು ಕಾಲದಲ್ಲಿ ಭಾವನೆಗಳು ಮಾನವರಿಗೆ ಮೀಸಲು ಎಂದು ಹೇಳುತ್ತಿತ್ತು. ಇದುವರೆಗೆ ನಡೆದಿರುವ ದೀರ್ಘಕಾಲಿಕ ಅಧ್ಯಯನಗಳ ಬಳಿಕ, ಪ್ರಾಣಿಗಳು ದುಃಖ, ಸಂತೋಷದಂಥ ಕೆಲವು ಮೂಲಭೂತ ಭಾವನೆಗಳನ್ನು ಅನುಭವಿಸುತ್ತವೆ ಎಂದು ಗೊತ್ತಾಗಿದೆ. ಜೇನ್ ಗುಡಾಲ್ ಅಂಥ ಕೆಲವು ಅಧ್ಯಯನಗಳ ಬಾಗಿಲು ತೆರೆದವರು. ಚಿಂಪಾಂಜಿಗಳೂ ಒಂದು ಆಂತರಿಕ ಜೀವನವನ್ನು ಹೊಂದಿವೆ. ಅವೂ ದುಃಖಿಸುತ್ತವೆ, ಶೋಕಿಸುತ್ತವೆ, ಹರ್ಷದಿಂದ ಕೂಗಾಡುತ್ತವೆ. ಸೇಡು ತೀರಿಸಿಕೊಳ್ಳುತ್ತವೆ ಕೂಡ ಎಂದು ಸಾಬೀತುಪಡಿಸಿದಳು. ಒಮ್ಮೆಯಂತೂ, ಚಿಂಪಾಂಜಿಗಳ ಎರಡು ಗುಂಪುಗಳು ನಡೆಸಿದ ಕಾದಾಟ, ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ನಡೆಸಿದ ಬರ್ಬರವಾದ ದಾಳಿ, ಎದುರಾಳಿಗಳನ್ನು ನಿರ್ದಯೆಯಿಂದ ಕೊಂದುಹಾಕಿದ ದೃಶ್ಯ ನೋಡಿ ಜೇನ್ ನಡುಗಿಹೋದಳು. ಈಕೆಯ ಅಧ್ಯಯನ ಜೀವಶಾಸ್ತ್ರವನ್ನೂ ಮೀರಿ ವಿಸ್ತರಿಸಿತು. ಮಾನವ ಇತರ ಪ್ರಾಣಿಗಳಿಗಿಂತ ಮೇಲಿನವನು ಎಂಬ ವರ್ಗೀಕರಣದ ಗೋಡೆ ಉರುಳಿತು. ಅವಳ ಕೆಲಸ ಜೀವಶಾಸ್ತ್ರಕ್ಕೆ ಮಾತ್ರವಲ್ಲದೆ ವನ್ಯಕಲ್ಯಾಣ, ಪರಿಸರ ನೀತಿಶಾಸ್ತ್ರಕ್ಕೂ ಅಡಿಪಾಯವಾಯಿತು. ಹವ್ಯಾಸಿ ಎಂದು ಒಮ್ಮೆ ತಜ್ಞರು ಭಾವಿಸಿದ್ದ ಜೇನ್, ಪದವಿಪೂರ್ವ, ಪದವಿ ಶಿಕ್ಷಣ ಪಡೆಯದೆಯೇ ಕೇಂಬ್ರಿಡ್ಜ್ ವಿವಿಯ ಪಿಎಚ್.ಡಿ ಪಡೆದಳು.

ಜೇನ್ ಗುಡಾಲ್ ಎಂದಿಗೂ ಜನಪ್ರಿಯಳಾಗಬೇಕು ಎಂದು ಬಯಸಿರಲಿಲ್ಲ. ಆದರೆ ಮನ್ನಣೆ ಅವಳನ್ನು ಹಿಂಬಾಲಿಸಿತು. 1960ರ ದಶಕದಲ್ಲಿ ನ್ಯಾಷನಲ್ ಜಿಯಾಗ್ರಫಿಕ್ ಮ್ಯಾಗಜಿನ್ ತನ್ನ ಮುಖಪುಟದಲ್ಲಿ, ಚಿಂಪಾಂಜಿಗಳ ಜೊತೆಗೆ ಆಕೆಯ ಚಿತ್ರವನ್ನು ಪ್ರಕಟಿಸಿತು. ಆ ಕ್ಷಣದಿಂದ ಆಕೆ ಒಂದು ವನ್ಯಜೀವಿ ಅಧ್ಯಯನ, ಈ ಕ್ಷೇತ್ರದಲ್ಲಿ ಒಂಟಿಯಾಗಿ ಕೆಲಸ ಮಾಡಬಲ್ಲ ಸ್ತ್ರೀಯರ ಸಾಮರ್ಥ್ಯ, ಪರಿಸರ ಸಂರಕ್ಷಣೆ ಎಲ್ಲದರ ಸಂಕೇತವಾದಳು. ಆಗ ಕಾಡಿಗೆ ಹೋಗಿ ಇಂಥ ಕೆಲಸದಲ್ಲಿ ತೊಡಗುವವರೂ ತುಂಬ ಮಂದಿ ಇರಲಿಲ್ಲ. ಈ ಚಿತ್ರಣ ಜನರ ಗಮನ ಸೆಳೆಯಿತು. ಹೀಗೆ ಐಕಾನ್ ಆಗಿ ಮಾರ್ಪಟ್ಟ ಜೇನ್, ಈ ಪ್ರಸಿದ್ಧಿಯನ್ನು ಎಂದೂ ಸ್ವಂತಕ್ಕಾಗಿ ಉಪಯೋಗಿಸಲಿಲ್ಲ. ಅವಳು 'ರೂಟ್ಸ್ ಆಂಡ್ ಶೂಟ್ಸ್' ಎಂಬ ಸಂಸ್ಥೆ ರಚಿಸಿಕೊಂಡು ಇನ್ನಷ್ಟು ಯುವಜನತೆಯನ್ನು ಕರೆತಂದು ಅಧ್ಯಯನ, ಸಂರಕ್ಷಣೆಗಳಲ್ಲಿ ತೊಡಗಿಕೊಂಡಳು.

ಜೇನ್ ಗುಡಾಲ್ ಜೀವನವನ್ನು ಸರಳವಾಗಿ ಸಂಕ್ಷಿಪ್ತವಾಗಿ ಹೇಳಲಾಗದು. ಆಕೆ ಏಕಕಾಲದಲ್ಲಿ ವಿಜ್ಞಾನಿ, ಕಥೆಗಾರ್ತಿ, ಪರಿಸರ ಕಾರ್ಯಕರ್ತೆ ಮತ್ತು ಐಕಾನ್ ಆಗಿದ್ದಾಕೆ. ವನ್ಯಮೃಗ- ಮಾನವ ಸಹಜೀವನಕ್ಕೆ ಏನು ಬೇಕು ಎಂಬುದನ್ನು ಸರಳವಾಗಿ ಜನತೆಗೆ ಮನದಟ್ಟು ಮಾಡಿಸಲು ಏನೆಲ್ಲ ಮಾಡಬೇಕೋ ಅದನ್ನೆಲ್ಲ ಮಾಡುತ್ತಿದ್ದರು. ಇವಳ ಹತ್ತಾರು ಪುಸ್ತಕಗಳು ಈಕೆಯ ಅಧ್ಯಯನ, ಅನುಭವ, ಒಳನೋಟ, ತಾತ್ವಿಕತೆ ಎಲ್ಲವನ್ನೂ ಕಟ್ಟಿಕೊಡುತ್ತವೆ. ಜಗತ್ತಿನಾದ್ಯಂತ ತಿರುಗಾಟ, ಯುವಜನತೆ ಜೊತೆ ಒಡನಾಟ ಇವೆಲ್ಲದರ ನಡುವೆ ಆಕೆ ಆಧ್ಯಾತ್ಮಿಕ ಜೀವಿಯೂ ಆಗಿದ್ದರು. ಮೆದುಳು ಮತ್ತು ಹೃದಯ ಸಾಮರಸ್ಯದಿಂದ ಕೆಲಸ ಮಾಡಿದಾಗ ಮಾತ್ರ ಅದು ನಿಜವಾದ ಮಾನವ ಸಾಮರ್ಥ್ಯ. ಹಾಗೆಯೇ ವಿಜ್ಞಾನವು ಇದೆಲ್ಲ ಹೇಗೆ ಎಂಬುದನ್ನು ವಿವರಿಸಬಹುದು, ಆದರೆ ಏಕೆ ಎಂದು ನಮಗೆ ನೆನಪಿಸಲು ಆಧ್ಯಾತ್ಮಿಕ ಮೌಲ್ಯಗಳು ಬೇಕಾಗುತ್ತವೆ ಎಂಬುದು ಆಕೆಯ ಮಾತು. ಹಾಗಂತ ಆಕೆಯ ಆಧ್ಯಾತ್ಮಿಕತೆ ರೂಢಿಗತವಾದದ್ದಾಗಿರಲಿಲ್ಲ. ಬದಲಾಗಿ, ನೇರ ಅನುಭವದಿಂದ ಉದ್ಭವಿಸಿದ್ದಾಗಿತ್ತು. ಚಿಂಪಾಂಜಿಗಳ ನಡುವಿನ ಸಹಬಾಳ್ವೆ, ಅವುಗಳು ಕೂಗುಗಳ ನಡುವೆ ಕಳೆದುಹೋಗುವಿಕೆ, ಕಾಡಿನ ಮರಗಿಡಗಳ ಎಲೆಗಳ ಸದ್ದಿನ ಆಲಿಸುವಿಕೆ ಇವೆಲ್ಲ ಆಕೆಯ ಆಧ್ಯಾತ್ಮಿಕತೆಯಾಗಿತ್ತು.

'ನಾನು ಯಾವ ಸಂದೇಶ ನೀಡಲು ಬಯಸುತ್ತೇನೆ? ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಈ ಭೂಮಿಯ ಮೇಲೆ ಒಂದು ಪಾತ್ರವಿದೆ ಎಂದು ನೀವೆಲ್ಲ ಅರ್ಥ ಮಾಡಿಕೊಳ್ಳಬೇಕೆಂದು ನಾನು ಬಯಸುತ್ತೇನೆ. ನಿಮಗೆ ಅದು ತಿಳಿದಿಲ್ಲದಿರಬಹುದು, ನಿಮಗೆ ಅದು ಸಿಗದಿರಬಹುದು. ಆದರೆ ನಿಮ್ಮ ಜೀವನ ಮುಖ್ಯ. ನೀವು ಯಾವುದೋ ಒಂದು ಕಾರಣಕ್ಕಾಗಿ ಇಲ್ಲಿದ್ದೀರಿ. ನೀವು ಬದುಕುವಾಗ ಆ ಕಾರಣ ಸ್ಪಷ್ಟವಾಗುತ್ತದೆ. ನಾವು ನೈಸರ್ಗಿಕ ಪ್ರಪಂಚದ ಭಾಗ ಎಂದು ನೀವು ಅರ್ಥ ಮಾಡಿಕೊಳ್ಳಬೇಕು. ಜಗತ್ತು ಕರಾಳವಾಗಿದೆ. ಆದರೆ ಇನ್ನೂ ಭರವಸೆ ಇದೆ. ಭರವಸೆ ಕಳೆದುಕೊಳ್ಳಬೇಡಿ. ಈ ಜಗತ್ತಿನಲ್ಲಿ ಸುಂದರವಾದದ್ದನ್ನು ಉಳಿಸಲು ನೀವು ಬಯಸಿದರೆ – ನಿಮ್ಮ ಮೊಮ್ಮಕ್ಕಳಿಗೆ, ಅವರ ಮೊಮ್ಮಕ್ಕಳಿಗೆ ನೀವು ಈ ಗ್ರಹವನ್ನು ಉಳಿಸಲು ಬಯಸಿದರೆ – ನೀವು ಪ್ರತಿದಿನ ತೆಗೆದುಕೊಳ್ಳುವ ಕ್ರಮಗಳ ಬಗ್ಗೆ ಯೋಚಿಸಿ. ಏಕೆಂದರೆ, ಒಬ್ಬರ ಕ್ರಿಯೆ ಒಂದು ಶತಕೋಟಿ ಪಟ್ಟು ಗುಣಿಸಿದರೆ, ಸಣ್ಣ ಕ್ರಿಯೆಗಳು ಸಹ ದೊಡ್ಡ ಬದಲಾವಣೆಗೆ ಕಾರಣವಾಗುತ್ತವೆ. ನಾನು ನಂಬುವಂತೆ, ಸಾವಿನಾಚೆಗೂ ಜೀವನವಿದೆ. ಬದಲಾವಣೆಯ ಶಕ್ತಿ ನಿಮಗಿದೆ' ಎಂಬುದು ಈ ಸಂದರ್ಶನದಲ್ಲಿ ಜೇನ್ ಕೊನೆಯ ಮಾತುಗಳು. ಈ ಮಾತುಗಳು ಮತ್ತೆ ಮತ್ತೆ ನಮ್ಮ ಕಿವಿಯಲ್ಲಿ ಅನುರಣಿಸುತ್ತಿರಲಿ. ಬದುಕಿನ ಎಚ್ಚರವಾಗಿರಲಿ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಚಿನ್ನ, ಬೆಳ್ಳಿ ಬೆಲೆಯೇರಿಕೆ ಆತಂಕಕಾರಿ

ಚಿನ್ನ ಮತ್ತು ಬೆಳ್ಳಿಯ ದರ ಈಗ ಪ್ರತಿ ದಿನವೂ ಏರಿಕೆಯಾಗುತ್ತಲೇ ಇದೆ, ಈಗಾಗಲೇ ಚಿನ್ನ 10 ಗ್ರಾಮ್‌ಗೆ ರು. 1,12,000 ಮತ್ತು ಒಂದು ಕೆ.ಜಿ ಬೆಳ್ಳಿಯ ದರ ರು. 1.70.000ನಷ್ಟಾಗಿದೆ, ಇದು ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.60ರಷ್ಟು ಏರಿಕೆಯಾಗಿದೆ. ಇದು ಹೀಗೆ ಮುಂದುವರಿದರೇ ಇದು ಎಲ್ಲಿಗೆ ಹೋಗಿ ನಿಲ್ಲುತ್ತದೆ? ಷೇರು ಮಾರುಕಟ್ಟೆಯಲ್ಲಿ ಹಣ ಮಾಡುವವರು ಹೀಗೆ ಏರಿಕೆ ಮಾಡುತ್ತಾರೆ ಎಂಬ ಅನುಮಾನಗಳೂ ಇವೆ. ಇದು ಹೀಗೆ ಮುಂದುವರೆದರೆ ಬಡವರ್ಗದ ಜನರಿಗೆ ಮತ್ತು ಮಧ್ಯಮ ವರ್ಗದ ಜನರಿಗೆ ಚಿನ್ನ ಮತ್ತು ಬೆಳ್ಳಿ ಗಗನ ಕುಸುಮವಾಗಬಹುದು, ಮುಂದೊಂದು ದಿನ ಇವೆಲ್ಲಾ ಕೇವಲ ಶ್ರೀಮಂತರ ಸೊತ್ತಾಗಬಹುದು. ಇದಕ್ಕೆಲ್ಲಾ ಸರ್ಕಾರದಿಂದ ನಿಯಂತ್ರಣ ಸಾಧ್ಯವಿಲ್ಲವೇ?

-ಬೂಕನಕೆರೆ ವಿಜೇಂದ್ರ, ಮೈಸೂರು

ಪಾಸ್ ಎಂಬುದು ಮಾರಾಟಕ್ಕೇ!

ಹಾಸನದಲ್ಲಿ ಈ ಬಾರಿಯ ಹಾಸನಾಂಬ ದೇವಾಲಯದ ದರ್ಶನಕ್ಕೆ ವಿಐಪಿ ಸಂಸ್ಕೃತಿಗೆ ತೆರೆ ಎಳೆಯಲಾಗುವುದು ಎಂದು ಸಚಿವ ಕೃಷ್ಣಬೈರೇಗೌಡ ಹೇಳಿದ್ದಾರೆ. ಶಾಸಕರು, ನಟನಟಿಯರು, ನ್ಯಾಯಾಧೀಶರು, ಮುಂತಾದ ಗಣ್ಯರಿಗೆ ಸರ್ಕಾರಿ ವಾಹನದಲ್ಲೇ ಕರೆತಂದು ದರ್ಶನಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದಿರುವುದು ಸಂತೋಷಕರ. ಇದರಿಂದ ನೂಕುನುಗ್ಗಲು ತಪ್ಪಿ ಕಾಲ್ತುಳಿತದಂತಹ ಅಪಘಾತದ ಸಾಧ್ಯತೆ ಇಲ್ಲವಾಗಲಿದೆ. ಜೊತೆಗೆ ರು. 1000, 300 ಬೆಲೆಯ ಪಾಸ್ ವಿತರಿಸಲಾಗುತ್ತದೆ ಎಂದಿದ್ದಾರೆ. ದುಡ್ಡು ಪಡೆದ ನಂತರ ಅದು ಪಾಸ್ ಹೇಗೆ ಆಗುತ್ತದೆ? ಅದು ಟಿಕೆಟ್ ಅಲ್ಲವೇ? ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಅತ್ಯಂತ ಎಚ್ಚರಿಕೆಯನ್ನು ಆಡಳಿತ ವಹಿಸಿ ಹಾಸನಾಂಬ ದರ್ಶನ ಸುಸೂತ್ರವಾಗಿ ನಡೆಯವಂತಾಗಲಿ.

-ಪತ್ತಂಗಿ ಎಸ್.ಮುರಳಿ ಬೆಂಗಳೂರು

ಕಾಂತಾರ 1 ಅನುಕರಣೆ: ದೈವ, ಭೂತಗಳಿಗೆ ಅಪಚಾರವಾಗದಿರಲಿ

ಕಾಂತಾರ-1 ಸಿನಿಮಾದಲ್ಲಿಯ ಗುಳಿಗ ಭೂತದರ್ಶನದ ಅನುಕರಣೆಯನ್ನು ಚಿತ್ರಮಂದಿರ ಮತ್ತು ಇತರೆಡೆ ಮಾಡದಂತೆ ತನ್ನ ಅಭಿಮಾನಿಗಳಿಗೆ ಸೂಚಿಸಬೇಕು ಎಂದು ಬೆಂಗಳೂರು ತುಳುಕೂಟದ ಅಧ್ಯಕ್ಷರು ಚಿತ್ರದ ನಿರ್ದೇಶಕ ರಿಷಬ್ ಶೆಟ್ಟಿಯವರಿಗೆ ಪತ್ರ ಬರೆದಿದ್ದರು. ಇಂತಹ ಅನುಕರಣೀಯರನ್ನು ನಿಯಂತ್ರಿಸುವುದು ರಿಷಬ್ ಶೆಟ್ಟಿಗೆ ಸಾಧ್ಯವಾಗದು. ಏಕೆಂದರೆ ಸಿನಿಮಾ ಮತ್ತು ಕ್ರೀಡೆ ಒಂದು ಹುಚ್ಚು ಮತ್ತು ಸನ್ನಿಯೂ ಹೌದು. ಚಿತ್ರ ನಿರ್ಮಾಪಕರು ಇದನ್ನು ಮುಂಚೆಯೇ ಗ್ರಹಿಸಬಹುದಿತ್ತು. ಈ ಆತಂಕಕ್ಕೆ ಕೇವಲ ಅನುಕರಣೆ ಮಾಡುವವರು ಕಾರಣರಲ್ಲದೆ ತುಳುವರ ಮತ್ತು ಕರಾವಳಿಯ ನಂಬಿಕೆಯ ಆರಾಧ್ಯ ಭೂತ ದೈವದ ದರ್ಶನವನ್ನು ತಮ್ಮ ಸಂಪಾದನೆಯ ಅಸ್ತ್ರವನ್ನಾಗಿ ಚಿತ್ರೀಕರಣಗೊಳಿಸಿರುವ ನಿರ್ಮಾಪಕ-ನಿರ್ದೇಶಕರು ಮೂಲ ಕಾರಣರಾಗುತ್ತಾರೆ. ಕರಾವಳಿಯ ಎಲ್ಲ ಕುಟುಂಬದಲ್ಲಿ ಅವರದೇ ಭೂತ ದೈವವಿದ್ದು ಅದರ ನೇಮ, ದರ್ಶನವನ್ನು ಮಕ್ಕಳು ಸಹ ಮನರಂಜನೆಗಾಗಿ ಅನುಕರಿಸುವುದನ್ನು ತುಳುವರು-ಕರಾವಳೀಯರು ಸಹಿಸುವುದಿಲ್ಲ. ಅವರ ಭಕ್ತಿ ಮತ್ತು ನಂಬಿಕೆಯ ಅವರನ್ನು ಸದಾ ಕಾಪಾಡುವ ಶಕ್ತಿಯೇ ದೈವ-ಭೂತ. ಅದನ್ನು ಮನರಂಜನೆಯ ಅಥವಾ ಆಟದ ವಸ್ತುವಾಗಿ ಕಾಣುವುದು ಸರಿಯಲ್ಲ. ಈ ಭೂತ ದರ್ಶನ ಚಿತ್ರವನ್ನು ವಿರೋಧಿಸಿ ಕರಾವಳಿಯರು ಸೆನ್ಸಾರ್ ಮಂಡಳಿಯ ಮುಂದೆ ಅರ್ಜಿ ಸಲ್ಲಿಸುವ ಸಾಧ್ಯತೆಯನ್ನು ಪರಿಶೀಲಿಸಬಹುದಿತ್ತು. ಯಾಕಂದೆರೆ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಭಿನ್ನ ವೀಕ್ಷಕರು ಭೂತಾರಾಧನೆಯನ್ನು ಸಿಲ್ಲಿ, ಸ್ಟುಪಿಡ್ ಎಂದು ಪ್ರತಿಕ್ರಿಯಿಸಿ ನಮ್ಮ ಕರಾವಳಿಯ ಪದ್ದತಿಗೆ-ಭಾವನೆಗೆ ಅವಮಾನ ಮಾಡುವ ಸಾಧ್ಯತೆಯೂ ಇದೆ. ಭೂತದರ್ಶನದ ಹೊರತಾಗಿ ಕರಾವಳಿಯ ಅನೇಕ ಸಾಮಾಜಿಕ ವಿಷಯಗಳ ಬಗ್ಗೆ ನಿರ್ಮಾಕರಿಗೆ ಹಣಗಳಿಸಿ ದಾಖಲೆ ಮಾಡಲು ಅದಕಾಶವಿದ್ದರೂ ಅವರ ಭವಿಷ್ಯಕ್ಕಾಗಿ ಭೂತದರ್ಶನವನ್ನೇ ಸರಕನ್ನಾಗಿ ನಮ್ಮ ದೈವ-ಭೂತಗಳನ್ನು ಮಲಿನಗೊಳಿಸಿ ಹರಾಜು ಹಾಕಿರುವುದು ತುಳುವರಿಗಂತೂ ನೋವಿನ ಸಂಗತಿ!

-ಬೆಳ್ಳಿ ಚಂದ್ರಶೇಖರಶೆಟ್ಟಿ, ಬೆಂಗಳೂರು.

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಮಹಿಳೆಯರ ಮುಟ್ಟಿನ ಸ್ಥಿತಿ ಈಗ ಇನ್ನೂ ಅಯೋಮಯ

ಮಹಿಳೆಯರ ಮಾಸಿಕ ಸಮಸ್ಯೆ ಮತ್ತು ಸ್ವಚ್ಛತೆ ಕುರಿತಂತೆ ಜಾಗೃತಿ ಏನೋ ಮೂಡುತ್ತಿದೆ. ಆದರೆ ಅವಧಿಪೂರ್ವ ಋತುಮತಿ ಆಗುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿದ್ದು, ತಾಯಂದಿರಲ್ಲಿ ಆತಂಕ ಮೂಡಿದೆ. ಅಪ್ರಾಪ್ತ ವಯಸ್ಸಿನಲ್ಲಿ ಪ್ರೌಢರಾಗುತ್ತಿರುವವರ ದೈಹಿಕ ಬದಲಾವಣೆಗೆ ವೈದ್ಯಕೀಯ ಕಾರಣ-ಪರಿಹಾರಗಳನ್ನು ಹುಡುಕಬೇಕಿದೆ.

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಮಹಿಳೆಯರ ಆರೋಗ್ಯ ಸುರಕ್ಷೆ ಮತ್ತು ಸ್ವಚ್ಛತೆಯ ವಿಚಾರ ಬಂದಾಗ, ಪ್ರತಿಯೊಬ್ಬರ ಮನಃಪಟಲದಲ್ಲಿ 2018ರ ಹಿಂದಿಯ ಪ್ಯಾಡ್ ಮ್ಯಾನ್ ಸಿನಿಮಾ ನೆನಪಾಗುತ್ತದೆ. ತಮಿಳುನಾಡಿನ ಕೊಯಮತ್ತೂರು ನಿವಾಸಿಯಾದ ಸಾಮಾಜಿಕ ಕಾರ್ಯಕರ್ತ, ಉದ್ಯಮಿ ಅರುಣಾಚಲಂ ಮುರುಗನಾಥನ್ ಅವರ ನಿಜ ಜೀವನದ ವೃತ್ತಾಂತ ಆಧರಿಸಿ ಈ ಸಿನಿಮಾ ಮಾಡಲಾಗಿತ್ತು. ಮಹಿಳೆಯರ ಖಾಸಗಿ ಸುರಕ್ಷತೆ ಬಗ್ಗೆ ಕಾಳಜಿ ತೋರುವುದಿರಲಿ, ಆ ಕುರಿತು ಮಾತನಾಡುವುದೇ ಅಪರಾಧ ಎಂಬ ಮನಸ್ಥಿತಿ ನಮ್ಮ ಸಮಾಜದಲ್ಲಿತ್ತು. ಈಗಲೂ ಕೆಲವೆಡೆ ಮಾಸಿಕ ಮುಟ್ಟು ಕುರಿತು ಮಾತಾಡುವುದು, ಅದರ ಸುರಕ್ಷೆ ಬಗ್ಗೆ ಅರಿವು ಮೂಡಿಸುವುದಕ್ಕೂ ನಿರ್ಬಂಧಿಸಲಾಗಿದೆಯೇನೋ ಎಂಬಂತೆ ನಡೆದುಕೊಳ್ಳಲಾಗುತ್ತಿದೆ.

ಇಂತಹ ಸಂದಿಗ್ಧ ಪರಿಸ್ಥಿತಿ ಎದುರಿಸಿದ ಅರುಣಾಚಲಂ ಪತ್ನಿಯು, ತಮ್ಮ ಮಾಸಿಕ ವಿಚಾರದಲ್ಲಿ ಸ್ವಚ್ಛತೆ ಕಾಪಾಡದೆ ಕೆಲ ವೈರಲ್ ದೋಷದ ಕಾಯಿಲೆಗೆ ತುತ್ತಾಗುತ್ತಾರೆ. ಅಂದಿನ ಸ್ಯಾನಿಟರಿ ಪ್ಯಾಡ್ ಸಾಮಾನ್ಯ ಕುಟುಂಬದ ಮಹಿಳೆಯರಿಗೆ ದುಬಾರಿಯಾಗಿರುತ್ತವೆ. ಇದರಿಂದ ಆಘಾತಕ್ಕೊಳಗಾದ ಅರುಣಾಚಲಂ, ಸ್ವತಃ ಕಡಿಮೆ ಬೆಲೆಯ ಪ್ಯಾಡ್‌ಗಳನ್ನು ತಯಾರಿಸಿ ಕೊಡುವುದಲ್ಲದೆ, ಇತರೆ ಮಹಿಳೆಯರು ಇಂತಹ ಸಮಸ್ಯೆಗಳನ್ನು ಎದುರಿಸಬಾರದೆಂದು ಸುತ್ತಮುತ್ತಲಿನ ಹಳ್ಳಿಗಳಿಗೆ ಜಾಗೃತಿ ಮೂಡಿಸುತ್ತ, ಸ್ಯಾನಿಟರಿ ಪ್ಯಾಡುಗಳನ್ನು ಹಂಚಲು ಶುರು ಮಾಡುತ್ತಾರೆ, ಇದನ್ನೇ ಉದ್ಯಮವನ್ನಾಗಿಯೂ ಆರಂಭಿಸುತ್ತಾರೆ.

ಆರಂಭದಲ್ಲಿ ನಗೆಪಾಟಲಿಗೆ ಈಡಾದರೂ, ತಮ್ಮ ಪ್ರಯತ್ನ ಬಿಡದೆ ಮಹಿಳೆಯರ ಮನವೊಲಿಸುತ್ತ ಕಡಿಮೆ ಬೆಲೆಯ, ಸುರಕ್ಷತೆ ದೃಷ್ಟಿಯಿಂದ ಉತ್ತಮವಾದ ಪ್ಯಾಡುಗಳನ್ನು ಮಾರುವಲ್ಲಿ ಯಶಸ್ವಿಯಾಗುತ್ತಾರೆ. ಮುಂದೆ ಕಡಿಮೆ ಬೆಲೆಯ ಸ್ಯಾನಿಟರಿ ಪ್ಯಾಡ್ ತಯಾರಿಸುವ ಯಂತ್ರದ ಸಂಶೋಧಕರಾಗಿ ಹೊರಹೊಮ್ಮುತ್ತಾರೆ ಮತ್ತು ಗ್ರಾಮೀಣ ಭಾರತದಲ್ಲಿ ಮುಟ್ಟಿನ ವಿಚಾರವಾಗಿ ಸಾಂಪ್ರದಾಯಿಕವಾದ, ಅಶುದ್ಧವಾದ ಪದ್ಧತಿಗಳ ವಿರುದ್ಧ ಜಾಗೃತಿ ಮೂಡಿಸಲು ತಳಮಟ್ಟದ ಕಾರ್ಯ ವಿಧಾನಗಳನ್ನು ಪರಿಚಯಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ.

ವಾಣಿಜ್ಯ ಪ್ಯಾಡ್‌ಗಳ ವೆಚ್ಚದ ಮೂರನೇ ಒಂದು ಭಾಗಕ್ಕಿಂತ ಕಡಿಮೆ ಬೆಲೆಗೆ ಸ್ಯಾನಿಟರಿ ಪ್ಯಾಡ್‌ಗಳನ್ನು ತಯಾರಿಸಬಹುದಾದ ಮಿನಿ ಯಂತ್ರಗಳನ್ನು ಭಾರತದ 28 ರಾಜ್ಯಗಳಲ್ಲಿ 23 ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪಿಸಲಾಗಿದೆ. ಪ್ರಸ್ತುತ ಈ ಯಂತ್ರಗಳ ಉತ್ಪಾದನೆಯನ್ನು 106 ರಾಷ್ಟ್ರಗಳಿಗೆ ವಿಸ್ತರಿಸಲು ಯೋಜಿಸುತ್ತಿದ್ದಾರೆ. ಪೀರಿಯಡ್ ಎಂಡ್ ಆಫ್ ಸೆಂಟೆನ್ಸ್ ಚಲನಚಿತ್ರವು 2018ರ ಅತ್ಯುತ್ತಮ ಸಾಕ್ಷ್ಯಚಿತ್ರ ಅಕಾಡೆಮಿ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಅಕ್ಷಯಕುಮಾರ್ ನಟಿಸಿದ 2018ರ ಹಿಂದಿ ಚಲನಚಿತ್ರ ಪ್ಯಾಡ್‌ಮ್ಯಾನ್ ರಾಷ್ಟ್ರಪ್ರಶಸ್ತಿಯನ್ನು ಸಹ ಪಡೆದುಕೊಂಡಿತು.

ಟೈಮ್ ನಿಯತಕಾಲಿಕೆಯು 2014ರಲ್ಲಿ, ವಿಶ್ವದ 100 ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳ ಪಟ್ಟಿಯಲ್ಲಿ ಅರುಣಾಚಲಂ ಮುರುಗನಾಥನ್ ಕೂಡ ಸೇರಿಸಲ್ಪಟ್ಟರು. 2016ರಲ್ಲಿ ಅವರಿಗೆ ಭಾರತ ಸರ್ಕಾರವು ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಇಷ್ಟಿದ್ದರೂ ನಮ್ಮ ಗ್ರಾಮೀಣ ಪ್ರದೇಶದ ಸಹೋದರಿಯರಿಗೆ ಇನ್ನೂ ಹೆಚ್ಚಿನ ಜಾಗೃತಿ, ಸೌಲಭ್ಯಗಳ ತಲುಪಿಸುವ ಅಗತ್ಯವಿದೆ. ಇಂದಿನ ಪೀಳಿಗೆ ಶಿಕ್ಷಣಕ್ಕೆ ಒತ್ತು ಕೊಡುತ್ತಿದ್ದರೂ, ಹಿರಿಯರ ಕೆಲ ನಿರ್ಬಂಧಗಳು, ಕಟ್ಟುಪಾಡುಗಳು ಇಂದಿನವರನ್ನು ಕಟ್ಟಿಹಾಕಿದಂತೆ ಭಾಸವಾಗುತ್ತವೆ. ತಮ್ಮ ಖಾಸಗಿ ವಿಚಾರಗಳನ್ನು ಮನೆಯಲ್ಲಿ ಹೇಳಿಕೊಳ್ಳದೇ ಇರುವುದರಿಂದಾಗಿ ಪರಸ್ಪರ ಸಹಾಯ, ಸಹಕಾರ, ಜಾಗೃತಿ ಮೂಡಬೇಕಾದಲ್ಲಿಯೇ ಸಂಪರ್ಕ ಸಂವಹನದ ಕೊರತೆ ಕಾಣುತ್ತಿರುತ್ತದೆ.

ಮಹಿಳೆ ನಮಗೆಲ್ಲ ತಾಯಿಯ ರೂಪದಲ್ಲಿ, ಹೆಂಡತಿ, ಸಹೋದರಿ, ಮಗಳಾಗಿ ನಮ್ಮ ಮನೆ-ಮನ, ಬದುಕಿನ ಅವಿಭಾಜ್ಯ ಅಂಗವಾಗಿ ನಿಂತಿದ್ದಾಳೆ. ಇಂತಹ ಶಕ್ತಿದಾತೆಗೆ ಪ್ರಕೃತಿಯು ವರವಾಗಿ ಕೊಟ್ಟಿರುವ ಮಾಸಿಕ ಮುಟ್ಟು ಎಂಬುದು ದೈಹಿಕ ಆರೋಗ್ಯ ಸಂಬಂಧಿತ ವಿಚಾರವಾಗಿದೆ. ರಜಸ್ವಲೆ ಅಥವಾ ಮುಟ್ಟಿನ ಚಕ್ರವು ಹಾರ್ಮೋನುಗಳ ಏರಿಕೆ ಮತ್ತು ಇಳಿಕೆಯಿಂದ ನಿರೂಪಿಸಲ್ಪಟ್ಟಿದ್ದು, ಪ್ರೊಜೆಸ್ಟರಾನ್ ಮಟ್ಟ ಕಡಿಮೆಯಾಗುವುದರಿಂದ ಮುಟ್ಟು ಉಂಟಾಗುತ್ತದೆ ಮತ್ತು ಮುಟ್ಟಾಗುವುದು ಗರ್ಭಧಾರಣೆಯಾಗಿಲ್ಲ ಎಂಬುದರ ಸಂಕೇತವಾಗಿದೆ.

ಸಾಮಾನ್ಯವಾಗಿ, 11ರಿಂದ 13ನೇ ವರ್ಷ ವಯಸ್ಸಿನ ನಡುವೆ ಪ್ರೌಢಾವಸ್ಥೆಯಲ್ಲಿ ಮುಟ್ಟು ಪ್ರಾರಂಭವಾಗುತ್ತದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಸರಾಸರಿ ವಯಸ್ಸಿಗಿಂತ ಮೊದಲೇ ಕಂಡುಬರುತ್ತಿದ್ದು, ಈ ಲಕ್ಷಣವೀಗ ಭಾರತದಲ್ಲೂ ಗೋಚರಿಸುತ್ತಿದೆ. ಚಿಕ್ಕ ವಯಸ್ಸಿನ ಮಕ್ಕಳಲ್ಲೂ ಬೇಗ ಋತುಮತಿಯಾಗುತ್ತಿರುವ ಸಂದರ್ಭಗಳು ಹೆಚ್ಚು ಕಂಡುಬರುತ್ತಿವೆ. ಒಂದು ಮುಟ್ಟಿನ ಮೊದಲ ದಿನ ಮತ್ತು ನಂತರದಲ್ಲಿ ಬರುವ ಮುಟ್ಟಿನ ಮೊದಲ ದಿನದ ನಡುವಿನ ಅವಧಿಯನ್ನು ಮಾಸಿಕವೆಂದೂ ಕರೆಯಲಾಗುತ್ತಿದ್ದು, ದೊಡ್ಡಮಟ್ಟದಲ್ಲಿ ಅಧ್ಯಯನ ನಡೆಸಿ, ಸರಾಸರಿ ಋತುಚಕ್ರದ ಅವಧಿಯು 29.3 ದಿನಗಳು ಎಂದು ದಾಖಲಿಸಲಾಗಿದ್ದು, ಸಾರ್ವತ್ರಿಕವಾಗಿ 28 ದಿನಗಳ ಲೆಕ್ಕ ಹಾಕಲಾಗುತ್ತದೆ.

ಬಹುತೇಕ ಶೇ.80ರಷ್ಟು ಮಹಿಳೆಯರು ಮುಟ್ಟಿನ ಸಮಯದಲ್ಲಿ ಅಥವಾ ಮುಟ್ಟಿನ ಹಿಂದಿನ ದಿನಗಳಲ್ಲಿ ದಿನನಿತ್ಯ ಕೆಲಸ ಕಾರ್ಯಗಳಿಗೆ ಅಡ್ಡಿಪಡಿಸುವಷ್ಟು ಸಮಸ್ಯೆಗಳನ್ನು ಎದುರಿಸದಿರುವುದು ಸಮಾಧಾನ ತರುವ ವಿಷಯವಾಗಿದೆ. ಮುಟ್ಟಿನ ಮೊದಲು ಬರುವ ನೋವಿನಂಥ ಲಕ್ಷಣಗಳನ್ನು Pre Menstrual Syndrome (PMS) ಎಂದು ಕರೆಯಲಾಗುತ್ತದೆ. ಸುಮಾರು 20% ರಿಂದ 30% ಮಹಿಳೆಯರು ಈ ಸಮಸ್ಯೆಗಳನ್ನು ಎದುರಿಸುತ್ತಾರೆ.

ಅದರಲ್ಲೂ 3% ರಿಂದ 8%ರಷ್ಟು ಜನರು ಮೊಡವೆಗಳು, ವಿಪರೀತ ದಣಿದ ಭಾವನೆ, ಕಿರಿಕಿರಿ ಮತ್ತು ಮನಸ್ಥಿತಿ ಬದಲಾವಣೆಯಂತಹ ತೀವ್ರ ಲಕ್ಷಣಗಳನ್ನು ಅನುಭವಿಸುತ್ತಾರೆ. ಕೆಲವರಿಗೆ ಕೋಪ ಬಂದು ಕಾರಣವಿಲ್ಲದೆ ಜಗಳ ಮಾಡುವ ಸ್ಥಿತಿ ಉಂಟಾದರೆ, ಇನ್ನೂ ಕೆಲವರು ಹೊಟ್ಟೆಯ ನೋವು ತಾಳಲಾರದೆ ಆತ್ಮಹತ್ಯೆಗೂ ಪ್ರಯತ್ನಿಸಿದ ಉದಾಹರಣೆಗಳಿವೆ.

ಆರೋಗ್ಯ ಸೂಕ್ಷ್ಮತೆಗಳನ್ನು ಪ್ರತಿಮನೆಯ ಸದಸ್ಯರು ಮೌನದ ಕಂದಕವನ್ನು ತೊಡೆದುಹಾಕಿ ಮನೆಮಕ್ಕಳ, ಮನೆಗೆ ಬಂದ ಸೊಸೆಯಂದಿರ ಜೊತೆಗೆ ಆಪ್ತತೆಯಿಂದ ಮಾತನಾಡಿ, ಅವರ ದೈಹಿಕ, ಮಾನಸಿಕ ಆರೋಗ್ಯ ಸ್ಥಿತಿಯನ್ನು ಅರಿಯುವುದು ಇಂದಿನ ಆರೋಗ್ಯ ಸೂಕ್ಷ್ಮಕಾಲದಲ್ಲಿ ಅತಿ ಅಗತ್ಯವಾಗಿದೆ. ಬಹುತೇಕ ಮಹಿಳೆಯರು ಮುಟ್ಟಿನ ಸಮಯದಲ್ಲಿ ಭಾರೀ ರಕ್ತಸ್ರಾವ ಅನುಭವಿಸುತ್ತಾರೆ ಮತ್ತು ಮುಟ್ಟಿನ ಚಕ್ರದ ಯಾವುದೇ ಸಮಯದಲ್ಲಿ ಅಸಹಜ ಆರೋಗ್ಯ ವಿಪತ್ತುಗಳನ್ನು ತಂದೊಡ್ಡಬಲ್ಲದ್ದಾಗಿದೆ. 15ನೇ ವಯಸ್ಸಿನಲ್ಲಿ ಮುಟ್ಟು ಸಂಭವಿಸದಿದ್ದಾಗ ಮತ್ತು 90 ದಿನಗಳಲ್ಲಿ ಮತ್ತೆ ಸಂಭವಿಸದಿದ್ದಾಗ ಮುಟ್ಟಿನ ಕೊರತೆ ಎನ್ನಲಾಗುತ್ತಿದ್ದು, ಇದನ್ನು ಅಮೆನೋರಿಯಾ ಎನ್ನಲಾಗುತ್ತದೆ.

ಮುಟ್ಟು ಇಲ್ಲದ ಒಂದು ವರ್ಷ ಮತ್ತು 45ರಿಂದ 55 ವರ್ಷಗಳ ಅವಧಿಯನ್ನು ಋತುಬಂಧ ಎಂದು ಕರೆಯಲಾಗುತ್ತಿದ್ದು, ಇದು ವೈದ್ಯಕೀಯ ವ್ಯಾಖ್ಯಾನವಾಗಿದೆ. ಋತುಬಂಧಕ್ಕೆ ಕಾರಣವಾಗುವ ಪರಿವರ್ತನೆಯ ಹಂತ, ಹಾರ್ಮೋನುಗಳ ಬದಲಾವಣೆಗಳು ಮತ್ತು ಅನಿಯಮಿತ ಮುಟ್ಟಿನ ಚಕ್ರಗಳಿಂದ ಕೂಡಿದ್ದು, ಮಹಿಳೆಯು ಮುಟ್ಟನ್ನು ಸಂಪೂರ್ಣವಾಗಿ ನಿಲ್ಲಿಸಿದಾಗ, ಮುಂದೆ ಮಕ್ಕಳಾಗದಿರುವ ಈ ಹಂತವನ್ನು ಪೆರಿಮೆನೋಪಾಸ್ ಎಂದು ಕರೆಯುತ್ತಾರೆ.

ಮುಟ್ಟಿನಲ್ಲಿ ದ್ರವವು ಮುಖ್ಯವಾಗಿ ನೀರು, ಸಾಮಾನ್ಯ ಎಲೆಕ್ಟ್ರೊಲೈಟ್, ಅಂಗಾಂಗ ಭಾಗಗಳು ಮತ್ತು ಗ್ಲೈಕೋಪ್ರೋಟೋನ್ ಸೇರಿದಂತೆ ಕನಿಷ್ಠ 14 ಪ್ರೋಟೋನ್‌ಗಳನ್ನು ಒಳಗೊಂಡಿರುತ್ತದೆ. ಎಂಡೋಮೆಟ್ರಿಯಲ್‌ನಲ್ಲಿರುವ ಪ್ಲಾಸ್ಮಿನ್ ಎಂಬ ಕಿಣ್ವವು ರಕ್ತ ಹೆಪ್ಪುಗಟ್ಟುವಿಕೆಯನ್ನು ತಡೆಯುತ್ತದೆ. ಇದು ಮುಟ್ಟಿನ ಸಂದರ್ಭದಲ್ಲಿ ಬಹಳ ಮಹತ್ವದ ಪಾತ್ರವಹಿಸುತ್ತದೆ. ಮುಟ್ಟಿನ ನೋವು, ಸೆಳೆತ (ಡಿಸ್ಮೆನೋರಿಯಾ) ಅಥವಾ ಎಂಡೋಮೆಟ್ರಿಯೋಸಿಸ್‌ನಂತಹ ತೀವ್ರವಾದ ದುರ್ಬಲತೆ ಪ್ರಾಣಾಪಾಯಕ್ಕೆ ಎಡೆಮಾಡಿಕೊಡಬಲ್ಲದು.

Pre Menstrual Dysphoric Disorder (PMDD) ಎಂಬುದು ಇಂತಹ ಸಂದರ್ಭದಲ್ಲಿ ಉಂಟಾಗುವ ತೀವ್ರತರ ಮಾನಸಿಕ ಅಸ್ವಸ್ಥ ಲಕ್ಷಣಗಳನ್ನು ಹೊಂದಿದ್ದು, ಮಗುವನ್ನು ಹೆರುವ ವಯಸ್ಸಿನ ಶೇ.3ರಷ್ಟು ಮಹಿಳೆಯರ ಮೇಲೆ ಪರಿಣಾಮ ಬೀರಬಲ್ಲದು. ಮುಟ್ಟಿನ ಸೆಳೆತಕ್ಕೆ ಸಾಮಾನ್ಯ ಚಿಕಿತ್ಸೆಯಾಗಿ *NonSteroid ಉರಿಯೂತದ ಔಷಧಿಗಳನ್ನು (NSAID) ಕೆಲವೊಮ್ಮೆ ಬಳಸಲಾಗುತ್ತದೆ.

ಇದೆಲ್ಲ ಒಂದು ಹಂತವಾದರೆ, ಪ್ರಸ್ತುತ ದಿನಗಳಲ್ಲಿ ಅತೀ ಚಿಕ್ಕ ವಯಸ್ಸಿನ ಬಾಲಕಿಯರಲ್ಲಿ ಋತುಮತಿಯಾಗುತ್ತಿರುವ ಘಟನೆಗಳು ಹೆಚ್ಚಾಗುತ್ತಿದ್ದು ಇದು ಇನ್ನೊಂದು ಹಂತದ ಮಹಿಳೆಯರ ಸಮಸ್ಯೆಯಾಗಿ ಪ್ರಾರಂಭವಾದಂತಿದೆ. ಬೆಳೆಯುತ್ತಿರುವ ಹೆಣ್ಣುಮಕ್ಕಳ ವಿಚಾರದಲ್ಲಿ ತಾಯಂದಿರಿಗೆ ಒಂದು ನಿಶ್ಚಿತ ವಯಸ್ಸಿನಲ್ಲಿ ಇದು ಘಟಿಸುತ್ತದೆ ಎಂಬ ಸಮಾಧಾನವಿರುತ್ತಿತ್ತು. ಇಂದು, ಯಾವ ವಯಸ್ಸಲ್ಲಿ ನಮ್ಮ ಮಕ್ಕಳಿಗೆ ಮುಟ್ಟು ಕಂಡುಬಂದೀತು ಎಂಬ ಆತಂಕದಿಂದಲೇ ಇರುವಂತಾಗಿದೆ.

ಬದಲಾದ ಆಹಾರ ಪದ್ಧತಿ, ನೈಸರ್ಗಿಕ ವಾತಾವರಣ, ಕುಟುಂಬದಲ್ಲಿನ ಒತ್ತಡ ಹಾಗೂ ಮಾನಸಿಕ ಆರೋಗ್ಯ ಮುಂತಾದ ಹಲವು ವಿಚಾರಗಳು ಸೇರಿಕೊಂಡು ಇತ್ತೀಚಿನ ಯುವತಿಯರಲ್ಲಿ ಸರಾಸರಿ ವಯಸ್ಸಿಗಿಂತ ಮೊದಲೇ ನಿಶ್ಚಿತ ಅವಧಿಪೂರ್ವ ಮುಟ್ಟಾಗುವಿಕೆ ಕಂಡುಬರುತ್ತಿದೆ. ಈ ರೀತಿಯ ಬೆಳವಣಿಗೆ ಇಂದಿನ ದಿನಗಳಲ್ಲಿ ಹೆಚ್ಚಾಗುತ್ತಿದ್ದು, ಬಹುತೇಕ ನಿಸರ್ಗವೇ ಮುಟ್ಟಾಗುವ ವಯಸ್ಸಿನ ಮಿತಿಯನ್ನು ಕಡಿಮೆಗೊಳಿಸುತ್ತಿದೆಯೇ ಎಂಬಂತಹ ಅಭಿಪ್ರಾಯಗಳು ಕೇಳಿಬರುತ್ತಿವೆ.

ಅತಿ ಚಿಕ್ಕವಯಸ್ಸಿನ ಹೆಣ್ಣುಮಕ್ಕಳಿಗೆ ಮುಟ್ಟು ಆರಂಭವಾಗುತ್ತಿರುವುದು ಆಧುನಿಕ ಸಮಾಜದಲ್ಲಿ ಹೆಚ್ಚಾಗುತ್ತಿರುವ ಸಾಮಾನ್ಯ ಸಮಸ್ಯೆಯಾಗಿದ್ದು, ಇದಕ್ಕೆ ಹಲವು ಆಧಾರಗಳನ್ನು ನಾವು ಗುರುತಿಸಬಹುದು.

ಸಾಮಾನ್ಯವಾಗಿ, ಹೆಣ್ಣುಮಕ್ಕಳಿಗೆ 12 ರಿಂದ 13 ವರ್ಷದ ಮಧ್ಯದಲ್ಲಿ ಮೊದಲ ಬಾರಿಗೆ ಮುಟ್ಟು ಆರಂಭವಾಗುತ್ತದೆ. ಆದರೆ ಇತ್ತೀಚೆಗೆ ಕೆಲವೊಂದು ಹುಡುಗಿಯರಲ್ಲಿ 8 ವರ್ಷಕ್ಕೆ ಅಥವಾ ಅದರ ಹಿಂದೆ ಕೂಡ ಮುಟ್ಟು ಬರುತ್ತಿದೆ, ಇದನ್ನು ಪ್ರೌಢಾವಸ್ಥೆಯ ಅಕಾಲಿಕ ಆರಂಭ (precocious puberty) ಎನ್ನುತ್ತಾರೆ. ಬಾಲಿಕೆಯರ ದೇಹದಲ್ಲಿ ಎಸ್ಟ್ರೋಜನ್, ಪ್ರೊಜೆಸ್ಟೆರೋನ್ ಹಾಗೂ ಇತರ ಲೈಂಗಿಕ ಹಾರ್ಮೋನುಗಳು ಬೇಗನೆ ಹೊರಹೊಮ್ಮುವಾಗ ಮುಟ್ಟು ಆರಂಭವಾಗಬಹುದು. ತಾಯಿಗೆ ಅಥವಾ ಕುಟುಂಬದ ಮಹಿಳೆಯರಿಗೆ ಬೇಗನೆ ಮುಟ್ಟು ಆಗಿದ್ದರೆ, ಮಗಳಿಗೆ ಕೂಡ ಇದು ಸಂಭವಿಸಬಹುದು.

ವಿಪರೀತ ತೂಕವಿರುವ (Obesity) ಬಾಲಕಿಯರಲ್ಲಿ ಎಸ್ಟ್ರೋಜನ್ ಮಟ್ಟ ಹೆಚ್ಚಾಗುವುದರಿಂದಲೂ ಮುಟ್ಟು ಬೇಗ ಬರುತ್ತದೆ. ಸೂಕ್ತ ನಿದ್ರೆ ಇಲ್ಲದಿದ್ದರೂ, ಮಾನಸಿಕ ಒತ್ತಡ ಹೆಚ್ಚಾದರೂ, ದೇಹದ ಹಾರ್ಮೋನ್ ನಿರ್ವಹಣೆಯ ಮೇಲೆ ಪರಿಣಾಮ ಬೀರಬಹುದು.

ಪ್ರಸ್ತುತ ದಿನಗಳಲ್ಲಿ ಆಹಾರ ಮತ್ತು ಬದಲಾದ ಜೀವನಶೈಲಿ ಪದ್ಧತಿಯಿಂದಾಗಿ, ಜಂಕ್ ಫುಡ್, ಕ್ಯಾಲೋರಿಯುಕ್ತ ಆಹಾರ ಸೇವನೆ, ರಾಸಾಯನಿಕಗಳ ಸೇವನೆ, ಹವಾಮಾಲಿನ್ಯ, Instant foodಗಳಲ್ಲಿ ಸಾಲ್ವೆಂಟ್/ಪೆಸ್ಟಿಸೈಡ್ ಮಿಶ್ರಣಗಳ ಕಾರಣಗಳಿಂದಾಗಿಯೂ ಸಹ ಹಾರ್ಮೋನಲ್ ಬದಲಾವಣೆಗೆ ಕಾರಣವಾಗಬಹುದು.

ಮುಟ್ಟಿನ ವಿಚಾರದಲ್ಲಿ ಶುಚಿತ್ವ ಕಾಪಾಡದಿದ್ದರೆ, ★ಖಿಖಿಐ, ಕಇಹಈ, ಕಇಹಖಿನಂತಹ ಗಂಭೀರ ಖಾಯಿಲೆಗಳಿಗೆ ದಾರಿ ಮಾಡಿ ಕೊಟ್ಟಂತಾಗುತ್ತದೆ. ಜೊತೆಗೆ ಆರೋಗ್ಯಕರ ಆಹಾರ ಮತ್ತು ನಿತ್ಯದ ವ್ಯಾಯಾಮವನ್ನು ಇಂದಿನ ಮಕ್ಕಳಿಗೆ ಕಲಿಸಬೇಕು. ಜಂಕ್ ಫುಡ್, ಕೆಮಿಕಲ್ ಸಂರಕ್ಷಿತ ಆಹಾರಗಳ ಬಳಕೆ ಕಡಿಮೆ ಮಾಡುವುದು ಮತ್ತು ಪ್ಲಾಸ್ಟಿಕ್ ಆಧಾರಿತ ಉತ್ಪನ್ನರಹಿತ ಬದುಕನ್ನು ನಾವು ರೂಢಿಸಿಕೊಳ್ಳಬೇಕು ಜೊತೆಗೆ ಮಕ್ಕಳಿಗೂ ಅದರ ಮಹತ್ವ ಹೇಳಿಕೊಡಬೇಕು.

ವೈದ್ಯಕೀಯ ಸಂಸ್ಥೆಗಳು ಈ ವಿಚಾರದಲ್ಲಿ ಉನ್ನತಮಟ್ಟದ ಸಂಶೋಧನೆಗಳನ್ನು ಕೈಗೊಳ್ಳುವ ಅಗತ್ಯವಿದೆ. ಆರೋಗ್ಯ ಇಲಾಖೆಗಳು ಅಪ್ರಾಪ್ತ ವಯಸ್ಸಲ್ಲಿ ಋತುಮತಿಯಾಗುತ್ತಿರುವ ಗಂಭೀರ ಸಮಸ್ಯೆಗಳ ಪ್ರಕರಣಗಳನ್ನು ಅಧಿಕೃತವಾಗಿ ದಾಖಲೆ ಮಾಡಿಕೊಂಡು,

ಸೂಕ್ತ ಚಿಕಿತ್ಸೋಪಾಯಗಳನ್ನು ಹುಡುಕಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ ಪೋಷಕರು-ಮಕ್ಕಳ ನಡುವೆ ಆಪ್ತ ಸಮಾಲೋಚನೆಗಳಂತಹ ಸಂಭಾಷಣೆಗಳು ನಡೆಯುವುದು ಇಂದಿನ ದಿನಗಳಲ್ಲಿ ಹೆಚ್ಚು ಅಗತ್ಯವಿದೆ. ಈ ರೀತಿಯಾಗಿ, ಅತಿ ಚಿಕ್ಕ ವಯಸ್ಸಿನಲ್ಲಿ ಮುಟ್ಟು ಆಗುವುದಕ್ಕೆ ಸಾಮಾಜಿಕ, ದೈಹಿಕ, ಜೀವವಿಜ್ಞಾನ, ಆಹಾರ ಹಾಗೂ ಪರಿಸರ ಸೇರಿದಂತೆ ಅನೇಕ ಕಾರಣಗಳಿವೆ. ಈ ಬಗ್ಗೆ ಪೋಷಕರು ಜಾಗರೂಕರಾಗಿದ್ದು ಆರೋಗ್ಯಕರ ಜೀವನಶೈಲಿ ರೂಪಿಸುವ ಅಗತ್ಯವಿದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 268

ಸಮಾಚಾರ ಸಣ್ಣದಲ್ಲ

ಸ್ಟಾರ್ಟ್‌ಅಪ್ ವರ್ಲ್ಡ್ ಕಪ್: ಸಚಿವ ಸಿಂಧಿಯ

ದೆಹಲಿ: ಭಾರತ ಕೂಡಾ ದೊಡ್ಡ ಮಟ್ಟದಲ್ಲಿ 'ಸ್ಟಾರ್ಟ್‌ಅಪ್ ವರ್ಲ್ಡ್ ಕಪ್-2025' ಆಯೋಜಿಸಲಿದೆ ಎಂದು ಕೇಂದ್ರದ ಸಂಪರ್ಕ ಮತ್ತು ಸಂವಹನ ಖಾತೆ ಸಚಿವ ಜ್ಯೋತಿರಾದಿತ್ಯ ಸಿಂದಿಯ ಪ್ರಕಟಿಸಿದ್ದಾರೆ.

ದೆಹಲಿಯ ಯಶೋಭೂಮಿ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿತ 'ಇಂಡಿಯ ಮೊಬೈಲ್ ಕಾಂಗ್ರೆಸ್-9ನೇ ಆವೃತ್ತಿ' ಕಾರ್ಯಕ್ರಮದಲ್ಲಿ ಬುಧವಾರ ಸ್ವಾಗತ ಭಾಷಣ ಮಾಡಿದ ಸಚಿವ ಜ್ಯೋತಿರಾಧಿತ್ಯ ಸಿಂದಿಯ ಅವರು, ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೊ ನಗರದಲ್ಲಿ ಜಾಗತಿಕ ಮಟ್ಟದ ನವೋದ್ಯಮಗಳ ವಿಶ್ವಕಪ್‌ನ ಅಂತಿಮ ಹಣಾಹಣಿ ನಡೆಯಲಿದೆ. ಅಲ್ಲಿ, ಮೊದಲ ಶ್ರೇಣಿಗೆ ಆಯ್ಕೆಯಾದ 15 ಜಾಗತಿಕ ಮಟ್ಟದ ಸ್ಟಾರ್ಟ್‌ಅಪ್‌ಗಳು ಪೈಪೋಟಿ ನಡೆಸಲಿವೆ. ಭಾರತದ ನವೋದ್ಯಮವೂ ಅಲ್ಲಿ ಭಾಗಿಯಾಗುವ ನಿರೀಕ್ಷೆ ಇದೆ ಎಂದರು.

ಛತ್ತೀಸ್‌ಗಢ: ಲಿಫ್ಟ್ ಕುಸಿದು 4 ಸಾವು

ದಬ್ರಾ: ಛತ್ತೀಸ್‌ಗಢ ರಾಜ್ಯದ ಶಕ್ತಿ ಜಿಲ್ಲೆಯ ವಿದ್ಯುತ್ ಸ್ಥಾವರದಲ್ಲಿ ಮಂಗಳವಾರ ತಡರಾತ್ರಿ ಸರ್ವಿಸ್ ಲಿಫ್ಟ್ ಕುಸಿದಿದ್ದರಿಂದ ನಾಲ್ವರು ಕಾರ್ಮಿಕರು ಮೃತಪಟ್ಟು, ಆರು ಮಂದಿ ಗಾಯಗೊಂಡಿದ್ದಾರೆ. ದಬ್ರಾ ಪ್ರದೇಶದ ಉಚ್ಚಿಂಡಾ ಗ್ರಾಮದಲ್ಲಿನ ಆರ್‌ಕೆಎಂ ಪವರ್‌ಜೆನ್ ಪ್ರೈ.ಲಿ. ನಿರ್ಮಾಣ ಕಟ್ಟಡದಲ್ಲಿ ಅವಗಢವಾಗಿದೆ. ಕೆಲಸದ ಪಾಳಿ ಮುಗಿಸಿದ 10 ಕಾರ್ಮಿಕರು ಲಿಫ್ಟ್‌ನಲ್ಲಿ ತೆರಳುತ್ತಿದ್ದಾಗ ಲಿಫ್ಟ್ ಹಠಾತ್ ಕುಸಿದು ಬಿದ್ದಿದೆ. ಲಿಫ್ಟ್‌ನಲ್ಲಿದ್ದವರೆಲ್ಲ ಗಾಯಗೊಂಡಿದ್ದು, ಅವರನ್ನು ಹತ್ತಿರದ ರಾಯಗಢದ ಜಿಂದಾಲ್ ಫೋರ್ಟಿಸ್ ಆಸ್ಪತ್ರೆಗೆ ಸೇರಿಸಲಾಯಿತು. ಆದರೆ, ಗಂಭೀರವಾಗಿ ಗಾಯಗೊಂಡಿದ್ದ ನಾಲ್ವರು ಕಾರ್ಮಿಕರು ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟರು. ಆರು ಮಂದಿಗೆ ಚಿಕಿತ್ಸೆ ಮುಂದುವರಿದಿದೆ. 2,000 ಕಿಲೊ ಸಾಗಣೆ ಸಾಮರ್ಥ್ಯದ ಲಿಫ್ಟ್, ಸೆ.29ರಂದು ದುರಸ್ತಿಯಾಗಿತ್ತು ಎಂದು ತಿಳಿದುಬಂದಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಶಿಲ್ಪಾ ಶೆಟ್ಟಿ ವಿದೇಶ ಪ್ರವಾಸಕ್ಕೆ ಹೈ ತಡೆ

ಮುಂಬೈ: ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಮತ್ತು ವಿವಾದಿತ ಉದ್ಯಮಿ ರಾಜ್ ಕುಂದ್ರಾ ದಂಪತಿ, ಲಾಸ್ ಏಂಜಲೀಸ್ ಸೇರಿದಂತೆ ವಿವಿಧ ದೇಶಗಳ ಪ್ರವಾಸಕ್ಕೆ ಅನುಮತಿ ಕೋರಿದ್ದು, ಬಾಂಬೆ ಹೈಕೋರ್ಟ್ ಅನುಮತಿ ನೀಡಲು ನಿರಾಕರಿಸಿದೆ. 60 ಕೋಟಿ ರು. ವಂಚನೆ ಪ್ರಕರಣದಲ್ಲಿ ಶಿಲ್ಪಾ ಶೆಟ್ಟಿ-ರಾಜ್ ಕುಂದ್ರಾ ಕೋರ್ಟ್ ವಿಚಾರಣೆ ಎದುರಿಸುತ್ತಿದ್ದಾರೆ. ಹಾಗಾಗಿ ಬಾಲಿವುಡ್ ದಂಪತಿಯ ವಿದೇಶ ಪ್ರವಾಸಕ್ಕೆ ಬಾಂಬೆ ಹೈಕೋರ್ಟ್ ಬುಧವಾರ ತಡೆ ನೀಡಿದೆ. ವಿದೇಶಕ್ಕೆ ಹೋಗಲೇ ಬೇಕು ಎನ್ನವುದಾದರೆ ಮೊದಲು 60 ಕೋಟಿ ರು.ಗಳನ್ನು ಠೇವಣಿಯಾಗಿ ಇರಿಸಬೇಕು ಎಂದೂ ಕಟ್ಟುನಿಟ್ಟು ಸೂಚನೆ ನೀಡಿದೆ. 2015-23ರ ಅವಧಿಯಲ್ಲಿ ಶಿಲ್ಪಾ-ರಾಜ್ ದಂಪತಿ ಉದ್ಯಮ ವಹಿವಾಟು ವಿಸ್ತರಣೆ ನೆಪದಲ್ಲಿ 60 ಕೋಟಿ ರು. ಸಾಲ ಪಡೆದುಕೊಂಡು ವೈಯಕ್ತಿಕ ವೆಚ್ಚಗಳಿಗೆ ಬಳಸಿಕೊಂಡಿದ್ದಾರೆ ಎಂದು ಉದ್ಯಮಿ ದೀಪಕ್ ಕೊಠಾರಿ ಆರೋಪಿಸಿದ್ದು, ಪ್ರಕರಣ ನ್ಯಾಯಾಲಯದಲ್ಲಿದೆ.

ಐಫೋನ್ ರಫ್ತು ಶೇ.75 ಪ್ರಗತಿ: ಭಾರತ ದಾಖಲೆ

ದೆಹಲಿ: ಆತ್ಮನಿರ್ಭರ ಭಾರತ ಮತ್ತು 'ಮೇಕ್ ಇನ್ ಇಂಡಿಯ' ಅಭಿಯಾನದ ಕಾರಣ, ಜಾಗತಿಕ ಮಟ್ಟದಲ್ಲಿ ತಯಾರಿಕಾ ಶಕ್ತಿ ಕೇಂದ್ರವಾಗಿ ಪ್ರಗತಿ ಕಾಣುತ್ತಿರುವ ಭಾರತ, ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ತಯಾರಿಕೆ ಮತ್ತು ರಫ್ತಿನಲ್ಲಿ ಸತತ ಏರಿಕೆ ದಾಖಲಿಸುತ್ತಿದೆ. ಆಪಲ್ ಕಂಪನಿಯ ಜನಪ್ರಿಯ ಸ್ಮಾರ್ಟ್‌ಫೋನ್ 'ಐಫೋನ್' ತಯಾರಿಕೆ ಮತ್ತು ರಫ್ತು ವಹಿವಾಟಿನಲ್ಲಿ 2026ನೇ ಹಣಕಾಸು ವರ್ಷದ ಪ್ರಥಮಾರ್ಧದಲ್ಲಿ ಶೇ.75ರ ಪ್ರಗತಿ ದಾಖಲಿಸಿದೆ. ಅಂದರೆ, 1000 ಕೋಟಿ ಡಾಲರ್ (88,730 ಕೋಟಿ ರು.) ಮೌಲ್ಯದ ಐಫೋನ್‌ಗಳನ್ನು ರಫ್ತು ಮಾಡಿ ಇತಿಹಾಸ ನಿರ್ಮಿಸಿದೆ. ಸೆಪ್ಟೆಂಬರ್ ಮಾಸದಲ್ಲಿಯೇ 'ಐಫೋನ್' ತಯಾರಿಕೆಯಲ್ಲಿ ಶೇ.155ರಷ್ಟು ವೃದ್ಧಿ ಕಂಡುಬಂದಿದೆ. ಪ್ರಸಕ್ತ ವರ್ಷ ಹಬ್ಬಗಳ ಋತುವಿನಲ್ಲಿ 1750 ಕೋಟಿ ಡಾಲರ್ ಮೌಲ್ಯದ ಐಫೋನ್ ರಫ್ತಾಗಲು ಸಿದ್ಧವಾಗಿವೆ. 2024-25ನೇ ಹಣಕಾಸು ವರ್ಷದ ಪ್ರಥಮಾರ್ಧ ಅವಧಿಯಲ್ಲಿ 571 ಕೋಟಿ ಡಾಲರ್ ಮೌಲ್ಯದ ಐಫೋನ್ ರಫ್ತಾಗಿತ್ತು.



{ ಗಿರಿರಾಜ್ ಕಿಶೋರ್ } ಕೇಂದ್ರ ಸಚಿವ

ಸದ್ಯದಲ್ಲೇ ನಡೆಯಲಿರುವ ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಸಂಯುಕ್ತ ಜನತಾ ದಳದ(ಜೆಡಿಯು) ನಾಯಕ ನಿತೀಶ್ ಕುಮಾರ್ ಅವರೇ ಎನ್‌ಡಿಎ ಮೈತ್ರಿಕೂಟದಿಂದ ಮುಖ್ಯಮಂತ್ರಿ ಅಭ್ಯರ್ಥಿಯಾಗಿರುತ್ತಾರೆ. ಕ್ಷೇತ್ರಗಳ ಹಂಚಿಕೆ ವಿಚಾರದಲ್ಲಿ ಎನ್‌ಡಿಎ ಮೈತ್ರಿಕೂಟದಲ್ಲಿ ಯಾವುದೇ ಗೊಂದಲ, ಭಿನ್ನ ಮತವೂ ಇಲ್ಲ.



ಮೊಬೈಲ್ ತಂತ್ರಾಂಶ ಮೇಳ ಉದ್ಘಾಟಿಸಿದ ಪ್ರಧಾನಿ ಮೋದಿ | ದೆಹಲಿಯಲ್ಲಿ 4 ದಿನಗಳ 'ಇಂಡಿಯ ಮೊಬೈಲ್ ಕಾಂಗ್ರೆಸ್' | 'ಇನ್ನೋವೇಟ್ ಟು ಟ್ರಾನ್ಸ್‌ಫಾರ್ಮ್' ಈ ಬಾರಿಯ ಥೀಮ್

ಭಾರತದಲ್ಲಿ 1 ಜಿಬಿ ಡೇಟಾ ಚಹಾಗಿಂತ ಅಗ್ಗ

ದೆಹಲಿ: ಭಾರತದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಇಂಟರ್ನೆಟ್ ಬಳಕೆ ಆಗುತ್ತಿದೆ. ಪರಿಣಾಮವಾಗಿ 1 ಜಿಬಿ ಡೇಟಾ(ದತ್ತಾಂಶ) 1 ಕಪ್ ಚಹಾಗಿಂತಲೂ ಕಡಿಮೆ ಬೆಲೆ ಸಿಗುತ್ತಿದೆ. ಹಾಗಾಗಿಯೇ ಡಿಜಿಟಲ್ ಇಂಡಿಯ ವೇಗವಾಗಿ ಪ್ರಗತಿ ಹೊಂದುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಕೇಂದ್ರ ಸರಕಾರದ ದೂರಸಂಪರ್ಕ ಇಲಾಖೆ ಮತ್ತು 'ಭಾರತೀಯ ಮೊಬೈಲ್ ಫೋನ್ ಸೇವಾಸಂಸ್ಥೆಗಳ ಸಂಘ' (ಸಿಒಎಐ) ಜಂಟಿಯಾಗಿ ದೆಹಲಿಯ ಯಶೋ ಭೂಮಿ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಿರುವ 'ಇಂಡಿಯ ಮೊಬೈಲ್ ಕಾಂಗ್ರೆಸ್-9ನೇ ಆವೃತ್ತಿ'ಗೆ ಬುಧವಾರ ಚಾಲನೆ ನೀಡಿ, ಬಳಿಕ ಸಮಾವೇಶವನ್ನು ಉದ್ದೇಶಿಸಿ ಪ್ರಧಾನಿ ಮೋದಿ ಮಾತನಾಡಿದರು.

ಮುಖ್ಯ ಅಂಕಿ-ಅಂಶ

ಎಷ್ಟು ದೇಶಗಳು ಭಾಗಿ	150
ಕಂಪನಿಗಳು ಭಾಗಿ	400
ಕಂಪನಿಗಳ ಪ್ರತಿನಿಧಿಗಳು	7000
ನವೋದ್ಯಮಗಳು	500
ಹೂಡಿಕೆದಾರರು	300
ವೀಕ್ಷಕರ ಭೇಟಿ ನಿರೀಕ್ಷೆ	1.50 ಲಕ್ಷ

ಭಾರತದಲ್ಲೀಗ ಡಿಜಿಟಲ್ ಸಂಪರ್ಕ ಸವಲತ್ತು ಅಥವಾ ಐಷಾರಾಮಿ ವಿಚಾರ ಅಲ್ಲವೇ ಅಲ್ಲ. ಅದೀಗ ಪ್ರತಿ ಭಾರತೀಯರ ಜೀವನದ ಅವಿಭಾಜ್ಯ ಅಂಗವಾಗಿದೆ ಎಂದರು. ಒಂದು ಕಾಲದಲ್ಲಿ 2ಜಿ ತರಂಗಾಂತರ ದೊಂದಿ ಗೆ ಇಂಟರ್ನೆಟ್ ಸೇವೆಗೆ ಪರದಾಡುತ್ತಿದ್ದ ದೇಶದಲ್ಲಿಂದು ಪ್ರತಿ ಜಿಲ್ಲೆಯಲ್ಲಿಯೂ 5ಜಿ ಸಂಪರ್ಕ ಸೌಲಭ್ಯವಿದೆ. ಭಾರತ ವಿಶ್ವದ 2ನೇ ಅತಿದೊಡ್ಡ ಟೆಲಿಕಾಂ ಮಾರುಕಟ್ಟೆಯಾಗಿದೆ. 2ನೇ ಅತಿದೊಡ್ಡ 5ಜಿ ಮಾರುಕಟ್ಟೆ ಎನಿಸಿಕೊಂಡಿದೆ. ಮಾನವಶಕ್ತಿ, ಚಲನಶೀಲತೆ ಮತ್ತು ಮುನ್ನಡೆಯಬೇಕೆಂಬ ಮನಸ್ಥಿತಿ ಹೊಂದಿದೆ ಎಂದು ಬಣ್ಣಿಸಿದರು. ಅ.11ರವರೆಗೂ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಟೆಲಿಕಾಂ ಕ್ಷೇತ್ರದ ಪ್ರಮುಖ ತಂತ್ರಜ್ಞಾನ ಕಂಪನಿಗಳು ಭಾಗವಹಿಸಿದ್ದು, ದೂರಸಂಪರ್ಕ, 6ಜಿ, ನವೋದ್ಯಮ ತಂತ್ರಜ್ಞಾನಗಳ ಕುರಿತು ಚರ್ಚೆ, ವಿಚಾರಗೋಷ್ಠಿ, ಪ್ರದರ್ಶನ ನಡೆಯಲಿದೆ. ಭಾರತದ ಡಿಜಿಟಲ್ ರೂಪಾಂತರ ಪ್ರತಿಬಿಂಬಿಸುವ 'ಇನ್ನೋವೇಟ್ ಟು ಟ್ರಾನ್ಸ್‌ಫಾರ್ಮ್' ವಿಷಯ ಈ ಬಾರಿಯ ಥೀಮ್ ಆಗಿದೆ.

ದೆಹಲಿಯಲ್ಲಿ 'ಇಂಡಿಯ ಮೊಬೈಲ್ ಕಾಂಗ್ರೆಸ್-9ನೇ ಆವೃತ್ತಿ'ಗೆ ಬುಧವಾರ ಚಾಲನೆ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೇಂದ್ರದ ಸಂಪರ್ಕ- ಸಂವಹನ ಖಾತೆ ಸಚಿವ ಜ್ಯೋತಿರಾಧಿತ್ಯ ಸಿಂದಿಯ ಸ್ಮರಣಿಕೆ ನೀಡಿದರು.

2025 ಸುಧಾರಣೆಗಳ ವರ್ಷ

ವರ್ಷ 2025 ಅನ್ನು ದೊಡ್ಡ ಬದಲಾವಣೆಗಳು ಮತ್ತು ದೊಡ್ಡ ಸುಧಾರಣೆಗಳ ವರ್ಷ ಎಂದು ಆ.15ರ ಸ್ವಾತಂತ್ರ್ಯೋತ್ಸವ ಭಾಷಣದಲ್ಲೇ ಹೇಳಲಾಗಿತ್ತು ಎಂದು ನೆನಪಿಸಿದರು. ಅಲ್ಲದೇ, ಸೆಪ್ಟೆಂಬರ್‌ನಲ್ಲಿ 'ಸರಕು ಮತ್ತು ಸೇವಾ ತೆರಿಗೆ'(ಜಿಎಸ್‌ಟಿ) ಪದ್ಧತಿಯಲ್ಲಿ ಸುಧಾರಣೆ ತರಲಾಗಿದ್ದು, ತೆರಿಗೆ ಪ್ರಮಾಣವನ್ನು ಗಣನೀಯವಾಗಿ ಕಡಿತಗೊಳಿಸಲಾಗಿದೆ. ದಿನಬಳಕೆಯ ಬಹಳಷ್ಟು ವಸ್ತುಗಳ ಜತೆಗೇ ಎಲೆಕ್ಟ್ರಾನಿಕ್ ಸಾಧನಗಳ ಬೆಲೆಯೂ ಕಡಿಮೆಯಾಗಿದೆ ಎಂದು ವಿವರಿಸಿದರು. ದೇಶದ ಯುವ ಪೀಳಿಗೆ ತಂತ್ರಜ್ಞಾನ ಕ್ರಾಂತಿಗೆ ಮಹತ್ವದ ಕೊಡುಗೆ ನೀಡುತ್ತಿದೆ. ಹಿಂದಿನ ದಿನಗಳಲ್ಲಿ 'ಭವಿಷ್ಯ' ಪದದ ಅರ್ಥ 'ಮುಂದಿನ ಶತಮಾನ' ಅಥವಾ ಮುಂದಿನ 10-20 ವರ್ಷ ಎಂದಾಗಿತ್ತು. ಆದರೆ ಈಗ ತಂತ್ರಜ್ಞಾನ ವೇಗವಾಗಿ ಬದಲಾಗುತ್ತಿದ್ದು, ಭವಿಷ್ಯ ಎಂಬುದು ಕಣ್ಣಮುಂದೆಯೇ ಇದೆ ಎಂದು ಮೋದಿ ಹೇಳಿದರು.

ಮೇಕ್ ಇನ್ ಇಂಡಿಯ ಅಭಿಯಾನ

ಮೊಬೈಲ್ ಫೋನ್ ತಯಾರಿಕೆಯಿಂದ ಆರಂಭಿಸಿ ಸೆಮಿ ಕಂಡಕ್ಟರ್‌ಗಳು ಮತ್ತು ಬಗೆ ಬಗೆಯ ಎಲೆಕ್ಟ್ರಾನಿಕ್ಸ್ ಉಪಕ ರಣಗಳ ತಯಾರಿಕೆ ವಲಯದಲ್ಲಿ 'ಮೇಕ್ ಇನ್ ಇಂಡಿಯ' ಅಭಿಯಾನವನ್ನು ಪ್ರಶಂಸಿಸಿದ ಪ್ರಧಾನಿ ಮೋದಿ, ತಮ್ಮ ನೇತೃತ್ವದ ಎನ್‌ಡಿಎ ಸರಕಾರ ಕೈಗಾರಿಕಾ ಸುಧಾರಣೆಗಳಿಗೆ ಮತ್ತಷ್ಟು ವೇಗ ನೀಡುತ್ತಿದೆ. ದೇಶೀಯವಾಗಿಯೇ '4ಜಿ' ಸಿಮ್ ತಯಾರಿಸಲಾಗಿದೆ ಎಂದು ಹೆಮ್ಮೆಯಿಂದ ಹೇಳಿ ಕೊಂಡರು. ಕೇಂದ್ರ ಸರಕಾರದ ಸ್ವಾಗತಾರ್ಹ ವಿಧಾನ ಮತ್ತು ವಾಣಿಜ್ಯೋದ್ಯಮ ಆರಂಭಕ್ಕೆ ಸುಲಭ ನೀತಿಗಳು ದೇಶವನ್ನು ಹೂಡಿಕೆದಾರ ಸ್ನೇಹಿಯಾಗಿಸಿವೆ. ಪ್ರಸ್ತುತ ಭಾರತದ ಕೈಗಾರಿಕೋದ್ಯಮ ವಲಯವು ಬಂಡವಾಳ ಹೂಡಿಕೆಗೆ ಅತ್ಯುತ್ತಮ ಅವಕಾಶಗಳನ್ನು ಒದಗಿಸಿಕೊಡುತ್ತಿದೆ. ಭಾರತದಲ್ಲಿ ಹೂಡಿಕೆ ಮಾಡಲು, ನವೋದ್ಯಮಗಳನ್ನು ಆರಂಭಿಸಲು ಮತ್ತು ತಯಾರಿಕೆ ವಲಯದಲ್ಲಿ ತೊಡಗಿಸಿ ಕೊಳ್ಳಲು ಇದು ಅತ್ಯುತ್ತಮ ಸಮಯವಾಗಿದೆ ಎಂದು ಉತ್ತೇಜನದ ಮಾತುಗಳನ್ನಾಡಿದರು.

ದೆಹಲಿಯಲ್ಲಿ ಬುಧವಾರ ಆರಂಭಗೊಂಡಿರುವ 'ಇಂಡಿಯ ಮೊಬೈಲ್ ಕಾಂಗ್ರೆಸ್' ಮೇಳದಲ್ಲಿ ಡಿಜಿಟಲ್ ಇಂಡಿಯ ವೈಶಿಷ್ಟ್ಯ ಪ್ರದರ್ಶನ.

ಗಾಯಕ ಜುಬೀನ್ ಸಾವು: ಸಂಬಂಧಿ ಡಿವೈಎಸ್ಪಿ ಬಂಧನ

ಗುವಾಹಟಿ: ಸಿಂಗಾಪುರದಲ್ಲಿ ಸೆ.19ರಂದು ಶಂಕಾಸ್ಪದವಾಗಿ ಸಾವನ್ನಪ್ಪಿದ ಅಸ್ಸಾಂನ ಜನಪ್ರಿಯ ಗಾಯಕ ಜುಬೀನ್ ಗಾರ್ಗ್ ಪ್ರಕರಣದಲ್ಲಿ ಅಸ್ಸಾಂ ಪೊಲೀಸ್ ಡಿವೈಎಸ್‌ಪಿಯನ್ನೇ ಬಂಧಿಸಲಾ ಗಿದೆ.

ಜುಬೀನ್ ಸಂಶಯಾಸ್ಪದ ಸಾವಿನ ಪ್ರಕರಣದ ತನಿಖೆ ನಡೆಸುತ್ತಿರುವ ಅಸ್ಸಾಂ ಪೊಲೀಸ್ 'ವಿಶೇಷ ತನಿಖಾ ತಂಡ'(ಎಸ್‌ಐಟಿ), ಗರ್ಗ್ ಸೋದರ ಸಂಬಂಧಿಯೂ ಆಗಿರುವ ಡಿವೈಎಸ್‌ಪಿ ಸಂದೀಪನ್ ಗರ್ಗ್‌ರನ್ನು ಬುಧವಾರ ಬಂಧಿಸಿದೆ. ಇದರೊಂದಿಗೆ ಪ್ರಕರಣದಲ್ಲಿ 5ನೇ ಆರೋಪಿಯ ಬಂಧನವಾದಂತಾಗಿದೆ.

ಜುಬೀನ್ ಗಾಯನ ತಂಡದ ಡ್ರಮ್ಮರ್ ಮತ್ತು ಗಾಯಕರನ್ನು ಎಸ್‌ಐಟಿ ವಶಕ್ಕೆ ತೆಗೆದುಕೊಂಡು ವಿಚಾರಣೆಗೆ ಒಳಪಡಿಸಿದ ಬಳಿಕವೇ ಡಿವೈಎಸ್‌ಪಿ ಸಂದೀಪನ್ ಸಹ ಜುಬೀನ್ ಸಾವಿನ ಸಂದರ್ಭ ಸ್ಥಳದಲ್ಲಿಯೇ ಇದ್ದರು. ಅಲ್ಲದೇ, ಅದು ಸಂದೀಪನ್ ಅವರ ಮೊದಲ ವಿದೇಶ ಪ್ರವಾಸ ಎಂಬುದು 'ಎಸ್‌ಐಟಿ'ಗೆ ತಿಳಿದುಬಂದಿತು. ಸಂದೀಪನ್ ಗರ್ಗ್‌ರನ್ನು ಬಂಧಿಸಿ ವಿಚಾರಣೆ ನಡೆಸಲಾಗಿದೆ. ಪ್ರಕರಣ ಸಂಬಂಧ ಅಗತ್ಯ ಕಾನೂನು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಈವರೆಗೆ ಈಶಾನ್ಯ ಭಾರತ ಉತ್ಸವದ ಮುಖ್ಯ ಸಂಘಟಕ ಶ್ಯಾಮಕಾನು ಮಹಾಂತ, ಗಾಯಕ ಜುಬೀನ್ ಅವರ ವ್ಯವಸ್ಥಾಪಕ ಸಿದ್ಧಾರ್ಥ ಶರ್ಮಾ ಮತ್ತು ಗಾಯನ ತಂಡದ ಶೇಖರ್ ಜ್ಯೋತಿ ಗೋಸ್ವಾಮಿ ಮತ್ತು ಅಮೃತ್ ಪ್ರಭಾ ಮಹಾಂತ್ ಅವರನ್ನ ಈ ಮೊದಲೇ ಬಂಧಿಸಲಾಗಿದ್ದು, ಆರೋಪಿಗಳೆಲ್ಲ ಸದ್ಯ ಎಸ್‌ಐಟಿ ಕಸ್ಟಡಿಯಲ್ಲಿದ್ದಾರೆ ಎಂದು ಡಿಜಿಪಿ ಮುನ್ನಾ ಪ್ರಸಾದ್ ಗುಪ್ತಾ ತಿಳಿಸಿದ್ದಾರೆ. ಸಿಂಗಾಪುರದಲ್ಲಿ ಜುಬೀನ್ ಅವರ ಮ್ಯಾನೇಜರ್ ಸಿದ್ಧಾರ್ಥ ಶರ್ಮಾ ಮತ್ತು ಶ್ಯಾಮಕಾನು ಮಹಾಂತ ಸೇರಿಕೊಂಡು ವಿಷಪ್ರಾಶನ ಮಾಡಿಸಿದ್ದಾರೆ ಎಂದು ಎಸ್‌ಐಟಿಗೆ ಶೇಖರ್ ಜ್ಯೋತಿ ಗೋಸ್ವಾಮಿ ಹೇಳಿದ್ದಾರೆಂದು ತಿಳಿದುಬಂದಿದೆ.

5 ದಿನಗಳಿಂದ ವಿಚಾರಣೆ

ಬಂಧನಕ್ಕೂ ಮುನ್ನ ಸಂದೀಪನ್‌ರನ್ನು 5 ದಿನಗಳಿಂದ ಸಿಐಡಿ ಕಚೇರಿಯಲ್ಲಿ ಎಸ್‌ಐಟಿ ತನಿಖಾಧಿಕಾರಿಗಳು ತೀವ್ರ ವಿಚಾರಣೆಗೆ ಒಳಪಡಿಸಿದ್ದರು. ಆ ನಂತರವಷ್ಟೇ ಸಂದೀಪನ್‌ರನ್ನು ಬುಧವಾರ ಬೆಳಿಗ್ಗೆ 10.30ರಲ್ಲಿ ಬಂಧಿಸಿದ್ದಾರೆ. ಬಳಿಕ ನ್ಯಾಯಾಲಯದ ಮುಂದೆ ಹಾಜರುಪಡಿಸಿ 14 ದಿನಗಳ ಕಸ್ಟಡಿಗೆ ಕೋರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಟಾಕಿ ಘಟಕ ಸ್ಫೋಟ: ಮಾಲೀಕ ಸೇರಿ 7 ಸಾವು

ಅಮರಾವತಿ: ಆಂಧ್ರ ಪ್ರದೇಶದ ಕೋನಸೀಮ ಜಿಲ್ಲೆಯ ರಾಯವರಂನಲ್ಲಿರುವ 'ಶ್ರೀ ಲಕ್ಷ್ಮಿ ಗಣಪತಿ ಫೈರ್ ವರ್ಕ್ಸ್' ಪಟಾಕಿ ಘಟಕದಲ್ಲಿ ಬುಧವಾರ ಹಠಾತ್ ಸ್ಫೋಟವಾಗಿ 7 ಮಂದಿ ದುರ್ಮರಣಕ್ಕೀಡಾಗಿದ್ದಾರೆ.

ಬೆಂಕಿ ದುರಂತದಲ್ಲಿ ಕಾರ್ಖಾನೆ ಮಾಲೀಕ ಪ್ರಕಾಶ ಬಂಟಲ ಸತ್ಯಮೂರ್ತಿ ಅವರೂ ಸಾವಿಗೀಡಾಗಿದ್ದಾರೆ ಎಂದು ವರದಿ ಯಾಗಿದೆ. ಹಲವರು ಗಂಭೀರವಾಗಿ ಗಾಯಗೊಂಡಿದ್ದು, ಸಾವು-ಬದುಕಿನ ನಡುವೆ ಹೋರಾಡುತ್ತಿದ್ದಾರೆ. ಬಂಟಲ ಸತ್ಯಮೂರ್ತಿ 70 ವರ್ಷಗಳಿಂದ ಪಟಾಕಿ ತಯಾರಿಕೆ ಉದ್ಯಮದಲ್ಲಿದ್ದರು. ಸ್ಫೋಟದ ತೀವ್ರತೆಗೆ ಸ್ಥಳದಲ್ಲೇ 6 ಕಾರ್ಮಿಕರು ಸಾವಿಗೀಡಾದರು. ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ಯುವಾಗ ಒಬ್ಬರು ಮಾರ್ಗ ಮಧ್ಯೆ ಅಸುನೀಗಿದರು. ಹಲವರು ಗಂಭೀರವಾಗಿ ಗಾಯಗೊಂಡಿದ್ದು, ಸಾವಿನ ಸಂಖ್ಯೆ ಹೆಚ್ಚಬಹುದು ಎಂದು ಅಧಿಕಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದ್ದು, ಗಂಟೆಗಳ ಕಾಲ ಶ್ರಮಿಸಿದ ಅಗ್ನಿಶಾಮಕ ಸಿಬ್ಬಂದಿ ಕಡೆಗೂ ಬೆಂಕಿಯನ್ನು ನಂದಿಸಿದರು. ಆದರೆ, ಅಷ್ಟರಲ್ಲಾಗಲೇ ಪಟಾಕಿ ಘಟಕ ಬಹುತೇಕ ಸುಟ್ಟು ಹೋಗಿತ್ತು. ಆಂಧ್ರ ಸರಕಾರ ತನಿಖೆಗೆ ಆದೇಶಿಸಿದೆ.

ನಟ ದುಲ್ಕರ್, ಪೃಥ್ವಿರಾಜ್‌ಗೆ ಇ.ಡಿ, ಕಸ್ಟಮ್ಸ್ ದಾಳಿ ಬಿಸಿ

ಮಾಲಿವುಡ್‌ಗೆ ಸಂಕಷ್ಟ ತಂದ ಐಷಾರಾಮಿ ಕಾರ್

ತಿರುವನಂತಪುರಂ: ದಕ್ಷಿಣ ಭಾರತದಲ್ಲಿನ ಐಷಾರಾಮಿ ಕಾರುಗಳ ಕಳ್ಳಸಾಗಣೆ ಜಾಲ ಗುರಿಯಾಗಿಸಿಕೊಂಡು ಜಾರಿ ನಿರ್ದೇಶನಾಲಯ(ಇ.ಡಿ) ಮತ್ತು ಕಸ್ಟಮ್ಸ್ (ಸುಂಕ) ಇಲಾಖೆ ಅಧಿಕಾರಿಗಳ ತಂಡ ಬುಧವಾರ ಕೇರಳ ಮತ್ತು ತಮಿಳುನಾಡಿನ 17 ಕಡೆ ದಾಳಿ ನಡೆಸಿದೆ.

ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ(ಎಫ್‌ಇಎಆರ್‌ಎ)ಯ ವಿವಿಧ ಸೆಕ್ಷನ್‌ಗಳನ್ನು ಉಲ್ಲಂಘಿಸಿರುವ ಆರೋಪದಡಿ ಮಾಲಿವುಡ್‌ನ ಪ್ರಸಿದ್ಧ ನಟ-ನಿರ್ಮಾಪಕರಾದ ದಲ್ಕರ್ ಸಲ್ಮಾನ್ ಮತ್ತು ಪೃಥ್ವಿರಾಜ್ ಸುಕುಮಾರನ್ ಹಾಗೂ ಅಮಿತ್ ಚಕ್ಕಲಕ್ಕಲ್ ಅವರ ಮನೆ-ಕಚೇರಿಗಳಲ್ಲಿ ವ್ಯಾಪಕ ಶೋಧ ನಡೆಸಲಾಗಿದೆ. ವಾಹನ ಮಾಲೀಕರರಷ್ಟೇ ಅಲ್ಲದೇ ವಿವಿಧ ಆಟೋ ವರ್ಕ್‌ಶಾಪ್‌ಗಳು ಮತ್ತು ವಾಹನಗಳ ಡೀಲರ್‌ಗಳ ಗೋದಾಮು, ಕಚೇರಿಗಳ ಮೇಲೆಯೂ ದಾಳಿ ನಡೆದಿದೆ.

ಎರ್ನಾಕುಲಂ, ತ್ರಿಶೂರ್, ಕೋಯಿಕ್ಕೋಡ್, ಮಲಪ್ಪುರಂ, ಕೊಟ್ಟಾಯಂ ಮತ್ತು ಕೊಯಮತ್ತೂರಿನಲ್ಲಿ ನಡೆದ ದಾಳಿ ವೇಳೆ ಭೂತಾನ್ ಮತ್ತು ನೇಪಾಳದ ಅಕ್ರಮ ಮಾರ್ಗಗಳ ಮೂಲಕ ಲ್ಯಾಂಡ್ ಕ್ರೂಸರ್, ಡಿಫೆಂಡರ್ ಮತ್ತು ಮಸೆರಾಟಿಸ್‌ನಂತಹ ಉನ್ನತ ದರ್ಜೆಯ ಕಾರುಗಳನ್ನು ತರಿಸಿಕೊಂಡಿರುವುದು ಪತ್ತೆಯಾಗಿದೆ. ಆ ಮೂಲಕ ದೇಶದ ಬೊಕ್ಕಸಕ್ಕೆ ಲಕ್ಷಾಂತರ ರು. ಸುಂಕ ನಷ್ಟವಾಗುವಂತೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ. ಭಾರತೀಯ ಸೇನೆ, ಅಮೆರಿಕ ರಾಯಭಾರ ಕಚೇರಿ ಮತ್ತು ವಿದೇಶಾಂಗ ಸಚಿವಾಲಯದ ಹೆಸರಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿದ ಕೊಯಮತ್ತೂರು ಮೂಲದ ಕಾರು ಕಳ್ಳಸಾಗಣೆ ಜಾಲ, ಅರುಣಾಚಲ ಪ್ರದೇಶ ಮತ್ತು ಹಿಮಾಚಲ ಪ್ರದೇಶ ಮೊದಲಾದ ರಾಜ್ಯಗಳಲ್ಲಿ ಈ ಐಶಾರಾಮಿ ವಾಹನಗಳನ್ನು ನೋಂದಾಯಿಸಿ ಕೇರಳಕ್ಕೆ ತಂದು ನಟ, ನಿರ್ಮಾಪಕರಿಗೆ ವಿತರಿಸಿದ ಎಂಬುದು ಕಂಡುಬಂದಿದೆ.

ಸೆ.23ರಂದು, 'ಆಪರೇಷನ್ ನಮ್‌ಖೋರ್' ಹೆಸರಲ್ಲಿ ಕೇರಳದಲ್ಲಿನ ಕಸ್ಟಮ್ಸ್ ಇಲಾಖೆ ಅಧಿಕಾರಿಗಳು ಮೂರು ನಟರ ನಿವಾಸಗಳು ಸೇರಿದಂತೆ 30 ಸ್ಥಳಗಳಿಂದ 36 ಐಷಾರಾಮಿ ವಾಹನಗಳನ್ನು ವಶಪಡಿಸಿಕೊಂಡಿದ್ದರು.

ಮ.ಪ್ರ. ಕೋಲ್ಡ್ರಿಫ್ ಸಿರಪ್: ಸಾವು 20ಕ್ಕೆ

ಭೋಪಾಲ್: ತಮಿಳುನಾಡು ಕಾಂಚಿಪುರಂ ಮೂಲದ ಶ್ರೀಸನ್ ಫಾರ್ಮಾಸ್ಯುಟಿಕಲ್ ಕಂಪನಿಯಲ್ಲಿ ತಯಾರಾಗಿ ಮಧ್ಯಪ್ರದೇಶದಲ್ಲಿ ಮಾರಾಟವಾದ 'ಕೋಲ್ಡ್ರಿಫ್' ಕೆಮ್ಮಿನ ಸಿರಪ್‌ಗೆ ಬಲಿಯಾದ ಮಕ್ಕಳ ಸಂಖ್ಯೆ ರಾಜ್ಯದಲ್ಲಿ ಬುಧವಾರದ ವೇಳೆಗೆ 20ಕ್ಕೆ ಏರಿಕೆಯಾಗಿದೆ. ವಿಷಕಾರಿ ದ್ರಾವಣವಾದ 'ಇಂಡಸ್ಟ್ರಿಯಲ್ ಸಾಲ್ವೆಂಟ್' ಶೇ.48ರಷ್ಟು ಮಿಶ್ರಣವಾಗಿದ್ದ ಕೆಮ್ಮಿನ ಸಿರಪ್ ಸೇವಿಸಿದ ಕಾರಣ ಈ ಮೊದಲು ಮಧ್ಯಪ್ರದೇಶದ ಛಿಂದ್ವಾಡದ 14 ಮಕ್ಕಳು ಸಾವನ್ನಪ್ಪಿದ್ದರು. ಬಳಿಕ ಮಂಗಳವಾರ ಛಿಂದ್ವಾಡದಲ್ಲಿ 4 ಹಾಗೂ ಬೇತುಲ್‌ನಲ್ಲಿ ಇಬ್ಬರು ಮಕ್ಕಳು ಅಸುನೀಗಿದವು. ಸದ್ಯ ಮಧ್ಯಪ್ರದೇಶದ ವಿವಿಧ ಆಸ್ಪತ್ರೆಗಳಲ್ಲಿ 6 ಮಕ್ಕಳು ಚಿಕಿತ್ಸೆ ಪಡೆಯುತ್ತಿವೆ. ಅದರಲ್ಲಿ 5 ಮಕ್ಕಳ ಸ್ಥಿತಿ ಗಂಭೀರವಾಗಿದ್ದು, ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚುವ ಭೀತಿ ಎದುರಾಗಿದೆ. ಈ ಮಧ್ಯೆ, ಕೋಲ್ಡ್ರಿಫ್ ಸಿರಪ್ ಸೇವಿಸಿ ಅಸ್ವಸ್ಥರಾಗಿರುವ ಮಕ್ಕಳ ಚಿಕಿತ್ಸೆಯ ವೆಚ್ಚವನ್ನು ಭರಿಸುವುದಾಗಿ ಮಧ್ಯಪ್ರದೇಶ ಸರಕಾರ ಪ್ರಕಟಿಸಿದೆ. ಕೋಲ್ಡ್ರಿಫ್ ಸಿರಪ್ ತಯಾರಿಸಿದ ಕಾಂಚಿಪುರಂನ ಶ್ರೀಸನ್ ಫಾರ್ಮಾಸುಟಿಕಲ್ಸ್ ಕಂಪನಿಗೆ ತಮಿಳುನಾಡು ಸರಕಾರ ಶೋಕಾಸ್ ನೋಟಿಸ್ ನೀಡಿದೆ.

ನವಿ ಮುಂಬೈ ವಿಮಾನ ನಿಲ್ದಾಣಕ್ಕೆ ಮೋದಿ ಚಾಲನೆ

ಮುಂಬೈ: ಮಹಾರಾಷ್ಟ್ರದ ರಾಜಧಾನಿ ನಗರ ಮುಂಬೈನಲ್ಲಿ 19,650 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾಗಿರುವ 'ನವಿ ಮುಂಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ'ದ ಮೊದಲ ಹಂತವನ್ನು ಪ್ರಧಾನಿ ನರೇಂದ್ರ ಮೋದಿ ಬುಧವಾರ ಉದ್ಘಾಟಿಸಿದರು. ಇದು ದೇಶದ ಅತಿದೊಡ್ಡ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ ಎನಿಸಿಕೊಂಡಿದೆ.

ಅದಕ್ಕೂ ಮುನ್ನ ಪ್ರಧಾನಿ, ವಿಮಾನ ನಿಲ್ದಾಣದೊಳಗೆ ಸುತ್ತಾಡಿ ಪರಿವೀಕ್ಷಣೆ ನಡೆಸಿದರು. ಅತ್ಯಾಧುನಿಕ ಸೌಲಭ್ಯಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಈ ವೇಳೆ ಕೇಂದ್ರದ ನಾಗರಿಕ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು, ಕೇಂದ್ರ ಸಚಿವ ಮುರಳೀಧರ್ ಮೊಹೋಲ್, ರಾಜ್ಯಪಾಲ ಆಚಾರ್ಯ ದೇವವ್ರತ್, ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವಿಸ್, ಉಪ ಮುಖ್ಯಮಂತ್ರಿಗಳಾದ ಏಕನಾಥ್ ಶಿಂದೆ ಮತ್ತು ಅಜಿತ್ ಪವಾರ್ ಉಪಸ್ಥಿತರಿದ್ದರು. ಮುಂಬೈ ಮೆಟ್ರೋಪಾಲಿಟನ್ ಪ್ರದೇಶದ 2ನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಎನಿಸಿಕೊಂಡಿರುವ ಈ ವಿಮಾನ ನಿಲ್ದಾಣವನ್ನು 'ಪಿಪಿಪಿ' ಮಾದರಿಯಲ್ಲಿ 'ಅದಾನಿ ಸಮೂಹ' ಅಭಿವೃದ್ಧಿಪಡಿಸಿದೆ.

ವೈಶಿಷ್ಟ್ಯ: 1,160 ಹೆಕ್ಟೇರ್ ಪ್ರದೇಶದಲ್ಲಿ ವಿಸ್ತಾರವಾಗಿ ಹರಡಿಕೊಂಡಿರುವ ಅತ್ಯಾಧುನಿಕ ಶೈಲಿಯ, ವಿಶಿಷ್ಟ ವಿನ್ಯಾಸದ ಹೊಸ ವಿಮಾನ ನಿಲ್ದಾಣ ಭಾರತದ ವಾಯುಯಾನ ಸಾಮರ್ಥ್ಯವನ್ನು ಗಮನಾರ್ಹವಾಗಿ ಹೆಚ್ಚಿಸಲಿದೆ. ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲಿನ ಹೊರೆ ಕಡಿಮೆ ಮಾಡಲಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ. ಅತ್ರೆ ಚೌಕ್‌ನಿಂದ ಕಫೆ ಪೆರೇಡ್‌ವರೆಗೆ 12,200 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾದ 'ಮುಂಬೈ ಮೆಟ್ರೋಲೈನ್-3'ರ ಹಂತ 2ಬಿ ಉದ್ಘಾಟಿಸಿದರು.

ನವಿ ಮುಂಬೈ ವಿಮಾನ ನಿಲ್ದಾಣದ ಮಿನಿಯೇಚರ್ ವಿನ್ಯಾಸ ವೀಕ್ಷಿಸಿದ ಪ್ರಧಾನಿ ಮೋದಿ, ಸಿಎಂ ದೇವೇಂದ್ರ ಫಡ್ನವಿಸ್ ಮತ್ತಿತರರು.

ಸಿಜೆಐ ಕ್ಷಮಿಸಿದರೂ ರಾಕೇಶ್‌ಗೆ ಸಂಕಷ್ಟ

ದೆಹಲಿ: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್.ಗವಾಯಿ ಅವರತ್ತ ಶೂ ಎಸೆಯಲೆತ್ನಿಸಿದ ವಕೀಲ ರಾಕೇಶ್ ಕಿಶೋರ್ ವಿರುದ್ಧ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲು ಅನುಮತಿ ನೀಡುವಂತೆ ಸುಪ್ರೀಂ ಕೋರ್ಟ್ ವಕೀಲರೊಬ್ಬರು ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರಿಗೆ ಬುಧವಾರ ಮನವಿ ಮಾಡಿದ್ದಾರೆ.

ಅಟಾರ್ನಿ ಜನರಲ್‌ಗೆ ಪತ್ರ ಬರೆದ ವಕೀಲ ಕೆ.ಆರ್.ಸುಭಾಷ್ ಚಂದ್ರನ್, 1971ರ ನ್ಯಾಯಾಲಯಗಳ ನಿಂದನೆ ತಡೆ ಕಾಯಿದೆ ಸೆಕ್ಷನ್ 15ರಡಿ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲು ಅನುಮತಿ ಕೋರಿದ್ದಾರೆ.

ಸಿಜೆಐ ಪೀಠದತ್ತ ಶೂ ಎಸೆಯಲೆತ್ನಿಸಿದ ಮತ್ತು ನ್ಯಾಯಾಲಯದಲ್ಲಿ ಘೋಷಣೆ ಕೂಗಿದ ವಕೀಲ ಕಿಶೋರ್ ಕೃತ್ಯ ನ್ಯಾಯಾಂಗದ ಆಡಳಿತದಲ್ಲಿನ ಹಸ್ತಕ್ಷೇಪ. ಸುಪ್ರೀಂ ಕೋರ್ಟ್ ಘನತೆ ತಗ್ಗಿಸುವ ಉದ್ದೇಶದ್ದಾಗಿದೆ. ಸಂವಿಧಾನ ಸೋಲುವಂತೆ ಮಾಡುತ್ತದೆ ಎಂದು ಪತ್ರದಲ್ಲಿ ಸುಭಾಷ್ ವಿವರಿಸಿದ್ದಾರೆ. ಘಟನೆ ಯನ್ನು ಸಿಜೆಐ ನಿರ್ಲಕ್ಷಿಸಿ, ಆರೋಪಿ ವಕೀಲರನ್ನು ಕ್ಷಮಿಸಿದ್ದರೂ, ಆನಂತರದಲ್ಲೂ ರಾಕೇಶ್ ಕಿಶೋರ್ ಅವರು ಮಾಧ್ಯಮದೆದುರು 'ನಾನೇನು ತಪ್ಪು ಮಾಡಿಲ್ಲ, ಪಶ್ಚಾತ್ತಾಪವಿಲ್ಲ' ಎಂದಿದ್ದಾರೆ. ಅಲ್ಲದೇ ಸಿಜೆಐ ಬಗ್ಗೆ ಅವಹೇಳನದ ಹೇಳಿಕೆ ನೀಡಿದ್ದಾರೆ. ಇಂಥ ನಡವಳಿಕೆ ನ್ಯಾಯಾಂಗದಲ್ಲಿನ ಸಾರ್ವಜನಿಕ ವಿಶ್ವಾಸ ಕುಗ್ಗಿಸುವ ಉದ್ದೇಶದ್ದಾಗಿದೆ ಎಂದು ಸುಭಾಷ್ ಗಮನ ಸೆಳೆದಿದ್ದಾರೆ.ಈಗಾಗಲೇ ಭಾರತೀಯ ಬಾರ್ ಕೌನ್ಸಿಲ್ ವಕೀಲ ರಾಕೇಶ್ ಕಿಶೋರ್ ಅವರ ನ್ಯಾಯವಾದಿ ಸನ್ನದು ಅಮಾನತುಗೊಳಿಸಿದೆ.

ಭಾರತದ ವಾಯುಪಡೆ ಯುದ್ಧ ವಿಮಾನ ನಾಶಕ್ಕೆ ಪಾಕ್‌ನಿಂದ ಬಲಿಷ್ಠ ಕ್ಷಿಪಣಿ ಖರೀದಿ | ಎಫ್-16 ಯುದ್ಧ ವಿಮಾನ ಉನ್ನತೀಕರಣ

ಪಾಕ್‌ಗೆ ಬಲಿಷ್ಠ ಎಐಎಂ-120 ಕ್ಷಿಪಣಿ ಕೊಡಲೊಪ್ಪಿದ ಅಮೆರಿಕ

ವಾಷಿಂಗ್ಟನ್: 'ಆಪರೇಷನ್ ಸಿಂದೂರ್' ಬಳಿಕ ಅಮೆರಿಕ-ಪಾಕಿಸ್ತಾನ ಬಹಳ ಹತ್ತಿರವಾಗಿವೆ. ಪರಿಣಾಮವಾಗಿ ಪಾಕಿಸ್ತಾನಕ್ಕೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು, ಕ್ಷಿಪಣಿಗಳನ್ನು ನೀಡಲು ಅಮೆರಿಕ ಒಪ್ಪಿಕೊಂಡಿದೆ.

ಅತ್ಯಾಧುನಿಕ ಮಧ್ಯಮ ಶ್ರೇಣಿಯ, ವಿಮಾನದಿಂದ ವಿಮಾನಗಳ ಮೇಲಕ್ಕೆ ದಾಳಿ ನಡೆಸಬಲ್ಲ ಸಾಮರ್ಥ್ಯದ 'ಎಐಎಂ-120' ಕ್ಷಿಪಣಿಗಳನ್ನು ಪಾಕ್‌ಗೆ ನೀಡಲು ಅಮೆರಿಕ ಸರಕಾರವೂ ಒಪ್ಪಿಕೊಂಡಿದೆ. ಈ ಸಂಬಂಧ ಡಿಪಾರ್ಟ್‌ಮೆಂಟ್ ಆಫ್ ವಾರ್(ಡಿಒಡಬ್ಲ್ಯು) ಮತ್ತು ಪಾಕಿಸ್ತಾನ ಸೇನೆ ನಡುವೆ ಶಕ್ತಿಶಾಲಿ ಕ್ಷಿಪಣಿಗಳ ಹಸ್ತಾಂತರ ರಕ್ಷಣಾ ಒಪ್ಪಂದವಾಗಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ವಾಷಿಗ್ಟನ್‌ನಲ್ಲಿ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಮತ್ತು ಸೇನಾ ಮುಖ್ಯಸ್ಥ ಜನರಲ್ ಅಸಿಮ್ ಮುನೀರ್ ಭೇಟಿ ಮಾಡಿದ ಕೆಲ ದಿನಗಳಲ್ಲೇ ಈ ಒಪ್ಪಂದವಾಗಿದೆ. ಅಮೆರಿಕದ ಡಿಒಡಬ್ಲ್ಯು (ಸಮರ ಇಲಾಖೆ) ಇತ್ತೀಚೆಗೆ ಬ್ರಿಟನ್, ಆಸ್ಟ್ರೇ ಲಿಯ, ಜರ್ಮನಿ, ಜಪಾನ್ ಸೇರಿದಂತೆ 35 ದೇಶಗಳ ಜತೆ ಮಾಡಿಕೊಂಡ ಒಪ್ಪಂದಗಳಲ್ಲಿ ಪಾಕಿಸ್ತಾನವೂ ಸೇರಿದೆ ಎಂದು ವರದಿಯಾಗಿದೆ. ಚೀನಾ- ರಷ್ಯಾ ಜತೆಯಾಗಿರುವು ದರಿಂದ ಏಷ್ಯಾ ವಲಯದಲ್ಲಿ ಉಂಟಾಗಿರುವ ಸೇನಾ ಸಾಮರ್ಥ್ಯದ ಪ್ರಭಾವವನ್ನು ಸಮತೋಲನಗೊಳಿಸಲು ಪಾಕ್ ಜತೆಗಿನ ಒಪ್ಪಂದದ ಮೂಲಕ ಅಮೆರಿಕ ಪ್ರಯತ್ನಿಸುತ್ತಿರಬಹುದು. ಇದು ಪಾಕ್-ಅಮೆರಿಕ ನಡುವಿನ ಹೊಸ ಕಾರ್ಯತಂತ್ರ ಸಂಬಂಧವನ್ನು ಸೂಚಿಸುತ್ತದೆ ಎಂದು ರಕ್ಷಣಾ ತಜ್ಞರು ವಿಶ್ಲೇಷಿಸಿದ್ದಾರೆ. ಪಾಕ್‌ಗೆ ಅಮೆರಿಕ ಕೊಡಲು ಒಪ್ಪಿರುವ 'ಎಐಎಂ-120 ಎಎಂಆರ್‌ಎಎಂ'(ಅಡ್ವಾನ್ಸ್ಡ್ ಮೀಡಿಯಂ ರೇಂಜ್ ಏರ್ ಟು ಏರ್ ಮಿಸೈಲ್ಸ್) ಕ್ಷಿಪಣಿಗಳನ್ನು ಅಮೆರಿಕ ನಿರ್ಮಿತ ಎಫ್-16 ಯುದ್ಧ ವಿಮಾನಗಳಲ್ಲಿ ಬಳಸಿಕೊಂಡು ಶತ್ರು ವಿಮಾನಗಳ ಮೇಲೆ ದಾಳಿ ಮಾಡಬಹುದಾಗಿದೆ. ಹಾಗಾಗಿ, ಈ ಒಪ್ಪಂದದ ನಂತರ, ಪಾಕ್ ತನ್ನಲ್ಲಿರುವ ಎಲ್ಲಾ ಎಫ್-16 ಯುದ್ಧ ವಿಮಾನಗಳನ್ನು ನವೀಕರಿಸುವ ಸಾಧ್ಯತೆ ಇದೆ ಎಂದು 'ಎಕ್ಸ್‌ಪ್ರೆಸ್ ಟ್ರಿಬ್ಯೂನ್' ಮಾಧ್ಯಮ ಸಂಸ್ಥೆ ವರದಿ ಮಾಡಿದೆ.

ರಕ್ಷಣಾ ಒಪ್ಪಂದ ಮಾಡಿಕೊಂಡ ದೇಶಗಳು

ಬ್ರಿಟನ್, ಪೋಲೆಂಡ್, ಪಾಕಿಸ್ತಾನ, ಜರ್ಮನಿ, ಫಿನ್‌ಲೆಂಡ್, ಆಸ್ಟ್ರೇಲಿಯ, ರುಮೇನಿಯ, ಕತಾರ್, ಓಮನ್, ಕೊರಿಯ, ಗ್ರೀಸ್, ಸ್ವಿಟ್ಜರ್ಲೆಂಡ್, ಪೋರ್ಚುಗಲ್, ಸಿಂಗಾಪುರ, ನೆದರ್‌ಲೆಂಡ್, ಜೆಕ್ ರಿಪಬ್ಲಿಕ್, ಜಪಾನ್, ಸ್ಲೋವಾಕಿಯ, ಡೆನ್ಮಾರ್ಕ್, ಕೆನಡಾ, ಬೆಲ್ಜಿಯಂ, ಬಹ್ರೇನ್, ಸೌದಿ ಅರೇಬಿಯ, ಇಟಲಿ, ನಾರ್ವೆ, ಸ್ಪೇನ್, ಕುವೇತ್, ಫಿನ್‌ಲೆಂಡ್, ಸ್ವೀಡನ್, ತೈವಾನ್, ಲಿಥುವೇನಿಯ, ಇಸ್ರೇಲ್, ಬಲ್ಗೇರಿಯ, ಹಂಗೆರಿ ಮತ್ತು ಟರ್ಕಿ ದೇಶಗಳಿಗೆ 251 ಕೋಟಿ ಡಾಲರ್‌ಗಳಷ್ಟು ಬೆಲೆಯ(22,264 ಕೋಟಿ ರು.) ಯುದ್ಧ ಶಸ್ತ್ರಾಸ್ತ್ರಗಳ ಮಾರಾಟಕ್ಕೆ ಅಮೆರಿಕದ ಯುದ್ಧ ಇಲಾಖೆ ಒಪ್ಪಂದ ಮಾಡಿಕೊಂಡಿದೆ ಎಂದು ಅಮೆರಿಕ ಸರಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಭಾರತದ ವಾಯುಪಡೆ ದಾಳಿ ತಡೆಯಲು ಸಿದ್ಧತೆ

ಆಪರೇಷನ್ ಸಿಂದೂರ್‌ನಲ್ಲಿ ಭಾರತೀಯ ವೈಮಾನಿಕ ದಾಳಿಯಿಂದ ಭಾರೀ ಹಾನಿ ಅನುಭವಿಸಿರುವ ಪಾಕಿಸ್ತಾನ, ಅದೇ ಕಾರಣವಾಗಿ ಅಮೆರಿಕದಿಂದ ಎಐಎಂ-120 ಕ್ಷಿಪಣಿಗಳನ್ನು ಖರೀದಿಸಲು ಮುಂದಾಗಿದೆ. ಫ್ರಾನ್ಸ್‌ನ ಡಸಾಲ್ಟ್ ಕಂಪನಿ ನಿರ್ಮಿತ ಅತ್ಯಾಧುನಿಕ ರಫೇಲ್ ಯುದ್ಧ ವಿಮಾನಗಳು ಆಪರೇಷನ್ ಸಿಂದೂರ್ ವೈಮಾನಿಕ ದಾಳಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದವು. ಭಾರತದ ವಾಯುಪಡೆಯ ದಾಳಿಗಳನ್ನು ಸಮರ್ಥವಾಗಿ ಎದುರಿಸಲೆಂದೇ ಪಾಕಿಸ್ತಾನ ಆರ್ಥಿಕವಾಗಿ ಸಂಕಷ್ಟದಲ್ಲಿದ್ದರೂ ಅಮೆರಿಕದಿಂದ ದುಬಾರಿ ಬೆಲೆಯ 'ಎಐಎಂ-120 ಕ್ಷಿಪಣಿ'ಗಳ ಖರೀದಿ ಹಾಗೂ 'ಎಫ್-16 ಯುದ್ಧ ವಿಮಾನ'ಗಳ ಉನ್ನತೀಕರಣಕ್ಕೆ ಮುಂದಾಗಿದೆ ಎಂಬ ವಿಶ್ಲೇಷಣೆ ಕೇಳಿಬಂದಿದೆ.



ಸಮಾಚಾರ ಸಣ್ಣದಲ್ಲ

ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯುನ್ಮಾನ ಮಾಧ್ಯಮ ವಿಭಾಗದಿಂದ ವಿನೋದ್ ರಾವ್ ಎನ್. ಅವರು ಪಿಎಚ್.ಡಿ ಪದವಿ ಪ್ರಮಾಣ ಪತ್ರ ಸ್ವೀಕರಿಸಿದರು.

ನಾಳೆ ವಿವಿಧ ದತ್ತಿ ಪುರಸ್ಕಾರ ಕಾರ್ಯಕ್ರಮ

ಬೆಂಗಳೂರು: ಕಸಾಪ ವತಿಯಿಂದ ವಿವಿಧ ದತ್ತಿ ಪುರಸ್ಕಾರ ಕಾರ್ಯಕ್ರಮವನ್ನು ಅ.10 ಶುಕ್ರವಾರ ಸಂಜೆ 5.00 ಗಂಟೆಗೆ ಪರಿಷತ್ತಿನ ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ನಡೆಯಲಿದೆ ಎಂದು ಅಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿ ತಿಳಿಸಿದರು. ಕಾರ್ಯಕ್ರಮವನ್ನು ಜವಹರಲಾಲ್ ನೆಹರು ತಾರಾಲಯದ ನಿರ್ದೇಶಕ ಡಾ.ಬಿ.ಆರ್. ಗುರುಪ್ರಸಾದ್ ನೆರವೇರಿಸಲಿದ್ದು, ಅಧ್ಯಕ್ಷತೆಯನ್ನು ಕಸಾಪ ಅಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿ ವಹಿಸಲಿದ್ದಾರೆ. ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ನ್ಯಾಯಮೂರ್ತಿ ರಾಜೇಂದ್ರ ಬಾದಾಮಿಕರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ದತ್ತಿದಾನಿಗಳಾದ ಎ.ಆರ್.ನಾರಾಯಣಘಟ್ಟ ಮತ್ತು ಟಿ.ಎಸ್.ಶೈಲಜ ಉಪಸ್ಥಿತರಿರುತ್ತಾರೆ. ಮುಖ್ಯ ದತ್ತಿ ಪುರಸ್ಕಾರಗಳಾದ ಎ.ಆರ್.ನಾರಾಯಣಘಟ್ಟ ಸರೋಜಮ್ಮ ಗಾಂಧೀ ಪುರಸ್ಕಾರವನ್ನು ರಾಜ್ಯ ಸರ್ವೋದ್ಯ ಮಂಡಲದ ಅಧ್ಯಕ್ಷ ಡಾ.ಎಚ್.ಎನ್. ಸುರೇಶ್ ಹಾಗೂ ಪಂಕಜಶ್ರೀ ಪುರಸ್ಕಾರವನ್ನು ಹಿರಿಯ ಕಥೆಗಾರ್ತಿ ಮಿತ್ರಾ ವೆಂಕಟ್ರಾಜುರಿಗೂ ಟಿ.ಗಿರಿಜಾ ಸಾಹಿತ್ಯ ದತ್ತಿಯನ್ನು ಹಿರಿಯ ವಿಜ್ಞಾನ ಬರಹಗಾರ ಡಾ.ಬಿ.ಎಸ್.ಶೈಲಜಾರಿಗೆ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಭರತನಾಟ್ಯ ರಂಗಪ್ರವೇಶ

ಬೆಂಗಳೂರು: ರಚನ್ನಾ ಡಾನ್ಸ್ ಅಕಾಡೆಮಿಯ ವಿದ್ಯಾರ್ಥಿನಿ ಶರಣ್ಯ ಎನ್‌ರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮವು ಮಲ್ಲೇಶ್ವರದ ಸೇವಾ ಸದನದಲ್ಲಿ ನಡೆಯಿತು. ರಚನ್ನಾ ಡಾನ್ಸ್ ಅಕಾಡೆಮಿಯ ನೃತ್ಯ ಗುರು ಕಾವ್ಯ ದಿಲೀಪ್‌ರ ವಿಶೇಷ ನೃತ್ಯ ಸಂಯೋಜನೆಗೆ ನರ್ತಿಸಿದ್ದ ಶರಣ್ಯ ಅವರು, ದೈವೀಕ ನರ್ತನಗಳಲ್ಲಿ ತಮ್ಮ ನುರಿತ ಸುಂದರಾಭಿನಯವನ್ನು ಬಹು ಆತ್ಮವಿಶ್ವಾಸದಿಂದ, ಲವಲವಿಕೆಯಿಂದ ಪ್ರಸ್ತುತಪಡಿಸಿದರು. ಮಲ್ಲಾರಿಯಿಂದ ಶುಭಾರಂಭಸಿ ಜತಿಸ್ವರ, ಶಬ್ದಂ, ವರ್ಣ, ಶಿವಪದಂ, ದೇವರನಾಮ ಮತ್ತು ತಿಲ್ಲಾನ, ಮಂಗಳದವರೆಗೂ ಶಾಸ್ತ್ರೋಕ್ತವಾಗಿ ಮಾರ್ಗಂ ಸಂಪ್ರದಾಯದ ಎಲ್ಲಾ ಕೃತಿಗಳಿಗೂ ಜೀವ ನೀಡಿ ಪ್ರಫುಲ್ಲವಾಗಿ ನರ್ತಿಸಿದರು. ತಾಳ ಮತ್ತು ಲಯ ಬದ್ಧವಾಗಿದ್ದ ಅವರ ಹೆಜ್ಜೆ-ಗೆಜ್ಜೆಗಳ ಮೇಳಕ್ಕೆ ಬೆನ್ನೆಲುಬಾಗಿದ್ದವರು ವಾದ್ಯಮೇಳದ ಜಿ.ಎಸ್.ನಾಗರಾಜ್(ಮೃದಂಗ), ಸ್ಕಂದ ಕುಮಾರ್ (ಕೊಳಲು), ಪ್ರಶಾಂತ್ ಕುಮಾರ್ (ವೀಣೆ) ಮತ್ತು ಸೊಗಸಾದ ಹಾಡುಗಾರಿಕೆಯಲ್ಲಿ ಲಕ್ಷ್ಮೀ ವರುಣ್ ಅಮೋಘವಾಗಿ ಸಾಂಗತ್ಯ ನೀಡಿದರು.

ನಗರದಲ್ಲಿ ಪರ್ಪಲ್ ಫೆಸ್ಟ್ ಉತ್ಸವ

ಬೆಂಗಳೂರು: ವಿಕಲಚೇತನರ ಸಬಲೀಕರಣ ಮತ್ತು ಎಲ್ಲರನ್ನು ಒಳಗೊಳ್ಳುವ ಸಮಾಜವನ್ನು ಉತ್ತೇಜಿಸುವ ಉದ್ದೇಶದಿಂದ ಸರಕಾರವು ಮೊಟ್ಟ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಡಿಸೆಂಬರ್‌ನಲ್ಲಿ ಮೂರು ದಿನಗಳ ಕಾಲ ಪರ್ಪಲ್ ಫೆಸ್ಟ್ ಉತ್ಸವವನ್ನು ಯೋಜಿಸಲಾಗುವುದು ಎಂದು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ ತಿಳಿಸಿದರು. ಶೇಷಾದ್ರಿಪುರದ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ ರಾಜ್ಯ ಆಯುಕ್ತರ ನ್ಯಾಯಾಲಯದಲ್ಲಿ ಆಯೋಜಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿಕಲಚೇತನರಿಗೆ ಶಿಕ್ಷಣ, ಕೌಶಲ್ಯ ಮತ್ತು ಉದ್ಯೋಗ ಸೃಷ್ಟಿಗೆ ಬೆಂಬಲ ನೀಡಲು ಈ ಪರ್ಪಲ್ ಫೆಸ್ಟ್ ಮುಖ್ಯ ಪಾತ್ರ ವಹಿಸಲಿದ್ದು, ಅವರು ಸಮಾಜದ ಪ್ರಮುಖ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಉತ್ತಮ ವೇದಿಕೆಯನ್ನು ಕಲ್ಪಿಸಲು ಸಹಕಾರಿಯಾಗಿದೆ. ಅಲ್ಲದೆ ವಿಶೇಷಚೇತನರಲ್ಲಿರುವ ಪ್ರತಿಭೆಗಳನ್ನು ಅನಾವರಣಗೊಳಿಸಲು ಸಹ ಮುಖ್ಯ ವೇದಿಕೆಯಾಗಿದ್ದು, ಕಾರ್ಯಕ್ರಮದಲ್ಲಿ ಸುಮಾರು 1 ಲಕ್ಷ ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದರು. ಸಭೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡ ವಿವಿಧ ಸಮಿತಿಗಳನ್ನು ರಚಿಸಲು ತೀರ್ಮಾನಿಸಲಾಯಿತು. ಉತ್ಸವದ ಯಶಸ್ವಿಗೆ ವಿವಿಧ ಬಗೆಯ ಸಮಿತಿಗಳ ರಚನೆ ಕುರಿತು ಚರ್ಚಿಸಲಾಯಿತು.

ಬೆಂಗಳೂರು ವಿವಿ 60ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಹೇಳಿಕೆ

ಶಿಕ್ಷಣದ ಉದ್ದೇಶ ಕೇವಲ ಜ್ಞಾನಾರ್ಜನೆಯಲ್ಲ

ಬೆಂಗಳೂರು: ಶಿಕ್ಷಣದ ಉದ್ದೇಶ ಕೇವಲ ಜ್ಞಾನ ಗಳಿಸುವುದು ಮಾತ್ರವಲ್ಲ ಸಮಾಜದ ಕಲ್ಯಾಣಕ್ಕಾಗಿ ಉಪಯೋಗಿಸುವುದು ಆಗಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಹೇಳಿದರು.

ಬೆಂಗಳೂರು ವಿವಿ 60ನೇ ಘಟಿಕೋತ್ಸವದಲ್ಲಿ ಮಾತನಾಡಿ, ಈ ಘಟಿಕೋತ್ಸವವು ಶೈಕ್ಷಣಿಕ ಸಾಧನೆ, ಸಂಶೋಧನೆ ಮತ್ತು ಸಾಮಾಜಿಕ ಸೇವೆಯ ಆರು ದಶಕಗಳ ಪಯಣವನ್ನು ಸ್ಮರಿಸುತ್ತದೆ. ವಿದ್ಯಾರ್ಥಿಗಳು ಶಿಕ್ಷಣದ ಮೂಲಕ ಪಡೆಯುವ ಜ್ಞಾನವನ್ನು ಉತ್ತಮ ಸಮಾಜದ ನಿರ್ಮಾಣಕ್ಕಾಗಿ ಬಳಕೆ ಮಾಡಬೇಕು. ರಾಜ್ಯಪಾಲರು ವಿಶ್ವವಿದ್ಯಾಲಯದ ಶೈಕ್ಷಣಿಕ ಪರಂಪರೆ ಶ್ಲಾಘಿಸಿ, ಜ್ಞಾನಂ ವಿಜ್ಞಾನಸಹಿತಂ ಎಂಬ ಧ್ಯೇಯ ವಾಕ್ಯದ ಅರ್ಥ ಬದುಕಿನಲ್ಲಿ ಅಳವಡಿಸಿಕೊಂಡು, ವಿವಿಯು ಶ್ರೇಷ್ಠತೆಯ ದಿಕ್ಕಿನಲ್ಲಿ ನಿರಂತರವಾಗಿ ಮುಂದುವರಿಯುತ್ತಿದ್ದು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಹಕಾರದ ಮೂಲಕ ಉನ್ನತ ಶಿಕ್ಷಣದಲ್ಲಿ ಶ್ರೇಷ್ಠತೆಯನ್ನು ಸಾಧಿಸಿರುವುದು ಹೆಮ್ಮೆಯಾಗಿದೆ ಎಂದರು.

ವಿದ್ಯಾರ್ಥಿಗಳಿಗೆ ದೇಶದ ಅಭಿವೃದ್ಧಿಗೆ ತಮ್ಮ ಜ್ಞಾನ ಮತ್ತು ಕೌಶಲ್ಯಗಳನ್ನು ಬಳಸಿಕೊಳ್ಳಿ. ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರ ರಾಷ್ಟ್ರಗಳು ಶಿಕ್ಷಣ ಸಂಸ್ಥೆಗಳಲ್ಲಿ ನಿರ್ಮಾಣವಾಗುತ್ತವೆ. ವಿಶ್ವವಿದ್ಯಾಲಯಗಳನ್ನು ಶ್ರೇಷ್ಠತೆಯ ಕೇಂದ್ರಗಳನ್ನಾಗಿ ಮಾಡುವ ಅಗತ್ಯವಿದೆ. ಮೇಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ, ಸ್ಟಾರ್ಟ್ ಅಪ್ ಇಂಡಿಯಾ, ಸ್ಟ್ಯಾಂಡ್ ಅಪ್ ಇಂಡಿಯಾ, ವೆಂಚರ್ ಕ್ಯಾಪಿಟಲ್ ಫಂಡ್ ಯೋಜನೆಗಳ ಅವಕಾಶಗಳನ್ನು ಬಳಸಿಕೊಂಡು ನವ ಭಾರತ ಮತ್ತು ಸ್ವಾವಲಂಬಿ ಭಾರತ ನಿರ್ಮಾಣಕ್ಕೆ ಮುನ್ನಡೆಸಬೇಕು ಎಂದು ಹೇಳಿದರು.

ವಿಶ್ವವಿದ್ಯಾನಿಲಯಗಳು ಸಂಶೋಧನೆ, ನಾವೀನ್ಯತೆ, ಸ್ಥಳೀಯ ಭಾಷೆಗಳ ಮೂಲಕ ಉನ್ನತ ಶಿಕ್ಷಣ ಪ್ರಚಾರ, ಪರಿಸರ ಸಂರಕ್ಷಣೆ ಮತ್ತು ಸ್ವಚ್ಛತಾ ಅಭಿಯಾನಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಜ್ಞಾನ, ಸೇವೆ, ಸತ್ಯ ಮತ್ತು ದೇಶಭಕ್ತಿಯ ಮೌಲ್ಯಗಳಿಂದ ನಿಮ್ಮ ಜೀವನ ಅರ್ಥಪೂರ್ಣವಾಗಲಿ ಎಂದು ಹಾರೈಸಿದರು.

ಪದ್ಮಶ್ರೀ ಪುರಸ್ಕೃತ ಡಾ. ಪ್ರಹ್ಲಾದ್ ರಾಮ್ ರಾವ್ ಮಾತನಾಡಿ ಮಾತನಾಡಿ, ನಾವೆಲ್ಲರೂ ಇಂದಿನ ದಿನಕ್ಕಾಗಿ ವರ್ಷಗಳ ಕಾಲ ಪರಿಶ್ರಮದಿಂದ ಕಾರ್ಯನಿರ್ವಹಿಸಿದ್ದೇವೆ. ಇಂದಿನ ಗ್ರಾಜ್ಯುವೇಶನ್ ದಿನದ ಸಂಭ್ರಮವು ನಿಮ್ಮ ಕುಟುಂಬದ ತ್ಯಾಗ, ನಿಮ್ಮ ಪರಿಶ್ರಮ, ನಿಮ್ಮ ಪ್ರಾಧ್ಯಾಪಕರ ಮಾರ್ಗದರ್ಶನದ ಫಲವಾಗಿದೆ. ವ್ಯಕ್ತಿ ನಿರ್ಮಾಣ ಹಂತವು ಮುಗಿದು ಹೋಗಿದೆ. 56 ವರ್ಷಗಳ ಹಿಂದೆ ನಿಮ್ಮಂತೆಯೇ ನಾನು ಕೂಡಾ ಗ್ರಾಜ್ಯುವೇಶನ್ ದಿನದ ಸಂತಸದಲ್ಲಿದ್ದೆ. ಇಂದಿನ ಕಾರ್ಯಕ್ರಮವಲ್ಲ ಕೇವಲ ಶಿಕ್ಷಣದ ಕೊನೆಯಲ್ಲ. ತೈತ್ತೀರಿಯ ಉಪನಿಷತ್ತಿನಲ್ಲಿ ಹೇಳಿದಂತೆ ಶಿಕ್ಷಣ ಹಾಗೂ ಕಲಿಕೆಗೆ ಕೊನೆಯಿಲ್ಲ. ಇವತ್ತಿನ ಕೊನೆ ಒಂದು ಹೊಸ ಮೈಲುಗಲ್ಲಿನ ಆರಂಭ. ಯುವಕರು ರಾಷ್ಟ್ರ ನಿರ್ಮಾಣದ ಭಾಗವಾಗಬೇಕು. ಯುವಕರು ಯಾವಾಗಲೂ ಬದಲಾವಣೆಗೆ ಒಳಗಾಗುವ ಶಕ್ತಿಗಳಾಗಿದ್ದು ಹೊಸ ಹೊಸ ಕೊಡುಗೆಗಳ ಮೂಲಕ ರಾಷ್ಟ್ರ ನಿರ್ಮಾಣದ ಭಾಗಗಳಾಗಬೇಕು. ಕೇವಲ ನಿಮ್ಮ ಶಿಕ್ಷಣದಲ್ಲಿ ಮಾತ್ರ ನಿಮ್ಮ ಸಾಮರ್ಥ್ಯವಿಲ್ಲ ಯೋಚನಾ ಲಹರಿಯಲ್ಲಿ, ಚಿಂತನೆಯಲ್ಲಿ ಸ್ಪಷ್ಟತೆ, ಸವಾಲುಗಳನ್ನು ಎದುರಿಸುವ ರೀತಿ, ಪರಿಹಾರ ಹುಡುಕುವ ರೀತಿಯಲ್ಲಿ ನಿಮ್ಮ ಸಾಮರ್ಥ್ಯವಿದೆ ಎಂದರು.

ಘಟಿಕೋತ್ಸವದಲ್ಲಿ ಬೆಂಗಳೂರು ವಿವಿ ಕುಲಪತಿ ಡಾ.ಜಯಕರ ಎಸ್.ಎಂ, ಕುಲಸಚಿವರು ಕೆ.ಟಿ. ಶಾಂತಲಾ ಕೆ.ಎ.ಎಸ್., ಕುಲಸಚಿವರು ಮೌಲ್ಯಮಾಪನ ಪ್ರೊ.ಸಿ.ಎಸ್.ಕರಿಗಾರ್ ಸೇರಿದಂತೆ ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು, ವಿಭಾಗ ಮುಖ್ಯಸ್ಥರು,ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿ ಇದ್ದರು. ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಮತ್ತು ಸಮಾಜ ಸೇವಕ ಡಿ. ಮಾದೇಗೌಡ ಮತ್ತು ಜೆ.ಪಿ. ಅಗ್ರಿ ಜೆನೆಟಿಕ್ಸ್ ಪ್ರೈವೇಟ್ ಲಿಮಿಟೆಡ್‌ನ ಸಂಸ್ಥಾಪಕ ಹಾಗೂ ವ್ಯವಸ್ಥಾಪಕ ನಿರ್ದೇಶಕ ಡಾ.ಟಿ.ಬಿ.ಪ್ರಸನ್ನ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ಬೆಂಗಳೂರು ವಿವಿ 60ನೇ ಘಟಿಕೋತ್ಸವದಲ್ಲಿ ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಮತ್ತು ಸಮಾಜ ಸೇವಕ ಡಿ. ಮಾದೇಗೌಡ ಮತ್ತು ಜೆ.ಪಿ. ಅಗ್ರಿ ಜೆನೆಟಿಕ್ಸ್ ಪ್ರೈವೇಟ್ ಲಿಮಿಟೆಡ್‌ನ ಸಂಸ್ಥಾಪಕ ಹಾಗೂ ವ್ಯವಸ್ಥಾಪಕ ನಿರ್ದೇಶಕ ಡಾ.ಟಿ.ಬಿ.ಪ್ರಸನ್ನ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ಅತಿ ಹೆಚ್ಚು ಚಿನ್ನದ ಪದಕ ವಿಜೇತರು

ಸ್ನಾತಕೋತ್ತರ ಪದವಿ ವಿಭಾಗದಲ್ಲಿ ಬೆಂಗಳೂರು ವಿವಿ ಕನ್ನಡ ಅಧ್ಯಯನ ಕೇಂದ್ರದ ವಿದ್ಯಾರ್ಥಿನಿ ಪ್ರೇಮ. ಎಸ್ ಅವರು ಒಟ್ಟು 11 ಚಿನ್ನದ ಪದಕಗಳನ್ನು ಪಡೆಯುವ ಮೂಲಕ ಅತಿ ಹೆಚ್ಚು ಪದಕ ಗಳಿಸಿದ ವಿದ್ಯಾರ್ಥಿ ಎನಿಸಿಕೊಂಡರು. ಸ್ನಾತಕ ಪದವಿ ವಿಭಾಗದಲ್ಲಿ ಸಿವಿಲ್ ಎಂಜಿನಿಯರಿಂಗ್ ವಿದ್ಯಾರ್ಥಿ ಹೇಮಂತ. ಎಸ್ ಅವರು ಒಟ್ಟು 7 ಚಿನ್ನದ ಪದಕಗಳನ್ನು ಸ್ವೀಕರಿಸಿದರು. ಘಟಿಕೋತ್ಸವದಲ್ಲಿ ಚಿನ್ನದ ಪದಕಗಳ ಜತೆಗೆ 61 ವಿದ್ಯಾರ್ಥಿಗಳು 132 ನಗದು ಪ್ರಶಸ್ತಿಗಳನ್ನು ಸಹ ಪಡೆದರು. ಒಟ್ಟು 140 ವಿದ್ಯಾರ್ಥಿಗಳು ಪಿಎಚ್‌ಡಿ ಪದವಿ ಸ್ವೀಕರಿಸಿದರು. ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಾದ ದಿವ್ಯ ಎಸ್, ಮಾನಸ. ಕೆ. ಜಿ. ನಂದಿನಿ ಡಿ.ಎಚ್, ಚೇತನ. ಆರ್. ಭರತ್ ಕುಮಾರ್.ಎಸ್ ಅವರು ಡಾ.ಬಿ.ಆರ್.ಅಂಬೇಡ್ಕರ್ ಚಿನ್ನದ ಪದಕಕ್ಕೆ ಭಾಜನರಾದರು. ಸ್ವರೂಪ್.ಎನ್ ಮತ್ತು ರಂಜಿತ ಜಾದವ್ ಅವರು 2023-24ನೇ ಸಾಲಿನ ವರ್ಷದ ಅತ್ಯುತ್ತಮ ಕ್ರೀಡಾಪಟು ಪ್ರಶಸ್ತಿ ಸ್ವೀಕರಿಸಿದರು.

ನಮ್ಮ ಮುಂದೆ ಈಗ ಸಾಕಷ್ಟು ಅವಕಾಶಗಳಿವೆ. ಅವಕಾಶಗಳು ನಮ್ಮ ಮನೆ ಬಾಗಿಲನ್ನು ತಟ್ಟುವುದಿಲ್ಲ ನಾವು ಅವುಗಳನ್ನು ಬೆನ್ನಟ್ಟಿ ಹೋಗಬೇಕು. ಆಗ ಮಾತ್ರ ನಾವು ಸಾಧನೆ ಮಾಡಲು ಸಾಧ್ಯವಾಗುತ್ತದೆ. ಪ್ರಸ್ತುತ ಇದೆಲ್ಲವನ್ನು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇದುವರೆಗೂ ಪೋಷಕರ ಸಹಾಯದೊಂದಿಗೆ ಈ ಘಟ್ಟವನ್ನು ತಲುಪಿದ್ದು, ಮುಂದಿನ ಪಯಣ ಬದುಕು ರೂಪುಗೊಳ್ಳುವಂತಹ ಪಯಣವಾಗಿದೆ. ಇಲ್ಲಿ ಏಕಾಂಗಿಯಾಗಿ ಭವಿಷ್ಯವನ್ನು ರೂಪಿಸಲು ಇಡುವಂತಹ ಹೆಜ್ಜೆ ಅತ್ಯಂತ ಅಮೂಲ್ಯವಾದುದು.

-ಎಂ.ಸಿ. ಸುಧಾಕರ್, ಉನ್ನತ ಶಿಕ್ಷಣ ಸಚಿವ

ವೃತ್ತಿ ಸಲ್ಯೂಷನ್ಸ್‌ಗೆ 20ರ ಸಂಭ್ರಮ

ಬೆಂಗಳೂರು: ಸಣ್ಣದಾಗಿ ಸ್ಟಾರ್ಟ್‌ಅಪ್ ಆಗಿ ಆರಂಭಗೊಂಡು ಕಳೆದ ಎರಡು ದಶಕಗಳಿಂದ ಭಾರತ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೃತ್ತಿ ಸಲ್ಯೂಷನ್ಸ್ ಲಿಮಿಟೆಡ್ ಸಂಸ್ಥೆ ತನ್ನ 20ನೆಯ ಸಂಸ್ಥಾಪನಾ ದಿನವನ್ನು ಸಂಭ್ರಮದಿಂದ ಆಚರಿಸಿಕೊಂಡಿತು.

ಪುಣೆಯಲ್ಲಿರುವ ತನ್ನ ಪ್ರಧಾನ ಕಚೇರಿ ಮತ್ತು ದೇಶಾದ್ಯಂತ ತನ್ನ 8 ಶಾಖಾ ಕಚೇರಿಗಳಲ್ಲಿ ಸಂಸ್ಥೆಯ ಸಿಬ್ಬಂದಿಗಳು ಉತ್ಸಾಹದಿಂದ ಆಚರಿಸಿದರು. ವೃತ್ತಿ ಸಲ್ಯೂಷನ್ಸ್ ಲಿಮಿಟೆಡ್ ಸಂಸ್ಥೆಯ ಕಾರ್ಯಕ್ರಮದಲ್ಲಿ ಭಾರತದ ಎಂಟು ರಾಜ್ಯಗಳಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಯ ಉದ್ಯೋಗಿಗಳು, ಗ್ರಾಹಕರು ಮತ್ತು ಸದಸ್ಯರು ಭಾಗವಹಿಸಿದ್ದು ವಿಶೇಷವಾಗಿತ್ತು.

ಸಂಸ್ಥೆಯ ಸಿ.ಇ.ಒ ವೀರೇಂದ್ರ ಜಮ್ದಾಡೆ, ಸಹ-ಸಂಸ್ಥಾಪಕ ರಾಜೇಶ್ ರಾಧಾಕೃಷ್ಣನ್, ನಿರ್ದೇಶಕಿ ಸಂಗೀತಾ ಜಮ್ದಾಡೆ, ಉಪಾಧ್ಯಕ್ಷ ಶಿವಾಜಿ ಬೇದ್ರೆ ಮತ್ತು ಜೀವನ್ ಪವಾರ್ ಮುಂತಾದ ಗಣ್ಯರು ಸಮಾರಂಭಕ್ಕೆ ಚಾಲನೆ ನೀಡಿದರು. ಸಾಂಸ್ಕೃತಿಕ ಕಾರ್ಯಕ್ರಮದ ಭಾಗವಾಗಿ, ಕರ್ನಾಟಕದ ಜನಪದ ಕಲಾ ತಂಡದಿಂದ ವಿಶೇಷವಾಗಿ ಸಂಯೋಜಿಸಲಾದ ಥೀಮ್ ಸಾಂಗ್ ಪ್ರದರ್ಶನಗೊಂಡಿತು. ವೃತ್ತಿ-ಅನ್‌ಲಿಮಿಟೆಡ್ ವೃತ್ತಿ ಎಂಬ ತಂತ್ರಜ್ಞಾನ, ಗ್ರಾಮೀಣ ಮಾರ್ಕೆಟಿಂಗ್ ಮತ್ತು ಡಿಜಿಟಲ್ ಮಾಧ್ಯಮದಲ್ಲಿ ಸಂಸ್ಥೆಯ ಬೆಳವಣಿಗೆಯನ್ನು ಪ್ರತಿಬಿಂಬಿಸುವ ಹಾಗೂ ಕಂಪನಿಯ 20 ವರ್ಷಗಳ ಪ್ರಯಾಣವನ್ನು ಪ್ರದರ್ಶಿಸುವ ಸೃಜನಾತ್ಮಕ ವಿಡಿಯೊವನ್ನು ಪ್ರಸ್ತುತಪಡಿ ಸಲಾಯಿತು.

ಪುಣೆ ಪ್ರಧಾನ ಕಚೇರಿಯಲ್ಲಿ ವೃತ್ತಿ ಸಲ್ಯೂಷನ್ಸ್ ಲಿಮಿಟೆಡ್ ಸಂಸ್ಥೆ ತನ್ನ 20ನೇ ಸಂಸ್ಥಾಪನಾ ದಿನ ಸಂಭ್ರಮದಿಂದ ಆಚರಿಸಲಾಯಿತು.

ಲೋಕಾಯುಕ್ತ ತನಿಖೆಗೆ ಸರ್ವಾನುಮತದ ಒಪ್ಪಿಗೆ। ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನ

ಕಸಾಪ ವಿರುದ್ಧ ಆರೋಪ; ಲೋಕಾ ತನಿಖೆಗೆ ಸಿದ್ಧ

ಬೆಂಗಳೂರು: ತೀವ್ರ ವಿವಾದಕ್ಕೆ ಕಾರಣವಾಗಿದ್ದ ಮಂಡ್ಯ ಸಾಹಿತ್ಯ ಸಮ್ಮೇಳನದ ಖರ್ಚು-ವೆಚ್ಚಗಳ ವಿಷಯಕ್ಕೆ ತಾರ್ತಿಕ ಅಂತ್ಯ ನೀಡಲು ಮುಂದಾಗಿರುವ ಕನ್ನಡ ಸಾಹಿತ್ಯ ಪರಿಷತ್, ಈ ವಿಷಯಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ತನಿಖೆ ನಡೆಸಲು ತೀರ್ಮಾನಿಸಿದೆ.

ಮಂಡ್ಯದಲ್ಲಿ ನಡೆದಿದ್ದ 87ನೇ ಸಾಹಿತ್ಯ ಸಮ್ಮೇಳನದ ಖರ್ಚು-ವೆಚ್ಚದ ವಿಷಯದಲ್ಲಿ ಹಲವು ಗೊಂದಲಗಳಿದ್ದವು. ಇದರಲ್ಲಿ ಅವ್ಯವಹಾರ ನಡೆದಿದೆ ಎಂದು ಕೆಲ ಸಾಹಿತಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದೂರು ಸಲ್ಲಿಸಿದ್ದು ವಿವಾದಕ್ಕೆ ಕಾರಣವಾಗಿತ್ತು. ಆದ್ದರಿಂದ ಈ ಎಲ್ಲ ಗೊಂದಲಗಳಿಗೆ ತೆರೆ ಎಳೆಯಬೇಕು ಎನ್ನುವ ಉದ್ದೇಶದಿಂದ ಇಡೀ ಪ್ರಕರಣವನ್ನು ಲೋಕಾಯುಕ್ತದಿಂದ ತನಿಖೆ ನಡೆಸಲು ತೀರ್ಮಾನಿಸಿದೆ.

ಇತ್ತೀಚೆಗೆ ಬಾಗಲಕೋಟೆ ಜಿಲ್ಲೆಯ ಜಮಖಂಡಿ ಕಸಾಪ ಅಧ್ಯಕ್ಷ ಮಹೇಶ ಜೋಶಿಯವರ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಸಮಿತಿ ಸಭೆ ನಡೆದಿತ್ತು. ಈ ಸಭೆಯಲ್ಲಿ, ಲೋಕಾಯುಕ್ತದಿಂದ ತನಿಖೆ ನಡೆಸಬೇಕು ಎನ್ನುವ ಸರ್ವಾನುಮತದ ತೀರ್ಮಾನವನ್ನು ಕೈಗೊಳ್ಳಲಾಗಿದೆ. ಮಂಡ್ಯದಲ್ಲಿ ಆಯೋಜಿತವಾಗಿದ್ದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರಕಾರದಿಂದ ಮಂಡ್ಯ ಜಿಲ್ಲಾಡಳಿತಕ್ಕೆ ಬಿಡುಗಡೆಯಾದ 30 ಕೋಟಿ ರು.ಗಳ ಅನುದಾನದಲ್ಲಿ, ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಡಳಿತದಿಂದ ಪಡೆದು ಕೊಂಡಿದ್ದು ಕೇವಲ 2.5 ಕೋಟಿ ರು.ಗಳನ್ನು ಮಾತ್ರ. ಉಳಿದ 27.5 ಕೋಟಿ ರು.ಗಳನ್ನು ಮಂಡ್ಯ ಜಿಲ್ಲಾಡಳಿತವೇ ನಿರ್ವಹಿಸಿದೆ. ವೇದಿಕೆ, ಆಹಾರ, ವಸತಿ, ಸಾಂಸ್ಕೃತಿಕ ಕಾರ್ಯಕ್ರಮ, ಶಾಮಿಯಾನದಿಂದ ಹಿಡಿದು ಪೊರಕೆ ಖರೀದಿಯವರೆಗೆ ಹಣ ದುರುಪಯೋಗದ ಅಪಾದನೆಗಳು ಬಂದಿದೆ. ಆದರೆ ಈ ಎಲ್ಲವನ್ನು ಜಿಲ್ಲಾಡಳಿತ ಸ್ಕೈ ಬ್ಲ್ಯೂ ಇವೆಂಟ್ ಮ್ಯಾನೇಜ್‌ಮೆಂಟ್ ಮೂಲಕ ನಡೆದಿದೆ. ಆದ್ದರಿಂದ ಈ ಬಗ್ಗೆ ತನಿಖೆ ನಡೆಸಲು ತೀರ್ಮಾನಿಸಿದೆ.

ಸ್ವಚ್ಛ ಆಡಳಿತವನ್ನು ತೋರಿಸಲು ತನಿಖೆ

ಈ ಎಲ್ಲ ಅಂಶ ಗೊತ್ತಿದ್ದರೂ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಮೇಲೆ ನಿರಂತರವಾಗಿ ಹಣದ ದುರುಪಯೋಗ ಮತ್ತು ಆರ್ಥಿಕ ಅವ್ಯವಹಾರ, ಹಣಕಾಸು ದುರುಪಯೋಗದ ಕುರಿತು ಅಪಾದನೆಗಳನ್ನು ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ತನ್ನ ಸ್ವಚ್ಛ ಆಡಳಿತ, ರುಜುತ್ವ ಮತ್ತು ಪಾರದರ್ಶಕತೆಯನ್ನು ಸಾಬೀತು ಮಾಡಲು ಕನ್ನಡ ಸಾಹಿತ್ಯ ಪರಿಷತ್ತು ಮಾಡಿದ ವೆಚ್ಚವೂ ಸೇರಿದಂತೆ ಎಲ್ಲವನ್ನೂ ಲೋಕಾಯುಕ್ತದ ತನಿಖೆಗೆ ಒಪ್ಪಿಸಲು, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಣಿ ಸರ್ವಾನುಮತದಿಂದ ತೀರ್ಮಾನಿಸಿದೆ. ಕೇವಲ ಇದಿಷ್ಟೇ ಅಲ್ಲದೇ, ದೂರುದಾರರಲ್ಲಿ ಪ್ರಮುಖರಾಗಿರುವ ಪ್ರೊ.ಜಯಪ್ರಕಾಶ ಗೌಡ, ಮೀರಾ ಶಿವಲಿಂಗಯ್ಯ, ಕೆ.ಟಿ. ಶ್ರೀಕಂಠೇ ಗೌಡ ಸೇರಿದಂತೆ ಅನೇಕರು, ಅನೇಕ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಸರಕಾರದಿಂದ ಅನುದಾನವನ್ನು ಪಡೆಯುತ್ತಿದ್ದಾರೆ. ಅವರ ಸಂಸ್ಥೆಗಳ ಮೇಲೆ ಕೂಡ ಹಣಕಾಸು ದುರುಪಯೋಗ, ಆಡಳಿತದಲ್ಲಿ ಅಕ್ರಮ, ಸ್ವಜನ ಪಕ್ಷಪಾತದಂತಹ ಗಂಭೀರ ಆರೋಪಗಳಿವೆ. ಸೂಕ್ತ ದಾಖಲೆಗಳೂ ಇವೆ. ಅವರೂ ಕೂಡ ಕನ್ನಡ ಸಾಹಿತ್ಯ ಪರಿಷತ್ತಿನಂತೆ ಸ್ವಯಂ ಪ್ರೇರಣೆಯಿಂದ ಲೋಕಾಯುಕ್ತ ತನಿಖೆಗೆ ಒಳಪಡಬೇಕು ಎಂದು ತೀರ್ಮಾನಿಸಲಾಗಿದೆ.

ಆರ್.ಅಶೋಕ ಬೆಂಗಾವಲು ವಾಹನದ ಚಾಲಕ ಆತ್ಮಹತ್ಯೆ

ಬೆಂಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ಪೊಲೀಸ್ ಬೆಂಗಾವಲು ವಾಹನದ ಚಾಲಕ ಶರಣಪ್ಪ (33) ಅವರು ಬುಧವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬ್ಯಾಟರಾಯನಪುರ ಪೊಲೀಸ್ ಠಾಣಾ ವ್ಯಾಪ್ತಿಯ ಬಾಪೂಜಿನಗರದಲ್ಲಿ ಬಾಡಿಗೆ ಮನೆಯಲ್ಲಿ ಶರಣಪ್ಪ ಅವರು ಪತ್ನಿ ಶೈಲಶ್ರೀ ಹಾಗೂ ಇಬ್ಬರು ಹೆಣ್ಣು ಮಕ್ಕಳ ಜತೆಗೆ ನೆಲಸಿದ್ದರು. ಶೈಶ್ರೀ ಅವರು ಮಾಗಡಿ ರಸ್ತೆ ಸಂಚಾರ ಪೊಲೀಸ್ ಠಾಣೆಯಲ್ಲಿ ಕಾನ್‌ಸ್ಟೆಬಲ್ ಆಗಿ ಕೆಲಸ ಮಾಡುತ್ತಿದ್ದಾರೆ. ಮನೆಯಲ್ಲಿ ಯಾರೂ ಇಲ್ಲದ ವೇಳೆಯಲ್ಲಿ ಶರಣಪ್ಪ ಅವರು ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು. ಕಲಬುರಗಿ ಜಿಲ್ಲೆಯ ಶರಣಪ್ಪ ಅವರು ಕಳೆದ ಎರಡೂವರೆ ವರ್ಷದಿಂದ ಅಶೋಕ ಅವರ ಬೆಂಗಾವಲು ವಾಹನ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಕೌಟುಂಬಿಕ ಕಲಹದ ಕಾರಣಕ್ಕೆ ಶರಣಪ್ಪ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಮರಣೋತ್ತರ ಪರೀಕ್ಷೆ ನಡೆಸಲು ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ರವಾನೆ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಭೂಮಿ ಖರೀದಿಸಿದ್ದರೆ ದಾಖಲೆ ನೀಡಿ

ಬೆಂಗಳೂರು: ಬೇರೆಯವರಿಗೆ ಮಂಜೂರಾಗಿದ್ದ ಭೂಮಿ ಖರೀದಿಸಿದ್ದರೆ ಅದಕ್ಕೆ ದಾಖಲೆ ಇರಬೇಕಲ್ಲವೇ ಎಂದು ಹೈಕೋರ್ಟ್ ಮೌಖಿಕವಾಗಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಪ್ರಶ್ನಿಸಿದೆ.

ಕೇತಗಾನಹಳ್ಳಿಯಲ್ಲಿ ತಮ್ಮ ಭೂಮಿಗೆ ಸಂಬಂಧಿಸಿದ ದಾಖಲೆ ಹಾಜರುಪಡಿಸುವಂತೆ ಕುಮಾರಸ್ವಾಮಿ ಅವರಿಗೆ ತಹಸೀಲ್ದಾರ್ ಜಾರಿ ಮಾಡಿದ್ದ ನೋಟಿಸ್‌ಗೆ ತಡೆ ನೀಡಿರುವುದನ್ನು ಪ್ರಶ್ನಿಸಿ ರಾಜ್ಯ ಸರಕಾರ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ನ್ಯಾ.ಡಿ.ಕೆ.ಸಿಂಗ್ ಮತ್ತು ಕೆ.ರಾಜೇಶ್ ರೈ ಅವರ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ವಾದ ಪ್ರತಿವಾದ ಆಲಿಸಿದ ನ್ಯಾಯಾಲಯ, ಕೇತಗಾನಹಳ್ಳಿಯಲ್ಲಿನ ಸರ್ವೆ ನಂಬರ್ 8, 9, 10, 16, 17 ಮತ್ತು 79ಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ನಡೆಸಿರುವ ತನಿಖಾ ವರದಿಯನ್ನು ಮುಂದಿನ ವಿಚಾರಣೆಗೆ ನ್ಯಾಯಾಲಯಕ್ಕೆ ಸಲ್ಲಿಸುವಂತೆ ರಾಜ್ಯ ಸರಕಾರಕ್ಕೆ ನಿರ್ದೇಶಿಸಿದೆ. ಅಲ್ಲದೇ, ತಹಸೀಲ್ದಾರ್ ನೋಟಿಸ್‌ಗೆ ಆಕ್ಷೇಪಣೆ ಸಲ್ಲಿಸಲು ಕುಮಾರಸ್ವಾಮಿಗೆ ನಿರ್ದೇಶಿಸಿ ವಿಚಾರಣೆ ಅಕ್ಟೋಬರ್ 27ಕ್ಕೆ ಮುಂದೂಡಿತು.

ಇದಕ್ಕೂ ಮುನ್ನ, ರಾಜ್ಯ ಸರಕಾರವನ್ನು ಪ್ರತಿನಿಧಿಸಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, ಕುಮಾರಸ್ವಾಮಿ ಅವರು ಭೂಮಿ ಖರೀದಿಸಿಲ್ಲ. ಅದು ಸರಕಾರದ ಭೂಮಿ. ಭೂಕಂದಾಯ ಕಾಯಿದೆ ಅಡಿ ಆಕ್ಷೇಪಾರ್ಹವಾದ ಭೂಮಿಗೆ ಸಂಬಂಧಿಸಿದಂತೆ ದಾಖಲೆ ಸಲ್ಲಿಸುವಂತೆ ಕುಮಾರಸ್ವಾಮಿಗೆ ನೋಟಿಸ್ ಜಾರಿ ಮಾಡಲಾಗಿದೆ. ಇದಕ್ಕೆ ಅವರು ಪ್ರತಿಕ್ರಿಯೆ ನೀಡಿಲ್ಲ, ಕೇತಗಾನಹಳ್ಳಿಯಲ್ಲಿ 22 ಎಕರೆ ಹೊಂದಿರುವುದಾಗಿ ಕುಮಾರಸ್ವಾಮಿ ಹೇಳಿದ್ದಾರೆ. 13 ಎಕರೆ ಕ್ರಯಪತ್ರದ ಮೂಲಕ ಖರೀದಿಸಿದ್ದಾರೆ. ಉಳಿದ 6.06 ಎಕರೆ ಅದಕ್ಕೆ ದಾಖಲೆಗಳು ಇಲ್ಲ. ಇದಕ್ಕೆ ಕ್ರಯಪತ್ರವಿಲ್ಲ. ಇದನ್ನು ಸಲ್ಲಿಸಿದರೆ ಅದನ್ನು ಪರಿಗಣಿಸಿ, ಸರಕಾರ ತನಿಖೆ ಕೈಬಿಡಲಿದೆ ಎಂದರು.

ಕುಮಾರಸ್ವಾಮಿ ಪ್ರತಿನಿಧಿಸಿದ್ದ ಹಿರಿಯ ವಕೀಲ ಉದಯ್ ಹೊಳ್ಳ, ಮಂಡ್ಯದಲ್ಲಿ ರಾಜಕೀಯ ವಿರೋಧಿಯಾದ ಮಾದೇಗೌಡ ಅವರು ಸುಳ್ಳು ಪ್ರಕರಣ ದಾಖಲಿಸಿದ್ದರು. ಇದನ್ನು ಆಧರಿಸಿ ತನಿಖೆ ನಡೆಸಲು, ಲೋಕಾಯುಕ್ತ ಆದೇಶಿಸಿತ್ತು. ತನಿಖೆಯಲ್ಲಿ ಸರಕಾರಿ ಭೂಮಿ ಒತ್ತುವರಿ ಮಾಡಲಾಗಿಲ್ಲ. ಮಂಜೂರು ಮಾಡಿದ್ದ ಭೂಮಿಯನ್ನು ಕುಮಾರಸ್ವಾಮಿ ಖರೀದಿಸಿದ್ದಾರೆ ಎಂದು ವರದಿ ನೀಡಲಾಗಿದೆ. ಈಗ ರಾಜ್ಯ ಸರಕಾರ ರಚಿಸಿರುವ ಎಸ್‌ಐಟಿ ಅಕ್ರಮವಾಗಿದೆ ಎಂದರು.

ಅ.27ಕ್ಕೆ ವಿಚಾರಣೆ ಮುಂದೂಡಿಕೆ

ವಿಚಾರಣೆಯ ಒಂದು ಹಂತದಲ್ಲಿ ಪೀಠವು ಶೋಕಾಸ್ ನೋಟಿಸ್‌ಗೆ ಕುಮಾರಸ್ವಾಮಿ ಅವರು ಪ್ರತಿಕ್ರಿಯೆ ಸಲ್ಲಿಸಲಿ. ಭೂಮಿ ಯಾರಿಗೆ ಸಂಬಂಧಿಸಿದ್ದು ಎಂಬುದನ್ನು ತಹಸೀಲ್ದಾರ್ ಪರಿಶೀಲಿಸಬಾರದೇ? ಬೇರೆಯವರಿಗೆ ಮಂಜೂರಾದ ಭೂಮಿಯನ್ನು ಖರೀದಿಸಿದ್ದರೆ ಅದಕ್ಕೆ ದಾಖಲೆ ಇರಬೇಕಲ್ಲವೇ? ಎಂದು ಪ್ರಶ್ನಿಸಿತು. ಅಲ್ಲದೆ, ಅಂತಿಮವಾಗಿ ಜಿಲ್ಲಾಧಿಕಾರಿ ನಡೆಸಿರುವ ತನಿಖಾ ವರದಿ ಸಲ್ಲಿಸಲು ನಿರ್ದೇಶಿಸಿ, ವಿಚಾರಣೆ ಅಕ್ಟೋಬರ್ 27ಕ್ಕೆ ಮುಂದೂಡಿತು.

ಇಂದು ಅಧಿಕಾರ ಸ್ವೀಕಾರ

ಬೆಂಗಳೂರು: ಕರ್ನಾಟಕ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರಾಗಿ ಮುರಳಿ ಅಶೋಕ್ ಸಾಲಪ್ಪ ಅವರು ಅಧಿಕಾರ ಸ್ವೀಕರಿಸಲಿದ್ದಾರೆ.

ಬೆಂಗಳೂರಿನಲ್ಲಿ ದಶಕಗಳಿಂದ ಸಫಾಯಿ ಕರ್ಮಚಾರಿಗಳ ಸಂಘ ನಡೆಸುತ್ತಿರುವ ಮುರಳಿ ಅಶೋಕ್ ಸಾಲಪ್ಪ ಅವರನ್ನು ರಾಜ್ಯ ಸರಕಾರವು ಕರ್ನಾಟಕ ಸಫಾಯಿ ಕರ್ಮಚಾರಿಗಳ ಆಯೋಗಕ್ಕೆ ಅಧ್ಯಕ್ಷರನ್ನಾಗಿ ನೇಮಿಸಿದೆ. ಬುಧವಾರ ಬೆಳಗ್ಗೆ ಮುರಳಿ ಅವರು ಅಧಿಕೃತವಾಗಿ ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

70ರ ದಶಕದಲ್ಲಿ ಐಪಿಡಿ ಸಾಲಪ್ಪ ಅವರು ಪೌರಕಾರ್ಮಿಕರ ಅಭಿವೃದ್ಧಿಗಾಗಿ ನಡೆಸಿದ ಅಧ್ಯಯನ ಮತ್ತು ವರದಿ ಪೌರಕಾರ್ಮಿಕರ ಜೀವನದ ಮೇಲೆ ಪ್ರಭಾವ ಬೀರುತ್ತಲೇ ಬಂದಿದೆ. ದೇವರಾಜ್ ಅರಸು ಕಾಲದಲ್ಲಿ ಪೌರಕಾರ್ಮಿಕರ ಹಕ್ಕಿಗಾಗಿ ಹೋರಾಟ ನಡೆಸಿದ ಐಪಿಡಿ ಸಾಲಪ್ಪ ಅವರ ಪುತ್ರ, ಮುರಳಿ ಸಾಲಪ್ಪ ಎನ್ನುವುದು ಸ್ಮರಣೀಯ.

ಕ್ಷಮೆ ಕೋರಿದ ಮಾಜಿ ಕಮಿಷನರ್

ಬೆಂಗಳೂರು: ಸಿಜೆಐ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ ವಕೀಲ ರಾಕೇಶ್ ಕಿಶೋರ್ ಬಗ್ಗೆ ಬೆಂಗಳೂರಿನ ಮಾಜಿ ಪೊಲೀಸ್ ಆಯುಕ್ತ ಮತ್ತು ಬಿಜೆಪಿ ನಾಯಕ ಭಾಸ್ಕರ್ ರಾವ್ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಇದರ ಬೆನ್ನಿಗೆ ಸಾಮಾಜಿಕ ಜಾಲತಾಣದಲ್ಲಿ ವ್ಯಕ್ತವಾದ ಆಕ್ರೋಶದ ಬೆನ್ನಲ್ಲೇ ಕ್ಷಮೆಯಾಚಿಸಿದ್ದಾರೆ.

ಇದು ಕಾನೂನಾತ್ಮಕವಾಗಿ ತುಂಬಾ ತಪ್ಪಾಗಿದ್ದರೂ ಸಹ, ಪರಿಣಾಮಗಳನ್ನು ಲೆಕ್ಕಿಸದೆ ನಿಮ್ಮ ವಯಸ್ಸಿನಲ್ಲಿ, ನಿಲುವು ತೆಗೆದುಕೊಂಡು ಅದಕ್ಕೆ ಬದ್ಧತೆಯಿಂದ ಬದುಕುವ ನಿಮ್ಮ ಧೈರ್ಯವನ್ನು ನಾನು ಮೆಚ್ಚುತ್ತೇನೆ ಎಂದು ಭಾಸ್ಕರ್ ರಾವ್ ಮಂಗಳ ವಾರ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದರು. ಇದಕ್ಕೆ ತೀವ್ರ ಆಕ್ರೋಶ ಹಾಗೂ ಪೋಸ್ಟ್ ವಿವಾದ ಸೃಷ್ಟಿಸುತ್ತಿದ್ದಂತೆ ಅವರು ತಮ್ಮ ಪೋಸ್ಟ್ ಅನ್ನು ಡಿಲೀಟ್ ಮಾಡಿದ್ದಾರೆ. ಮಾಜಿ ಐಪಿಎಸ್ ಅಧಿಕಾರಿಯೊಬ್ಬರಿಂದ ಇಂತಹ ಹೇಳಿಕೆ ಬಂದಿರುವುದಕ್ಕೆ ಕಾಂಗ್ರೆಸ್ ಸೇರಿದಂತೆ ಪ್ರಮುಖರು ಆಕ್ಷೇಪ ವ್ಯಕ್ತಪಡಿಸಿದ್ದರು.

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಸದಾಶಿವನಗರ ಮನೆಯಲ್ಲಿ ಹಾಗೂ ನಟ ಜಗ್ಗೇಶ್ ಅವರ ಮಲ್ಲೇಶ್ವರಂ ನಿವಾಸದಲ್ಲಿ ಜಿಬಿಎ ಅಧಿಕಾರಿಗಳು ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಸಮೀಕ್ಷೆ ನಡೆಸಿದರು.

ಸಂಪುಟ ಸರ್ಜರಿಗೆ ತೆರೆಮರೆ ಸಿದ್ಧತೆ। ಮಂತ್ರಿಗಳಲ್ಲಿ ಆತಂಕ, ಶಾಸಕರಲ್ಲಿ ಚಿಗುರಿದ ಆಸೆ

ಪುನಾರಚನೆಗೆ ಪಕ್ಷದಲ್ಲೇ ಪರ-ವಿರೋಧ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ರಾಜ್ಯ ಸಚಿವ ಸಂಪುಟ ಪುನಾರಚನೆಗೆ ಸದ್ದಿಲ್ಲದೆ ಸಿದ್ಧತೆ ಶುರುವಾಗಿದ್ದು, ಇದಕ್ಕೆ ವಿರುದ್ಧವಾಗಿ ಪುನಾರಚನೆಯನ್ನು ತಾತ್ಕಾಲಿಕವಾಗಿ ಮುಂದೂಡುವ ಪ್ರಯತ್ನದ ಚಿಂತನೆಯೂ ನಡೆದಿದೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಸಂಪುಟದ ಅನೇಕ ಹಿರಿಯ ಸಚಿವರೂ ಸೇರಿದಂತೆ ಬಹುತೇಕ ಮಂತ್ರಿಗಳಿಗೆ ಆತಂಕ ಆರಂಭವಾಗಿದೆ. ಈ ಬಾರಿ ಸಂಪುಟ ಪುನಾರಚನೆಯಲ್ಲಿ ಸುಮಾರು 12 ಮಂದಿ ಮಂತ್ರಿಗಳನ್ನು ಸಂಪುಟದಿಂದ ಕೈಬಿಡುವ ಚಿಂತನೆ ನಡೆದಿದ್ದು, ಅವರಲ್ಲಿ ಬಹುತೇಕ ಹಿರಿಯರಿಗೇ ಕೊಕ್ ನೀಡುವ ಸಾಧ್ಯತೆ ಇದೆ.

ಮುಂಬರುವ ನವೆಂಬರ್‌ಗೆ ಸರಕಾರವು ಎರಡೂವರೆ ವರ್ಷಗಳನ್ನು ಪೂರೈಸಲಿದ್ದು, ಈಗಾಗಲೇ ನಿರ್ಧರಿಸಿದಂತೆ ಸಚಿವ ಸಂಪುಟ ಪುನಾರಚನೆ ಮಾಡಲು ಪಕ್ಷದೊಳಗೆ ಗಂಭೀರ ಚಿಂತನೆ ಶುರುವಾಗಿದೆ. ನಿರೀಕ್ಷೆಯಂತೆ ನವೆಂಬರ್ ಅಂತ್ಯ ಅಥವಾ ಡಿಸೆಂಬರ್ ವೇಳೆಗೆ ಸಂಪುಟ ಪುನಾರಚನೆ ಮಾಡುವುದಕ್ಕೆ ಸಿದ್ಧತೆ ಮಾಡಿಕೊಳ್ಳಬಹುದು ಎನ್ನುವ ಸೂಚನೆಗಳು ಪಕ್ಷದ ವರಿಷ್ಠರಿಂದ ಲಭ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟ ಪುನಾರಚನೆಯ ಚಿಂತನೆ ಆರಂಭಿಸಿದ್ದಾರೆ. ಮುಂಬರುವ ಚಳಿಗಾಲದ ಅಧಿವೇಶನಕ್ಕೂ ಮುನ್ನ ಸಂಪುಟ ಪುನಾರಚನೆಯ ಕಸರತ್ತನ್ನು ಪೂರ್ಣಗೊಳಿಸಬೇಕೆನ್ನುವ ಚಿಂತನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇದ್ದಾರೆ ಎಂದು ಆಪ್ತಮೂಲಗಳು ತಿಳಿಸಿವೆ.

ಪಕ್ಷ ಮತ್ತು ಸರಕಾರದೊಳಗೆ ಪುನಾರಚನೆ ಬಗ್ಗೆ ಚರ್ಚೆಗಳು ಆರಂಭವಾಗುತ್ತಿದ್ದಂತೆ ಅನೇಕ ಹಿರಿಯ ಸಚಿವರಲ್ಲಿ ಸಂಪುಟದಿಂದ ಹೊರಹೋಗಬೇಕಾದ ಆತಂಕ ಶುರುವಾಗಿದೆ, ಹಾಗೆಯೇ ಕೆಲವು ಹಿರಿಯ ಶಾಸಕರಿಗೆ ಸಂಪುಟ ಸೇರುವ ಆಸೆ ಚಿಗುರಲಾರಂಭಿಸಿದೆ. ಈ ಬಾರಿ ಪುನಾರಚನೆಯಾಗಬಹುದಾದ ಸಂಪುಟದಲ್ಲಿ ಸರಕಾರವನ್ನು ವಿವಿಧ ರೀತಿಯ ಶಕ್ತಿಯೊಂದಿಗೆ ಮುನ್ನಡೆಸಲು ಸಹಕರಿಸುವ ಹಿರಿಯರಿಗೆ ಅದರಲ್ಲೂ ಜಾತಿ, ಜನಾಂಗದ ಬಲ ಇರುವವರಿಗೆ ಆದ್ಯತೆ ನೀಡುವ ಸಾಧ್ಯತೆ ಇದೆ. ಹಾಗೆಯೇ ಮುಂದಿನ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಕೆಲವು ಹೊಸ ಮುಖಗಳಿಗೂ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಸಿದ್ದರಾಮಯ್ಯ ಆಲೋಚಿಸಿದ್ದಾರೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

ಪುನಾರಚನೆ ಎಲ್ಲಾ ಪ್ರಶ್ನೆಗಳಿಗೂ ಉತ್ತರವೇ?

ಸಚಿವ ಪುನಾರಚನೆ ಸರಕಾರಕ್ಕೆ 2ವರ್ಷ ಪೂರ್ಣವಾದಾಗಲೇ ಆಗಬೇಕಿತ್ತು, ಆದರೆ ಮುಡಾ ಸೈಟು ಹಂಚಿಕೆ ಆರೋಪ ಹಾಗೂ ನಂತರ ಪಕ್ಷದ ಆಂತರಿಕ ಸಮಸ್ಯೆಗಳಿಂದ ಆ ವಿಷಯ ಮುಂದೆ ಹೋಗಿತ್ತು. ಈಗ ಎರಡೂವರೆ ವರ್ಷವಾಗುತ್ತಿರುವ ಹಿನ್ನೆಲೆಯಲ್ಲಿ ಪುನಾರಚನೆ ಅನಿವಾರ್ಯವಾಗಿದೆ, ಕಾರಣ ಸಚಿವ ಆಕಾಂಕ್ಷಿಗಳು ಅಪಾರ. ಸಂಪುಟ ಪುನಾರಚನೆ ನಡೆದು ಬಿಟ್ಟರೆ ಕೆಲವು ಶಾಸಕರು ಆಗಾಗ ಪ್ರಸ್ತಾಪಿಸುತ್ತಿರುವ ನಾಯಕತ್ವ ಬದಲಾವಣೆ ಪ್ರಶ್ನೆಯೇ ಸದ್ಯಕ್ಕೆ ಉದ್ಭವಿಸುವುದಿಲ್ಲ, ಹಾಗೆಯೇ ಮುಂದೇನು ಎನ್ನುವ ಪ್ರಶ್ನೆಗಳಿಗೆ ಇದರಿಂದಲೇ ಉತ್ತರ ಸಿಕ್ಕಿ ಬಿಡುತ್ತದೆ ಎನ್ನುವ ವಾದವೂ ಇದೆ. ಹೀಗಾಗಿ ಸದ್ಯಕ್ಕೆ ಸಂಪುಟ ಪುನಾರಚನೆ ಬೇಡ ಎನ್ನುವ ಪ್ರಯತ್ನಗಳೂ ನಡೆಯುತ್ತಿವೆ ಎನ್ನಲಾಗಿದೆ.

ಸಂಪುಟದಿಂದ ಯಾರಿಗೆ ಕೊಕ್?

ಒಟ್ಟು 33 ಮಂದಿಯ ಸಚಿವ ಸಂಪುಟದಲ್ಲಿ ನಾಗೇಂದ್ರ ಮತ್ತು ರಾಜಣ್ಣ ರಾಜೀನಾಮೆ ನಂತರ 31ಮಂದಿ ಮಂತ್ರಿಗಳಿದ್ದು, ಇವರಲ್ಲಿ 12 ಮಂದಿಗೆ ಕೊಕ್ ನೀಡುವ ಲೆಕ್ಕಾಚಾರವಿದೆ. ಈ ಲೆಕ್ಕಾಚಾರದ ಪಟ್ಟಿಯಲ್ಲಿ ಸಚಿವರಾದ ಡಿ. ಸುಧಾಕರ್ (ಯೋಜನಾ ಮತ್ತು ಸಾಂಖಿಕ ಇಲಾಖೆ) ಉನ್ನತ ಶಿಕ್ಷಣ ಸಚಿವ ಸಿ. ಸುಧಾಕರ್, ಸಚಿವರಾದ ಭೋಸರಾಜ್, ಮಂಕಾಳ ವೈದ್ಯ, ಶರಣಪ್ಪ ದರ್ಶನಾಪುರ, ವೆಂಕಟೇಶ್, ಜಮೀರ್ ಅಹಮ್ಮದ್ ಖಾನ್, ಎಚ್.ಕೆ. ಪಾಟೀಲ್, ಮಧು ಬಂಗಾರಪ್ಪ, ದಿನೇಶ್ ಗುಂಡೂರಾವ್, ಈಶ್ವರ್ ಖಂಡ್ರೆ, ಭೈರತಿ ಸುರೇಶ್, ರಹೀಮ್ ಖಾನ್ ಅವರಿದ್ದಾರೆ. ಆದರೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮುದಾಯದ ಸಚಿವರಲ್ಲಿ ಯಾರನ್ನು ತೆಗೆಯಬೇಕು., ಯಾರಿಗೆ ಅವಕಾಶ ನೀಡಬೇಕೆನ್ನುವ ಬಗ್ಗೆ ಇನ್ನೂ ಚಿಂತನೆ ನಡೆಸಿಲ್ಲ. ಒಳ ಮೀಸಲಾತಿ ಬಗ್ಗೆ ಸರಕಾರದ ತೀರ್ಮಾನದ ನಂತರವೂ ಅನೇಕ ಸಮಸ್ಯೆಗಳು ಹೊತ್ತಿ ಉರಿಯುತ್ತಿದ್ದು, ಅದರ ಪರಿಣಾಮಗಳನ್ನು ನೋಡಿ ಆ ವಿಚಾರಕ್ಕೆ ಕೈ ಹಾಕಲು ಸಿದ್ದರಾಮಯ್ಯ ಆಲೋಚಿಸಿದ್ದಾರೆ ಎಂದು ಆಪ್ತ ಮೂಲಗಳು ತಿಳಿಸಿವೆ.

ಎಸ್‌ಎಸ್‌ಸಿ: ಅರ್ಜಿ ಆಹ್ವಾನ

ಕೇಂದ್ರೀಯ ಸಿಬ್ಬಂದಿ ನೇಮಕಾತಿ ಆಯೋಗವು (ಎಸ್‌ಎಸ್‌ಸಿ) ದಿಲ್ಲಿ ಪೊಲೀಸ್ ಎಕ್ಸಾಮಿನೇಷನ್‌ಗೆ ಅಧಿಸೂಚನೆ ಪ್ರಕಟಿಸಿದೆ. ದೇಶದ ಯಾವುದೇ ರಾಜ್ಯದ ಅಭ್ಯರ್ಥಿಗಳಾಗಿದ್ದರೂ ಅರ್ಜಿ ಸಲ್ಲಿಸುವ ಅವಕಾಶವಿರುತ್ತದೆ. ಕರ್ನಾಟಕದಲ್ಲಿಯೂ ಪರೀಕ್ಷಾ ಕೇಂದ್ರಗಳಿರುತ್ತವೆ.

ಒಟ್ಟು ಹುದ್ದೆಗಳು: 7565 ಕಾನ್‌ಸ್ಟೆಬಲ್ ಹುದ್ದೆಗಳಿವೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಸೆ. 23ರಿಂದಲೇ ಆನ್‌ಲೈನ್ ಅರ್ಜಿ ಸಲ್ಲಿಕೆ ಆರಂಭವಾಗಿದ್ದು, ಅಕ್ಟೋಬರ್-21ರೊಳಗೆ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

ಪರೀಕ್ಷೆ ವಿವರ: ನೇಮಕಾತಿಗಾಗಿ ಮುಂಬರುವ ಡಿಸೆಂಬರ್ ಅಥವಾ ಮುಂದಿನ ವರ್ಷದ ಜನವರಿಯಲ್ಲಿ ಪರೀಕ್ಷೆ ನಡೆಯಲಿದೆ.

ವಿದ್ಯಾರ್ಹತೆಗಳು: ಈ ಹುದ್ದೆಗಳಿಗೆ ದ್ವಿತೀಯ ಪಿಯುಸಿ ತೇರ್ಗಡೆಯಾಗಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರು, ಪುರುಷ ಅಭ್ಯರ್ಥಿಗಳು ಕಡ್ಡಾಯವಾಗಿ ಲಘು ವಾಹನ ಚಾಲನಾ ಪರವಾನಗಿ ಹೊಂದಿರಬೇಕು. ಅಭ್ಯರ್ಥಿಗಳಲ್ಲಿ ಎನ್‌ಸಿಸಿ ಸರ್ಟಿಫಿಕೇಟ್ ಇದ್ದರೆ ಅದನ್ನೂ ನೇಮಕಕ್ಕೆ ಪರಿಗಣಿಸಲಾಗುತ್ತದೆ.

ವಯೋಮಿತಿ ವಿವರ: 18ರಿಂದ 25 ವರ್ಷದೊಳಗಿನವರು ಅರ್ಜಿ ಸಲ್ಲಿಸಬಹುದು. ಮೀಸಲಾತಿ ವ್ಯಾಪ್ತಿಗೆ ಒಳಪಡುವ ಎಸ್.ಸಿ/ಎಸ್.ಟಿ ಅಭ್ಯರ್ಥಿಗಳಿಗೆ 3 ವರ್ಷ, ಒಬಿಸಿ ವರ್ಗದವರಿಗೆ 3 ವರ್ಷ ಹಾಗೂ ರಾಷ್ಟ್ರೀಯ/ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶವನ್ನು ಪ್ರತಿನಿಧಿಸಿರುವ ಕ್ರೀಡಾಳುಗಳಿಗೆ ಗರಿಷ್ಠ ವಯೋಮಿತಿಯಲ್ಲಿ 10 ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.

ಅರ್ಜಿ ಶುಲ್ಕ ವಿವರ: ಎಸ್.ಸಿ/ಎಸ್.ಟಿ ಮತ್ತು ಮಾಜಿ ಸೈನಿಕರು ಹೊರತುಪಡಿಸಿ ಉಳಿದ ಎಲ್ಲಾ ವರ್ಗದ ಅಭ್ಯರ್ಥಿಗಳು 100 ರು. ಶುಲ್ಕ ಪಾವತಿಸಬೇಕು. ಶುಲ್ಕ ಪಾವತಿಗೆ ಅ.22 ಕೊನೆಯ ದಿನವಾಗಿರುತ್ತದೆ.

ಅರ್ಜಿ ತಿದ್ದುಪಡಿ: ಒಮ್ಮೆ ಸಲ್ಲಿಸಿದ ಅರ್ಜಿಯನ್ನು ತಿದ್ದುಪಡಿ ಮಾಡಲೂ ಅವಕಾಶವಿದೆ. ಅಕ್ಟೋಬರ್ 29-31ರ ತನಕ ತಿದ್ದುಪಡಿಗೆ ಅವಕಾಶ ನೀಡಲಾಗಿದೆ. ಒಮ್ಮೆ ಅರ್ಜಿಯನ್ನು ತಿದ್ದುಪಡಿ ಮಾಡಲು ಬಯಸಿದ್ದಲ್ಲಿ 200 ರು. ಮತ್ತು ನಂತರದ ತಿದ್ದುಪಡಿಗಳಿಗೆ 500 ರು. ಶುಲ್ಕ ವಿಧಿಸಲಾಗುತ್ತದೆ. ಅಭ್ಯರ್ಥಿಗಳು ಇದನ್ನು ಗಮನದಲ್ಲಿಟ್ಟುಕೊಂಡು ಅರ್ಜಿ ಸಲ್ಲಿಸಬೇಕು.

ರಾಜ್ಯದಲ್ಲಿ ಪರೀಕ್ಷಾ ಕೇಂದ್ರಗಳು: ಬೆಂಗಳೂರು, ಹುಬ್ಬಳ್ಳಿ, ಕಲಬುರಗಿ, ಮಂಗಳೂರು, ಉಡುಪಿ, ಶಿವಮೊಗ್ಗ, ಮೈಸೂರು ಮತ್ತು ಬೆಳಗಾವಿ.

ರಾಜ್ಯದಲ್ಲಿ ಎಸ್‌ಎಸ್‌ಸಿ ಕಚೇರಿಯ ವಿಳಾಸ: Regional Director (KKR), Staff Selection Commission, 1st Floor, "E" Wing, Kendriya Sadan, Koramangala, Bengaluru, Karnataka-560034

ವೇತನ ಶ್ರೇಣಿ: 21700-69100.ರು.

ಸಹಾಯವಾಣಿ: 180-030-930-63

ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ಸಲ್ಲಿಸಲು ಸಂಪರ್ಕಿಸಬೇಕಾದ ಜಲಾಲತಾಣ: https://ssc.gov.in

> **ಪರೀಕ್ಷೆ ವಿವರ:** ಅರ್ಹ ಅಭ್ಯರ್ಥಿಗಳಿಗೆ ಕಂಪ್ಯೂಟರ್ ಆಧಾರಿತ ಪರೀಕ್ಷೆ ನಡೆಸಲಾಗುತ್ತದೆ. ವಸ್ತುನಿಷ್ಠ ಮಾದರಿಯ ಬಹು ಆಯ್ಕೆಯ 100 ಅಂಕಗಳ 100 ಪ್ರಶ್ನೆಗಳಿಗೆ ಅಭ್ಯರ್ಥಿಗಳು ಉತ್ತರಿಸಬೇಕಾಗುತ್ತದೆ. ಸಾಮಾನ್ಯ ಜ್ಞಾನ/ ಪ್ರಚಲಿತ ವಿದ್ಯಮಾನ, ರೀಸನಿಂಗ್,ನ್ಯೂಮರಿಕಲ್ ಎಬಿಲಿಟಿ, ಕಂಪ್ಯೂಟರ್ ಜ್ಞಾನದ ಪ್ರಶ್ನೆಗಳಿರುತ್ತವೆ. ಸಾಮಾನ್ಯ ಪ್ರಚಲಿತ ವಿದ್ಯಮಾನಕ್ಕೆ 50 ಅಂಕಗಳನ್ನು ಮೀಸಲಿಡಲಾಗಿದೆ. ತಪ್ಪು ಉತ್ತರಗಳಿಗೆ 0.25 ಅಂಕಗಳನ್ನು ಕಳೆಯಲಾಗುತ್ತದೆ. ಇದರಲ್ಲಿ ಅರ್ಹತೆ ಪಡೆದವರಿಗೆ ದೈಹಿಕ ಸಾಮರ್ಥ್ಯ ಪರೀಕ್ಷೆ, ವೈದ್ಯಕೀಯ ಪರೀಕ್ಷೆ ಮತ್ತು ದಾಖಲಾತಿ ಪರಿಶೀಲನೆ ನಡೆಸಿ ನೇಮಕ ಮಾಡಿಕೊಳ್ಳಲಾಗುತ್ತದೆ.

ಸಿಡೆಕ್‌ನಲ್ಲಿ (ಸಿ-ಡಿಎಸಿ): ಅರ್ಜಿ ಅಹ್ವಾನ

ದಿ ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ ಕಂಪ್ಯೂಟಿಂಗ್ (ಸಿ-ಡಿಎಸಿ) ಕೇಂದ್ರ ಸರಕಾರದ ಮಾಹಿತಿ ತಂತ್ರಜ್ಞಾನದ ಅಧೀನದ ಉದ್ದಿಮೆಯಾಗಿದ್ದು, ಅದರಲ್ಲಿ ಮ್ಯಾನೇಜರ್ ಮತ್ತು ಪ್ರಾಜೆಕ್ಟ್ ಅಸೋಸಿಯೇಟ್‌ಗಳ ಒಟ್ಟು 646 ಹುದ್ದೆಗಳನ್ನು ತಾತ್ಕಾಲಿಕ ನೆಲೆಯಲ್ಲಿ ಭರ್ತಿ ಮಾಡಿಕೊಳ್ಳಲಾಗುತ್ತಿದ್ದು ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಅಕ್ಟೋಬರ್-20 (ಆನ್‌ಲೈನ್)

ವಿದ್ಯಾರ್ಹತೆಯ ವಿವರ: ಹುದ್ದೆಗೆ ಅನುಗುಣವಾಗಿ ಬಿ.ಇ/ಬಿ.ಟೆಕ್, ಎಂ.ಇ/ಎಂ.ಟೆಕ್, ಎಂಸಿಎ, ಪಿಹೆಚ್.ಡಿ ಪದವಿಯನ್ನು ಮಾನ್ಯತೆ ಪಡೆದ ಕಾಲೇಜಿನಲ್ಲಿ ಪೂರ್ಣಗೊಳಿಸಿದ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದು. ಡಿಸೈನ್/ಕಂಪ್ಯೂಟರ್ ಅಪ್ಲಿಕೇಶನ್ ವಿಷಯಗಳಲ್ಲಿ ಸ್ನಾತಕೋತ್ತರ ಅಥವಾ ಎಂ.ಇ/ಎಂ.ಟೆಕ್ ಅಥವಾ ಪಿ.ಹೆಚ್.ಡಿ ಪೂರ್ಣಗೊಳಿಸಿದವರು ಅರ್ಜಿ ಸಲ್ಲಿಸಲು ಅವಕಾಶವಿದೆ. ಕನಿಷ್ಠ ಶೇ.60 ಅಥವಾ ಅದಕ್ಕಿಂತ ಹೆಚ್ಚು ಅಂಕ ಪಡೆದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಸೇವಾನುಭವ: ಸಂಬಂಧಪಟ್ಟ ವಿಭಾಗಗಳಲ್ಲಿ ಕನಿಷ್ಠ 4 ವರ್ಷಗಳ ಸೇವಾನುಭವ ಕಡ್ಡಾಯ.

ನೇಮಕ ಪ್ರಕ್ರಿಯೆ: ನಿಗದಿತ ಅವಧಿಗೆ ನೇಮಕ ಮಾಡಿಕೊಳ್ಳಲಾಗುತ್ತದೆ. ಅಭ್ಯರ್ಥಿಗಳ ಕಾರ್ಯದಕ್ಷತೆ ಆಧಾರದಲ್ಲಿ ಸೇವಾವಧಿ ವಿಸ್ತರಿಸಲಾಗುವುದು ಎಂದು ಸಿ-ಡಿಎಸಿ ತಿಳಿಸಿದೆ.

ಹುದ್ದೆಗಳ ವಿವರ: ಪ್ರಾಜೆಕ್ಟ್ ಇಂಜಿನಿಯರ್, ಸೈಬರ್ ಸೆಕ್ಯುರಿಟಿ, ಫುಲ್‌ಸ್ಟಾಕ್ ಡೆವಲಪರ್, ಸೈಬರ್ ಸೆಕ್ಯುರಿಟಿ ಡೇಟಾ ಪ್ರೈವೆಸಿ, ಹಾರ್ಡ್‌ವೇರ್ ಡೆವಲಪರ್, ಪವರ್ ಎಲೆಕ್ಟ್ರಾನಿಕ್ಸ್ ಆ್ಯಂಡ್ ಎನರ್ಜಿ ಹಾಗೂ ಇತರ ಹುದ್ದೆಗಳಿವೆ.

ವಯೋಮಿತಿ ವಿವರ: ಗರಿಷ್ಠ 35 ವರ್ಷದೊಳಗಿನ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ, ಮೀಸಲಾತಿ ವ್ಯಾಪ್ತಿಗೆ ಒಳಪಡುವ ಪ.ಜಾ, ಪ.ಪಂ, ಅಂಗವಿಕಲರು, ಒಬಿಸಿ ವರ್ಗದವರಿಗೆ ನಿಯಮದನ್ವಯ ವಯೋಸಡಿಲಿಕೆ ಇರಲಿದೆ.

ಅರ್ಜಿ ಸಲ್ಲಿಸುವ ವಿಧಾನ: ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕ ಅಗತ್ಯ ದಾಖಲೆಗಳನ್ನು ಲಗತ್ತಿಸಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

ಆಯ್ಕೆ ಪ್ರಕ್ರಿಯೆ: ಸ್ವೀಕೃತ ಅರ್ಜಿಗಳನ್ನು ಪರಿಶೀಲಿಸಿ, ನಂತರದಲ್ಲಿ ಅಭ್ಯರ್ಥಿಗಳನ್ನು ಅನುಭವ ಹಾಗೂ ವಿದ್ಯಾರ್ಹತೆಯ ಆಧಾರದ ಮೇಲೆ ಶಾರ್ಟ್‌ಲಿಸ್ಟ್ ಮಾಡಲಾಗುತ್ತದೆ. ತದನಂತರ ಮುಂದಿನ ಆಯ್ಕೆ ಹಂತವಾದ ಲಿಖಿತ ಪರೀಕ್ಷೆ ಮತ್ತು ಸಂದರ್ಶನಕ್ಕೆ ಆಹ್ವಾನಿಸಲಾಗುತ್ತದೆ.

ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಗಿತಿಗೆ ಸಂಪರ್ಕಿಸಬೇಕಾದ ಜಾಲತಾಣ; https://careers.cdac.in

> **ಎಲ್ಲೆಲ್ಲಿ ಉದ್ಯೋಗ ಅವಕಾಶ?**
> ಬೆಂಗಳೂರಿನಲ್ಲಿ ಸಿಡಾಕ್ ಘಟಕದಲ್ಲಿ ಒಟ್ಟು 110 ಹುದ್ದೆಗಳಿವೆ. ದೇಶದ ವಿವಿಧೆಡೆಯಲ್ಲಿರುವ ಕೇಂದ್ರಗಳಲ್ಲೂ ನೇಮಕಾತಿ ನಡೆಯುತ್ತಿದೆ. ಚೆನ್ನೈನಲ್ಲಿ 105, ಹೈದರಾಬಾದ್ 65, ಕೋಲ್ಕತ್ತಾ 6, ಮುಂಬೈ 12, ನೋಯ್ಡಾ 173, ಪುಣೆ 99, ತಿರುವನಂತಪುರಂ 54 ಮತ್ತು ಗುವಾಹಟಿಯಲ್ಲಿ 22 ಹುದ್ದೆಗಳಿವೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ: ಉದ್ಯೋಗ ಅಧಿಸೂಚನೆ ಪ್ರಕಟ

ಸರಕಾರಿ ಇಲಾಖೆಗಳು, ನಿಗಮ-ಮಂಡಳಿಗಳಲ್ಲಿ ಖಾಲಿ ಇರುವ ನಾನಾ ವೃಂದದ ಹುದ್ದೆಗಳನ್ನು ನೇರ ನೇಮಕ ಮೂಲಕ ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅಧಿಸೂಚನೆ ಹೊರಡಿಸಿದೆ.

- ನೇರ ನೇಮಕ ಪ್ರಕ್ರಿಯೆ
- ಹೆಚ್ಚುವರಿ ಹುದ್ದೆ ಅರ್ಜಿಗೂ ಅವಕಾಶ
- ಅರ್ಜಿ ಬದಲಾವಣೆಗೆ ಅವಕಾಶವಿಲ್ಲ

ಹುದ್ದೆಗಳ ವಿವರಗಳು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ-18, ಕರ್ನಾಟಕ ಸೋಪ್ಸ್ ಆ್ಯಂಡ್ ಡಿಟರ್ಜೆಂಟ್ ಲಿಮಿಟೆಡ್-14, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ-40, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ-63, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ-19, ಕೃಷಿ ಮಾರಾಟ ಇಲಾಖೆ-180, ತಾಂತ್ರಿಕ ಶಿಕ್ಷಣ ಇಲಾಖೆ-50, ಶಾಲಾ ಶಿಕ್ಷಣ ಇಲಾಖೆ (ಪ.ಪೂ)-10, ಈ ನೇಮಕವು ಸರಕಾರ ನಿಗದಿಪಡಿಸಿರುವ ಅರ್ಹತಾ ಮಾನದಂಡಗಳಿಗೆ ಒಳಪಟ್ಟಿದೆ.

ನೆನಪಿಡಿ: ಒಮ್ಮೆ ಸಲ್ಲಿಸಿದ ಅರ್ಜಿಯಲ್ಲಿನ ಮಾಹಿತಿಯನ್ನು ಯಾವುದೇ ಹಂತದಲ್ಲಿ ಬದಲಾವಣೆ ಅಥವಾ ತಿದ್ದುಪಡಿ ಮಾಡಲು ಅವಕಾಶ ಇರುವುದಿಲ್ಲ.

ಅರ್ಜಿ ಶುಲ್ಕ ವಿವರ: ಮೊದಲ ಒಂದು ಹುದ್ದೆಯ ಅರ್ಜಿಗೆ ನಿಗದಿತ ಶುಲ್ಕ ಪಾವತಿಸಬೇಕು. ಹೆಚ್ಚುವರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದರೆ ಆಯ್ಕೆ ಮಾಡಲಾದ ಪ್ರತಿ ಹೆಚ್ಚುವರಿ ಹುದ್ದೆಯ ಅರ್ಜಿಗೆ 100 ರು. ಶುಲ್ಕ ಪಾವತಿಸಬೇಕು.

ಅಧಿಸೂಚನೆಯಲ್ಲಿ ತಿಳಿಸಿರುವ ಹುದ್ದೆಗಳ ಸಂಖ್ಯೆ, ವರ್ಗೀಕರಣಕ್ಕೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರಗಳು ಪರೀಕ್ಷಾ ದಿನಾಂಕಕ್ಕೆ ಮುಂಚಿತವಾಗಿ ಬದಲಾವಣೆ ಬಯಸಿದರೆ ಮಾತ್ರ ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ.

ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ಸಲ್ಲಿಸಲು ಸಂಪರ್ಕಿಸಬೇಕಾದ ಜಾಲತಾಣ: http://kea.kar.nic.in

ಹುಡ್ಕೋದಲ್ಲಿ ಉದ್ಯೋಗಾವಕಾಶ

ಸಾರ್ವಜನಿಕ ಸಹಭಾಗಿತ್ವದ ಹೌಸಿಂಗ್ ಆ್ಯಂಡ್ ಅರ್ಬನ್ ಡೆವಲಪ್‌ಮೆಂಟ್ ಕಾರ್ಪೊರೇಷನ್ (ಹುಡ್ಕೊ) ದೇಶಾದ್ಯಂತ ಇರುವ ತನ್ನ ಘಟಕಗಳಲ್ಲಿ ಖಾಲಿ ಇರುವ ಮ್ಯಾನೇಜರ್ ಹುದ್ದೆಗಳನ್ನು ಭರ್ತಿ ಪ್ರಕ್ರಿಯೆ ನಡೆಯಲಿದೆ.

ಒಟ್ಟು ಹುದ್ದೆಗಳ ಸಂಖ್ಯೆ: 79

ಹುದ್ದೆಗಳ ವಿವರ: ಡೆಪ್ಯುಟಿ ಜನರಲ್ ಮ್ಯಾನೇಜರ್, ಅಸಿಸ್ಟೆಂಟ್ ಜನರಲ್, ಮ್ಯಾನೇಜರ್, ಸೀನಿಯರ್ ಮ್ಯಾನೇಜರ್, ಡೆಪ್ಯುಟಿ ಮ್ಯಾನೇಜರ್ ಮತ್ತು ಟ್ರೇನಿ ಆಫೀಸರ್.

ವಿದ್ಯಾರ್ಹತೆ: ಎಂಎಸ್ಸಿ, ಎಂ.ಎ ಪದವಿ, ಎಂಬಿಎ ಸ್ನಾತಕೋತ್ತರ ಪದವಿ ಪಡೆದಿರುವ ಅಭ್ಯರ್ಥಿಗಳು ತಮ್ಮ ಅರ್ಹತೆಗೆ ಅನುಗುಣವಾದ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಅಕ್ಟೋಬರ್-17.

ಸೇವಾನುಭವ: ಪ್ರತಿ ಹುದ್ದೆಗೂ ನಿಗದಿತ ಅವಧಿಯ ಸೇವಾನುಭವ ಕಡ್ಡಾಯ ಮಾಡಲಾಗಿದೆ.

ಅರ್ಜಿ ಶುಲ್ಕ ವಿವರ: ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಎಸ್.ಸಿ, ಎಸ್.ಟಿ, ವಿಶೇಷಚೇತನರನ್ನು ಹೊರತುಪಡಿಸಿ ಉಳಿದವರು 1500 ರು. (ಟ್ರೈನಿ ಆಫಿಸರ್ 1000.ರು) ಶುಲ್ಕ ಪಾವತಿಸಬೇಕು.

ಪರೀಕ್ಷೆ ವಿವರ: ಆನ್‌ಲೈನ್ ಪರೀಕ್ಷೆ ಮೂಲಕ ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ,

ಪರೀಕ್ಷಾ ಕೇಂದ್ರಗಳ ವಿವರ: ಬೆಂಗಳೂರು ಸೇರಿದಂತೆ ದೇಶದ 19 ರಾಜ್ಯ ರಾಜಧಾನಿ ನಗರಗಳಲ್ಲಿ ಪರೀಕ್ಷಾ ಕೇಂದ್ರಗಳಿರಲಿವೆ.

ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ಜಾಲತಾಣ: https://hudco.org.in

ವಿಐಟಿಎಂನಲ್ಲಿ ಉದ್ಯೋಗಾವಕಾಶ

ಕೇಂದ್ರ ಸರಕಾರದ ಸಾಂಸ್ಕೃತಿಕ ಸಚಿವಾಲಯಗಳ ಅಧೀನದಲ್ಲಿ, ರಾಷ್ಟ್ರೀಯ ವಿಜ್ಞಾನ ಸಂಗ್ರಹಾಲಯಗಳ ಘಟಕವಾಗಿ ಕಾರ್ಯನಿರ್ವಹಿಸುತ್ತಿರುವ ಬೆಂಗಳೂರಿನ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯವು (ವಿಐಟಿಎಂ) ಸ್ವಾಯತ್ತ ಸಂಸ್ಥೆಯಾಗಿದೆ. ಈ ಸಂಸ್ಥೆಯಲ್ಲಿ ಇರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ.

ಒಟ್ಟು ಹುದ್ದೆಗಳ ವಿವರ: 12

ಹುದ್ದೆಗಳ ವಿವರ: ಎಕ್ಸಿಬಿಷನ್ ಅಸಿಸ್ಟೆಂಟ್, ಟೆಕ್ನಿಷಿಯನ್, ಆಫೀಸ್ ಅಸಿಸ್ಟೆಂಟ್

ವಿದ್ಯಾರ್ಹತೆಗಳು: ರಾಜ್ಯದ ಬೆಂಗಳೂರು, ಕಲಬುರಗಿಯಲ್ಲಿ ಒಟ್ಟು 9 ಹುದ್ದೆಗಳಿವೆ. ಅದರಲ್ಲಿ ಎಕ್ಸಿಬಿಷನ್ ಅಸಿಸ್ಟೆಂಟ್-1, ಟೆಕ್ನಿಷಿಯನ್-4, ಆಫೀಸ್ ಅಸಿಸ್ಟೆಂಟ್‌ಗಳ 4 ಹುದ್ದೆಗಳಿವೆ.

ಎಕ್ಸಿಬಿಷನ್ ಅಸಿಸ್ಟೆಂಟ್‌ಗೆ ಆರಂಭಿಕ ವೇತನವು 59,600 ರು. ಇರಲಿದೆ. ವಿಷ್ವಲ್ ಆರ್ಟ್, ಫೈನ್ ಆರ್ಟ್, ಕಮರ್ಷಿಯಲ್ ಆರ್ಟ್ಸ್ ವಿಷಯಗಳಲ್ಲಿ ಮಾನ್ಯತೆ ಪಡೆದ ಕಾಲೇಜಿನಿಂದ ಪದವಿ ಪಡೆದಿರಬೇಕು. ಗರಿಷ್ಠ 35 ವರ್ಷ ವಯೋಮಾನದವರು ಅರ್ಜಿಯನ್ನು ಸಲ್ಲಿಸಬಹುದು.

ಟೆಕ್ನಿಷಿಯನ್‌ನಲ್ಲಿ 4 ಹುದ್ದೆಗಳಿದ್ದು, 1 ಇಡಬ್ಲ್ಯೂಎಸ್ ಹಾಗೂ 3 ಸಾಮಾನ್ಯವರ್ಗದವರಿಗೆ ಮೀಸಲಿರಿಸಲಾಗಿದೆ. ವೇತನವು 38,908 ರು. ಆಗಿರಲಿದ್ದು, ಐಐಟಿ ಅಥವಾ ತತ್ಸಮಾನವಾದ ಪದವಿ, 2 ವರ್ಷದ ಅನುಭವ ಅವಶ್ಯ. ಗರಿಷ್ಠ 35 ವರ್ಷ ವಯೋಮಾನದವರು ಅರ್ಜಿಯನ್ನು ಸಲ್ಲಿಸಬಹುದು.

ಆಫೀಸ್ ಅಸಿಸ್ಟೆಂಟ್ ವಿಭಾಗದ 5 ಹುದ್ದೆಗಳಲ್ಲಿ ಬೆಂಗಳೂರಿನಲ್ಲಿ 4 ಹುದ್ದೆಗಳಿದ್ದು 2 ಇಡಬ್ಲ್ಯೂಎಸ್, ಪ.ಜಾ-1, ಒಬಿಸಿಗೆ 1 ಹುದ್ದೆಗಳು ಮೀಸಲಿವೆ. ಮಾಸಿಕವಾಗಿ ವೇತನವು 36,918 ರು. ಇರಲಿದ್ದು ಎಸ್‌ಎಸ್‌ಎಲ್‌ಸಿ ಪೂರ್ಣಗೊಳಿಸಿದ ಅಭ್ಯರ್ಥಿಗಳು ಇಂಗ್ಲಿಷ್ ಮತ್ತು ಹಿಂದಿ ಟೈಪಿಂಗ್ ಬಲ್ಲವರು ಅರ್ಜಿ ಸಲ್ಲಿಸಬಹುದು. ಗರಿಷ್ಠ 25 ವರ್ಷ ವಯೋಮಾನದವರಾಗಿರಬೇಕು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಅಕ್ಟೋಬರ್-20.

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕವೇ ಅರ್ಜಿಯನ್ನು ಸಲ್ಲಿಸಬೇಕು. ಲಿಂಕ್‌ನಲ್ಲಿ ವಿವರಗಳನ್ನು ಭರ್ತಿ ಮಾಡಿ, ಅಗತ್ಯ ದಾಖಲೆಗಳನ್ನು ಅಪ್ ಲೋಡ್ ಮಾಡಬೇಕು.

ಅರ್ಜಿ ಶುಲ್ಕ ವಿವರ: 885 ರು. ಇರಲಿದ್ದು, ಮಹಿಳೆಯರು, ಅಂಗವಿಕಲರು, ಪರಿಶಿಷ್ಟ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ ವಿನಾಯ್ತಿಯಿದೆ.

ಆಯ್ಕೆ ವಿಧಾನ: ಆನ್‌ಲೈನ್ ಮೂಲಕ ಸ್ವೀಕರಿಸಲಾದ ಅರ್ಜಿಗಳಿಗೆ ಲಿಖಿತ ಪರೀಕ್ಷೆ ಹಾಗೂ ನೇರ ಸಂದರ್ಶನವಿರಲಿದೆ. ಕೌಶಲದ ಆಧಾರದ ಮೇಲೆ ಅರ್ಹರನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಹಾಗೂ ಅರ್ಜಿ ಸಲ್ಲಿಸ**ಬೇಕಾದ ಜಾಲತಾಣ:** https://www.vismuseum.gov.in/recruitment.php

ಆರ್‌ವಿಎನ್‌ಎಲ್‌ನಲ್ಲಿ ನೇಮಕಾತಿ ಪ್ರಕ್ರಿಯೆ

ರೈಲ್ ವಿಕಾಸ್ ನಿಗಮ್ ಲಿಮಿಟೆಡ್‌ನಲ್ಲಿ (ಆರ್‌ವಿಎನ್‌ಎಲ್) 17 ಹುದ್ದೆಗಳಿಗೆ ನೇಮಕಾತಿಗಾಗಿ ಅರ್ಜಿ ಪ್ರಕ್ರಿಯೆ ನಡೆಯುತ್ತಿದೆ. ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು ಅಕ್ಟೋಬರ್ 16ರ ವರೆಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಒಟ್ಟು 17 ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ. ಇವುಗಳಲ್ಲಿ ಆರು ಸೀನಿಯರ್ ಡೈರೆಕ್ಟರ್ ಜನರಲ್ ಹುದ್ದೆಗಳು, ಆರು ಮ್ಯಾನೇಜರ್ ಹುದ್ದೆಗಳು, ಎರಡು ಡೆಪ್ಯೂಟಿ ಮ್ಯಾನೇಜರ್ ಹುದ್ದೆಗಳು ಮತ್ತು ಮೂರು ಅಸಿಸ್ಟೆಂಟ್ ಮ್ಯಾನೇಜರ್ ಹುದ್ದೆಗಳು ಸೇರಿವೆ. ಅಭ್ಯರ್ಥಿಗಳು ತಮ್ಮ ಅರ್ಹತೆ ಮತ್ತು ಅನುಭವದ ಆಧಾರದ ಮೇಲೆ ಸಂಬಂಧಿತ ಹುದ್ದೆಗೆ ಅರ್ಜಿ ಸಲ್ಲಿಸಬಹುದು.

ಶೈಕ್ಷಣಿಕ ಅರ್ಹತೆ: ಬಿ.ಇ. ಅಥವಾ ಬಿ.ಟೆಕ್ ಪದವಿ ಪಡೆದ ಅಭ್ಯರ್ಥಿಗಳು ಮಾತ್ರ ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅಭ್ಯರ್ಥಿಗಳು ತಮ್ಮ ಶೈಕ್ಷಣಿಕ ಫಲಿತಾಂಶಗಳಲ್ಲಿ ಕನಿಷ್ಠ ಶೇಕಡಾ 60 ಅಂಕಗಳನ್ನು ಹೊಂದಿರಬೇಕು.

ವಯೋಮಿತಿ: ವಯಸ್ಸಿನ ಮಿತಿ ಹುದ್ದೆಗೆ ಅನುಗುಣವಾಗಿ ಬದಲಾಗುತ್ತವೆ. ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ವಯಸ್ಸಿನ ಮಿತಿ 35 ರಿಂದ 48 ವರ್ಷಗಳ ನಡುವೆ ಇರುತ್ತದೆ. ಮೀಸಲು ವರ್ಗದ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುತ್ತದೆ. ಅಭ್ಯರ್ಥಿಗಳು ಆರ್‌ವಿಎನ್‌ಎಲ್‌ನ ಅಧಿಕೃತ ವೆಬ್‌ಸೈಟ್ https://rvnl.org/job ನಲ್ಲಿ ಸಂಪೂರ್ಣ ಅರ್ಹತೆ ಮತ್ತು ಅರ್ಜಿ ಮಾಹಿತಿಯನ್ನು ಪರಿಶೀಲಿಸಿ.

ಆಯ್ಕೆ ಪ್ರಕ್ರಿಯೆ: ನೇಮಕಾತಿಗೆ ಅಭ್ಯರ್ಥಿಗಳನ್ನು ಕೇವಲ ಸಂದರ್ಶನದ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ. ಯಾವುದೇ ಲಿಖಿತ ಪರೀಕ್ಷೆಯನ್ನು ನಡೆಸಲಾಗುವುದಿಲ್ಲ, ಆದ್ದರಿಂದ ಸಂದರ್ಶನದಲ್ಲಿನ ಕಾರ್ಯಕ್ಷಮತೆಯು ಅಂತಿಮ ಆಯ್ಕೆಯನ್ನು ನಿರ್ಧರಿಸುತ್ತದೆ. ಆಯ್ಕೆಯಾದ ಅಭ್ಯರ್ಥಿಗಳನ್ನು ಅಧಿಸೂಚನೆಯಲ್ಲಿ ಪಟ್ಟಿ ಮಾಡಲಾದ ಹುದ್ದೆಗಳಿಗೆ ನೇಮಿಸಲಾಗುತ್ತದೆ.

ಅರ್ಜಿ ಶುಲ್ಕ: ರೈಲ್ ವಿಕಾಸ್ ನಿಗಮ್ ಲಿಮಿಟೆಡ್ ವರ್ಗವಾರು ಅರ್ಜಿ ಶುಲ್ಕವನ್ನು ನಿಗದಿಪಡಿಸಿದೆ. ಸಾಮಾನ್ಯ ಮತ್ತು ಇತರ ಹಿಂದುಳಿದ ವರ್ಗ (ಒಬಿಸಿ) ಅಭ್ಯರ್ಥಿಗಳು 400 ರು. ಅರ್ಜಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಪರಿಶಿಷ್ಟ ಜಾತಿ (ಎಸ್.ಸಿ), ಪರಿಶಿಷ್ಟ ಪಂಗಡ (ಎಸ್.ಟಿ) ಮತ್ತು ಆರ್ಥಿಕವಾಗಿ ದುರ್ಬಲ ವರ್ಗದ (ಇಡಬ್ಲ್ಯೂಎಸ್) ಅಭ್ಯರ್ಥಿಗಳಿಗೆ ಯಾವುದೇ ಶುಲ್ಕವಿಲ್ಲ.

> **ಗಮನಕ್ಕೆ:** ಈ ಅಂಕಣದಲ್ಲಿ ಪ್ರಸ್ತುತಪಡಿಸಿದ ಮಾಹಿತಿಯ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಲೇಖಕರು ಎಲ್ಲ ಪ್ರಯತ್ನಗಳನ್ನು ಮಾಡಿದ್ದಾರೆ. ಆದಾಗ್ಯೂ, ವಿಷಯದ ಸಂಪೂರ್ಣತೆ, ನಿಖರತೆ ಅಥವಾ ಸಮಯೋಚಿತತೆ ಯನ್ನು ಖಾತರಿಪಡಿಸು ವುದಿಲ್ಲ. ಹಾಗಾಗಿ ಅರ್ಜಿ ಸಲ್ಲಿಸುವ ಮೊದಲು ಆಯಾಯ ವೈಬ್‌ಸೈಟ್ ನೋಡಿ ಖಚಿತಪಡಿಸು ವುದು ಉತ್ತಮ. ಯಾವುದೇ ಲೋಪದೋಷಗಳಿಗೆ ಪತ್ರಿಕೆ ಇಲ್ಲವೇ ಲೇಖಕರು ಜವಾಬ್ದಾರರಲ್ಲ.

ಆರ್. ಕೆ. ಬಾಲಚಂದ್ರ
ಲೇಖಕರು, ಬ್ಯಾಂಕಿಂಗ್ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಬೆಂಗಳೂರು.

ಕಲ್ಯಾಣ ಕರ್ನಾಟಕಕ್ಕೆ ಹೆಮ್ಮೆ | ರಣಜಿ ಅವಕಾಶ ಕೈತಪ್ಪಿದರೂ ಸ್ಥಿರ ಪ್ರದರ್ಶನದ ಮೂಲಕ 4ನೇ ಬಾರಿಗೆ ಕರ್ನಾಟಕ ತಂಡಕ್ಕೆ ಶಶಿ ಆಯ್ಕೆ

ಸಿ.ಕೆ. ನಾಯ್ಡು ತಂಡದಲ್ಲಿ ಕಲಬುರಗಿ ಸ್ಪಿನ್ನರ್

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಕಲ್ಯಾಣ ಕರ್ನಾಟಕಕ್ಕೆ ಕ್ರೀಡಾ ಕೀರ್ತಿ ತಂದಿರುವ ನಗರದ ಯುವ ಬೌಲರ್ ಶಶಿಕುಮಾರ ಕಾಂಬ್ಳೆ ಅವರು ಪ್ರಸಕ್ತ ಸಾಲಿನ ಪ್ರತಿಷ್ಠಿತ ಸಿ.ಕೆ. ನಾಯ್ಡು ಟ್ರೋಫಿಯ ರಾಜ್ಯ ಕ್ರಿಕೆಟ್ ತಂಡದಲ್ಲಿ ಸ್ಥಾನ ಪಡೆಯುವ ಮೂಲಕ ಸತತ ನಾಲ್ಕನೇ ಬಾರಿಗೆ ರಾಜ್ಯವನ್ನು ಪ್ರತಿನಿಧಿಸಲು ಸಿದ್ಧರಾಗಿದ್ದಾರೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ಸೋಮವಾರ ಅನೀಶ್ವರ ಗೌತಮ ಅವರ ನಾಯಕತ್ವದಲ್ಲಿ 15 ಆಟಗಾರರ ಪಟ್ಟಿಯನ್ನು ಪ್ರಕಟಿಸಿದ್ದು, ಈ ಪಟ್ಟಿಯಲ್ಲಿ ಕಲಬುರಗಿಯ ಈ ಆಫ್ ಸ್ಪಿನ್ನರ್‌ಗೆ ಅವಕಾಶ ದೊರೆತಿದೆ. ಕಳೆದ ಬಾರಿ ರಣಜಿ ಟ್ರೋಫಿಯಲ್ಲಿ ಸ್ಥಾನ ಪಡೆದು ಹೆಮ್ಮೆ ತಂದಿದ್ದ ಶಶಿಕುಮಾರ್ ಅವರಿಗೆ ಈ ಬಾರಿ ರಣಜಿ ತಂಡದಲ್ಲಿ ಅವಕಾಶ ಸಿಗದಿರುವುದು ಕೊಂಚ ಬೇಸರ ಮೂಡಿಸಿದರೂ, ಸಿ.ಕೆ. ನಾಯ್ಡು ಟ್ರೋಫಿಯಲ್ಲಿ ಸ್ಥಾನ ಖಚಿತವಾಗಿರುವುದು ಸಮಾಧಾನಕರ ಸಂಗತಿಯಾಗಿದೆ.

ಶ್ರಮಿಕರ ಮಗನ ಸಾಧನೆ: ನಗರದ ಗುಲ್ಲಾಬಾವಡಿ ನಿವಾಸಿಯಾಗಿರುವ ಶಶಿಕುಮಾರ ಅವರ ತಂದೆ ಸುಭಾಷ ಕಾಂಬ್ಳೆ ಅವರು ಕೂಲಿ ಕಾರ್ಮಿಕರಾಗಿದ್ದಾರೆ. ಕಲಬುರಗಿ ಕ್ರಿಕೆಟ್ ಕ್ಲಬ್ (ಕೆಸಿಸಿ) ಮೂಲಕ ತಮ್ಮ ಕ್ರಿಕೆಟ್ ಪಯಣ ಆರಂಭಿಸಿದ ಶಶಿ, ತಮ್ಮ ಪರಿಣಾಮಕಾರಿ ರೈಟ್ ಆರ್ಮ್ ಆಫ್ ಸ್ಪಿನ್ ಮೂಲಕ ಗಮನ ಸೆಳೆದಿದ್ದಾರೆ.

ಸ್ಥಿರ ಪ್ರದರ್ಶನದ ಫಲ: ಶಶಿಕುಮಾರ್ ಅವರು ಕ್ಲಬ್ ಮತ್ತು ರಾಜ್ಯ ಮಟ್ಟದ ಟೂರ್ನಿಗಳಲ್ಲಿ ಸ್ಥಿರವಾದ ಪ್ರದರ್ಶನ ನೀಡುವ ಮೂಲಕ ಆಯ್ಕೆಗಾರರ ಗಮನ ಸೆಳೆದಿದ್ದಾರೆ. 2024-25ರ ಕೆಎಸ್‌ಸಿಎ ನಡೆಸಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಶೀಲ್ಡ್ ಗ್ರೂಪ್-1 (ಪ್ರಥಮ ಡಿವಿಷನ್) ಲೀಗ್ ಟೂರ್ನಿಯಲ್ಲಿ ಸ್ವಸ್ತಿಕ್ ಒನ್ ಟೀಮ್ ಪ್ರತಿನಿಧಿಸಿದ್ದ ಶಶಿ, ಏಳು ಪಂದ್ಯಗಳ 11 ಇನ್ನಿಂಗ್ಸ್‌ಗಳಲ್ಲಿ ಒಟ್ಟು 36 ವಿಕೆಟ್ ಕಬಳಿಸಿದ್ದಾರೆ.

ಸ್ವಸ್ತಿಕ್ ಯೂನಿಯನ್ ಕ್ರಿಕೆಟ್ ಕ್ಲಬ್-2 ವಿರುದ್ಧ 63ಕ್ಕೆ 6 ವಿಕೆಟ್ ಪಡೆದು ಮಿಂಚಿದ್ದರು. ಇದರ ಜೊತೆಗೆ, 2025-26ರ ಫಸ್ಟ್ ಡಿವಿಷನ್‌ನ ಮೂರು ಪಂದ್ಯಗಳಲ್ಲಿ 11 ವಿಕೆಟ್ ಮತ್ತು ಮಹಾರಾಜ ಟ್ರೋಫಿ ಸೀಸನ್ 4ರ 11 ಪಂದ್ಯಗಳಲ್ಲಿ 10 ವಿಕೆಟ್‌ಗಳನ್ನು ಪಡೆದಿದ್ದಾರೆ.

> ಶಶಿಕುಮಾರ ಕಲ್ಯಾಣ ಭಾಗದ ಶ್ರೇಷ್ಠ ಬೌಲರ್. ಕ್ಲಬ್ ಹಾಗೂ ಕರ್ನಾಟಕ ಪರ ಮ್ಯಾಚ್‌ಗಳಲ್ಲಿ ಬೆಸ್ಟ್ ಪ್ರದರ್ಶನ ನೀಡುತ್ತಿದ್ದಾನೆ. ಈ ಸಲದ ಸಿ.ಕೆ. ನಾಯ್ಡು ಟ್ರೋಫಿಗೆ ಆಯ್ಕೆಯಾಗಿದ್ದು, ಅತ್ಯುತ್ತಮ ಪ್ರದರ್ಶನ ನೀಡುವ ಭರವಸೆ ಇದೆ.
> -ವಿಜಯಕುಮಾರ ದೇಗಲಮಡಿ, ಕೋಚ್, ಕರ್ನಾಟಕ ಕ್ರಿಕೆಟ್ ಕ್ಲಬ್

> ನಿರಂತರ ಅಭ್ಯಾಸ ಹಾಗೂ ಉತ್ತಮ ತರಬೇತಿಯಿಂದ ಮತ್ತೊಮ್ಮೆ ರಾಜ್ಯ ತಂಡದಲ್ಲಿ ಸ್ಥಾನ ಸಿಕ್ಕಿದೆ. ಕೋಚ್ ವಿಜಯಕುಮಾರ ಮಾರ್ಗದರ್ಶನ ಹಾಗೂ ಕುಟುಂಬದ ಪ್ರೋತ್ಸಾಹ ಮರೆಯುವಂತಿಲ್ಲ. ಉತ್ತಮ ಪ್ರದರ್ಶನ ನೀಡುವುದರ ಜತೆಗೆ ಟೀಮ್ ಇಂಡಿಯಾ ಸೇರಬೇಕು ಎಂಬುದೇ ನನ್ನ ಗುರಿ.
> -ಶಶಿಕುಮಾರ ಕಾಂಬ್ಳೆ, ಬೌಲರ್

> **ಒಮಾನ್‌ನಲ್ಲಿಯೂ ಮಿಂಚು**
> ಪ್ರಸಕ್ತ ವರ್ಷ ಒಮನ್‌ನಲ್ಲಿ ನಡೆದ ಮಹತ್ವದ ಟೂರ್ನಿಯಲ್ಲಿ ಮಯಾಂಕ್ ಅಗರ್ವಾಲ್ ನಾಯಕತ್ವದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದ ಶಶಿಕುಮಾರ, ಮೂರು ಪಂದ್ಯಗಳಿಂದ 5 ವಿಕೆಟ್ ಪಡೆದಿದ್ದರು. ಅದರಲ್ಲಿ 37 ರನ್‌ಗೆ 4 ವಿಕೆಟ್ ಪಡೆದ ಪ್ರದರ್ಶನ ಗಮನಾರ್ಹವಾಗಿದೆ. ಒಮಾನ್ ದೇಶದಲ್ಲಿ ಪಂದ್ಯವಾಡಿದ ಕಲಬುರಗಿಯ ಮೊದಲ ಆಟಗಾರ ಎಂಬ ಹೆಗ್ಗಳಿಕೆ ಶಶಿಕುಮಾರ ಅವರದ್ದಾಗಿದೆ. ಅಕ್ಟೋಬರ್ 16ರಂದು ಆರಂಭವಾಗಲಿರುವ ಸಿ.ಕೆ. ನಾಯ್ಡು ಟ್ರೋಫಿಯಲ್ಲಿ ಕರ್ನಾಟಕ ತಂಡ ತನ್ನ ಮೊದಲ ಎದುರಾಳಿಯಾಗಿ ರೈಲ್ವೆಸ್ ಟೀಮ್ ಅನ್ನು ಎದುರಿಸಲಿದೆ. ನಂತರ ಅಕ್ಟೋಬರ್ 26ರಂದು ಉತ್ತರಪ್ರದೇಶ, ನವೆಂಬರ್ 2ರಂದು ಛತ್ತೀಸ್‌ಗಢ ಮತ್ತು ಜನವರಿ 23ರಂದು ಚಂಡೀಗಢ ತಂಡದೊಂದಿಗೆ ಸೆಣಸಲಿದೆ.

ಜಿಲ್ಲೆಯಲ್ಲಿ ಮಾಹಿತಿ ಹಕ್ಕು ಕಾಯ್ದೆ ಅರ್ಜಿಗಳನ್ನು ಆನ್‌ಲೈನ್ ಮ್ಯಾಪಿಂಗ್ ಮಾಡಲು ರಾಷ್ಟ್ರೀಯ ಮಾಹಿತಿ ಕೇಂದ್ರಕ್ಕೆ ಸೂಚನೆ

ತುಮಕೂರು ಜಿಲ್ಲೆ: 406 ಅಧಿಕಾರಿಗಳಿಂದ ಮಾಹಿತಿ ಹಕ್ಕು ಕಾಯ್ದೆ ಉಲ್ಲಂಘನೆ

ರಂಗನಾಥ ಕೆ. ಹೊನ್ನಮರಡಿ, ತುಮಕೂರು

ತುಮಕೂರು ಜಿಲ್ಲೆಯಲ್ಲಿ 406 ಅಧಿಕಾರಿಗಳ ವಿರುದ್ಧ ಮಾಹಿತಿ ಹಕ್ಕು ಕಾಯ್ದೆ ಉಲ್ಲಂಘನೆಯಡಿ ದಂಡ ಹಾಗೂ ಶಿಸ್ತುಕ್ರಮ ಕೈಗೊಳ್ಳಲಾಗಿದೆ. ಅಧಿಕಾರಿಗಳು ಮಾಹಿತಿ ಹಕ್ಕು ಕಾಯ್ದೆಯ ನಿಯಮಗಳನ್ನು ಅರಿತು ಸಕಾಲದಲ್ಲಿ ಅರ್ಜಿದಾರರಿಗೆ ಮಾಹಿತಿ ನೀಡಬೇಕು. ಮಾಹಿತಿ ಹಕ್ಕು ಕಾಯ್ದೆಯಡಿ ಸಾರ್ವಜನಿಕರಿಂದ ಸ್ವೀಕೃತ ಅರ್ಜಿಗಳನ್ನು 30 ದಿನದೊಳಗಾಗಿ ವಿಲೇವಾರಿ ಮಾಡಬೇಕು. ಸ್ವೀಕೃತ ಅರ್ಜಿಗಳ ವಿಲೇವಾರಿಯಲ್ಲಿ ತುಮಕೂರು ಜಿಲ್ಲೆಯು ರಾಜ್ಯದಲ್ಲಿ 9ನೇ ಸ್ಥಾನದಲ್ಲಿದೆ.

ವಿಳಂಬಕ್ಕೆ ದಂಡ: ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿದಾರರಿಗೆ ಮಾಹಿತಿ ನೀಡಲು ನಿರ್ಲಕ್ಷಿಸುವ ಅಧಿಕಾರಿಗಳ ವಿರುದ್ಧ ಯಾವುದೇ ಮುಲಾಜಿಲ್ಲದೆ ಇಲಾಖಾ ಶಿಸ್ತುಕ್ರಮಕ್ಕೆ ಶಿಫಾರಸು ಮಾಡಲಾಗುತ್ತದೆ. ಅಧಿಕಾರಿಗಳ ವಿಳಂಬ ದೋರಣೆಯಿಂದ ನಷ್ಟ ಉಂಟಾದಲ್ಲಿ ಪರಿಹಾರವಾಗಿ ಅರ್ಜಿದಾರರಿಗೆ 1 ಲಕ್ಷ ರು.ಗಳ ವರೆಗೆ ಪರಿಹಾರ ನೀಡುವಂತೆ ಸೂಚಿಸುವ ಅಧಿಕಾರವನ್ನು ಮಾಹಿತಿ ಆಯೋಗ ಹೊಂದಿದ್ದು, ಈವರೆಗೂ ಒಟ್ಟು 406 ಅಧಿಕಾರಿಗಳ ವಿರುದ್ಧ ಮಾಹಿತಿ ಹಕ್ಕು ಕಾಯ್ದೆ ಉಲ್ಲಂಘನೆಯಡಿ ದಂಡ ಹಾಗೂ ಶಿಸ್ತು ಕ್ರಮ ಕೈಗೊಳ್ಳಲಾಗಿದೆ.

ಆನ್‌ಲೈನ್ ಮ್ಯಾಪಿಂಗ್: ಜಿಲ್ಲೆಯಲ್ಲಿ ಮಾಹಿತಿ ಹಕ್ಕು ಕಾಯ್ದೆ ಅರ್ಜಿಗಳನ್ನು ಆನ್‌ಲೈನ್ ಮ್ಯಾಪಿಂಗ್ ಮಾಡಲು ರಾಷ್ಟ್ರೀಯ ಮಾಹಿತಿ ಕೇಂದ್ರಕ್ಕೆ (ಎನ್‌ಐಸಿ) ಸೂಚಿಸಿದ್ದು, ಸ್ವೀಕೃತ ಮಾಹಿತಿ ಕಾಯ್ದೆ ಅರ್ಜಿಗಳನ್ನು ಆನ್‌ಲೈನ್ ಮ್ಯಾಪಿಂಗ್ ಮಾಡಲು ಎಲ್ಲಾ ಇಲಾಖೆಗಳೂ ಎನ್‌ಐಸಿಗೆ ಮಾಹಿತಿ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಜನಸಾಮಾನ್ಯರಿಗೆ ಸಮರ್ಪಕ, ಪಾರದರ್ಶಕ ಮತ್ತು ಸಮಯೋಚಿತ ಮಾಹಿತಿ ನೀಡಲು ಮಾಹಿತಿ ಹಕ್ಕು ಕಾಯ್ದೆಯನ್ನು ಜಾರಿಗೆ ತರಲಾಗಿದೆ.

ರಾಜ್ಯದಲ್ಲಿ ಈವರೆಗೂ ಒಟ್ಟು ಆಯೋಗದಲ್ಲಿ 41034 ಮೇಲ್ಮನವಿ ಅರ್ಜಿಗಳು ಬಾಕಿಯಿದ್ದು, ಜಿಲ್ಲೆಯಲ್ಲಿ 1323 ಮೇಲ್ಮನವಿ ಅರ್ಜಿಗಳು ಬಾಕಿಯಿವೆ. ಅಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆಯ ಬಗ್ಗೆ ಅರಿವಿನ ಕೊರತೆಯಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಮೇಲ್ಮನವಿ ಅರ್ಜಿಗಳು ಆಯೋಗಕ್ಕೆ ಸ್ವೀಕೃತವಾಗುತ್ತಿವೆ. ಈ ಹಿನ್ನೆಲೆಯಲ್ಲಿ ಆಯೋಗವು ರಾಜ್ಯದಾದ್ಯಂತ ಜಾಗೃತಿ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಿದೆ.

ಕ್ರಿಮಿನಲ್ ಪ್ರಕರಣ ದಾಖಲು: ಪ್ರಜಾಪ್ರಭುತ್ವವನ್ನು ಬಲಪಡಿಸಲು ಈ ಕಾಯ್ದೆಯು ಮಹತ್ವದ ಸಾಧನವಾಗಿದ್ದು, ಅಧಿಕಾರಿಗಳು ಜನರ ಪ್ರಶ್ನೆಗಳಿಗೆ ಸ್ಪಷ್ಟನೆ ನೀಡಬೇಕು. ಅರ್ಜಿದಾರರಿಗೆ ಸುಳ್ಳು ಮಾಹಿತಿಯನ್ನು ನೀಡಿದರೆ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವ ಸಾಧ್ಯತೆಯಿರುವುದರಿಂದ ನಿಖರವಾದ ಮಾಹಿತಿಯನ್ನು ನೀಡಬೇಕು.

ಪ್ರತಿಯೊಬ್ಬ ಸರಕಾರಿ ಅಧಿಕಾರಿಯೂ ಮಾಹಿತಿ ಹಕ್ಕು ಕಾಯ್ದೆಯ ಕುರಿತು ಸಂಪೂರ್ಣ ತಿಳುವಳಿಕೆ ಹೊಂದಿರಬೇಕು. ಕಚೇರಿಗಳಲ್ಲಿ ದಾಖಲೆಗಳ ನಿರ್ವಹಣೆಯನ್ನು ಸುರಕ್ಷಿತವಾಗಿಟ್ಟುಕೊಂಡು, ಅರ್ಜಿದಾರರು ಮಾಹಿತಿಗಾಗಿ ಸಲ್ಲಿಸಿದ ಅರ್ಜಿಗೆ 30 ದಿನಗಳೊಳಗೆ ಮಾಹಿತಿಯನ್ನು ಒದಗಿಸುವುದು ಕಡ್ಡಾಯವಾಗಿದೆ.

ಅಧಿಕಾರಿಗಳು ಮಾಹಿತಿ ನೀಡಲು ಅರ್ಜಿದಾರರನ್ನು ಸತಾಯಿಸಿದಲ್ಲಿ 1 ಲಕ್ಷ ರು.. ಗಳವರೆಗೆ ಪರಿಹಾರ ಪಾವತಿಗೆ ಗುರಿಯಾಗಬೇಕಾಗುತ್ತದೆ. ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಕೆಯಾಗುವ ಅರ್ಜಿಗಳನ್ನು ಅಧಿಕಾರಿಗಳು ಸರಿಯಾಗಿ ಓದಿ ಅರ್ಥೈಸಿಕೊಳ್ಳುವುದನ್ನು ಕಲಿಯಬೇಕು. ಮೇಲ್ಮನವಿ ಅರ್ಜಿಗಳು ವಿಲೇವಾರಿಯಾಗದಿದ್ದಾಗ ಅರ್ಜಿದಾರರು ಆಯೋಗಕ್ಕೆ ದ್ವಿತೀಯ ಮೇಲ್ಮನವಿ ಸಲ್ಲಿಸಲಿದ್ದಾರೆ. ಅರ್ಜಿದಾರರ ಬಗ್ಗೆ ಕೆಟ್ಟ ಭಾವನೆ ಹೊಂದಬಾರದು ಎಂದು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ರಾಜ್ಯ ಮಾಹಿತಿ ಆಯೋಗದ ಆಯುಕ್ತ ಡಾ. ಹರೀಶ್ ಕುಮಾರ್ ತಿಳಿಸಿದರು.

> ಮಾಹಿತಿ ಹಕ್ಕು ಕಾಯ್ದೆ ದುರುಪಯೋಗವಾಗದಂತೆ ಎಚ್ಚರಿಕೆವಹಿಸಬೇಕೆಂದು ತಿಳಿಸಿ, ಮಾಹಿತಿ ನೀಡುವುದು ಅಧಿಕಾರಿಗಳ ಕರ್ತವ್ಯ, ಮಾಹಿತಿ ಹಕ್ಕು ಕಾಯ್ದೆಯ ಮೂಲಕ ಪ್ರತಿಯೊಬ್ಬ ನಾಗರಿಕನಿಗೂ ಸರ್ಕಾರದ ಇಲಾಖೆ, ಕಚೇರಿ, ಸಾರ್ವಜನಿಕ ಸಂಸ್ಥೆಗಳಲ್ಲಿ ನಡೆಯುತ್ತಿರುವ ಕಾರ್ಯವೈಖರಿಯ ಬಗ್ಗೆ ಮಾಹಿತಿ ಪಡೆಯುವ ಹಕ್ಕು ದೊರೆಯುತ್ತದೆ. ಮಾಹಿತಿ ಹಕ್ಕು ಕಾಯ್ದೆಗೆ ಸಂಬಂಧಿಸಿದಂತೆ ತುಮಕೂರು ಜಿಲ್ಲೆಯ 1323 ಮೇಲ್ಮನವಿ ಅರ್ಜಿಗಳು ಆಯೋಗದಲ್ಲಿ ಬಾಕಿಯಿವೆ.
> -ಬದ್ರುದ್ದೀನ್ ಕೆ. ರಾಜ್ಯ ಮಾಹಿತಿ ಆಯೋಗದ ಆಯುಕ್ತ

ಮಾಗಡಿಪಾಳ್ಯದ ಮೃತರ ಕುಟುಂಬಕ್ಕೆ ಪರಿಹಾರ ಘೋಷಿಸಿದ ಕುಣಿಗಲ್ ಶಾಸಕ ಡಾ. ರಂಗನಾಥ್

ಮಾರ್ಕೋನಹಳ್ಳಿ ದುರಂತ: ಮೃತರ ಕುಟುಂಬಕ್ಕೆ ಪರಿಹಾರ

ಕುಣಿಗಲ್ : ಮಾರ್ಕೋನಹಳ್ಳಿ ಜಲಾಶಯದ ನೀರಿನಲ್ಲಿ ಮುಳುಗಿ ಒಂದೇ ಕುಟುಂಬದ ಐದು ಮಂದಿ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಬುಧವಾರ ಶಾಸಕ ಡಾ. ರಂಗನಾಥ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಮಾಗಡಿಪಾಳ್ಯದ ಮೃತರ ಕುಟಂಬಕ್ಕೆ ಭೇಟಿ ನೀಡಿ ವೈಯಕ್ತಿಕವಾಗಿ ಮೂರು ಲಕ್ಷ ರು. ಪರಿಹಾರ ಘೋಷಿಸಿದರು.

ಮಂಗಳವಾರ ಸಂಜೆ ಮಾರ್ಕೋನಹಳ್ಳೀ ಜಲಾಶಯದ ನೀರಿನಲ್ಲಿ ಆಟವಾಡುತ್ತಿದ್ದ ತುಮಕೂರು ಬಿ.ಜಿ. ಪಾಳ್ಯದ ಐವರು, ತಾಲೂಕಿನ ಮಾಗಡಿಪಾಳ್ಯದ ಒಬ್ಬರು ಮಹಿಳೆ ನೀರಿನ ಸೆಳೆತಕ್ಕೆ ಸಿಲುಕಿ ಕೊಚ್ಚಿ ಹೋಗಿದ್ದರು. ಆ ಪೈಕಿ ನಾಲ್ವರ ಮೃತದೇಹ ಪತ್ತೆಯಾಗಿದ್ದು ಇನ್ನಿಬ್ಬರ ಮೃತದೇಹ ಪತ್ತೆಗೆ ಪೊಲೀಸರು, ಅಗ್ನಿಶಾಮಕ ಇಲಾಖೆ ಸಿಬ್ಬಂದಿ ಹುಡುಕಾಟ ನಡೆಸುತ್ತಿದ್ದು ಶಾಸಕರಿಗೆ ಪೊಲೀಸ್ ಅಧಿಕಾರಿಗಳು, ಹೇಮಾವತಿ ನಾಲಾವಲಯದ ಅಧಿಕಾರಿಗಳು ಘಟನೆ ಬಗ್ಗೆ ಮಾಹಿತಿ ನೀಡಿದರು.

ಶಾಸಕರು ಈ ಕುರಿತಾಗಿ ಮಾತನಾಡಿ, 'ಸದರಿ ಪ್ರದೇಶಕ್ಕೆ ಇಳಿಯದಂತೆ ಎಚ್ಚರಿಕೆ ಫಲಕ ಅಳವಡಿಸಲಾಗಿದೆ, ಆದರೂ ಅದನ್ನು ಕಡೆಗಣಿಸಿ ಏಕೆ ಇಳಿದರೂ ಗೊತ್ತಿಲ್ಲ. ಮಾರ್ಕೋನಹಳ್ಳಿ ಜಲಾಶಯಕ್ಕೆ ರಾಜ್ಯದ ವಿವಿಧೆಡೆಯಿಂದ ಪ್ರವಾಸಿಗಳು ಭೇಟಿ ನೀಡುತ್ತಿದ್ದಾರೆ. ಕೆಲ ಆಯ್ದ ಪ್ರದೇಶದಲ್ಲಿ ಸುರಕ್ಷಿತ ಕ್ರಮಕ್ಕೈಗೊಳ್ಳಲು ಬೇಲಿ ಅಳವಡಿಸಲಾಗಿದೆ. ಇನ್ನು ಕೆಲವೆಡೆ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಇಡೀ ಹೊಳೆ ಪ್ರದೇಶಕ್ಕೆ ಪೂರ್ತಿ ಬೇಲಿ ಅಳವಡಿಸುವುದು ಅಸಾಧ್ಯವಾದ ಕೆಲಸ. ನೀರಿಗೆ ಇಳಿಯುವ ಮುನ್ನ ಹಿರಿಯರು ಎಚ್ಚರವಹಿಸಬೇಕಿದೆ. ಇಡೀ ಘಟನೆಯು ನಿಜಕ್ಕೂ ತಮಗೆ ಅಘಾತ ತಂದಿದೆ. ಮುಂದಿನ ದಿನಗಳಲ್ಲಿ ಇಂತಹ ಘಟನೆ ನಡೆಯದಂತೆ ಎಲ್ಲಾ ರೀತಿಯ ಅಗತ್ಯ ಕ್ರಮಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು' ಎಂದರು.

'ಸರಕಾರದ ವತಿಯಿಂದ ಮೃತರ ಕುಟುಂಬಕ್ಕೆ ಸಾಧ್ಯ ಇರುವ ನೆರವು ನೀಡಲು ಶ್ರಮಿಸಲಾಗುವುದು. ತಾನು ವೈಯುಕ್ತಿಕವಾಗಿ ತಲಾ ಐವತ್ತು ಸಾವಿರದಂತೆ ಮೂರು ಲಕ್ಷ ರೂ. ಪರಿಹಾರ ನೀಡುತ್ತೇನೆ' ಎಂದರು. ಎರಡು ಮೃತದೇಹ ಹುಡುಕಬೇಕಿದ್ದು, ಒಂದು ಮಗುವಿನ ಮೃತದೇಹ ಸಿಕ್ಕಿದೆ. ' ಮಾಗಡಿಪಾಳ್ಯದ ಮೃತರ ಸಂಬಂಧಿಕ ಮೋಹಿಬ್ ಮನೆಗೆ ಭೇಟಿ ನೀಡಿ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು. ಹೇಮಾವತಿ ನಾಲಾ ವಲಯದ ಎಇಇ ರುದ್ರೇಶ್, ಪಿಎಸೈ ಶಮಂತಗೌಡ, ಯೂಸೂಪ್, ಸದಾಖತ್, ಚಂದ್ರು ಇತರರು ಶಾಸಕರ ಜೊತೆಗಿದ್ದರು.

> **ಇಬ್ಬರ ಮೃತದೇಹ ಪತ್ತೆ**
> ತಾಲೂಕಿನ ಮಾರ್ಕೋನಹಳ್ಳಿ ಜಲಾಶಯದಲ್ಲಿ ಕೊಚ್ಚಿಕೊಂಡು ಹೋದವರ ಪೈಕಿ ಬುಧವಾರ ಬೆಳಗ್ಗೆ ಬಾಲಕಿ ನಿಪ್ರಾ (4) ಹಾಗೂ ಶಬನಾ(44) ಮೃತದೇಹ ಪತ್ತೆಯಾಗಿದೆ. ಮಂಗಳವಾರ ಮಧ್ಯಾಹ್ನ 6 ಜನ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದರು. ಸಾಧಿಯಾ ಮತ್ತು ಹರ್ಬಿನ್ ಮೃತದೇಹ ಮಂಗಳವಾರವೇ ಸಿಕ್ಕಿತ್ತು. ನೀರಿನಲ್ಲಿ ನಾಪತ್ತೆಯಾಗಿರುವ ತಬುಸಮ್ ಮತ್ತು ಮೋಹಿಬ್‌ಗಾಗಿ ಹುಡುಕಾಟ ಮುಂದುವರಿದಿದೆ. ಅಗ್ನಿ ಶಾಮಕದಳದ ಸಿಬ್ಬಂದಿ, ಪೊಲೀಸರು ಶೋಧ ಕಾರ್ಯದಲ್ಲಿ ತೊಡಗಿದ್ದಾರೆ.

ಕೊಡಗು: ದೇಗುಲ ಭೂಮಿ ಒತ್ತುವರಿ ದೃಢ

ಮಡಿಕೇರಿ: ಭಾಗಮಂಡಲ ಮತ್ತು ತಲಕಾವೇರಿಯಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಬರುವ ದೇವಾಲಯಗಳ ಭೂಮಿಯನ್ನು ಕೇರಳದ ಉದ್ಯಮಿ ಸೇರಿದಂತೆ 40ಕ್ಕೂ ಹೆಚ್ಚು ಜನರು ಒತ್ತುವರಿ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಈ ಸಂಬಂಧ ಭೂ ದಾಖಲೆ ಇಲಾಖೆಯು, ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಿದ್ದು, ಮುಂದಿನ ಕ್ರಮಕ್ಕಾಗಿ ಕಾಯುತ್ತಿದೆ.

ಭಾಗಮಂಡಲ ಮತ್ತು ತಲಕಾವೇರಿ ದೇವಾಲಯಗಳ ಸುಮಾರು 156 ಎಕರೆಗೂ ಹೆಚ್ಚು ಭೂಮಿಯನ್ನು ಒತ್ತುವರಿ ಮಾಡಲಾಗಿದೆ ಎಂದು ಕೊಡಗು ಏಕೀಕರಣರಂಗ ಆರೋಪಿಸಿದ್ದು, ಈ ಸಂಬಂಧ ಲೋಕಾಯುಕ್ತಕ್ಕೆ ನೀಡಿದ ದೂರಿನ ಮೇರೆಗೆ ಸದರಿ ಅತಿಕ್ರಮಣ ಭೂಮಿಯ ಸಮೀಕ್ಷೆ ನಡೆಸಲಾಗಿದೆ.

ದೇವಾಲಯಗಳಿಗೆ ಸಂಬಂಧಿಸಿದ ಭೂಮಿ ಒತ್ತುವರಿ ಮಾಡಲಾಗಿದೆ ಎಂಬ ಆರೋಪ 2012ರಲ್ಲಿಯೇ ಕೇಳಿಬಂದಿದ್ದು, ಆಗ ಈ ಪ್ರಕರಣದ ತನಿಖೆಗಾಗಿ ಆರಂಭದಲ್ಲಿ ಕಾರ್ಯಪಡೆ ರಚಿಸಲಾಯಿತು. ಅತಿಕ್ರಮಣವನ್ನು ಗುರುತಿಸಲು 2013ರಲ್ಲಿ ಭೂ ಸಮೀಕ್ಷೆಯನು ನಡೆಸಲಾಯಿತು ಮತ್ತು ಒಟ್ಟು 71 ಅತಿಕ್ರಮಣಗಳನ್ನು ಗುರುತಿಸಲಾಯಿತು.

ಆದರೆ ಏಕೀಕರಣರಂಗದ ಸದಸ್ಯರು ಈ ಪ್ರಕರಣದಲ್ಲಿ ಪ್ರಭಾವಿ ವ್ಯಕ್ತಿಗಳು ಭಾಗಿಯಾಗಿದ್ದಾರೆ. ಹೀಗಾಗಿಯೇ ಸಮೀಕ್ಷಾ ವರದಿ ನಾಪತ್ತೆಯಾಗಿದೆ. ಕೆಲವು ಆರ್‌ಟಿಸಿಗಳಲ್ಲಿ ಭಗುಂಡೇಶ್ವರ ದೇವಾಲಯದ ಹೆಸರನ್ನು ಖಾಸಗಿ ವ್ಯಕ್ತಿಗಳ ಹೆಸರಿನೊಂದಿಗೆ ಸಂಯೋಜಿಸಲಾಗಿದೆ ಎಂದು ಆರೋಪಿಸಿದ್ದರು. ನಂತರ ಕೊಡಗು ಏಕೀಕರಣ ರಂಗ ಸದಸ್ಯರು ಈ ಸಂಬಂಧ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು.

ಆರಾಮ
ವಿಶ್ವವಾಣಿ
@vishwavaninews
09-10-2025
ಗುರುವಾರ

ಕಾವೇರಮ್ಮನ ದರ್ಶನಕ್ಕೆ ತಲಕಾವೇರಿ ಸಜ್ಜು

• ಡಾ. ಗುರುರಾಜ ಪೋಶೆಟ್ಟಿಹಳ್ಳಿ

ಕಾವೇರಿ ಉಗಮ ಸ್ಥಾನ ತಲಕಾವೇರಿಯಲ್ಲೀಗ ತೀರ್ಥೋದ್ಭವದ ಸಡಗರ (ಅ 17). ಕುಂಡಿಕೆಯಿಂದ ಮೈದೋರುವ ತೀರ್ಥರೂಪಿಣಿ ಮಹಾತಾಯಿ ಕಾವೇರಮ್ಮನನ್ನು ಕಂಡು ಜನರಿಗೆ ಭಕ್ತಿಯ ಸಿಂಚನ. ಕೊಡಗಿನ ಜನತೆ ತುಲಾ ಸಂಕ್ರಮಣ ದಂದು ಬ್ರಹ್ಮಕುಂಡಿಕೆಯಲ್ಲಿ ತೀರ್ಥರೂಪಿಣಿಯಾಗಿ ಆವಿರ್ಭವಿಸಿ ಭಕ್ತರಿಗೆ ದರ್ಶನ ನೀಡುವ ಆ ಭವ್ಯ ಕ್ಷಣಗಳನ್ನು ಕಣ್ತುಂಬಿಕೊಳ್ಳಲು ತುದಿಗಾಲಿನಲ್ಲಿ ನಿಂತಿರುತ್ತಾರೆ. ತಲಕಾವೇರಿಯ ಪ್ರಕೃತಿಯ ಸೊಬಗು ನಿಜಕ್ಕೂ ವರ್ಣನಾತೀತ. ಮಳೆಗಾಲವಾದರಂತೂ ದೃಷ್ಟಿ ಹಾಯಿಸಿದಲ್ಲೆಲ್ಲಾ ಹಸಿರು ಕಾನನ... ಬೆಟ್ಟಗುಡ್ಡಗಳಿಂದ ಆವೃತ್ತಗೊಂಡು ಸದಾ ಮಂಜಿನ ಮುಸುಕಿನೊಂದಿಗೆ ಆಸ್ತಿಕ-ನಾಸ್ತಿಕರೆಲ್ಲರನ್ನೂ ತನ್ನತ್ತ ಕೈಬೀಸಿ ಕರೆಯುವ ಈ ತಾಣದಲ್ಲಿ ಕಾವೇರಿ ತೀರ್ಥರೂಪಿಣಿಯಾಗಿ ಹರಿಯುವ ಮೂಲಕ ಭಕ್ತರನ್ನು ಪುನೀತಗೊಳಿಸುತ್ತಾಳೆ. ಮಡಿಕೇರಿಯಿಂದ 42 ಕಿ.ಮೀ ದೂರದಲ್ಲಿರುವ ತಲಕಾವೇರಿ ಬ್ರಹ್ಮಗಿರಿ ಪರ್ವತ ಶ್ರೇಣಿಯಲ್ಲಿದ್ದು ಸಮುದ್ರ ಮಟ್ಟದಿಂದ ಸುಮಾರು ಐದು ಸಾವಿರ ಅಡಿ ಎತ್ತರದಲ್ಲಿದೆ. ಮನಮೋಹಕ ನಿಸರ್ಗದ ಸ್ವರ್ಗ ಸಿರಿಯನ್ನು ಹೊಂದಿರುವ ತಲಕಾವೇರಿ ಪುಣ್ಯ ಕ್ಷೇತ್ರವಾಗಿಯೂ, ಕೊಡಗಿನ ಪ್ರಮುಖ ಪ್ರವಾಸಿ ತಾಣವಾಗಿಯೂ ಗಮನ ಸೆಳೆದಿದೆ.

ಅಚ್ಚರಿಯ ತಾಣ

ಸಾಮಾನ್ಯವಾಗಿ ತಲಕಾವೇರಿಗೆ ಭೇಟಿ ನೀಡುವ ಪ್ರವಾಸಿಗರು ಇಲ್ಲಿನ ಪುಟ್ಟಕೊಳದಂತಿರುವ ಕಾವೇರಿ ಕುಂಡಿಕೆಯನ್ನು ನೋಡಿ ಅಚ್ಚರಿಪಡುತ್ತಾರೆ. ಏಕೆಂದರೆ ಆ ಪುಟ್ಟಕೊಳದಲ್ಲಿ ಉಗಮವಾಗುವ ಕಾವೇರಿ ಬಳಿಕ ಗುಪ್ತಗಾಮಿನಿಯಾಗಿ ಹರಿದು ನಂತರ ಅಲ್ಲಿಂದ ಭಾಗಮಂಡಲ ತಲುಪುತ್ತಿದ್ದಂತೆಯೇ ಬೃಹತ್ ನದಿಯಾಗಿ ಕನ್ನಿಕೆ ಮತ್ತು ಸುಜ್ಯೋತಿ ನದಿಗಳೊಂದಿಗೆ ಸಂಗಮವಾಗಿ ಮುಂದೆ ಕೊಡಗಿನ ಸಣ್ಣಪುಟ್ಟ ನದಿಗಳನ್ನು ಕೂಡಿಕೊಂಡು ತನ್ನೊಡಲಲ್ಲಿ ಲೀನಗೊಳಿಸುತ್ತಾ ಲೋಕಪಾವನೆಯಾಗಿ ಸಾಗುತ್ತಾಳೆ.

ಕಾವೇರಿಯ ಯಾನ

ತಲಕಾವೇರಿಯಲ್ಲಿ ಉಗಮವಾಗಿ ಭಾಗಮಂಡಲ, ಬಲಮುರಿ, ಗುಹ್ಯ, ಕಣಿವೆ ಮೂಲಕ ಕೊಡಗಿನಿಂದ ಹೊರಹರಿದು ಬಳಿಕ ಕರ್ನಾಟಕದಲ್ಲಿ ಸುಮಾರು 381 ಕಿ. ಮೀ. ಹರಿದು ಆ ನಂತರ ತಮಿಳುನಾಡು, ಪಾಂಡಿಚೇರಿ ಮೂಲಕ 802 ಕಿ.ಮೀ. ಕ್ರಮಿಸಿ ಕಾವೇರಿ ಪಟ್ಟಣಂನಲ್ಲಿ ಬಂಗಾಲಕೊಲ್ಲಿಯನ್ನು ಸೇರುತ್ತದೆ. ತಲಕಾವೇರಿಯಲ್ಲಿ ಬ್ರಹ್ಮಕುಂಡಿಕೆಯ ಪಕ್ಕದಲ್ಲಿಯೇ ಸ್ನಾನಕೊಳದಲ್ಲಿ ನೂತನವಾಗಿ ವಿವಾಹವಾದವರು ಕೈಕೈ ಹಿಡಿದುಕೊಂಡು ನೀರಿನಲ್ಲಿ ಮೂರು ಬಾರಿ ಮುಳುಗಿ ತಲೆಗೆ ಪತ್ರ, ಜಲವನ್ನು ಹಾಕಿಸಿಕೊಂಡರೆ ಜೀವನ ಪಾವನವಾಗುತ್ತದೆ ಎಂಬ ನಂಬಿಕೆಯಿದೆ. ಇನ್ನು ಇಲ್ಲಿ ಗಣಪತಿ, ಅಗಸ್ತ್ಯೇಶ್ವರ ದೇವಾಲಯ ಹಾಗೂ ಜ್ಯೋತಿ ಮಂಟಪವಿದೆ. ಈ ಕ್ಷೇತ್ರವನ್ನು ಕೆಲವು ವರ್ಷಗಳ ಹಿಂದೆಯಷ್ಟೇ ಜೀರ್ಣೋದ್ಧಾರ ಮಾಡಲಾಗಿದ್ದು, ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿದೆ.

ತುಲಾ ಸಂಕ್ರಮಣ ಜಾತ್ರೆ

ಅಗಸ್ತ್ಯೇಶ್ವರ ದೇವಾಲಯದ ಎಡಭಾಗದಲ್ಲಿರುವ ಬ್ರಹ್ಮಗಿರಿ ಬೆಟ್ಟವನ್ನೇರಲು ಸುಮಾರು 500 ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಈ ಮೆಟ್ಟಿಲೇರಿದರೆ ಬ್ರಹ್ಮಗಿರಿಯ ಬೆಟ್ಟದ ಮೇಲ್ಭಾಗವನ್ನು ತಲುಪಬಹುದು. ಇಲ್ಲಿ ಹಿಂದೆ ಸಪ್ತರ್ಷಿಗಳು ಯಜ್ಞ ಮಾಡಿದ್ದರು ಎಂದು ಹೇಳಲಾಗುವ ಯಜ್ಞಕುಂಡಗಳು ಕಂಡು ಬರುತ್ತವೆ. ಇಲ್ಲಿನ ಕುಂಡದಲ್ಲಿ ನೀರು ಕಂಡು ಬರುತ್ತವೆ. ಇಲ್ಲಿಂದ ನಿಂತು ನೋಡಿದರೆ ಕಂಡು ಬರುವ ನಿಸರ್ಗದ ಸುಂದರ ದೃಶ್ಯ ಮನಸ್ಸಿಗೆ ಉಲ್ಲಾಸ ನೀಡುತ್ತದೆ. ಅಲ್ಲದೆ ಎದುರಿನ ಬಾಪುರೆ ಬೆಟ್ಟದಲ್ಲಿ ಕೆಟ್ಟು ನಿಂತ ಬೃಹತ್ ಗಾಳಿಯಂತ್ರಗಳು ಸೋಜಿಗವನ್ನು ಉಂಟು ಮಾಡುತ್ತವೆ. ಇನ್ನು ಭಾಗಮಂಡಲದಿಂದ ತಲಕಾವೇರಿಗೆ ತೆರಳುವ ರಸ್ತೆಯಲ್ಲಿ ಸಿಗುವ ವ್ಯೂ ಪಾಯಿಂಟ್, ಭೀಮನಕಲ್ಲು, ಸಲಾಂಕಟ್ಟೆ ಎಲ್ಲವೂ ಇತಿಹಾಸದ ಕಥೆ ಹೇಳುತ್ತವೆ. ತಲಕಾವೇರಿಗೆ ಹೋಗುವವರು ಭಾಗಮಂಡಲಕ್ಕೆ ತೆರಳಿ ಭಗಂಡೇಶ್ವರನಿಗೆ ಪೂಜೆ ಮಾಡಿ ಬಳಿಕ ತಲಕಾವೇರಿಗೆ ತೆರಳುತ್ತಾರೆ. ಭಾಗಮಂಡಲವು ತ್ರಿವೇಣಿ ಸಂಗಮವಾಗಿದ್ದು, ಇಲ್ಲಿ ಭಗಂಡೇಶ್ವರ, ಶಿವ, ಸುಬ್ರಮಣ್ಯ, ವಿಷ್ಣು, ಗಣಪತಿ ದೇವಾಲಯಗಳಿವೆ. ಭಗಂಡ ಮಹರ್ಷಿ ತಪಸ್ಸು ಮಾಡಿದ ಸ್ಥಳವಾದುದರಿಂದ ಭಾಗಮಂಡಲ ಎಂಬ ಹೆಸರು ಬಂತು ಎನ್ನಲಾಗಿದೆ. ಭಾಗಮಂಡಲವನ್ನು ದಕ್ಷಿಣದ ಕಾಶಿ ಎಂಬುವುದಾಗಿಯೂ ಕರೆಯುತ್ತಾರೆ. ಕಾವೇರಿ ತೀರ್ಥೋದ್ಭವದ ಸಮಯದಲ್ಲಿ ಭಾಗಮಂಡಲ ಜನಸಂದಣಿಯಿಂದ ಕೂಡಿರುತ್ತದೆ. ಈ ಸಂದರ್ಭ ಹಿರಿಯರಿಗೆ ಪಿಂಡ ಪ್ರಧಾನ ಮಾಡುವ ಕಾರ್ಯವೂ ನಡೆಯುತ್ತದೆ. ತುಲಾ ಸಂಕ್ರಮಣದ ಒಂದು ತಿಂಗಳ ಕಾಲ ಭಗಂಡೇಶ್ವರ ದೇವಾಲಯದ ಕೊಠಡಿಯೊಂದರಲ್ಲಿ ನಂದಾದೀಪ ಉರಿಸಲಾಗುತ್ತದೆ. ಭಕ್ತರು ತಾವು ತರುವ ತುಪ್ಪವನ್ನು ಈ ದೀಪಕ್ಕೆ ಹಾಕುತ್ತಾರೆ. ಹಾಗೆಯೇ ಅಕ್ಕಿಯನ್ನು ಕೂಡ ಇಲ್ಲಿನ ಅಕ್ಷಯ ಭಂಡಾರಕ್ಕೆ ಹಾಕಿ ತಮ್ಮ ಮನೆಯ ಕಣಜದಲ್ಲಿ ಸದಾ ಭತ್ತ ತುಂಬಿರುವಂತೆ ಬೇಡಿಕೊಳ್ಳುತ್ತಾರೆ. ತುಲಾ ಸಂಕ್ರಮಣ ಜಾತ್ರೆಯಲ್ಲಿ ಭಾಗಿಯಾಗುತ್ತಾರೆ.

ತೀರ್ಥೋದ್ಭವಕ್ಕೆ ಕಾತುರ

ಸಪ್ತ ಪುಣ್ಯ ನದಿಗಳಲ್ಲಿ ಕಾವೇರಿಯೂ ಅಡಕವಾಗಿದ್ದಾಳೆ. ಕಾವೇರಿಯ ಉಗಮ ಸ್ಥಾನವಾದ ತಲಕಾವೇರಿಯಲ್ಲಿ ಈಗ ತೀರ್ಥೋದ್ಭವದ ಸಡಗರ. ಪ್ರತಿ ವರ್ಷ ಅಕ್ಟೋಬರ್‌ನಲ್ಲಿ ಅ.17 ಅಥವಾ 18 ರಂದು ಅಂದರೆ, ತುಲಾ ರಾಶಿಯು ಸೂರ್ಯ ಗ್ರಹವನ್ನು ಪ್ರವೇಶಿಸುವ ಪುಣ್ಯ ಸಂಕ್ರಮಣ ಕಾಲದಲ್ಲಿ ತೀರ್ಥೋದ್ಭವ ಘಟಿಸುತ್ತದೆ. ಪುರಾಣ ಗ್ರಂಥಗಳ ಪ್ರಕಾರ, ಈ ಶುಭ ಮೂಹೂರ್ತದಲ್ಲಿ ಮಾತೆ ಲೋಪಾಮುದ್ರೆ, ಲೋಕಕಲ್ಯಾಣಕ್ಕೋಸ್ಕರ ಜಲರೂಪಿಣಿಯಾಗಿ ಪವಿತ್ರ ಅಗಸ್ತ್ಯ ಕುಂಡಿಕೆಯಿಂದ ಉದ್ಭವಿಸುತ್ತಾಳೆ. ಕಾವೇರಿಯು ಕಿರಿದಾದ ಪತ್ರ ಕುಂಡಿಕೆಯಿಂದ ಮೈದೋರುತ್ತ ಮೇಲೆ ಬರುವ ದೃಶ್ಯ ಅತ್ಯಂತ ರೋಚಕ.



ಪುರಾಣಗಳ ಪುಟಗಳಲ್ಲಿ

ತಲಕಾವೇರಿ ಸಮೀಪದ ಬ್ರಹ್ಮಗಿರಿ ಬೆಟ್ಟದಲ್ಲಿ ಕವೇರನೆಂಬ ಮುನಿಯಿದ್ದನು. ಬ್ರಹ್ಮದೇವನು ಕವೇರ ಮುನಿಯ ತಪಸ್ಸಿಗೆ ಮೆಚ್ಚಿ ತನ್ನ ಮಾನಸ ಪುತ್ರಿ ಲೋಪಾಮುದ್ರೆಯನ್ನು ದತ್ತು ಮಗಳಾಗಿ ನೀಡುತ್ತಾನೆ. ಹೀಗೆ ಲೋಪಾಮುದ್ರೆ ಕಾವೇರಿಯಾಗುತ್ತಾಳೆ. ಒಮ್ಮೆ ಕವೇರ ಮುನಿಯ ಆಶ್ರಮಕ್ಕೆ ಬಂದ ಅಗಸ್ತ್ಯರು ಕಾವೇರಿಯನ್ನು ಮೆಚ್ಚಿಕೊಳ್ಳುತ್ತಾರೆ. ಮದುವೆಯಾಗುವಂತೆ ಕೇಳಿಕೊಳ್ಳುತ್ತಾರೆ. ಆಗ ಕಾವೇರಿ ವಿವಾಹನಂತರ ನೀವೇನಾದರೂ ನನ್ನನ್ನು ಒಂಟಿಯಾಗಿ ಬಿಟ್ಟು ಹೋದದ್ದೇ ಆದರೆ ನಾನು ನದಿಯಾಗಿ ಹರಿಯುವುದಾಗಿ ಹೇಳುತ್ತಾಳೆ. ಅಗಸ್ತ್ಯರು ಕಾವೇರಿಯ ಮಾತಿಗೆ ಒಪ್ಪುತ್ತಾರೆ. ಒಮ್ಮೆ ಅಗಸ್ತ್ಯ ಮುನಿಗಳು ತಾವಿದ್ದ ಆಶ್ರಮದಿಂದ ಬೆಟ್ಟದಾಚೆಗಿರುವ ಕನ್ನಿಕೆ ನದಿಯಲ್ಲಿ ಸ್ನಾನ ಮಾಡಲೆಂದು ಹೊರಡುತ್ತಾರೆ. ಅಗಸ್ತ್ಯ ಮುನಿಗಳು ಅತ್ತ ಸ್ನಾನಕ್ಕೆ ತೆರಳುತ್ತಿದ್ದಂತೆಯೇ ಇತ್ತ ನಿದ್ದೆಯಲ್ಲಿದ್ದ ಕಾವೇರಿಗೆ ಎಚ್ಚರವಾಗುತ್ತದೆ. ಆ ಕೂಡಲೇ ಷರತ್ತು ಮೀರಿದ ಪತಿಯಿಂದ ದೂರವಾಗಲು ನಿರ್ಧರಿಸುತ್ತಾಳೆ. ಲೋಕ ಕಲ್ಯಾಣಾರ್ಥವಾಗಿ ನದಿಯಾಗಲು ತೀರ್ಮಾನಿಸುತ್ತಾಳೆ. ಅಲ್ಲೇ ಇದ್ದ ಕೊಳಕ್ಕೆ ಧುಮುಕಿ ಅಗಸ್ತ್ಯ ಮುನಿಗಳಿಗೆ ತಿಳಿಯದಂತೆ ಅಲ್ಲಿಂದ ಗುಪ್ತಗಾಮಿನಿಯಾಗಿ ಹರಿದು ಭಾಗಮಂಡಲ ಸೇರುತ್ತಾಳೆ. ಅಲ್ಲಿ ಕನ್ನಿಕೆ, ಸುಜ್ಯೋತಿ ನದಿಗಳೊಂದಿಗೆ ಸಂಗಮವಾಗಿ ಮುಂದೆ ಹರಿಯುತ್ತಾಳೆ. ಹೀಗೆ ಲೋಕ ಕಲ್ಯಾಣಕ್ಕೆ ಹೊರಟ ಕಾವೇರಿ ಪ್ರತಿ ವರ್ಷ ತುಲಾ ಸಂಕ್ರಮಣದಂದು ಭಕ್ತರಿಗೆ ತಲಕಾವೇರಿಯ ಬ್ರಹ್ಮಕುಂಡಿಕೆಯಲ್ಲಿ ಜಲರೂಪಿಣಿಯಾಗಿ ದರ್ಶನ ನೀಡುತ್ತಾ ಬಂದಿದ್ದಾಳಂತೆ. ಇದು ಈ ಭಾಗದಲ್ಲಿ ಪ್ರಚಲಿತದಲ್ಲಿರುವ ಪ್ರಸಿದ್ಧ ಕಾವೇರಿ ಕಥೆ. ಇದಕ್ಕೆ ಪುಷ್ಟಿ ನೀಡುವಂತೆ ಹಲವು ಹತ್ತು ವಿಷಯಗಳು, ಸನ್ನಿವೇಶ, ಘಟನಾವಳಿ ಮತ್ತು ಚಿತ್ರಣಗಳನ್ನು ನಾಲ್ಕಿ ಕಾಣಬಹುದು.

ಹಣ ಉಳಿತಾಯಕ್ಕೆ ಟೊಂಕ ಕಟ್ಟಿದೆ ಅಂಚೆ ಇಲಾಖೆ

1874ರಲ್ಲಿ ಸ್ವಿಜರ್ಲೆಂಡ್‌ನ ಬರ್ನ್ ಎಂಬಲ್ಲಿ ಜಾಗತಿಕ ಅಂಚೆ ಕಾರ್ಯಕ್ರಮ ನಡೆಯಿತು. ಅದರ ನೆನಪಿಗಾಗಿ ಪ್ರತಿವರ್ಷ ಅ.9 ಅನ್ನು ವಿಶ್ವ ಅಂಚೆ ದಿನಾಚರಣೆ ಎಂದು ಆಚರಿಸಲಾಗುತ್ತದೆ. ಭಾರತೀಯ ಅಂಚೆ ಸೇವೆ ಈಗ ಹಿಂದಿನಂತೆ ಅಂಚೆ ಸೇವೆಯಾಗಿ ಉಳಿಯದೇ ಆರ್ಥಿಕ ವ್ಯವಸ್ಥೆಯಾಗಿ ಬದಲಾಗಿದೆ. ಅದನ್ನೆಲ್ಲ ನೆನಪಿಸಿಕೊಳ್ಳುತ್ತ ಅಂಚೆ ಬೆಳೆದ ಹಿನ್ನೆಲೆಯನ್ನು ಇಲ್ಲಿ ನೀಡಲಾಗಿದೆ.

• ಮಲ್ಲಪ್ಪ. ಸಿ. ಖೊದ್ನಾಪೂರ

ಆಗ ಒಂದು ಕಾಲವಿತ್ತು. ನಮ್ಮ ಎಲ್ಲ ವ್ಯವಹಾರಗಳು ಕೇವಲ ಪತ್ರದ ಮುಖೇನ ನಡೆಯುತ್ತಿದ್ದವು. ಸೈಕಲ್ ಮೇಲೆ ಟ್ರಿನ್ ಟ್ರಿನ್ ಎಂಬ ಸೈಕಲ್ ಗಂಟೆಯ ಶಬ್ದ ಮಾಡುತ್ತಾ, ಮನೆ ಮುಂದೆ ಬಂದು ನಿಂತು ಪೋಸ್ಟ್ ಎಂದು ಕೂಗಿ ಕರೆದು ಪತ್ರ ನೀಡುತ್ತಿದ್ದ ಪೋಸ್ಟ್‌ಮ್ಯಾನ್. ಸೇನೆಯಲ್ಲಿ ಸೈನಿಕನಿಂದ ಯಾವುದೇ ಸುಖ-ದುಃಖದ ಸಂದೇಶಗಳು ಬಂದರೂ ಅವು ಕೇವಲ ಊರಿನ ಪೋಸ್ಟ್‌ನಲ್ಲಿ ಟೆಲಿಗ್ರಾಮ್ ಮೂಲಕವೇ ಬರುತ್ತಿದ್ದವು. ಮನೆಯವರಿಗೆ, ನೆಂಟರಿಗೆ ಅಥವಾ ಸಂಬಂಧಿಗಳಿಗೆ ಯಾವುದೇ ಷಯದ ಬಗ್ಗೆ ತಿಳಿಸಬೇಕೆಂದರೂ 15 ಪೈಸೆ ಮೌಲ್ಯದ ಪೋಸ್ಟ್ ಕಾರ್ಡಗಳೇ ನಮಗೆ ಗತಿ. ಜಗತ್ತಿನಲ್ಲಿಯೇ ಅತಿ ದೊಡ್ಡ ಸಂಪರ್ಕ-ಸಂವಹನದ ಮಾಧ್ಯಮ-ಜಾಲವಾಗಿ ಕಾರ್ಯನಿರ್ವಸುತ್ತಿದ್ದ ಪೋಸ್ಟಲ್ ಇಲಾಖೆಯು ಮನಿ ಆರ್ಡರ್, ಇನ್‌ಲ್ಯಾಂಡ್, ವೃದ್ಧಾಪ್ಯ ವೇತನ, ಅಂಗಕಲರ ವೇತನ, ನೌಕರರ ಮಾಸಿಕ ಪಿಂಚಣಿ, ಮೊಬೈಲ್ ಬ್ಯಾಂಕಿಂಗ್‌ನಂತಹ ಸೇವೆಗಳನ್ನು ಜನ ಸಾಮಾನ್ಯರ ಮನೆಬಾಗಿಲಿಗೆ ತಲುಪಿಸುವ ಏಕೈಕ ಸರಕಾರಿ ಸ್ವಾಮ್ಯದ ಸೇವಾ ಸಂಸ್ಥೆಯಾಗಿ ಸಂಪರ್ಕದ ಸೇತುವೆಯಂತೆ ಕೆಲಸ ಮಾಡುತ್ತಿದೆ. ಪ್ರತಿ ವರ್ಷ ಅಕ್ಟೋಬರ್ 9ರಂದು ವಿಶ್ವದಾದ್ಯಂತ ಅಂಚೆ ದಿನವನ್ನು ಆಚರಿಸಲಾಗುತ್ತಿದೆ. ಇಂದಿನ ಡಿಜಿಟಲ್ ಯುಗದಲ್ಲಿ ಸಂವಹನ, ಸಾಮಾಜಿಕ ಸಂಪರ್ಕ ಮತ್ತು ಅಂಚೆ ಸೇವೆಗಳ ಮಹತ್ವವನ್ನು ಎತ್ತಿ ತೋರಿಸುತ್ತದೆ.

ಅಂಚೆ ದಿನದ ಆಚರಣೆಯ ಇತಿಹಾಸ: 1874ರಲ್ಲಿ ಸ್ವಿಜರ್ಲೆಂಡಿನ ಬರ್ನ್ ಎಂಬಲ್ಲಿ ಜರುಗಿದ ಯೂನಿವರ್ಸಲ್ ಪೋಸ್ಟಲ್ ಯೂನಿಯನ್ ಸಂಸ್ಥೆಯ ಸವಿನೆನಪಿಗಾಗಿ ಪ್ರತಿವರ್ಷ ಅಕ್ಟೋಬರ್ 9ರಂದು ವಿಶ್ವ ಅಂಚೆ ದಿನವನ್ನು ಆಚರಿಸಲಾಗುತ್ತಿದೆ. ಈ ದಿನದ ಆಚರಣೆಯು ಪ್ರಮುಖವಾಗಿ ಇಡೀ ಜಗತ್ತಿನಲ್ಲಿ ನಿರಂತರವಾಗಿ ಅಂಚೆ ಸೇವೆಯನ್ನು ನೀಡುವ ಅಂಚೆಯಣ್ಣನ ಶ್ರಮವನ್ನು ಸ್ಮರಿಸುವ ಮಹೋನ್ನತವಾದ ಉದ್ದೇಶವಾಗಿದೆ. 1969ರಲ್ಲಿ ಜಪಾನ್ ದೇಶದ ಟೋಕಿಯೋದಲ್ಲಿ ನಡೆದ ಜಾಗತಿಕ ಅಂಚೆ ಸಹಕಾರಿ ಸಂಘ (ಯು.ಪಿ.ಯು.ಸಿ) ವು ಈ ದಿನದಂದು ವಿಶ್ವ ಅಂಚೆ ದಿನವನ್ನಾಗಿ ಆಚರಿಸಲು ಕರೆ ಕೊಟ್ಟಿತು. ಇಂದಿನ ಡಿಜಿಟಲ್ ಯುಗದಲ್ಲಿ ನಿಂತು ನೋಡಿದರೆ ಹಳೆಯ ದಿನಗಳು ಹೇಗಿದ್ದವು ನೆನಪಿಸಿಕೊಳ್ಳಬಹುದು.

ಅಂಚೆ ಇಲಾಖೆಯ ಕಾರ್ಯವೈಖರಿ ಗಮನಾರ್ಹ: ಅಂಚೆ ಸೇವೆಯು ಇಡೀ ಜಗತ್ತಿನಲ್ಲಿಯೇ ಅತಿ ದೊಡ್ಡದಾದ ಸರಕು ಸಾಗಾಣಿಕಾ ಸೇವಾ ಸಂಸ್ಥೆಯಾಗಿದೆ. ಆರಂಭದಲ್ಲಿ ಕೇವಲ ಕೆಲವೇ ಸೇವೆಗಳಿಗೆ ಮಾತ್ರ ಸೀಮಿತವಾಗಿದ್ದ ಈ ಪೋಸ್ಟಲ್ ಸೇವೆಯು ಇಂದು ಜಗತ್ತಿನಾದ್ಯಂತ ಲಾಜಿಸ್ಟಿಕ್ ಮ್ಯಾನೇಜ್‌ಮೆಂಟ್ ಹೆಸರಿನಲ್ಲಿ ವಿಶ್ವದೆಲ್ಲೆಡೆ ತನ್ನ ಸೇವೆಯನ್ನು ಪಸರಿಸಿದೆ. ಅದೀಗ ಕೇವಲ ಸಂಪರ್ಕ-ಸಂವಹನದ ಮಾಧ್ಯಮವಾಗಿ ಮಾತ್ರ ಉಳಿದಿಲ್ಲ. ಅದೊಂದು ಸರಕಾರದ ಎಲ್ಲ ಮಹತ್ತರ ಯೋಜನೆಗಳ ಯಶಸ್ವಿ ಅನುಷ್ಠಾನದಲ್ಲಿ ನಾಗರಿಕರಿಗೆ ಅಗತ್ಯ ಸೇವೆಗಳನ್ನೊಳಗೊಂಡಂತೆ ಬ್ಯಾಂಕಿಂಗ್, ವಿಮೆ, ಸಣ್ಣ ಉಳಿತಾಯ ಮತ್ತು ಭವಿಷ್ಯನಿಧಿ ಹೀಗೆ ಹಲವಾರು ಪ್ರಮುಖವಾದ ಕ್ಷೇತ್ರಗಳಲ್ಲಿ ಅಮೂಲ್ಯವಾದ ಸೇವೆಯನ್ನು ಒದಗಿಸುತ್ತಿದೆ. ಅದರಲ್ಲೂ ವಿಶೇಷವಾಗಿ ಬದಲಾಗುತ್ತಿರುವ ಇಂದಿನ ತಂತ್ರಜ್ಞಾನ ಯುಗದಲ್ಲಿ ಜನರ ಕೈಯಲ್ಲಿ ಸ್ಮಾರ್ಟ್ ಫೋನ್ ಇದ್ದರೂ ಅಂಚೆ ಇಲಾಖೆಯು ಭಾರತದ ಪ್ರಮುಖ ಸಂವಹನ ವಿಧಾನ ಮತ್ತು ಭರವಸೆಯ ಮಾಧ್ಯಮವಾಗಿ ಇಂದಿಗೂ ಉಳಿದುಕೊಂಡಿರುವುದು ಸೇವೆಯ ಮೈಲಿಗಲ್ಲು ಎಂದು ಹೇಳಬಹುದು. ಅದರಲ್ಲೂ ಇಂದಿನ ಹೊಸ ತಂತ್ರಜ್ಞಾನ-ಸಂವಹನದ ವಿಧಾನಗಳ ಆಗಮನದಿಂದ, ಅಂಚೆ ಇಲಾಖೆಯ ಸಾಂಪ್ರದಾಯಿಕ ಸಂದೇಶ ರವಾನೆ ಸೇವೆ ಕೊಂಚ ಕಡಿಮೆಯಾದರೂ ಸರಕಾರಿ ಇಲಾಖೆಗಳ ಪತ್ರ ವ್ಯವಹಾರ, ಗ್ರಾಮೀಣ, ಅರೆ-ನಗರಗಳಲ್ಲಿ ಇನ್ನೂ ಪ್ರಾಥಮಿಕ ಹಂತದ ಸೇವೆಗಳು ಅಸ್ತಿತ್ವದಲ್ಲಿವೆ.

ಆಚರಣೆಯ ಮಹತ್ವ: ಭಾರತೀಯ ಅಂಚೆ ಸೇವೆಯು ಇಡೀ ವಿಶ್ವದಲ್ಲಿಯೇ ದೊಡ್ಡದಾದ ಸಂಪರ್ಕ ಜಾಲವನ್ನು ಹೊಂದಿದ ಸೇವಾ ಸಂಸ್ಥೆ ಎಂದರೆ ತಪ್ಪಾಗಲಿಕ್ಕಿಲ್ಲ. ಇದರಿಂದ ರಾಷ್ಟ್ರದ ಎಲ್ಲ ಪ್ರದೇಶಗಳೊಂದಿಗೆ ಸಂಪರ್ಕವನ್ನು ಸಾಧಿಸುವುದರೊಂದಿಗೆ ಪತ್ರ ತಲುಪಿದ ಬಗ್ಗೆ ತಿಳಿಯಲು ಇ.ಎಂ.ಎಸ್.ನಂತಹ ಭರವಸೆದಾಯಕ ಸೇವೆಗೆ ಅಂಚೆ ಇಲಾಖೆಯು ಹೆಸರುವಾಸಿಯಾಗಿದೆ. ಪ್ರಸ್ತುತ ಭಾರತೀಯ ಅಂಚೆ ಇಲಾಖೆಯು (ಐ.ಪಿ.ಪಿ.ಬಿ) ಇಂಡಿಯನ್ ಪೋಸ್ಟಲ್ ಪೇಮೆಂಟ್ ಬ್ಯಾಂಕ್ ಹೆಸರಿನಲ್ಲಿ ಗ್ರಾಮೀಣ, ಅರೆ-ನಗರ ಮತ್ತು ನಗರಗಳ ಜನಸಾಮಾನ್ಯರ ಮನೆ ಬಾಗಿಲಿಗೆ ಬ್ಯಾಂಕಿಂಗ್ ಸೇವೆಗಳನ್ನು ತಲುಪಿಸುವ ಕಾರ್ಯವನ್ನು ಕೈಗೊಳ್ಳುತ್ತಿದೆ. ಅದರ ಜೊತೆಗೆ ಸುಲಭ, ಸರಳ, ಜೀರೋ ಬ್ಯಾಲನ್ಸ್ ಮತ್ತು ಪೇಪರ್‌ಲೆಸ್ ಖಾತೆಗಳನ್ನು ತೆರೆದು ಡಿಜಿಟಲ್ ಬ್ಯಾಂಕಿಂಗ್ ಸೇವೆಯ ಮೂಲಕ ಭಾರತೀಯ ಹಣಕಾಸು ಮತ್ತು ಬ್ಯಾಂಕಿಂಗ್ ಒಳಗೊಳ್ಳುವಿಕೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಾ ದೇಶದ ಆರ್ಥಿಕತೆಗೆ ಸಹಕಾರಿಯಾಗಿದೆ. ಅದರಲ್ಲೂ ವಿಶೇಷವಾಗಿ ಪೋಸ್ಟ್ ಆಫೀಸ್ ಸೇವಿಂಗ್ಸ್ ಅಕೌಂಟ್ ಮೂಲಕ ರಾಷ್ಟ್ರದ ಜನರಲ್ಲಿ ಉಳಿತಾಯದ ಮನೋಭಾವನೆ ಬೆಳೆಸಿ, ಅದು ರಾಷ್ಟ್ರದ ಆರ್ಥಿಕಾಭಿವೃದ್ಧಿಗೆ ಬಳಕೆಯಾಗುವಂತೆ ಪೂರಕವಾದ ಸೇವೆಯನ್ನು ನೀಡುತ್ತಿದೆ. ಇದರಿಂದ ಸಾರ್ವಜನಿಕರು ದೇಶದ ಯಾವುದೇ ಪೋಸ್ಟ್ ಆಫೀಸ್‌ನಿಂದ ಹಣ ಪಾವತಿಸುವ ಮತ್ತು ಪಡೆಯುವ ಸೌಲಭ್ಯವನ್ನು ಪಡೆಯಬಹುದು. ಐ.ಪಿ.ಪಿ.ಬಿ ಮೊಬೈಲ್ ಆಪ್ ಮೂಲಕ ಮನೆಯಿಂದಲೇ ಎಲ್ಲ ಪೋಸ್ಟಲ್, ಬ್ಯಾಂಕಿಂಗ್ ವ್ಯವಹಾರಗಳನ್ನು ಸುಲಭವಾಗಿ ಪಡೆಯಲು ಪ್ರಯೋಜನಕಾರಿಯಾಗಿದೆ.

ಇಂದು ವಿಶ್ವ ಅಂಚೆ ದಿನಾಚರಣೆ

2025ನೆಯ ವರ್ಷದ ಘೋಷವಾಕ್ಯ: ಅಕ್ಟೋಬರ್ 9ರಂದು ಆಚರಿಸುತ್ತಿರುವ ಈ ವಿಶ್ವ ಪೋಸ್ಟಲ್ ದಿನವು 'ಜನರಿಗಾಗಿ ಅಂಚೆ: ಸ್ಥಳೀಯ ಸೇವೆ ಮತ್ತು ಜಾಗತಿಕ ತಲುಪುವಿಕೆ' ಎಂಬ ಘೋಷವಾಕ್ಯದೊಂದಿಗೆ ತನ್ನ ಸೇವೆಯನ್ನು ಇನ್ನಷ್ಟು ಶಾಲ ವ್ಯಾಪ್ತಿಯಲ್ಲಿ ಪಸರಿಸುವಂತೆ ಮಾಡುವುದು ಮತ್ತು ಜನರಿಗೆ ಉತ್ತಮ ಸೇವೆಗಾಗಿ ಪೋಸ್ಟಲ್ ಇಲಾಖೆ ಎಂಬ ಸಂದೇಶವನ್ನು ಹೊಂದಿದೆ. ಸ್ಥಳೀಯ ಸಮುದಾಯವನ್ನು ಜಗತ್ತಿನೊಂದಿಗೆ ಸಂಪರ್ಕಿಸುವ ಅಂಚೆ ಸೇವೆಗಳ ಶಕ್ತಿಯನ್ನು ಎತ್ತಿ ತೋರಿಸುತ್ತದೆ. ಅಂಚೆ ವಲಯವು ಪ್ರಸ್ತುತ ಸಂವಹನ ಅಗತ್ಯತೆಗಳು, ತಂತ್ರಜ್ಞಾನ ಮತ್ತು ಸಾಮುದಾಯಿಕ ಆದ್ಯತೆಗಳಿಗೆ ಹೇಗೆ ಹೊಂದಿಕೊಳ್ಳಬೇಕು ಎನ್ನುವುದು ಈ ವರ್ಷದ ವಿಶ್ವ ಅಂಚೆ ದಿನದ ಆಚರಣೆಯು ಮಹತ್ವ ಪಡೆದುಕೊಂಡಿದೆ.

ಕೊನೆಯ ನುಡಿ: ಆರ್ಥಿಕ ಸೇರ್ಪಡೆಗೆ ಸಹಕಾರಿಯಾಗಬಲ್ಲ, ಸಣ್ಣ ವ್ಯವಹಾರಗಳ ಮತ್ತು ಇ-ವಾಣಿಜ್ಯವನ್ನು ಬೆಂಬಲಿಸುವುದು ಮತ್ತು ಸುಸ್ಥಿರ ಮತ್ತು ಪರಿಣಾಮಕಾರಿ ಅಂಚೆ ಕಾರ್ಯಾಚರಣೆಗಳನ್ನು ಉತ್ತೇಜಿಸುವುದು ಈ ದಿನದ ಆಚರಣೆಯ ಧ್ಯೇಯೋದ್ದೇಶವಾಗಿದೆ. ಭರವಸೆಯ ಸೇವೆಗೆ ಇನ್ನೊಂದು ಹೆಸರೇ ನಮ್ಮ ಭಾರತೀಯ ಅಂಚೆ ಇಲಾಖೆ. ಎಷ್ಟೇ ಇ-ತಂತ್ರಜ್ಞಾನಗಳು, ಸಂಪರ್ಕ-ಸಂವಹನ ವಿಧಾನಗಳು ಬಳಕೆಯು ಈ ಜಗತ್ತಿಗೆ ಪ್ರವೇಶವಾದರೂ ಅಂಚೆ ಇಲಾಖೆಯ ಮತ್ತು ನಮ್ಮ ಅಂಚೆಯಣ್ಣನ ಕಾರ್ಯ ಎಂದಿಗೂ ನಿಲ್ಲೋದಿಲ್ಲ. ತನ್ನ ಸೇವೆಯ ಮೂಲಕ ಜನಮಾನಸದಲ್ಲಿ ನಂಬಿಕೆ, ಶ್ವಾಸ ಮತ್ತು ಭರವಸೆಯ ಆಶಾಕಿರಣವಾಗಿರುವ ಅಂಚೆ ಇಲಾಖೆಯು ಹೀಗೆ ಸೇವೆ ಸಲ್ಲಿಸುವಂತಾಗಲಿ. ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸುವ ಸರ್ವರಿಗೂ ಭಾರತೀಯ ಅಂಚೆ ದಿನದ ಶುಭಾಶಯಗಳನ್ನು ತಿಳಿಸುತ್ತಾ ಅದರ ಕಾರ್ಯವೈಖರಿ ಬದಲಾವಣೆಯತ್ತ ಸಾಗಲಿ, ಪರಿಣಾಮಕಾರಿ ಮತ್ತು ವಿಶ್ವಮಾನ್ಯ ಸಂಪರ್ಕ-ಸಂವಹನ ಮಾಧ್ಯಮವಾಗಿ ಹೊರಹೊಮ್ಮಲೆಂಬುದೇ ಆಶಯ.

ವೃಂದಾದೇವಿ ವಿಷ್ಣುವಿನ ಪತ್ನಿಯಾದ ಕಥೆ

ವೃಂದಾ ದೇವಿ ಧರ್ಮಧ್ವಜನ ಮಗಳು. ಧರ್ಮಧ್ವಜ ಮಹಾ ಶಿವಭಕ್ತ. ವೃಂದಾ ಕೂಡಾ ವಿಶೇಷವಾಗಿ ದೇವಿ ಪಾರ್ವತಿಯ ಪರಮಭಕ್ತೆ. ಈಕೆ ಸುದೀರ್ಘ ಕಾಲ ತಪಸ್ಸು ಮಾಡಿ ನನ್ನ ಗಂಡ ಚಿರಾಯುವಾಗಲಿ ಎಂದು ಬೇಡಿಕೊಳ್ಳುತ್ತಾಳೆ. ಪಾರ್ವತಿ ಹಾಗೆಲ್ಲ ಯಾರೂ ಸಾವಿಲ್ಲದಂತಾಗಲು ಸಾಧ್ಯವಿಲ್ಲ ಎಂದಳು. ಅದಕ್ಕೆ ವೃಂದಾ ಬುದ್ಧಿವಂತಿಕೆಯಿಂದ ನಾನು ಪತಿವ್ರತೆಯಾಗಿರುವಷ್ಟು ಕಾಲ ನನ್ನ ಗಂಡ ಬಾಳಿ ಬದುಕಲಿ, ಅಜೇಯನಾಗಿರಲಿ ಎಂದು ಬೇಡಿಕೊಳ್ಳುತ್ತಾಳೆ. ತನ್ನ ಪಾತಿವ್ರತ್ಯ ಚಿಂತನೆಯ ಮೇಲೆ ಆಕೆಗೆ ಅಷ್ಟೊಂದು ವಿಶ್ವಾಸ! ಪಾರ್ವತಿ ಹಾಗೆಯೇ ಆಗಲಿ, ತಥಾಸ್ತು ಎಂದು ಆಶೀರ್ವದಿಸುತ್ತಾಳೆ.

ಈ ವಿದ್ಯಮಾನ ಅರಿತಿದ್ದ ಅಸುರ ಗುರು ಶುಕ್ರಾಚಾರ್ಯ ಹೇಗಾದರೂ ಮಾಡಿ ವೃಂದೆಯನ್ನು ಒಬ್ಬಾನೊಬ್ಬ ಅಸುರನಿಗೆ ಮದುವೆ ಮಾಡಿಸಬೇಕೆಂದು ಯೋಜನೆ ಹಾಕುತ್ತಾರೆ. ಇದೇ ವೇಳೆಗೆ ಜಲಂಧರನೆಂಬ ರಾಕ್ಷಸನ ಜನನವಾಗಿರುತ್ತದೆ. ಈ ಜಲಂಧರ ಶಿವನಂತೆ ಇದ್ದು ಮಹಾ ಶಕ್ತಿಶಾಲಿಯೂ ಆಗಿರುತ್ತಾನೆ. ಈತ ಪಾರ್ವತಿಯನ್ನು ಕಂಡು ಮೋಹಗೊಳ್ಳುತ್ತಾನೆ. ಹೇಗಾದರೂ ಆಕೆಯನ್ನು ಪಡೆದೇ ತೀರಬೇಕೆಂದು ಬಯಸುತ್ತಾನೆ. ಅದಕ್ಕಾಗಿ ಶಿವನ ಮೇಲೆ ಯುದ್ಧ ಹೂಡಲೂ ಸಿದ್ಧವಾಗಿರುತ್ತಾನೆ. ಇದೇ ಪ್ರಯತ್ನದಲ್ಲಿ ಆತ ಇಂದ್ರನನ್ನು ಸೋಲಿಸಿದಾಗ ಶುಕ್ರಾಚಾರ್ಯರ ಕಣ್ಣಿಗೆ ಬೀಳುತ್ತಾನೆ.

ಶುಕ್ರಾಚಾರ್ಯರು ಜಲಂಧರನನ್ನು ಕುರಿತು, ವೃಂದೆಯನ್ನು ವಿವಾಹವಾಗಿ ಅಜೇಯ ಮತ್ತು ಅಮರತ್ವದ ಬಲ ಪಡೆದುಕೋ. ಆಕೆ ಪತಿವ್ರತೆಯಾಗಿರುವವರೆಗೂ ನಿನಗೆ ಅಳಿವಿಲ್ಲ ಎಂದು ಸಲಹೆ ನೀಡುತ್ತಾರೆ. ವೃಂದೆಯನ್ನು ಮದುವೆಯಾಗಿ ಅವಳ ಮೂಲಕ ಮತ್ತಷ್ಟು ಬಲ ಪಡೆದು ಶಿವನೊಡನೆ ಹೋರಾಡಿ ಪಾರ್ವತಿಯನ್ನು ಗೆದ್ದುಕೊಳ್ಳಬಹುದು ಎಂದು ಆಲೋಚಿಸುವ ಜಲಂಧರ ಅದಕ್ಕೊಪ್ಪುತ್ತಾನೆ. ಹೀಗೆ ವೃಂದಾದೇವಿ ಮತ್ತು ಜಲಂಧರರ ಮದುವೆ ನಡೆಯುತ್ತದೆ.

ಕೆಲ ಕಾಲಾನಂತರ ಜಲಂಧರ ಶಿವನ ಮೇಲೆ ಯುದ್ಧ ಘೋಷಿಸುತ್ತಾನೆ. ವೃಂದಾದೇವಿಯ ಪಾತಿವ್ರತ್ಯ ಮತ್ತು ಪಾರ್ವತಿ ಆಕೆಗೆ ನೀಡಿದ್ದ ವರಗಳ ಪರಿಣಾಮ ಆತ ಸೋಲುವುದಿಲ್ಲ. ಇತ್ತ ಶಿವನಂತೂ ಶಿವನೇ. ಆತನನ್ನು ಸೋಲಿಸಬಲ್ಲವರಾದರೂ ಯಾರು!? ಹಲವು ಹಗಲಿರುಳು ಯುದ್ಧ ಸಾಗುತ್ತದೆ. ಸೃಷ್ಟಿಯ ಸಮತೋಲನ ತಪ್ಪತೊಡಗುತ್ತದೆ. ಕೊನೆಗೆ ಸ್ಥಿತಿಕರ್ತನಾದ ಮಹಾವಿಷ್ಣು ರಂಗಕ್ಕಿಳಿಯುತ್ತಾನೆ. ಪಾರ್ವತಿ ಆತನ ತಂಗಿಯೆಂಬ ಮಮಕಾರದ ಜೊತೆಗೆ ಸೃಷ್ಟಿಯ ಸಮತೋಲನ ಕಾಪಾಡುವ ಕರ್ತವ್ಯಕ್ಕಾಗಿ ಏನು ಮಾಡಲೂ ಹಿಂಜರಿಯದೆ ಹೋಗುತ್ತಾನೆ. ಜಲಂಧರನಂತೆ ವೇಷ ಮರೆಸಿಕೊಂಡು ವೃಂದೆಯ ಬಳಿಗೆ ಹೋಗುತ್ತಾನೆ. ಆಕೆಯ ಪಾತಿವ್ರತ್ಯ ಭಂಗವಾಗುತ್ತದೆ. ಇತ್ತ ಜಲಂಧರ ಸೋಲುತ್ತಾನೆ. ಮಹಾದೇವನ ತ್ರಿಶೂಲಕ್ಕೆ ಬಲಿಯಾಗುತ್ತಾನೆ.

ವೃಂದೆ ತನ್ನ ಬಳಿ ಬಂದವ ವಿಷ್ಣು ಎಂದರಿವಾಗುತ್ತಲೇ ಚಿತೆಗೆ ಒಡ್ಡಿಕೊಂಡು ಜೀವಂತ ಧುಮುಕುತ್ತಾಳೆ. ಸುಡುತ್ತ ಸುಡುತ್ತಲೇ ನಿನ್ನ ಹೆಂಡತಿಯ ಪಾತಿವ್ರತ್ಯವನ್ನೂ ಯಾರಾದರೊಬ್ಬರು ಭಂಗಪಡಿಸಲಿ ಎಂದು ಶಪಿಸುತ್ತಾಳೆ. ತನ್ನ ಗಂಡನ ಈ ನಡೆಯನ್ನರಿತ ಲಕ್ಷ್ಮಿ ವೃಂದೆಯ ಚಿತೆಯ ಬಳಿ ಓಡೋಡಿ ಬಂದು ಗಂಡನ ಪರವಾಗಿ ಕ್ಷಮೆ ಬೇಡುತ್ತಾಳೆ. ಇತ್ತ ಪಾರ್ವತಿಯೂ ವಿಷ್ಣುವಿನ ನಡೆಯಿಂದ ಕೋಪಾವಿಷ್ಟಳಾಗಿ ಮಹಾಕಾಳಿಯ ರೂಪ ಧರಿಸಿ ಸ್ತ್ರೀಕುಲಕ್ಕೆ ಕಳಂಕ ಹಚ್ಚಿದ ನಿನ್ನನ್ನು ಸುಮ್ಮನೆ ಬಿಡಲಾರೆ ಎಂದು ಅಬ್ಬರಿಸುತ್ತಾಳೆ.

ಅದೇ ವೇಳೆಗೆ ಶಿವ ಪ್ರತ್ಯಕ್ಷನಾಗಿ ಜಲಂಧರನ ಪಾಪಕರ್ಮಗಳ ಬಗ್ಗೆ ವೃಂದೆಗೆ ತಿಳಿಸಿ ಹೇಳುತ್ತಾನೆ. ಮತ್ತೊಂದು ಹೆಣ್ಣನ್ನು ಮೋಹಿಸಿದ, ಅದರಲ್ಲೂ ತನ್ನ ಆರಾಧ್ಯಳೂ ಜಗಜ್ಜನನಿಯೂ ಆದ ಪಾರ್ವತಿಯನ್ನೇ ಕಾಮಿಸಲು ಬಯಸಿದ ಜಲಂಧರನ ಬಗ್ಗೆ ಅವಳಲ್ಲಿ ತಾತ್ಸಾರ ಮೂಡುತ್ತದೆ. ವಿಷ್ಣು ಮಾಡಿದ್ದು ತಪ್ಪೇ ಆಗಿದ್ದರೂ ತನ್ನ ಶಾಪವನ್ನು ಸ್ವಲ್ಪ ನಯಗೊಳಿಸಿ, ನಿನ್ನ ಪತ್ನಿಗೆ ಕೇವಲ ಆಪಾದನೆ ತಗುಲಿಕೊಳ್ಳಲಿ, ಅದರ ಸಂಕಟ ನೀನು ಅನುಭವಿಸುವಂತಾಗಲಿ ಎನ್ನುತ್ತಾಳೆ. ಹಾಗೂ ನನಗೆ ನಿನ್ನ ಪತ್ನಿಯ ಸ್ಥಾನ ಕೊಡಬೇಕು ಎಂದು ಕರಾರು ಹಾಕುತ್ತಾಳೆ. ಮಹಾವಿಷ್ಣು ಆಕೆಯನ್ನು ಎದೆಯ ಮೇಲೆ ಧರಿಸಿ ನೀನು ಸದಾ ಅತ್ಯಂತ ಪವಿತ್ರಳೆಂಬ ಮನ್ನಣೆಗೆ ಪಾತ್ರಳಾಗುವಂತಾಗಲಿ ಎಂದು ಹರಸುತ್ತಾನೆ.

ಮುಂದೆ ರಾಮಾವತಾರದಲ್ಲಿ ಸೀತಾಪಹರಣದ ಮೂಲಕ ತುಳಸಿಯ ಶಾಪ ನಿಜವಾಗುತ್ತದೆ. ಕೃಷ್ಣಾವತಾರದಲ್ಲಿ ಮಹಾವಿಷ್ಣು ವೃಂದೆಯನ್ನು ಮದುವೆಯಾಗಿ ತನ್ನ ಪತ್ನಿಯ ಸ್ಥಾನ ನೀಡುತ್ತಾನೆ. ಪಾರ್ವತಿ ಆಕೆಯನ್ನು ಪವಿತ್ರ ಸಸ್ಯವಾಗಿ ಲೋಕ ಪೂಜಿತಳಾಗುವಂತೆ, ಗೃಹಿಣಿಯರಿಂದ ನಿತ್ಯವೂ ಆರಾಧಿಸಲ್ಪಡುವಂತೆ ಹರಸುತ್ತಾಳೆ. ಹೀಗೆ ವೃಂದಾ ದೇವಿ ತುಳಸಿಯಾಗಿ ಲೋಕದಲ್ಲಿ ಸ್ಥಾಪಿತಳಾಗುತ್ತಾಳೆ. ಮನೆಮನೆಯಲ್ಲಿ ತುಳಸಿ ಗಿಡ ಬೆಳೆಸಿ ಪೂಜಿಸುವುದರಿಂದ ನಮಗೆ ಆರೋಗ್ಯ, ವರ್ಚಸ್ಸು, ಆಯಸ್ಸು ಎಲ್ಲವನ್ನೂ ವೃಂದಾದೇವಿ ಅನುಗ್ರಹಿಸುತ್ತಾಳೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಮಳೆಗಾಲದ ಪಯಣ: ಬಿಸಿ ಚಹಾದ ಜೊತೆ ನೆನಪಿನ ಬುತ್ತಿ

• ಶಿವರಾಜ ಸೂ. ಸಣಮನಿ, ಮದಗುಣಕಿ

ಆಕಾಶದಲ್ಲಿ ಕಾರ್ಮೋಡಗಳು ದಟ್ಟೈಸಿ, ಮೊದಲ ಮಳೆ ಹನಿ ಭೂಮಿಗೆ ಬೀಳುತ್ತಿದ್ದಂತೆ ಬರುವ ಆ ಮಣ್ಣಿನ ಪರಿಮಳವಿದೆಯಲ್ಲ? ಅದೊಂದು ರೀತಿಯ ಮಾಂತ್ರಿಕತೆ. ಅದು ಕೇವಲ ವಾಸನೆಯಲ್ಲ, ಅದೊಂದು ಟೈಮ್ ಮೆಷಿನ್ ಇದ್ದಂತೆ. ನಮ್ಮನ್ನು ಥಟ್ಟನೆ ಬಾಲ್ಯದ ದಿನಗಳಿಗೋ, ಮರೆತುಹೋದ ಯಾವುದೋ ಪಯಣದ ಕ್ಷಣಗಳಿಗೋ ಸುಲಭವಾಗಿ ಕರೆದೊಯ್ಯುತ್ತದೆ. ಪ್ರಯಾಣವೆಂದರೆ ಕೇವಲ ಹೊಸ ಜಾಗಗಳನ್ನು ನೋಡುವುದಷ್ಟೇ ಅಲ್ಲ, ಹಳೆಯ ನೆನಪುಗಳನ್ನು ಮತ್ತೆ ಬದುಕುವುದಕ್ಕೂ ಅದೊಂದು ದಾರಿ. ಅದರಲ್ಲೂ ಮಳೆಗಾಲದ ಪ್ರಯಾಣಗಳಿಗೂ, ನಮ್ಮ ನೆನಪುಗಳಿಗೂ ಒಂದು ಅವಿನಾಭಾವ ಸಂಬಂಧವಿದೆ.

ಮಳೆ ಶುರುವಾಗುತ್ತಿದ್ದಂತೆ ಮನೆಯಲ್ಲಿ ಶುರುವಾಗುವ ಪಕೋಡ, ಬಜ್ಜಿ, ಬೋಂಡಾದ ಘಮ. ಜೊತೆಗೆ ಶುಂಠಿ, ಏಲಕ್ಕಿ ಹಾಕಿದ ಬಿಸಿ ಬಿಸಿ ಚಹಾ. ಆಹಾ! ಈ ಸಮ್ಮಿಲನಕ್ಕೆ ಬೆಲೆ ಕಟ್ಟಲು ಸಾಧ್ಯವೇ? ಈ ರುಚಿ ಕೇವಲ ನಾಲಿಗೆಗೆ ಸೀಮಿತವಲ್ಲ, ಅದು ನಮ್ಮ ಭಾವನೆಗಳನ್ನು ಕೆದಕುತ್ತದೆ. ಕಿಟಕಿಯ ಹೊರಗೆ ಸುರಿಯುವ ಮಳೆಯನ್ನು ನೋಡುತ್ತಾ, ಬಿಸಿ ಪಕೋಡ ಸವಿಯುವಾಗ, ಥಟ್ಟನೆ ನೆನಪಾಗುವುದು ಚಿಕ್ಕಮಗಳೂರಿನ ಯಾವುದೋ ತಿರುವಿನಲ್ಲಿ ಸಿಕ್ಕ ಚಿಕ್ಕ ಟೀ ಅಂಗಡಿ. ಅಲ್ಲಿ ದಟ್ಟ ಮಂಜಿನ ನಡುವೆ, ಪ್ಲಾಸ್ಟಿಕ್ ಚೇರಿನಲ್ಲಿ ಕುಳಿತು ಕುಡಿದಿದ್ದ ಆ ಶುಂಠಿ ಚಹಾದ ರುಚಿ ಮತ್ತೆ ನಾಲಿಗೆಯ ಮೇಲೆ ಬಂದಂತೆ ಭಾಸವಾಗುತ್ತದೆ. ಆ ಚಹಾದ ಜೊತೆ ತಿಂದ ಮೆಣಸಿನಕಾಯಿ ಬಜ್ಜಿಯ ಖಾರ ಇವತ್ತಿಗೂ ನೆನಪಿದೆ. ಪ್ರಯಾಣವೆಂದರೆ ಇದೇ ಅಲ್ಲವೇ? ಕಣ್ಣುಗಳು ನೋಡಿದ ದೃಶ್ಯಗಳನ್ನು ನಮ್ಮ ಹೊಟ್ಟೆಯೂ, ನಾಲಿಗೆಯೂ ಅಚ್ಚಳಿಯದಂತೆ ನೆನಪಿಟ್ಟುಕೊಳ್ಳುವುದು.

ನನಗೆ ನೆನಪಿದೆ, ಒಮ್ಮೆ ಆಗುಂಬೆಯ ಘಾಟಿಯಲ್ಲಿ ಬೈಕ್‌ನಲ್ಲಿ ಹೋಗುವಾಗ ಶುರುವಾದ ಮಳೆ. ಮುಂದೇನೂ ಕಾಣದಷ್ಟು ದಟ್ಟ ಮಂಜು, ಜೊತೆಗೆ ಮೈಕೊರೆಯುವ ಚಳಿ. ಹತ್ತಿರದ ವ್ಯೂ ಪಾಯಿಂಟ್‌ನಲ್ಲಿದ್ದ ಪುಟ್ಟ ಶೆಡ್ ಒಂದರಲ್ಲಿ ಆಶ್ರಯ ಪಡೆದು ನಿಂತಿದ್ದೆವು. ಆ ಅರ್ಧ ಗಂಟೆಯ ಅನುಭವ, ಪ್ರಕೃತಿಯ ಆ ಆರ್ಭಟದ ಮುಂದೆ ನಾವೆಷ್ಟು ಕ್ಷುಲ್ಲಕ ಎಂದು ಅರಿವಾದ ಕ್ಷಣ. ಆ ಮಳೆಯಲ್ಲಿ ತೋಯ್ದು ತೊಪ್ಪೆಯಾಗಿದ್ದರೂ, ಆ ಅನುಭವ ನೀಡಿದ ರೋಮಾಂಚನ ಇಂದಿಗೂ ಮಾಸಿಲ್ಲ. ಹಾಗೆಯೇ, ಐತಿಹಾಸಿಕ ಸ್ಥಳಗಳು ಮಳೆಯಲ್ಲಿ ಇನ್ನಷ್ಟು ಸುಂದರವಾಗಿ ಕಾಣುತ್ತವೆ. ಬಾದಾಮಿಯ ಕೆಂಪು ಕಲ್ಲಿನ ಗುಹೆಗಳು ಮಳೆಗೆ ತೊಳೆದು ಇನ್ನಷ್ಟು ಕೆಂಪಾದಂತೆ, ಹಂಪಿಯ ಕಲ್ಲಿನ ರಥ ಮಳೆಯಲ್ಲಿ ಸ್ನಾನ ಮಾಡಿ ಹೊಸ ಹೊಳಪು ಪಡೆದಂತೆ ಭಾಸವಾಗುತ್ತದೆ. ಪ್ರವಾಸಿಗರ ಗದ್ದಲವಿಲ್ಲದ ಆ ಸ್ಮಾರಕಗಳ ಮುಂದೆ ನಿಂತು ಮಳೆಯ ಸಂಗೀತ ಕೇಳುವುದಿದೆಯಲ್ಲ, ಅದೊಂದು ರೀತಿಯ ಧ್ಯಾನ. ಇತಿಹಾಸ ಮತ್ತು ಪ್ರಕೃತಿ ಅಲ್ಲಿ ಒಂದಾದಂತೆ ಭಾಸವಾಗುತ್ತದೆ. ಪ್ರತಿ ಮಳೆ ಹನಿಯೂ ಕಲ್ಲಿನ ಮೇಲಿನ ಕಥೆಗಳನ್ನು ನಮಗೆ ಪಿಸುಗುಟ್ಟುತ್ತಿರುವಂತೆ ಅನಿಸುತ್ತದೆ.

ಮಳೆಗಾಲದಲ್ಲಿ ಪ್ರಯಾಣಿಸುವುದು ಎಲ್ಲರಿಗೂ ಇಷ್ಟವಾಗುವುದಿಲ್ಲ. ಕೆಸರು, ಜಿಗಣೆಗಳ ಕಾಟ, ಹಾದಿ ಮಧ್ಯೆ ಸಂಚಾರಕ್ಕೆ ಅಡ್ಡಿ ಹೀಗೆ ನೂರೆಂಟು ಸಮಸ್ಯೆಗಳಿರುತ್ತವೆ. ಆದರೆ, ಇದನ್ನು ಮೀರಿದ ಒಂದು ಸೌಂದರ್ಯವಿದೆ. ಬೇಸಿಗೆಯಲ್ಲಿ ಒಣಗಿ ನಿಂತ ಮರಗಳೆಲ್ಲಾ ಮೈದುಂಬಿ ಹಸಿರು ಸೀರೆಯುಟ್ಟಂತೆ ಕಂಗೊಳಿಸುತ್ತವೆ. ಬಂಡೆಗಳ ನಡುವಿನಿಂದ ಹೊಸದಾಗಿ ಜಲಪಾತಗಳು ಹುಟ್ಟಿಕೊಳ್ಳುತ್ತವೆ. ಪ್ರಕೃತಿ ತನ್ನ ಅತ್ಯಂತ ವೈಭೋಗದ ರೂಪದಲ್ಲಿ ನಮಗೆ ದರ್ಶನ ನೀಡುವುದು ಮಳೆಗಾಲದಲ್ಲೇ. ಮಳೆಗಾಲದ ಪ್ರಯಾಣ ನಮಗೆ ಸಹನೆಯನ್ನು ಕಲಿಸುತ್ತದೆ. ಅನಿರೀಕ್ಷಿತ ಸವಾಲುಗಳನ್ನು ಎದುರಿಸಲು ಸಿದ್ಧಗೊಳಿಸುತ್ತದೆ. ಎಲ್ಲವೂ ನಮ್ಮ ಯೋಜನೆಯಂತೆಯೇ ನಡೆಯಬೇಕೆಂಬ ಹಠವನ್ನು ಬಿಟ್ಟು, ಪರಿಸ್ಥಿತಿಗೆ ಹೊಂದಿಕೊಂಡು ಸಾಗುವುದನ್ನು ಕಲಿಸುತ್ತದೆ. ಜಿನುಗುವ ಮಳೆಯಲ್ಲಿ ನೆನೆಯುತ್ತಾ, ಬಿಸಿ ಮೆಕ್ಕೆಜೋಳದ ತೆನೆ ತಿನ್ನುತ್ತಾ ಸಾಗುವ ಪಯಣದ ಖುಷಿಯೇ ಬೇರೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ನೀರಿನ ಹಬೆ (2)
3. ಮತ್ತೊಂದು ಚಿತ್ತದೊಂದಿಗೆ ಬಂದಿದೆ ಲಕ್ಷ್ಯ (3)
5. ಮಗನೂ ಆಗಬಲ್ಲ ಕರು (2)
6. ಲಂಗದ ಜತೆಗೆ ಹಾಕಿಕೊಳ್ಳುತ್ತಿದ್ದ ಮೇಲುಹೊದಿಕೆ (3)
7. ಇಂದ್ರಜಾಲ ವಿದ್ಯೆ (3)
8. ಗೆಲುವು ಎರಡಕ್ಷರದಲ್ಲಿ (2)
9. ದುಃಖಿಸುವುದು ಎಂದರ್ಥ ಕೊಡುವ ಸೂರ್ಯ (3)
11. ಸರಕಾರಕ್ಕೆ ಕೊಡಬೇಕಾದ ಸುಂಕ (2)
13. ವಿಷ್ಣುವಿನ ವಾಹನ (3)
14. ಅವನಿಗೆ ಸಿಕ್ಕಿತು ಭೂಮಿ (3)
16. ಎಳ್ಳು (2)
18. ಮರುಳುಗೊಳಿಸುವಂತಹ ಎಂದರ್ಥ (3)
20. ಪ್ರಾಣ ತೆಗೆಯಬಲ್ಲ ನಂಜು (2)
21. ಕೃಷ್ಣನ ಮತ್ತೊಂದು ಹೆಸರು (3)
22. ಮತ್ತೊಂದು ಹಸುವಿನ ನಡುವೆ ಸಿಲುಕಿದೆ ಸುಡುವಿಕೆ (3)
23. ಬಹಳಷ್ಟು ವಸ್ತುಗಳನ್ನು ಒಯ್ಯಬಹುದಾದ ದೊಡ್ಡ ವಾಹನ (2)
24. ವನದಲ್ಲಿ ಬರೆದ ಪದ್ಯ (3)
25. ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡವನು, ಯೋಗಿ (2)

ಮೇಲಿಂದ ಕೆಳಕ್ಕೆ

2. ಮತ್ತೊಬ್ಬರಿಗೆ ಬೀಳ್ಕೊಡುಗೆ (3)
3. ಹಲವು ಜನರಿಗೆ ಕಷ್ಟವಾಗುವ ಪಠ್ಯವಿಷಯ ಕಬ್ಬಿಣದ ಕಡಲೆಯಂತೆ (3)
4. ಎರಡು ಕಡೆಯಿಂದ ನೋಡಿದರೂ ಕಣ್ಣೇ (3)
5. ವ್ಯಾಪಾರಿ, ವರ್ತಕ (3)
8. ಪ್ರಜೆಗಳೆಲ್ಲರ ಲೆಕ್ಕ ಹಾಕುವಿಕೆ (5)
10. ಕಾಗದ, ಓಲೆ (2)
12. ಆನಂದದಿಂದ ಕಳೆಯುವ ಕ್ಷಣ (5)
15. ಅತಿಯಾದ ಬಾಯಾರಿಕೆ (2)
17. ಗುರಿಯಿಟ್ಟು ಎಸೆಯಬೇಕಾದ ದೇಸಿ ಆಟ (3)
18. ಗಣೇಶನಿಗೆ ಪ್ರಿಯವಾದ ಸಿಹಿತಿಂಡಿ (3)
19. ಯುದ್ಧ, ಸಮರ (3)
20. ಎಲ್ಲರಿಗಿರಬೇಕಾದ ನಮ್ರತೆ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 1. ಆವಿ 3. ಗಮನ 5. ವತ್ಸ 6. ದಾವಣಿ 7. ಯಕ್ಷಿಣಿ 8. ಜಯ 9. ತಪನ 11. ಕರ 13. ಗರುಡ 14. ಅವನಿ 16. ತಿಲ 18. ಮೋಹಕ 20. ವಿಷ 21. ಗೋವಿಂದ 22. ದಹನ 23. ಲಾರಿ 24. ಕವನ 25. ಯತಿ

ಮೇಲಿಂದ ಕೆಳಕ್ಕೆ: 2. ವಿದಾಯ 3. ಗಣಿತ 4. ನಯನ 5. ವಣಿಕ 8. ಜನಗಣತಿ 10. ಪತ್ರ 12. ರಸನಿಮಿಷ 15. ದಾಹ 17. ಲಗೋರಿ 18. ಮೋದಕ 19. ಕದನ 20. ವಿನಯ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಆ್ಯಷಸ್ ಟೆಸ್ಟ್ ಸರಣಿಗೆ ಪ್ಯಾಟ್ ಕಮಿನ್ಸ್ ಅಲಭ್ಯ?

ಕ್ಯಾನ್‌ಬೆರಾ: ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ನಡುವಿನ ಬಹುನಿರೀಕ್ಷಿತ ಆ್ಯಷಸ್ ಟೆಸ್ಟ್ ಸರಣಿ ನವೆಂಬರ್ 21ರಂದು ಆರಂಭವಾಗಲಿದೆ. ಒಟ್ಟು 5 ಪಂದ್ಯಗಳ ಈ



ಟೆಸ್ಟ್ ಸರಣಿಯ ಮೊದಲ ಪಂದ್ಯಕ್ಕೆ ನಾಯಕ ಪ್ಯಾಟ್ ಕಮಿನ್ಸ್ ಅಲಭ್ಯರಾಗಿದ್ದಾರೆ. ಆದರೆ ಇದೀಗ ಅವರು ಟೆಸ್ಟ್ ಸರಣಿಯಿಂದಲೇ ಹೊರ ಬೀಳಲಿದ್ದಾರೆಂದು ವರದಿಯಾಗಿದೆ. ಕಳೆದ ವಾರ ನಡೆದಿದ್ದ ಸ್ಕ್ಯಾನಿಂಗ್ ಪರೀಕ್ಷೆಯಲ್ಲಿ ಅವರ ಬೆನ್ನು ಮೂಳೆ ಗಾಯಕ್ಕೆ ಒಳಗಾಗಿರುವುದು ಕಂಡು ಬಂದಿದೆ. ಹಾಗಾಗಿ ಸಂಪೂರ್ಣವಾಗಿ ಗುಣಮುಖರಾಗಲು ಅವರಿಗೆ ಇನ್ನಷ್ಟು ದಿನಗಳು ಅಗತ್ಯವಿದೆ. ಇದರಿಂದಾಗಿ ಆ್ಯಷಸ್ ಟೆಸ್ಟ್ ಸರಣಿಯಲ್ಲಿ ಆಸ್ಟ್ರೇಲಿಯಾ ತಂಡವನ್ನು ಸ್ಟೀವನ್ ಸ್ಮಿತ್ ಮುನ್ನಡೆಸುವ ಸಾಧ್ಯತೆ ಇದೆ. ಈ ಕುರಿತು ಈವರೆಗೆ ಆಸ್ಟ್ರೇಲಿಯಾ ಕ್ರಿಕೆಟ್ ಮಂಡಳಿ ಯಾವುದೇ ಅಧಿಕೃತ ಪ್ರತಿಕ್ರಿಯೆ ನೀಡಿಲ್ಲ.

ರಣಜಿ ಬಂಗಾಳ ತಂಡ: ಶಮಿ, ಆಕಾಶ್ ಸೇರ್ಪಡೆ

ಕೋಲ್ಕತ್ತ: ಪ್ರಸಕ್ತ ಋತುವಿನ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಬಂಗಾಳ ತಂಡಕ್ಕೆ ಅಭಿಮನ್ಯು ಈಶ್ವರನ್ ಅವರನ್ನು ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ. ಭಾರತ ತಂಡದ ವೇಗದ ಬೌಲರ್ ಮೊಹಮ್ಮದ್ ಶಮಿ ಹಾಗೂ ಆಕಾಶ್ ದೀಪ್ ತಂಡದಲ್ಲಿದ್ದಾರೆ. ಇದೇ 15ರಿಂದ ಟೂರ್ನಿಯು ಆರಂಭವಾಗಲಿದೆ. ಬಂಗಾಳ ಕ್ರಿಕೆಟ್ ಸಂಸ್ಥೆ (ಸಿಎಬಿ) ಬುಧವಾರ ತಂಡವನ್ನು ಆಯ್ಕೆ ಮಾಡಿದೆ. ಬಂಗಾಳ ತಂಡವು ಸಿ ಗುಂಪಿನಲ್ಲಿ ಕಣಕ್ಕಿಳಿಯಲಿದೆ. ಇದೇ ಗುಂಪಿನಲ್ಲಿ ಗುಜರಾತ್, ಹರಿಯಾಣ, ಸರ್ವಿಸಸ್, ರೈಲ್ವೇಸ್, ತ್ರಿಪುರ, ಉತ್ತರಾಖಂಡ ಮತ್ತು ಅಸ್ಸಾಂ ತಂಡಗಳೂ ಇವೆ. ಅಭಿಮನ್ಯು ಈಶ್ವರನ್ ಬಂಗಾಳ ತಂಡದ ನಾಯಕರಾಗಿದ್ದಾರೆ. ಅಭಿಷೇಕ್ ಪೊರೆಲ್ ಉಪನಾಯಕ ಮತ್ತು ವಿಕೆಟ್ ಕೀಪರ್ ಆಗಿ ಕಾರ್ಯನಿರ್ವಹಿಸಲಿದ್ದಾರೆ.

ವಿರಾಮ
ಪ್ರತಿ ಭಾನುವಾರ

ವಿಶ್ವಕಪ್ ಮಹಿಳಾ ಕ್ರಿಕೆಟ್ | ಬೆತ್ ಮೂನಿ ಶತಕ, ಅಲನಾ ಕಿಂಗ್ ಅರ್ಧ ಶತಕ

ಪಾಕ್ ವಿರುದ್ಧ ಆಸೀಸ್‌ಗೆ ಜಯ

ಅಲನಾ ಕಿಂಗ್: ಅಜೇಯ ಅರ್ಧ ಶತಕ

ಶತಕ ಸಿಡಿಸಿದ ಬೆತ್ ಮೂನಿ

ಕೊಲಂಬೊ: ಬೆತ್ ಮೂನಿ ಅವರ ಅಮೋಘ ಶತಕ (109) ಮತ್ತು ಅಲನಾ ಕಿಂಗ್ ಅವರ ಅಜೇಯ ಅರ್ಧ ಶತಕದ (51) ನೆರವಿನಿಂದ ಮಹಿಳಾ ಏಕದಿನ ವಿಶ್ವಕಪ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು ಬುಧವಾರ ಪಾಕಿಸ್ತಾನ ವಿರುದ್ಧ 107 ರನ್‌ಗಳ ಭರ್ಜರಿ ಜಯ ಗಳಿಸಿತು. 222 ರನ್‌ಗಳ ಗೆಲುವಿನ ಗುರಿ ಪಡೆದ ಪಾಕಿಸ್ತಾನವು 36.3 ಓವರ್‌ಗಳಲ್ಲಿ 114 ರನ್‌ಗಳಿಗೆ ಆಲೌಟ್ ಆಯಿತು.

ಪಾಕ್ ಪರ ಸಿದ್ರಾ ಅಮೀನ್ 35 ರನ್ ಗಳಿಸಿದ್ದನ್ನು ಹೊರತುಪಡಿಸಿದರೆ, ಉಳಿದ ಬ್ಯಾಟರ್‌ಗಳು ಬ್ಯಾಟಿಂಗ್‌ನಲ್ಲಿ ವೈಫಲ್ಯ ಕಂಡರು. ಫಾತಿಮ ಸನಾ 11 ರನ್, ರಮೀನ್ ಶಮೀಮ್ 15 ರನ್ ಮತ್ತು ನಶ್ರಾ ಶಂಧು 11 ರನ್ ಗಳಿಸಿದರೆ, ಉಳಿದ ಯಾವ ಬ್ಯಾಟರ್‌ಗಳೂ ಎರಡಂಕಿ ತಲುಪುವಲ್ಲಿ ವಿಫಲರಾದರು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಆರಂಭಿಸಿದ್ದ ಆಸ್ಟ್ರೇಲಿಯಾದ ಆರಂಭ ಕೂಡಾ ಉತ್ತಮವಾಗಿರಲಿಲ್ಲ. 60 ರನ್‌ಗೆ ಐದು ವಿಕೆಟ್, ಬಳಿಕ 76 ರನ್‌ಗೆ ಏಳು ವಿಕೆಟ್ ಹಾಗೂ 115 ರನ್‌ಗೆ ಎಂಟು ವಿಕೆಟ್ ಕಳೆದುಕೊಂಡು ಆಸೀಸ್ ಸಂಕಷ್ಟಕ್ಕೆ ಸಿಲುಕಿತ್ತು. ಅಗ್ರ ಕ್ರಮಾಂಕದ ಬ್ಯಾಟರ್‌ಗಳಾದ ನಾಯಕಿ ಅಲಿಸಾ ಹೀಲಿ (20), ಎಲ್ಲಿಸ್ ಪೆರ್ರಿ (5), ಅನ್ನಾಬೆಲ್ ಸದರ್‌ಲ್ಯಾಂಡ್ (1) ಹಾಗೂ ಆಶ್ಲೀ ಗಾರ್ಡನರ್ (1) ಬ್ಯಾಟಿಂಗ್‌ನಲ್ಲಿ ನಿರಾಸೆ ಮೂಡಿಸಿದ್ದರು.

ಆದರೆ ನಾಲ್ಕನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಬೆತ್ ಮೂನಿ, ಸಮಯೋಚಿತ ಶತಕ ಬಾರಿಸುವ ಮೂಲಕ ಪಂದ್ಯದ ಚಿತ್ರಣವನ್ನೇ ಬದಲಿಸಿದರು. ಪಾಕ್ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದ ಆಸೀಸ್‌ನ ವಿಕೆಟ್ ಕೀಪರ್ ಬೆತ್ ಮೂನಿ, ವಿಶ್ವಕಪ್‌ನಲ್ಲಿ ಚೊಚ್ಚಲ ಶತಕದ ಸಾಧನೆ ಮಾಡಿದರು. ಒಂಬತ್ತನೇ ವಿಕೆಟ್‌ಗೆ ಅಲನಾ ಕಿಂಗ್ ಅವರೊಂದಿಗೆ ಶತಕದ (106) ಜತೆಯಾಟ ಪ್ರದರ್ಶಿಸಿದರು.

ಬೆತ್ ಮೂನಿಗೆ ಸೂಕ್ತ ಬೆಂಬಲ ನೀಡಿದ ಅಲನಾ ಕಿಂಗ್ 49 ಎಸೆತಗಳಲ್ಲಿ ಅರ್ಧಶತಕದೊಂದಿಗೆ ಅಜೇಯರಾಗುಳಿದರು. ಅವರ ಇನ್ನಿಂಗ್ಸ್‌ನಲ್ಲಿ ತಲಾ ಮೂರು ಬೌಂಡರಿ ಹಾಗೂ ಸಿಕ್ಸರ್ ಸೇರಿದ್ದವು.

ಇನ್ನೊಂದೆಡೆ ಇನಿಂಗ್ಸ್‌ನ ಕೊನೆಯ ಎಸೆತದಲ್ಲಿ ಔಟ್ ಆದ ಮೂನಿ 114 ಎಸೆತಗಳಲ್ಲಿ 109 ರನ್ ಗಳಿಸಿ ಅಬ್ಬರಿಸಿದರು. ಬೆತ್ ಮೂನಿ ಅವರ ಕಲಾತ್ಮಕ ಇನಿಂಗ್ಸ್‌ನಲ್ಲಿ 11 ಬೌಂಡರಿಗಳು ಸೇರಿದ್ದವು, ಇದು ಏಕದಿನದಲ್ಲಿ ಮೂನಿ ಅವರ ಐದನೇ ಶತಕದ ಸಾಧನೆಯಾಗಿದೆ.

ಪಾಕಿಸ್ತಾನದ ಪರ ನಶಾ ಸಂಧು ಮೂರು ಮತ್ತು ರಮೀನ್ ಶಮೀಮ್ ಹಾಗೂ ನಾಯಕಿ ಫಾತಿಮಾ ಸನಾ ತಲಾ ಎರಡು ವಿಕೆಟ್ ಗಳಿಸಿದರು.

5,798 ಮೀ ಎತ್ತರದಲ್ಲಿ ಕಾರು ಚಾಲನೆ | ಜೆ. ಕೆ ಟೈರ್ ಬೆಂಬಲದೊಂದಿಗೆ ಡ್ರಿಫ್ಟಿಂಗ್

ಸನಂ ಸೇಖೋನ್ ಗಿನ್ನಿಸ್ ದಾಖಲೆ

ಬೆಂಗಳೂರು: ಸನಂ ಸೇಖೋನ್ 2025ರ ಜುಲೈ 31ರಂದು ಲಡಾಖ್‌ನ ಉಮ್ಲಿಂಗ್ ಲಾ ಪಾಸ್‌ನಲ್ಲಿ 5,798 ಮೀಟರ್ (19,023 ಅಡಿ) ಎತ್ತರದಲ್ಲಿ ಕಾರು ಚಾಲನೆಯ ಅತ್ಯುನ್ನತ ಎತ್ತರದ ಡ್ರಿಫ್ಟ್ ನಡೆಸಿ ಹೊಸ ಗಿನ್ನೆಸ್ ವಿಶ್ವ ದಾಖಲೆ ನಿರ್ಮಿಸಿ ಮೋಟಾರ್ ಸ್ಪೋರ್ಟ್ಸ್ ಇತಿಹಾಸದಲ್ಲೇ ಮಹತ್ತರ ಸಾಧನೆ ಮಾಡಿದ್ದಾರೆ. ಭಾರತದ ಡ್ರಿಫ್ಟ್ ಕಿಂಗ್ ಎಂದು ಖ್ಯಾತಿ ಪಡೆದಿರುವ ಸನಂ ಸೇಖೋನ್, ತನ್ನ ಧೈರ್ಯ ಮತ್ತು ಸಾಮರ್ಥ್ಯದಿಂದ ಭಾರತೀಯ ಮೋಟಾರ್‌ಸ್ಪೋರ್ಟ್ಸ್‌ನಲ್ಲಿ ಖ್ಯಾತಿಗೊಂಡಿದ್ದಾರೆ.

2023ರಲ್ಲಿ ನಡೆದಿದ್ದ ಪ್ರಥಮ ಜೆ.ಕೆ ಟೈರ್ ಡ್ರಿಫ್ಟ್ ಚಾಲೆಂಜ್‌ನ ವಿಜೇತರಾದ ಸನಂ ಮಾತನಾಡಿ, 'ಈ ದಾಖಲೆ ಮಾಡಿದ್ದಕ್ಕೆ ನಾನು ತುಂಬಾ ಸಂತೋಷವಾಗಿದ್ದೇನೆ, ನನ್ನ ತಂಡವಿಲ್ಲದಿದ್ದರೆ ಈ ಸಾಧನೆ ಸಾಧ್ಯವಾಗುತ್ತಿರಲಿಲ್ಲ. ನಾವು ಮಾನಸಿಕ ಹಾಗೂ ದೈಹಿಕವಾಗಿ ಸಿದ್ಧರಾಗಿದ್ದರೂ, ಆಮ್ಲಜನಕದ ಮಟ್ಟ ಮತ್ತು ಎತ್ತರವು ನಮಗೆ ದೊಡ್ಡ ಸವಾಲಾಗಿತ್ತು. ಸುತ್ತಾಡಿ ಎಲ್ಲಾ ಕೆಲಸಗಳನ್ನು ನಿರ್ವಹಿಸುವುದೇ ಕಷ್ಟವಾಗಿತ್ತು. ಥಾಯ್ಲೆಂಡ್‌ನಿಂದ ಬಂದ ಟ್ಯೂನರ್ ಮತ್ತು ನಿರಂತರ ಇಂಧನ ಸರಬರಾಜು ಇವೆಲ್ಲವನ್ನೂ ಸಮನ್ವಯಗೊಳಿಸುವುದೇ ಒಂದು ಸವಾಲಾಗಿತ್ತು. ಡ್ರಿಫ್ಟಿಂಗ್‌ನಲ್ಲಿ ಟೈರ್‌ಗಳೇ ಎಲ್ಲ, ಶಕ್ತಿಶಾಲಿ ಎಂಜಿನ್ ಹಾಗೂ ಪರಿಪೂರ್ಣ ಸೆಟಪ್ ಇದ್ದರೂ ಕೂಡ ರಸ್ತೆಯನ್ನು ಮುಟ್ಟುವುದು ಟೈರ್‌ಗಳೇ ಎಂದು ಹೇಳಿದ್ದಾರೆ.

ಈ ಬಗ್ಗೆ ಮಾತನಾಡಿದ 'ಜೆ.ಕೆ ಟೈರ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ. ರಘುಪತಿ ಸಿಂಘಾನಿಯಾ, ಈ ಗಿನ್ನೆಸ್ ವರ್ಲ್ಡ್ ರೆಕಾರ್ಡ್ ಭಾರತೀಯ ಮೋಟಾರ್ ಸ್ಪೋರ್ಟ್ಸ್‌ಗಾಗಿ ಹೆಮ್ಮೆಯ ಕ್ಷಣವಾಗಿದ್ದು, ಜೆ.ಕೆ ಟೈರ್‌ನ ಆವಿಷ್ಕಾರಾತ್ಮಕ ಮನೋಭಾವದ ಪ್ರತೀಕವಾಗಿದೆ. ಸನಂ ಸೇಖೋನ್ ಅವರಂತಹ ಅದ್ಭುತ ಚಾಲಕರನ್ನು ಬೆಂಬಲಿಸುವ ಮೂಲಕ ಮತ್ತು ನಮ್ಮ ತಂತ್ರಜ್ಞಾನವನ್ನು ಪರೀಕ್ಷಿಸುವ ಮೂಲಕ ಭಾರತೀಯ ಪ್ರತಿಭೆ ಮತ್ತು ಎಂಜಿನಿಯರಿಂಗ್ ಜಾಗತಿಕ ವೇದಿಕೆಯಲ್ಲಿ ಎತ್ತರದಿಂದ ನಿಲ್ಲಬಹುದು ಎಂಬುದನ್ನು ನಾವು ತೋರಿಸಿದ್ದೇವೆ' ಎಂದು ಶ್ಲಾಘಿಸಿದ್ದಾರೆ.

ಸಂಜು, ರೋಹಿತ್, ಮಂಧಾನಾಗೆ ಪ್ರಶಸ್ತಿ

ದೆಹಲಿ: ಸಿಯೆಟ್ ಕಂಪನಿ ನೀಡುವ ಈ ಸಾಲಿನ ಪುರುಷರ ವರ್ಷದ ಅಂತಾರಾಷ್ಟ್ರೀಯ ಕ್ರಿಕೆಟಿಗ ಪ್ರಶಸ್ತಿಯನ್ನು ಇಂಗ್ಲೆಂಡ್ ಕ್ರಿಕೆಟ್ ತಂಡದ ಹಿರಿಯ ಆಟಗಾರ ಜೋ ರೂಟ್ ಪಡೆದುಕೊಂಡಿದ್ದಾರೆ. ಏಕದಿನ ಪಂದ್ಯಗಳಲ್ಲಿನ ಬ್ಯಾಟರ್ ಆಫ್ ದಿ ಇಯರ್ ಪ್ರಶಸ್ತಿ ನ್ಯೂಜಿಲ್ಯಾಂಡ್‌ನ ಕೇನ್ ವಿಲಿಯಮ್ಸನ್, ವರ್ಷದ ಟಿ20 ಬ್ಯಾಟರ್ ಆಫ್ ದಿ ಇಯರ್ ಪ್ರಶಸ್ತಿಯು ಟೀಮ್ ಇಂಡಿಯಾದ ಸಂಜು ಸ್ಯಾಮ್ಸನ್ ಅವರಿಗೆ ನೀಡಲಾಗಿದೆ.

ಜೀವಮಾನದ ಸರ್ವಶ್ರೇಷ್ಠ ಸಾಧನೆಗಾಗಿ ವೆಸ್ಟ್ ಇಂಡೀಸ್ ತಂಡದ ಮಾಜಿ ಆಟಗಾರ ಬ್ರಿಯಾನ್ ಲಾರಾ ಹಾಗೂ ಭಾರತದ ಬಿ.ಎಸ್ ಚಂದ್ರಶೇಖರ್ ಅವರಿಗೆ ಪ್ರಶಸ್ತಿ ನೀಡಲಾಗಿದೆ. ಚಾಂಪಿಯನ್ಸ್ ಟ್ರೋಫಿ ಗೆದ್ದಿದ್ದಕ್ಕಾಗಿ ರೋಹಿತ್ ಶರ್ಮ ಅವರಿಗೆ ವಿಶೇಷ ಸ್ಮರಣಿಕೆ ನೀಡಲಾಗಿದೆ.

ಟೀಮ್ ಇಂಡಿಯಾ ಮಹಿಳಾ ಆಟಗಾರ್ತಿಯರಾದ ಸ್ಮೃತಿ ಮಂಧಾನಾ ಮತ್ತು ದೀಪ್ತಿ ಶರ್ಮ ವರ್ಷದ ಮಹಿಳಾ ಬ್ಯಾಟರ್ ಮತ್ತು ವರ್ಷದ ಮಹಿಳಾ ಬೌಲರ್ ಪ್ರಶಸ್ತಿಗೆ ಭಾಜನರಾದರು. ವರ್ಷದ ಅತ್ಯುತ್ತಮ ನಾಯಕ ಪ್ರಶಸ್ತಿ ದಕ್ಷಿಣ ಆಫ್ರಿಕಾದ ಟೆಂಬ ಬವುಮಾ ಅವರಿಗೆ ಲಭಿಸಿದೆ. ಅವರು ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಗೆಲ್ಲುವ ಮೂಲಕ ತಂಡಕ್ಕೆ ಚೊಚ್ಚಲ ವಿಶ್ವಕಪ್ ತಂದುಕೊಟ್ಟಿದ್ದರು.

ಬ್ಯಾಟಿಂಗ್‌ಗೆ ಪಿಚ್ ಪೂರಕವಾಗುವ ನಿರೀಕ್ಷೆ

ಭಾರತಕ್ಕಿಂದು ದ.ಆಫ್ರಿಕಾ ಸವಾಲು

ವಿಶಾಖಪಟ್ಟಣ: ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಇಂದು ಇಲ್ಲಿ ನಡೆಯುವ ಪಂದ್ಯದಲ್ಲಿ ಭಾರತವು ದಕ್ಷಿಣ ಆಫ್ರಿಕಾವನ್ನು ಎದುರಿಸಲಿದೆ. ಈ ಸಲದ ಟೂರ್ನಿಯಲ್ಲಿ ನಿರೀಕ್ಷಿತ ಬ್ಯಾಟಿಂಗ್ ಪ್ರದರ್ಶಿಸಲು ವಿಫಲಗೊಂಡಿರುವ ಭಾರತೀಯ ಬ್ಯಾಟರ್‌ಗಳಿಗೆ ಇಲ್ಲಿನ ಪಿಚ್ ನೆರವಾಗುವ ನಿರೀಕ್ಷೆ ಇದೆ.

ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡವು ಕಳೆದ ಮೂರು ದಿನಗಳಿಂದ ಇಲ್ಲಿ ಕಠಿಣಾಭ್ಯಾಸದಲ್ಲಿ ತೊಡಗಿದೆ. 2014ರಲ್ಲಿ ಭಾರತ ಮತ್ತು ಶ್ರೀಲಂಕಾ ತಂಡಗಳು ಪೈಪೋಟಿ ನಡೆಸಿದ 11 ವರ್ಷಗಳ ಬಳಿಕ ಮಹಿಳಾ ಏಕದಿನ ಪಂದ್ಯಕ್ಕೆ ಈ ತಾಣ ವೇದಿಕೆಯಾಗುತ್ತಿದೆ. 'ಐಪಿಎಲ್ ಸೇರಿದಂತೆ ಹಿಂದಿನ ಕೆಲವು ಪಂದ್ಯಗಳನ್ನು ಗಮನಿಸಿದರೆ ಇಲ್ಲಿನ ಪಿಚ್ ಬ್ಯಾಟರ್‌ಗಳಿಗೆ ನೆರವಾಗುತ್ತಿದೆ. ಬೌಲರ್‌ಗಳು ವಿಶೇಷವಾಗಿ ಇಬ್ಬನಿ ಇಲ್ಲದಿದ್ದರೆ ಸ್ಪಿನ್ನರ್‌ಗಳು ಮೇಲುಗೈ ಸಾಧಿಸಬಹುದು' ಎಂದು ಆಂಧ್ರ ಕ್ರಿಕೆಟ್ ಅಸೋಸಿಯೇಶನ್ ಅಧಿಕಾರಿಯೊಬ್ಬರು ತಮ್ಮ ಕ್ರೀಡಾಂಗಣದ ಪಿಚ್ ಬಗ್ಗೆ ಹೇಳಿದ್ದಾರೆ.

ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಮುಖಾಮುಖಿಯಾದಾಗ, ಎಲ್ಲರ ಕಣ್ಣುಗಳು ಭಾರತದ ಸ್ಮೃತಿ ಮಂಧಾನ ಮತ್ತು ದ. ಆಫ್ರಿಕಾದ ತಜ್ಮಿನ್ ಬ್ರಿಟ್ಸ್ ಅವರಿಬ್ಬರ ಮೇಲೆ ಇರುತ್ತವೆ. ಈ ಇಬ್ಬರು ಆಟಗಾರ್ತಿಯರೂ ಈ ವರ್ಷದ ಮಹಿಳಾ ಏಕದಿನ ಪಂದ್ಯಗಳಲ್ಲಿ ಅತಿ ಹೆಚ್ಚು ರನ್ ಮತ್ತು ಅತ್ಯಧಿಕ ಶತಕ ಬಾರಿಸಿದ್ದಾರೆ. ಮಂಧಾನ ನಾಲ್ಕು ಶತಕಗಳು ಸೇರಿದಂತೆ 800ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ.

ಇತ್ತ ಹಿಂದಿನ ಪಂದ್ಯದಲ್ಲಿ ತಜ್ಮಿನ್ ಬ್ರಿಟ್ಸ್ ಒಂದೇ ವರ್ಷದಲ್ಲಿ ಐದು ಶತಕಗಳನ್ನು ಗಳಿಸಿದ ವಿಶ್ವ ದಾಖಲೆಯನ್ನೂ ಸಹ ನಿರ್ಮಿಸಿದ್ದಾರೆ. ಈ ಟೂರ್ನಿಯಲ್ಲಿ ಮಂಧನಾ ನಿರೀಕ್ಷಿತವಾಗಿ ಬ್ಯಾಟಿಂಗ್ ಮಾಡಲಾಗದಿದ್ದರೂ, ಈ ಮೂರನೇ ಪಂದ್ಯದಲ್ಲಿ ಭಾರತ ಕ್ರಿಕೆಟ್ ಪ್ರೇಮಿಗಳ ಚಿತ್ತ ಅವರ ಬ್ಯಾಟಿಂಗ್‌ನತ್ತ ಹರಿದಿದೆ. ಹಾಗಾಗಿ ಎರಡೂ ತಂಡಗಳು ಪೈಪೋಟಿಯ ಸ್ಪರ್ಧೆ ನೀಡಬಹುದೆನ್ನುವ ಕುತೂಹಲವಿದೆ.

ಭಾರತ ಸಂಭಾವ್ಯ ತಂಡ: ಪ್ರತೀಕಾ ರಾವಲ್, ಸ್ಮೃತಿ ಮಂಧಾನ, ಹರ್ಲೀನ್ ಡಿಯೋಲ್, ಹರ್ಮನ್‌ಪ್ರೀತ್ ಕೌರ್(ನಾಯಕಿ), ಜೆಮಿಮಾ ರೋಡ್ರಿಗಸ್, ದೀಪ್ತಿ ಶರ್ಮಾ, ರಿಚಾ ಘೋಷ್ (ಕೀಪರ್), ಸ್ನೇಹ ರಾಣಾ, ರೇಣುಕಾ ಸಿಂಗ್ ಠಾಕೂರ್, ಕ್ರಾಂತಿ ಗೌಡ್, ಶ್ರೀ ಚರಣಿ.

ಇಂದು ಟೆನಿಸ್ ಪ್ರೀಮಿಯರ್ ಲೀಗ್-2025 ಹರಾಜು ಪ್ರಕ್ರಿಯೆ

ಎಸ್‌ಜಿ ಪೈಪರ್ಸ್ ತಂಡಕ್ಕೆ ರೋಹನ್ ಬೋಪಣ್ಣ

ಬೆಂಗಳೂರು: ಇಂದು ನಡೆಯಲಿರುವ ಟೆನಿಸ್ ಪ್ರೀಮಿಯರ್ ಲೀಗ್-2025 ಹರಾಜಿಗೂ ಮುನ್ನ ಎಸ್‌ಜಿ ಪೈಪರ್ಸ್ ಈ ಆವೃತ್ತಿಯ ಅತ್ಯಂತ ಶಕ್ತಿಶಾಲಿ ತಂಡಗಳಲ್ಲಿ ಒಂದಾಗಲು ಪ್ರಯತ್ನಿಸಿದೆ. ಎರಡು ಬಾರಿ ಗ್ರ್ಯಾಂಡ್‌ಸ್ಲ್ಯಾಮ್ ಚಾಂಪಿಯನ್ ಮತ್ತು ಎಟಿಪಿ ಮಾಸ್ಟರ್ಸ್ ಪ್ರಶಸ್ತಿ ಎರಡನ್ನೂ ಗೆದ್ದ ಅತ್ಯಂತ ಹಿರಿಯ ಆಟಗಾರ ರೋಹನ್ ಬೋಪಣ್ಣ, ಎಸ್‌ಜಿ ಪೈಪರ್ಸ್ ತಂಡವನ್ನು ಸೇರ್ಪಡೆಯಾಗಿದ್ದಾರೆ. ಬೋಪಣ್ಣರ ಸೇರ್ಪಡೆಯಿಂದ ಎಸ್‌ಜಿ ಪೈಪರ್ಸ್ ಈ ಬಾರಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವಾಗಿ ಹೊರಹೊಮ್ಮಲಿದೆ.

ಭಾರತದ ಅತ್ಯಂತ ಯಶಸ್ವಿ ಟೆನಿಸ್ ಆಟಗಾರರಲ್ಲಿ ಒಬ್ಬರಾಗಿರುವ ಹಾಗೂ ಎಸ್‌ಜಿ ಪೈಪರ್ಸ್ ಮಾಲೀಕತ್ವದ ಎಸ್ ಗುಪ್ತಾ ಸ್ಪೋರ್ಟ್ಸ್‌ನ ಸಿಇಒ ಆಗಿರುವ ಮಹೇಶ್ ಭೂಪತಿ ಮಾತನಾಡಿ, 'ಭಾರತೀಯ ಟೆನಿಸ್‌ನಲ್ಲಿ ಅತ್ಯುನ್ನತ ಮಟ್ಟದ ಪ್ರದರ್ಶನ ನೀಡುವ ತಂಡವನ್ನು ಕಟ್ಟುವುದು ನಮ್ಮ ಉದ್ದೇಶವಾಗಿದೆ. ರೋಹನ್ ಬೋಪಣ್ಣ ನಮ್ಮ ತಂಡದಲ್ಲಿ ಸೇರಿರುವುದು ನಮಗೆ ತುಂಬಾ ಸಂತೋಷ ತಂದಿದೆ. ಅವರ ಅಪಾರ ಅನುಭವ, ನಾಯಕತ್ವದ ಗುಣ ಮತ್ತು ಗೆಲ್ಲುವ ಮನೋಭಾವ ನಮ್ಮ ತಂಡಕ್ಕೆ ಅಮೂಲ್ಯವಾದುದ್ದಾಗಿದೆ. ಟಿಪಿಎಲ್ ಮುಂತಾದ ಲೀಗ್‌ಗಳು ಭಾರತೀಯ ಟೆನಿಸ್ ಅಭಿವೃದ್ಧಿಗೆ ಅತ್ಯಗತ್ಯ. ಇವು ಯುವ ಪ್ರತಿಭೆಗಳಿಗೆ ಸ್ಟಾರ್ ಆಟಗಾರರ ಜೊತೆ ಸ್ಪರ್ಧಿಸಲು ವೇದಿಕೆ ಒದಗಿಸುತ್ತವೆ' ಎಂದಿದ್ದಾರೆ.

ಮೆಚ್ಚುಗೆ ಪಡೆದ ಶರತ್ ಮತ್ತು ಶರಧಿ

ಏಪ್ರಿಲ್‌ನ ಹಿಮಬಿಂದು ಖ್ಯಾತಿಯ ನಿರ್ದೇಶಕ ಎಂ.ಜಗದೀಶ್ ಕಥೆ ಬರೆದು ನಿರ್ದೇಶನ ಮಾಡಿರುವ ಶರತ್ ಮತ್ತು ಶರಧಿ ಕಿರುಚಿತ್ರ ಬಿಡುಗಡೆಯಾಗಿದ್ದು



ಸಿನಿಪ್ರಿಯರಿಂದ ಮೆಚ್ಚುಗೆ ಪಡೆದಿದೆ. ಹಿರಿಯ ನಟ ದತ್ತಣ್ಣ, ಅಶ್ವಿನಿ, ವಿರೇಶ್, ಮುಂತಾದವರು ಕಿರುಚಿತ್ರದಲ್ಲಿ ನಟಿಸಿದ್ದಾರೆ. ಟಾಕ್‌ಗುರು ಕ್ರಿಯೇಶನ್ಸ್‌ನಲ್ಲಿ ಬಿ. ಎಂ.ಗಣೇಶ್. ಈ ಕಿರುಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಹೇಳುವಂತೆ ಇದೊಂತರ ಹೊಸ ಪ್ರಯತ್ನ, ಮತ್ತು ಜೀವನಕ್ಕೆ ಸ್ಫೂರ್ತಿ ತುಂಬುವ ಸ್ಟೋರಿ ಇದಾಗಿದೆ. ದಿವ್ಯಾಂಗರು ಛಲದಿಂದ ಬದುಕಿ ತೋರಿಸಬೇಕು ಎಂಬುದನ್ನು ಈ ಚಿತ್ರದ ಮೂಲಕ ಹೇಳಿದ್ದೇವೆ ಎಂದು ನಟಿ ಅಶ್ವಿನಿ ತಿಳಿಸಿದರು.

ವೀರೇಶ್ ಹಾಗೂ ಅಶ್ವಿನಿ ಎಲ್ಲರ ಮಧ್ಯೆ ಸುಖದಿಂದ ಬದುಕಿನ ಪಯಣ ಸಾಗಿಸುತ್ತಿದ್ದಾರೆ. ನಮಗೂ ಅವರಿಗೂ ದೊಡ್ಡ ವ್ಯತ್ಯಾಸ ಏನು ಇಲ್ಲ. ಸಮಾಜ ಕೂಡ ಅವರನ್ನು ಬೇರೆ ರೀತಿಯಲ್ಲಿ ನೋಡಬೇಕಾದ ಅಗತ್ಯ ಇಲ್ಲ. ನಾವು ವಿಭಿನ್ನವಾಗಿ ಸಬಲರಾಗಿದ್ದೇವೆ ಎಂಬ ಅರ್ಥಪೂರ್ಣ ಸಂದೇಶವನ್ನು ಇಲ್ಲಿ ಸಾರಲಾಗಿದೆ. ನಿರ್ದೇಶಕರಲ್ಲಿ ಗಮನಾರ್ಹ ಸೃಜನಾತ್ಮಕತೆ ಇದೆ. ಇಂತಹ ಚಿತ್ರಕ್ಕೆ ಹೆಚ್ಚಿನ ಮಾನ್ಯತೆ ಸಿಗಬೇಕಾಗಿದೆ ಎಂದು ಹಿರಿಯ ನಟ ದತ್ತಣ್ಣ ತಿಳಿಸಿದರು.

ಅನುಬಂಧದ ಮೇಲೆ ಮದುವೆ ಆಗಬೇಕೆ ಹೊರತು ಅನುಕಂಪದ ಮೇಲೆ ಮದುವೆ ಆಗಬಾರದು. ದುಖಃ ಪಡೋದಕ್ಕೆ ಸಾಕಷ್ಟು ಕಾರಣ ಇರುತ್ತವೆ. ಅದೇ ಸುಖವಾಗಿ ಇರೋದಕ್ಕೆ ಕಾರಣಗಳು ಬೇಕಾಗಿಲ್ಲ. ಸಂತೋಷವಾಗಿ ಇದ್ದೇವೆ ಅಂತ ಮನಸ್ಥಿತಿ ಇದ್ದರೆ ಸಾಕು ಎಂಬ ಸಂದೇಶ ಈ ಕಿರುಚಿತ್ರದಲ್ಲಿ ಅಡಕವಾಗಿದೆ ಎಂದು ನಿರ್ದೇಶಕ ಜಗನ್ನಾಥ್ ತಿಳಿಸಿದರು. ಸತೀಶ್ ಪದ್ಮನಾಭನ್ ಸಂಗೀತ ನಿರ್ದೇಶನ, ವಿನಯ್ ಛಾಯಾಗ್ರಹಣ ಈ ಚಿತ್ರಕ್ಕಿದೆ.



ಥ್ರಿಲ್ಲರ್ ಸ್ಟೋರಿಯ ಪ್ರೇಮಿಗಳ ಗಮನಕ್ಕೆ

ಆಧುನಿಕ ಕಾಲಘಟ್ಟದಲ್ಲಿ ಸಂಬಂಧಗಳು ಸಡಿಲಗೊಳ್ಳುತ್ತಿವೆ. ಆದರೆ ನಗರ ಪ್ರದೇಶಗಳಲ್ಲಿ ಲಿವಿಂಗ್ ರಿಲೇಶನ್‌ಶಿಪ್ ಹೆಚ್ಚಾಗುತ್ತಿದೆ. ಹೀಗೆ ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಲಿವಿಂಗ್ ರಿಲೇಶನ್‌ಶಿಪ್‌ನಲ್ಲಿದ್ದ ಇಬ್ಬರು ಪ್ರೇಮಿಗಳ ಸುತ್ತ ನಡೆಯುವ ಕಥೆಯನ್ನು ಹೊತ್ತ ಸಿನಿಮಾ ತೆರೆಗೆ ಬರಲು ಸಿದ್ಧವಾಗಿದೆ. ಪ್ರೇಮಿಗಳ ಗಮನಕ್ಕೆ ಎಂಬ ಶೀರ್ಷಿಕೆಯಲ್ಲಿ ಚಿತ್ರ ಮೂಡಿಬಂದಿದೆ. ವಿನ್ಸೆಂಟ್ ಇನ್ಬರಾಜ್ ಈ ಚಿತ್ರದ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದು, ಸಿಟಾಡೆಲ್ ಫಿಲಂಸ್ ಹಾಗೂ ಜೊಯಿಟಾ ಎಂಟರ್‌ಟೇನ್‌ಮೆಂಟ್‌ನಲ್ಲಿ ಸುಬ್ಬು ಹಾಗೂ ಯಕ್ಕಂಟಿ ರಾಜಶೇಖರ ರೆಡ್ಡಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಈ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು, ಕುತೂಹಲ ಮೂಡಿಸಿದೆ. ನಿರ್ದೇಶಕ ವಿಭಿನ್ನವಾದ ಪ್ರೇಮ ಕಥೆಯನ್ನು ಚಿತ್ರದಲ್ಲಿ ಕಟ್ಟಿಕೊಟ್ಟಿದ್ದಾರೆ. ಬಿಗ್‌ಬಾಸ್ ಖ್ಯಾತಿಯ ಶಶಿ ನಾಯಕನಾಗಿ ನಟಿಸಿದ್ದು, ಚಿರಶ್ರೀ ಆಂಚನ್ ನಾಯಕಿಯ ಪಾತ್ರ ನಿರ್ವಹಿಸಿದ್ದಾರೆ, ನಿರ್ಮಾಪಕ ಸುಬ್ಬು ಖಳನಾಯಕನ ಪಾತ್ರ ನಿರ್ವಹಿಸಿದ್ದಾರೆ.

ಕರೋನಾ ಸಮಯದಲ್ಲಿ ಇಡೀ ದೇಶವೇ ಲಾಕ್‌ಡೌನ್ ಆಗಿ ಯಾರೂ ಹೊರಗಡೆ ಹೋಗದ ಸಂದರ್ಭದಲ್ಲಿ ಬೆಂಗಳೂರಿನ ಎಲ್ಲಾ ಐಟಿ, ಬಿಟಿ ಕಂಪನಿಗಳು ತಮ್ಮ ಉದ್ಯೋಗಿಗಳಿಗೆ ಮನೆಯಿಂದಲೇ ಕೆಲಸ ಮಾಡುವ ಅವಕಾಶ ಕಲ್ಪಿಸಿಕೊಟ್ಟವು. ಅದರಂತೆ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ನಾಯಕ, ನಾಯಕಿ ಇಬ್ಬರೂ ಒಂದೇ ಮನೆಯಲ್ಲಿ ವಾಸಿಸತೊಡಗುತ್ತಾರೆ. ಆಗ ಆ ಮನೆಯಲ್ಲಿ ಯಾವೆಲ್ಲಾ ಸಮಸ್ಯೆಗಳು ಕಾಡುತ್ತವೆ ಎಂಬುದನ್ನು ಈ ಚಿತ್ರದಲ್ಲಿ ಹೇಳಲಾಗಿದೆ.

ಐದು ವರ್ಷಗಳ ಹಿಂದೆ ತಮಿಳುನಾಡಿನಲ್ಲಿ ನಡೆದ ನೈಜಘಟನೆ ಈ ಚಿತ್ರಕ್ಕೆ ಪ್ರೇರಣೆ. ಮೂರು ಪಾತ್ರಗಳ ಸುತ್ತ ಚಿತ್ರದ ಕಥೆ ಸಾಗಲಿದ್ದು, ಒಂದೇ ಮನೆಯಲ್ಲಿ ಚಿತ್ರೀಕರಣ ನಡೆಸಲಾಗಿದೆ. ಅವೇರ್‌ನೆಸ್ ಜತೆಗೆ ಮನರಂಜನೆಯ ಅಂಶವನ್ನಿಟ್ಟುಕೊಂಡು ನಿರ್ದೇಶನ ಮಾಡಿರುವ ಸಿನಿಮಾವಿದು ಎಂದು ನಿರ್ದೇಶಕ ವಿನ್ಸೆಂಟ್ ಇನ್ಬರಾಜ್ ಹೇಳಿದರು,

ನಿರ್ದೇಶಕರು ಈ ಕಥೆ ಹೇಳಿದಾಗ ಕಾನ್ಸೆಪ್ಟ್ ತುಂಬಾ ಇಷ್ಟವಾಗಿ ನಿರ್ಮಾಣಕ್ಕೆ ಒಪ್ಪಿದೆ. ನಿರ್ಮಾಣದ ಜತೆ ಖಳನಾಯಕನಾಗಿಯೂ ನಟಿಸಿದ್ದೇನೆ, ಇದೇ ತಿಂಗಳ ಅಂತ್ಯದಲ್ಲಿ ಚಿತ್ರವನ್ನು ತೆರೆಗೆ ತರುವ ಯೋಜನೆಯಿದೆ ಎಂದು ನಿರ್ಮಾಪಕ ಸುಬ್ಬು ತಿಳಿಸಿದರು.

ಈಗಿನ ಕಾಲದ ಯೂಥ್‌ಗೆ ಈ ಕಥೆ ಕನೆಕ್ಟ್ ಆಗುತ್ತದೆ, ಕಥೆ ಒಂದಷ್ಟು ಥ್ರಿಲ್ಲಿಂಗ್ ಆಗಿದ್ದು ಎಲ್ಲರಿಗೂ ಹಿಡಿಸಲಿದೆ ಎಂದು ನಟ ಶಶಿ ಹೇಳಿದರು. ಅರುಳ್ ಸೆಲ್ವನ್ ಛಾಯಾಗ್ರಹಣ, ಡೆನ್ನಿಸ್ ವಲ್ಲಭನ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಟೈಮ್‌ಪಾಸ್ ಟ್ರೇಲರ್ ರಿಲೀಸ್

ಜನಪ್ರಿಯ ಸಿನಿಮಾಗಳ ಅಲೆಯ ನಡುವೆಯೇ ಒಂದಷ್ಟು ಹೊಸತನ ಹೊಂದಿರುವ ಚಿತ್ರಗಳು ಸದ್ದಿಲ್ಲದೆ ಪ್ರೇಕ್ಷಕರ ಮುಂದೆ ಬರಲು ಸಿದ್ಧವಾಗಿವೆ. ಅದರಲ್ಲಿ ಟೈಮ್ ಪಾಸ್ ಸಿನಿಮಾವೂ ಒಂದು. ಕೆ. ಚೇತನ್ ಜೋಡಿದಾರ್ ನಿರ್ದೇಶನದಲ್ಲಿ ಮೂಡಿಬಂದಿರುವ, ಟೈಮ್ ಪಾಸ್ ಇದೇ 17ರಂದು ಬಿಡುಗಡೆಯಾಗಲಿದೆ. ಸದ್ಯ ಈ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ಸಿನಿಮಾದ ಹಿನ್ನೆಯಲ್ಲಿ ಸಾಗುವ ಕತೆ ಇಲ್ಲಿದ್ದು, ಅದಕ್ಕೆ ಕಾಮಿಡಿ, ಸಸ್ಪೆನ್ಸ್ ಬೆರೆಸಿ ಕಟ್ಟಿಕೊಡಲಾಗಿದೆ.

ಇಮ್ರಾನ್ ಪಾಷಾ, ವೈಸಿರಿ ಕೆ ಗೌಡ, ರಕ್ಷಾರಾಮ್, ಕೆ. ಚೇತನ್ ಜೋಡಿದಾರ್, ಯಕ್ಷಶಿಫ್, ಪ್ರಭಾಕರ್ ರಾವ್, ನವೀನ್ ಕುಮಾರ್, ಸಂಪತ್ ಕುಮಾರ್, ಅಶ್ವಿನಿ ಶ್ರೀನಿವಾಸ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಡಾರ್ಕ್ ಹ್ಯೂಮರ್ ಜಾನರ್‌ನಲ್ಲಿ ಸಾಗುವ ಈ ಈ ಚಿತ್ರವನ್ನು ಶ್ರೀಚೇತನ ಬ್ಯಾನರ್‌ನಲ್ಲಿ ಗುಂಡೂರು ಶೇಖರ್, ಕಿರಣ್ ಕುಮಾರ್ ಶೆಟ್ಟಿ ಎಂ.ಹೆಚ್ ಕೃಷ್ಣಮೂರ್ತಿ ನಿರ್ಮಾಣ ಮಾಡಿದ್ದಾರೆ. ಗಿರೀಶ್ ಗೌಡ ಸಾಹಸ ನಿರ್ದೇಶನ, ವೈಷ್ಣವಿ ಸತ್ಯನಾರಾಯಣ್ ನೃತ್ಯ ನಿರ್ದೇಶನ, ರಾಜೀವ್ ಗಣೇಶ್ ಛಾಯಾಗ್ರಹಣ, ಹರಿ ಪರಮ್ ಸಂಕಲನ, ಡಿ.ಎಂ.ಉದಯ ಕುಮಾರ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

> ಸಿನಿಮಾ ಮಾಡುವ ಕನಸಿಟ್ಟುಕೊಂಡವರ ಏಳುಬೀಳಿನ ಕಥೆ ಇಲ್ಲಿದ್ದು, ಸಿನಿಮಾದೊಳಗೆ ಮತ್ತೊಂದು ಸಿನಿಮಾದ ಕಥೆ ಪ್ರೇಕ್ಷಕರನ್ನು ಸೆಳೆಯಲಿದೆ. ತಮ್ಮದೇ ಬದುಕಿನಲ್ಲಿ ನಡೆದ ಘಟನೆಗಳನ್ನೇ ಆಯ್ದು ಈ ಕಥೆ ಹೆಣೆದಿದ್ದೇನೆ. ಇದು ಎಲ್ಲರಿಗೂ ಕನೆಕ್ಟ್ ಆಗುವ ಸ್ಟೋರಿಯಾಗಿದೆ.
> -ಚೇತನ್ ಜೋಡಿದಾರ್ ನಿರ್ದೇಶಕ

ಗತವೈಭವದ ವರ್ಣಮಾಲೆ

ನಿರ್ದೇಶಕ ಸಿಂಪಲ್ ಸುನಿ ನಿರ್ದೇಶನದ ಸಿನಿಮಾಗಳು ಎಂದರೆ ಅಲ್ಲಿ ವಿಭಿನ್ನ ಕಥೆಗಳು ಗಮನಸೆಳೆಯುತ್ತವೆ. ಈ ಹಿಂದಿನ ಸಿನಿಮಾಗಳು ಅದಕ್ಕೆ ಪುಷ್ಠಿ ನೀಡುತ್ತವೆ. ಈಗ ಸುನಿ ಮತ್ತೊಂದು ಹೊಸ ಚಿತ್ರವನ್ನು ನಿರ್ದೇಶನ ಮಾಡಿದ್ದು, ಚಂದನವನದಲ್ಲಿ ಗತವೈಭವವನ್ನು ಮರಳಿ ತರಲು ಸಿದ್ಧವಾಗಿದ್ದಾರೆ. ಹೌದು ಸುನಿ ಗತವೈಭವ ಶೀರ್ಷಿಕೆಯಲ್ಲಿ ಸಿನಿಮಾ ನಿರ್ದೇಶನ ಮಾಡಿದ್ದು, ಇನ್ನೇನು ಬೆಳ್ಳಿತೆರೆಗೆ ಬರಲಿದೆ. ಪೌರಾಣಿಕ, ಐತಿಹಾಸಿಕ ಕಥೆಯ ಜತೆಗೆ ಪ್ರಸ್ತುತ ಕಾಲಘಟ್ಟದಲ್ಲಿ ನಡೆಯುವ ಸ್ಟೋರಿಯೂ ಈ ಸಿನಿಮಾದಲ್ಲಿದೆ. ಈಗಾಗಲೇ ಬಿಡುಗಡೆಯಾಗಿರುವ ಟ್ರೇಲರ್‌ನಲ್ಲಿ ಅದು ಸ್ಪಷ್ಟವಾಗಿದೆ.

ಈಗ ಈ ಸಿನಿಮಾದ ಹಾಡು

ಬಿಡುಗಡೆಯಾಗಿದ್ದು, ಕನ್ನಡ ವರ್ಣಮಾಲೆಯ ವೈಭವವನ್ನು ಸಾರುತ್ತಿದೆ.

ಇವನೊಂತರ ಈ ಹ್ರಸ್ವಸ್ವರ... ಅವಳೊಂತರ ಆ ಧೀರ್ಘಸ್ವರ... ಎನ್ನುವ ಹಾಡು ಇದಾಗಿದ್ದು ಕೇಳಲು ಮಧುರವಾಗಿದೆ. ಸಿಂಪಲ್ ಸುನಿ ಸಾಹಿತ್ಯ ರಚಿಸಿರುವ ಈ ಹಾಡಿಗೆ ಜ್ಯುಡಾಸ್ಯಾಂಡಿ ಸಂಗೀತ ಸಂಯೋಜಿಸಿದ್ದಾರೆ. ಅಭಿನಂದನ್ ಮಹಿಶಾಲೆ ಹಾಗೂ ಸುನಿಧಿ ಗಣೇಶ್ ಗೀತೆಗೆ ದನಿಯಾಗಿದ್ದಾರೆ. ಇಬ್ಬರು ಪ್ರೇಮಿಗಳು ತಮ್ಮ ಪ್ರೇಮ ನಿವೇಧನೆ ಮಾಡಿಕೊಳ್ಳುವ ಈ ಗೀತೆ ರೆಟ್ರೋ ಶೈಲಿಯಲ್ಲಿ ಮೂಡಿಬಂದಿದೆ. ದುಷ್ಯಂತ್ ಪಂಚೆ ಶರ್ಟ್ ತೊಟ್ಟು ಮಿಂಚಿದರೆ, ಆಶಿಕಾ ರಂಗನಾಥ್ ಲಂಗ ಧಾವಣಿ ತೊಟ್ಟು ಕಂಗೊಳಿಸಿದ್ದಾರೆ. ಗ್ರಾಮೀಣ ಭಾಗದ ದೃಶ್ಯ ವೈಭವ ಮನಸೂರೆಗೊಳ್ಳಲಿದೆ. ಸಿಂಪಲ್ ಸುನಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುವ ಜತೆಗೆ ಚಿತ್ರ ನಿರ್ಮಾಣಕ್ಕೂ ಕೈಜೋಡಿಸಿದ್ದಾರೆ. ವಿಲಿಯಮ್ ಡೇವಿಡ್ ಛಾಯಾಗ್ರಹಣ ಈ ಚಿತ್ರಕ್ಕಿದೆ. ದೇಶ ವಿದೇಶದ ಸುಂದರ ತಾಣಗಳಲ್ಲಿ ಚಿತ್ರದ ಶೂಟಿಂಗ್ ನಡೆಸಲಾಗಿದೆ. ಗತವೈಭವ ಚಂದನವನದಲ್ಲಿ ಭರವಸೆ ಮೂಡಿಸಿದ್ದು, ಈ ಚಿತ್ರದ ಮೂಲಕ ದುಷ್ಯಂತ್ ನಾಯಕ ನಟನಾಗಿ ಚಂದನವನಕ್ಕೆ ಪರಿಚಿತರಾಗುತ್ತಿದ್ದಾರೆ.